ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

# ಸಾಧನೆ

ಸಂಪುಟ 4
ಸಂಚಿಕೆ 1
ಜನವರಿ - ಮಾರ್ಚ್ 1975

# ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
**ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು**

**SADHANE :** Kannada Quarterly of the Bangalore University, Bangalore
Vol. 4 No. 1, January-March 1975

*Chief Editor :* Dr. G. S. Sivarudrappa

ಪ್ರಧಾನ ಸಂಪಾದಕರು :
ಡಾ. ಜಿ. ಎಸ್. ಶಿವರುದ್ರಪ್ಪ

ಸಂಪಾದಕರು :
ಶ್ರೀ ಹೆಚ್. ಎಮ್. ಮರುಳಸಿದ್ದಯ್ಯ
ಡಾ. ಡಿ. ಎಸ್. ಶಿವಪ್ಪ
ಶ್ರೀ ಹೆಚ್. ಕೆ. ಜಯದೇವ್



ವಾರ್ಷಿಕ ಚಂದಾ : ರೂ. 6-00
ರೂ. 4-00 [ವಿದ್ಯಾರ್ಥಿಗಳಿಗೆ]

ಪ್ರಕಾಶಕರು : ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಮುದ್ರಕರು :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560056

## ಪರಿವಿಡಿ

# ದುಃಸ್ವಪ್ನ

ಜಿ. ಎಸ್. ಶಿವರುದ್ರಪ್ಪ

ಕಂಡೆ
ಎಂತೆಂಥವರು ಏನೇನೋ ಆದದ್ದ ಕಂಡೆ :
ಗೊಮ್ಮಟನಾಗಿ ನಿಂತಿದ್ದ ಮಹಾಮೂರ್ತಿ
ಕರಗಿ ಕೊಚ್ಚೆಯಾಗಿ ಹರಿದದ್ದ ಕಂಡೆ.
ಇಂದ್ರನೈರಾವತಕ್ಕೆ ತೊಣಚಿ ಹತ್ತಿ
ಬೀದಿನಾಯಾಗಿ ಬೂದಿಯಲ್ಲಿ ಹೊರಳಾಡಿದ್ದ ಕಂಡೆ.
ನಿಗಿ ನಿಗಿ ಉರಿದ ಉಜ್ವಲವಾದ ಮಾತೆಲ್ಲ
ಬರೀ ಬೂದಿಯಾಗಿ ತೆಪ್ಪಗಾದದ್ದ ಕಂಡೆ.
ಕೊಳಕು ಮಂಡಲಕ್ಕೆ ಏಳು ಹೆಡೆ ಮೂಡಿ
ಮಾನಸ ಸರೋವರದಲ್ಲಿ ಜಲಕ್ರೀಡೆಯಾಡಿದ್ದ ಕಂಡೆ.
ಕಾವಿಯೊಳಗೇ ಕೋವಿಯೆದ್ದು
ತನ್ನನ್ನು ತಾನೇ ಕೊಂದುಕೊಂಡದ್ದ ಕಂಡೆ.
ಸರಸ್ವತೀ ಮಂದಿರದ ಶ್ವೇತ ಚಾಮರ ಕೆಲವು,
ಮಂತ್ರಿಗಳ ಮನೆಯ ಕಸ ಪೊರಕೆಯಾದದ್ದ ಕಂಡೆ.
ಹುತ್ತಗಳ ಸುತ್ತ ಬೆತ್ತಲೆ ನಿಂತು
ಹಾಲು ತುಪ್ಪವನ್ನೆರೆವ ಸರ್ಪಾರಾಧಕರ ಕಂಡೆ.
ಹರಕ್ಕಾಗಿ ಮಠಕಟ್ಟಿ ಜಗದ್ಗುರುಗಳಾದ
ಸಾಹಿತಿಗಳನು ಕಂಡೆ.
ದೊಡ್ಡ ಪೀಠಗಳ ಮೇಲೆ ಸಣ್ಣ ಜನ
ಇಲಿ ಹೆಗ್ಗಣಗಳಾಗಿ ಹರಿದಾಡಿದ್ದ ಕಂಡೆ.
ಕಂಡು, ಎಚ್ಚರಗೊಂಡೆ
ಎಚ್ಚರವೆಲ್ಲ ನಿಗಿ ನಿಗಿ ಉರಿವ ಕೆಂಡದ ಉಂಡೆ !

# ಸಾಹಿತಿ ಮತ್ತು ಸಾಮಾಜಿಕ ಹೊಣೆ

**ಬರಗೂರು ರಾಮಚಂದ್ರಪ್ಪ**

ಇವತ್ತು ನಾವು ಬದುಕುತ್ತಿರುವ ಸಮಾಜ ಅನೇಕ ಸ್ಥಿತಿಗಳನ್ನು ದಾಟುತ್ತಿರುವ, ಗುರುತಿಸಿಕೊಳ್ಳಲು ಹೆಣಗುತ್ತಿರುವ ಸಮಾಜ. ಹಿಂದೆ ರಾಜರಿದ್ದರು ; ಬ್ರಿಟಿಷರು ಬಂದರು ; ಗೆದ್ದರು ; ಆಳಿದರು ; ಹೋದರು. ಅವರು ಅತ್ತ ಹೋದಂತೆಯೇ ಇತ್ತ ಸ್ವಾತಂತ್ರ್ಯ ಎಂಬುದೊಂದು ಬಂತು. ಅದರ ಹಿಂದೆಯೆ ಸಂವಿಧಾನದ ಸುವರ್ಣಾಕ್ಷರಗಳಲ್ಲಿ 'ಪ್ರಜಾಪ್ರಭುತ್ವ' ಎಂಬ ತಲೆಬರಹ – ಎನ್ನುವುದಕ್ಕಿಂತ—ಹಣೆ ಬರಹ ವಿಜೃಂಭಿಸಿತು. ಜನಗಳಿಗಾಗಿ ಬಂದ ಈ ಜನಗಳ ಪದ್ಧತಿ ಈಗ ಯಾವ ಜನಗಳಿಗಾಗಿ ಮತ್ತು ಯಾವ ಜನಗಳ ಪದ್ಧತಿ ಎಂಬುದರ ಅರ್ಥ ಅನೇಕರಿಗೆ ಆಗಿರಬಹುದು.

ಇತ್ತೀಚೆಗೆ ನಮ್ಮಲ್ಲೂ ಪ್ರಗತಿಪರರು ಕನ್ನಡಕದ ಅಗತ್ಯವಿಲ್ಲದೆ ಕಾಣುವಷ್ಟು ಹೆಚ್ಚಾಗಿದ್ದಾರೆ. ಕೆಲವರು, ಪ್ರತಿಗಾಮಿಗಳೆಂದು ಕಂಡವರನ್ನು ಕಂಡಾಬಟ್ಟೆ ಬಯ್ಯುವುದರಲ್ಲೇ 'ಪ್ರಗತಿಪರಾನಂದ' ಪಡೆಯುತ್ತಿದ್ದಾರೆ. ಪ್ರಗತಿಶೀಲತೆಯನ್ನು ಮೆರೆಯುತ್ತಿದ್ದಾರೆ. ಈ ಮೆರೆಯುವಿಕೆಯ ಒಳಗೆ ಮರೆಯುವಿಕೆಯೂ ಸೇರಿ ತಮ್ಮ ತಾತ್ವಿಕ ವಿರೋಧಿಗಳ ಊಟಕ್ಕೆ ನಂಚಿಕೆ ಹಾಕಿದ್ದಾರೆ. ಪ್ರಗತಿಗಾಮಿ – ಪ್ರತಿಗಾಮಿಗಳ ತಿಕ್ಕಾಟದ ನಡುವೆಯೂ ಭರತದೇಶದ ಬಡವ ಶರವೇಗದ ಪ್ರಗತಿ ಸಾಧಿಸುತ್ತಿದ್ದಾನೆ. ಶೋಷಕ ಸೂತ್ರಧಾರರಿಗೆ ಮಾತ್ರ ತುಂಬಾ ತೊಂದರೆಯಾಗಿರಬೇಕು, ಎಲ್ಲಿ ಹೀರಹೋದರೂ ರಕ್ತಮಾಂಸಕ್ಕೆ ಬದಲು ಮೂಳೆಯೇ ಸಿಕ್ಕುತ್ತಲ್ಲ ಎಂದು. ಇಂಥ ಸ್ಥಿತಿಯ ನಡುವೆಯೂ ಕೆಲವರಿಗೆ ಪ್ರಗತಿಪರರೆಂದು ಕರೆಸಿಕೊಳ್ಳುವುದೇ ಪ್ರತಿಷ್ಠೆಯ ವಿಷಯವಾಗಿ ಅವರಿಗೆ ಮತ್ತು ಅವರ ವಿರೋಧಿಗಳಿಗೆ ಬಾಯ್ಕೆಲಸ ಸಿಕ್ಕಿದೆ. ಒಟ್ಟಾರೆ ಇಂದು ಒಂದು ರೀತಿಯ ಗೊಂದಲವಿದೆ ; ಕಷ್ಟವಿದೆ. ಶೇಕಡ ನಲವತ್ತು ಜನಕ್ಕೆ ಕುಡಿಯಲು ಶುದ್ಧನೀರು ಸಿಕ್ಕದ ಈ ಭವ್ಯ ಭಾರತದಲ್ಲಿ ಬಹುಪಾಲು ಬಡಬಗ್ಗರಿದ್ದಾರೆಂದು ಬೇರೆ ಹೇಳಬೇಕಾಗಿಲ್ಲ.

ಇಂಥ ಸಂದರ್ಭದಲ್ಲಿ ಸಾಹಿತಿಯ ಹೊಣೆ ಕುರಿತು ಯೋಚಿಸುವುದು ಅಗತ್ಯ ; ಹಾಗೂ ಅನಿವಾರ್ಯ ಅನ್ನಿಸುತ್ತೆ. ಏಕೆಂದರೆ ಸಾಹಿತಿ ಮತ್ತು ಸಾಹಿತ್ಯದ ಹುಟ್ಟು, ಬೆಳವಣಿಗೆ, ಬದುಕು ಈ ಸಮಾಜದಲ್ಲೇ ಆಗುತ್ತದೆ. ಆದ್ದರಿಂದ ಸಾಹಿತಿ ಸ್ಪಂದಿಸಬೇಕಾದ್ದು ಈ ಸಮಾಜದ ಬದುಕಿನೊಂದಿಗೆ; ಅದರ ಕಷ್ಟ ಸುಖಗಳೊಂದಿಗೆ.

ಹೀಗಿದ್ದೂ ನಮ್ಮಲ್ಲಿ ಅನೇಕರು ಸಾಮಾಜಿಕ ಜೀವನದೊಂದಿಗೆ ಬೆರೆಯದ ಸಾಹಿತ್ಯ ರಚಿಸಿದ್ದಾರೆ; ರಚಿಸುತ್ತಿದ್ದಾರೆ. ಎಂಥ ವಿಪರ್ಯಾಸವೆಂದರೆ ಬಡತನದ ಬಾಣಲೆಯಲ್ಲಿ ತಳಮಳಿಸುವ ವ್ಯಕ್ತಿಯೂ ಆಗೊಮ್ಮೆ ಈಗೊಮ್ಮೆ ಅಕಸ್ಮಾತ್ ಹುಚ್ಚು ರೋಷ ತೋರಿಸುವುದನ್ನು ಬಿಟ್ಟರೆ ಹೂ, ಲತೆ, ವಿಧಿ, ಮಾಯೆ, ಮಕರಂದ, ದುಂಬಿ–ಇಂಥವುಗಳಲ್ಲಿ ವಿಹರಿಸಿ ಅಭಿವ್ಯಕ್ತಿಯ ಹಾದಿಯಲ್ಲಿ ಸುಖತತ್ತ್ವ ಚೆಲ್ಲಿಬಿಡುವುದುಂಟು. ಇಂಥಕಡೆ ಸಾಹಿತ್ಯ ತನ್ನ ಮತ್ತು ತನ್ನಂತೆಯೇ ಇರುವ ಬಹುಪಾಲು ಜನರ ಈ ಸ್ಥಿತಿಯ ಶೋಧನೆಗೆ ತೊಡಗುವ ಬದಲು ಕ್ಷುಬ್ಧ ಮನಸ್ಸನ್ನು ಸಮಾಧಾನಿಸುವ ಸಾಧನವಾಗಿಬಿಡುತ್ತದೆ.

ಇನ್ನು ಕೆಲವರು ಸಿಗುತ್ತಾರೆ: ಇಂದಿನ ಸ್ಥಿತಿಗತಿಗಳ ಬಗ್ಗೆ ಅತೀವ ಕಾಳಜಿ ವಹಿಸಿ ಮಾತಾಡುತ್ತಾರೆ. ಆದರೆ ಅವರ ಕೃತಿಗಳಲ್ಲಿ ಆ ಸಂವೇದನೆಯ ಸುಳಿವು ಸಿಕ್ಕುವುದು ಕಷ್ಟ. ಇಂಥ ಸಂದರ್ಭದಲ್ಲಿ ಎರಡು ಸಾಧ್ಯತೆಗಳಿರುತ್ತವೆ. ಒಂದು: ಇಂಥವರು ಹಿಂದೆಂದಿಗೊ ಹೊಂದಿದ ನಂಬಿಕೆ, ಸೂತ್ರಗಳಿಂದ ಬಂಧಿತರಾಗಿ ತಮ್ಮದೇ ಲೋಕದ ವಿಹಾರಕ್ಕೆ ಸಾಹಿತ್ಯಕ್ಷೇತ್ರ ಸರಿಯಾದ ವಾಹಕವೆಂದು ಭಾವಿಸಿರಬೇಕು. ಅಂದರೆ ಸಾಹಿತ್ಯಸ್ವರೂಪ ಮತ್ತು ಸಾಧ್ಯತೆಗಳ ಬಗ್ಗೆ ಭಿನ್ನಕಲ್ಪನೆ ಇರಬೇಕು. ಎರಡು: ಕೃತಿಗಳಲ್ಲಿ ಕಾಣದಿರುವುದರಿಂದ ಇಂಥವರ ಅತೀವ ಸಾಮಾಜಿಕ ಕಾಳಜಿ ಸುಳ್ಳಾಗಿರಬೇಕು ಅಥವಾ ಅಕಸ್ಮಾತಾಗಿ ಹಾದು ಹೋಗುವ ಸಂಚಾರಿಭಾವವಾಗಿರಬೇಕು.

ಇನ್ನು ಕೆಲವರು ಕೇಳಬಹುದು: ಈಗಲೂ ಸೂರ್ಯ ಇಲ್ಲವೆ? ಚಂದ್ರ ಇಲ್ಲವೆ? ಚಂದನ ಇಲ್ಲವೆ? ಹೂ, ಮಕರಂದ, ದುಂಬಿ – ಎಲ್ಲ ಇಲ್ಲವೆ? ಹೌದು ಇವೆ ಎನ್ನುತ್ತೇನೆ. ಕೂಡಲೆ ಅಂಥವರು ಪ್ರಶ್ನಿಸಬಹುದು: ಹಾಗಾದರೆ ಅವನ್ನು ಕುರಿತು ಬರೆಯದಿರುವುದು ಹೇಗೆ – ಎಂದು. ಒಂದು ಮಾತನ್ನಿಲ್ಲಿ ಹೇಳಬೇಕು. ನಾನಿಲ್ಲಿ ಸಾಹಿತ್ಯವನ್ನು ಒಂದು ಸಂದರ್ಭದಲ್ಲಿಟ್ಟು ನೋಡುತ್ತಿದ್ದೇನೆ. ದುರ್ಭರ ಸಂದರ್ಭವೊಂದರಲ್ಲಿ ಮೇಲೆ ಹೇಳಿದ ಹೂ, ದುಂಬಿ, ಮಕರಂದ ಮುಂತಾದವೇ ತೀವ್ರ ಸಂವೇದನೆಗೊಳಗಾಗುತ್ತವೆಯೆಂದರೆ ನಮ್ಮ ಜೀವಂತಿಕೆಗೆ ಸಾಕ್ಷಿಯೇನು? ಸಾಹಿತ್ಯವೇ ಸಾಹಿತಿಯ ಕಲಾ ಮಾಧ್ಯಮ. ಆದ್ದರಿಂದ ಯಾವುದು ಅವನನ್ನು ತೀವ್ರವಾಗಿ ಕಾಡಿಸುತ್ತದೆಯೊ ಅದು ಬರವಣಿಗೆಯಲ್ಲಿ ಬರಬೇಕಾಗುತ್ತೆ. ಅಂದ ಮೇಲೆ ಯಾವುದು ಅಭಿವ್ಯಕ್ತವಾಗಿಲ್ಲವೊ ಅದು ಅವನನ್ನು ತೀವ್ರವಾಗಿ ಕಾಡಿಸಿಲ್ಲವೆಂದು ಅರ್ಥ.

ಸಮಾಜ ಅನೇಕ ಅನಪೇಕ್ಷಿತ ಸ್ಥಿತಿಗಳ ಸಂಗಮಕ್ಷೇತ್ರವಾಗಿರುವಾಗ, ಜನತೆ ಬದುಕಿನ ಪ್ರತಿಕ್ಷಣದ ಜೊತೆಗೂ ಕಾದಾಡುತ್ತಿರುವಾಗ, ಇತ್ತಕಡೆ ಸ್ಪಂದಿಸದ ಸಾಹಿತ್ಯ ಮಾತ್ರವೇ ಸೃಷ್ಟಿಯಾಗುವುದಾದರೆ ಅಂಥ ದೇಶದಲ್ಲಿ ಇರುವ ಲೇಖನ

ಮತ್ತು ವಾಕ್ ಸ್ವಾತಂತ್ರ್ಯಗಳಿಗೆ ಯಾವ ಅರ್ಥವೂ ಇಲ್ಲ. ದಿನಬೆಳಗ್ಗೆ ತುತ್ತಿನ ಚೀಲ ತುಂಬಲು ಬೆವರು ಬಸಿಯುವ ಮತ್ತು ಬಸಿದ ಬೆವರು ಹರಿದು ಮತ್ತೊಬ್ಬರ ತಟ್ಟೆಯ ತುಪ್ಪವಾಗುವಂಥ ಸಮಾಜದಲ್ಲಿ ಇರುವ ಸಾಹಿತಿ ಇವುಗಳ ಶೋಧನೆಗೆ ತೊಡಗದೆ, ಮತ್ತೊಂದು ರೀತಿಯಲ್ಲಿ ಈ ಸ್ಥಿತಿಗೆ ಕಾರಣವಾದ ಅಂಶಗಳನ್ನೆ ವಿಜೃಂಭಿಸುತ್ತ ಹೋದರೆ, ಅದು ಲೇಖಕನ ಸ್ವಾತಂತ್ರ್ಯದ ದುರುಪಯೋಗ ಎನ್ನ ಬೇಕಾಗುತ್ತೆ. ಒಟ್ಟಾರೆ ಸಾಹಿತಿಯ ಸಂವೇದನೆ, ಅಭಿವ್ಯಕ್ತಿ, ಮುಖ್ಯವಾಗಿ ತಾನು ಬದುಕುತ್ತಿರುವ ಸಮಾಜದಲ್ಲಿ ಬೇರು ಬಿಟ್ಟಿರಬೇಕು ಎಂಬುದು ನನ್ನ ಮಾತುಗಳ ಮೊದಲ ಹಂತ.

ಸಮಾಜಕ್ಕೆ ಸಂಬಂಧಿಸಿರಬೇಕು ಎಂದಕೂಡಲೆ ಮತ್ತೊಂದು ಪ್ರಶ್ನೆಯೂ ಏಳುತ್ತದೆ. ಸಾಮಾಜಿಕ ಪರಿಸರ ತಂತಾನೆ ಸ್ವತಂತ್ರವಾದದ್ದೆ? ಇದಕ್ಕೆ ಉತ್ತರ ಅಲ್ಲ. ಯಾವುದೇ ಒಂದು ಸಮಾಜ ಅಲ್ಲಿ ಪ್ರಚಲಿತವಿರುವ ರಾಜಕೀಯ ಸಂಗತಿಗಳ ಪರಿಮುದ್ರೆಯನ್ನೂ ಪಡೆದಿರುತ್ತೆ. ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗಳು ಸರಳ ಪ್ರತ್ಯೇಕತೆಗೆ ಒಳಗಾಗುವುದಿಲ್ಲ. ದೇಶದ ಆಡಳಿತ ನಡೆಸುವ ಹೊಣೆ ರಾಜ ಕೀಯ ವ್ಯವಸ್ಥೆಗೆ ಸಂಬಂಧಿಸಿದ್ದಾದ್ದರಿಂದ ರಾಜಕೀಯ ವ್ಯವಸ್ಥೆಗನುಗುಣವಾಗಿ ಸಮಾಜ ತನ್ನನ್ನು ಗುರುತಿಸಿಕೊಳ್ಳುತ್ತ ಆಕಾರ ಪಡೆಯುತ್ತ ಹೋಗುತ್ತದೆ. ಸಮಾಜದ ಸಾಮೂಹಿಕ ಸಮಸ್ಯೆಗಳು ಯಾವತ್ತೂ ದೇಶದ ಸಮಸ್ಯೆಗಳು; ಅಂದರೆ ಅಲ್ಲಿನ ರಾಜಕೀಯ ವ್ಯವಸ್ಥೆಯ ಸಮಸ್ಯೆಗಳು. ಅಂದಮೇಲೆ ಸಾಮಾಜಿಕ ಜೀವನ ವನ್ನು ಪ್ರಮುಖ ದ್ರವ್ಯವಾಗಿ ಸ್ವೀಕರಿಸುವ ಸಾಹಿತಿ ರಾಜಕೀಯ ಸಂಗತಿಗಳಲ್ಲೂ ತಾತ್ತ್ವಿಕವಾಗಿ ತನ್ನನ್ನು ಗುರುತಿಸಿಕೊಳ್ಳುವ ಕ್ರಿಯೆಗೆ ತೊಡಗಬೇಕಾಗುತ್ತದೆ. ಸಾಮಾಜಿಕ ಸಂವೇದನೆಯೊಳಗೆ ತನ್ನನ್ನು ತಾನೆ ತನಿಖೆ ನಡೆಸಿಕೊಂಡು ಒಂದು ನಿಲು ವನ್ನು ತಲುಪಬೇಕಾಗುತ್ತದೆ. ಇದು ಇನ್ನೊಂದು ಹಂತ.

ಈಗ ಮತ್ತೆ ಒಂದು ಪ್ರಶ್ನೆಯೇಳುತ್ತದೆ. ಒಂದು ನಿಲುವನ್ನು ತಲುಪಬೇಕು ಎಂದರೆ ಅದು ಎಂಥ ನಿಲುವಾಗಿರಬೇಕು? ಇದು ಮುಖ್ಯ ಹಂತ. ಇಲ್ಲಿ ಸಾಹಿತಿಗೆ ಎಲ್ಲ ರೀತಿಯ ಚಾರಿತ್ರಿಕ ಪ್ರಜ್ಞೆ ಅಗತ್ಯ. ಜೊತೆಗೆ ಸಮಾಜ ಮತ್ತು ರಾಜಕೀಯ ವಿಜ್ಞಾನಗಳ ಅರಿವೂ ಬೇಕು. ಇವುಗಳನ್ನು ಬಳಸಿಕೊಂಡು ಹಿಂದಿನಿಂದ ಇವತ್ತಿನವರೆಗೆ ಒಂದು ನೋಟ ಬೀರಬೇಕು. ಈ ಮೂಲಕ, ಇಂದಿನ ಸ್ಥಿತಿಗತಿಗಳಿಗೆ ಕಾರಣವಾದ ಮೂಲಾಂಶಗಳನ್ನು ಇವತ್ತಿನ ಸಂದರ್ಭದಲ್ಲಿ ಕಂಡುಕೊಳ್ಳಬೇಕು. ನಮ್ಮ ಜನ ತಮಗಾಗುತ್ತಿರುವ ಅನ್ಯಾಯದ ಮೂಲವನ್ನು ಗುರುತಿಸದಂಥ ಕತ್ತಲ ಕೂಪದಲ್ಲಿ ಬಿದ್ದಿದ್ದಾರೆ. ಆಗೀಗ ಕೆಲವರು ಎದ್ದರೂ ಎದ್ದವರಲ್ಲೇ ಒಬ್ಬ ಗೆದ್ದವನಾಗುತ್ತಾನೆ. ಅಂದರೆ ಹೀರೊ ಆಗಿಬಿಡುತ್ತಾನೆ. ಹೀರೊವಿನ ಹಿಂಬಾಲಕರು ಬರೀ ಹಿಂಬಾಲ ಗಳಾಗುವುದರಿಂದ ತಮ್ಮ ಸಲುವಾಗಿ ತಾವೇ ನಿರ್ಧಾರಗಳನ್ನು ತೆಗೆದುಕೊಳ್ಳುವ

ಸ್ಥಿತಿಯಲ್ಲಿರುವುದಿಲ್ಲ. ಓರ್ರೋಯಿಸಮ್‌ಗೆ ಒಪ್ಪಿಕೊಂಡವರು ಜನತೆಯನ್ನು ಆಲೋಚಿಸುವ, ನಿರ್ಧಾರ ತೆಗೆದುಕೊಳ್ಳುವ ಮಟ್ಟಕ್ಕೆ ಸಿದ್ಧಗೊಳಿಸುವುದಿಲ್ಲ. ಹೀಗಾಗಿ ಓರೊ ಅಥವಾ ಮತ್ತೊಬ್ಬ ಜನರ ಹೆಸರಿನಲ್ಲಿ ನಿರ್ಧಾರಗಳನ್ನು ಮಾಡುತ್ತ ಬೇಳೆ ಬೇಯಿಸಿಕೊಳ್ಳಬಹುದು. ಒಟ್ಟಾರೆ ಇದೊಂದು ಜಟಿಲ ಸಂದರ್ಭ. ಇದನ್ನು ಸರಿಯಾಗಿ ನೋಡಿನೋಡುವ ತೀಕ್ಷ್ಣ ವೈಜ್ಞಾನಿಕ ದೃಷ್ಟಿ ತಾಳಿ, ಜನತೆಯನ್ನು ಬಿಗಿಮುಷ್ಠಿಯಲ್ಲಿ ಹಿಡಿದು ಓಡುವ ಶಕ್ತಿಯನ್ನು ಗುರುತಿಸಿ ನಾವು ಒಂದು ನಿಲುವಿಗೆ ಬರಬೇಕಾಗುತ್ತದೆ. ಆಗ ನಮ್ಮ ನಿಲುವು ಒಬ್ಬ ಅಥವಾ ಅನೇಕ ವ್ಯಕ್ತಿಗಳಿಗೆದುರಾಗಿ ಅಲ್ಲ. ಇವರೆಲ್ಲರಿಗೂ ಸಾಮಾನ್ಯವಾದ ಒಂದು ಶೋಷಕ ಶಕ್ತಿ ಅಥವಾ ವ್ಯವಸ್ಥೆಯ ಎದುರು ರೂಪುಗೊಳ್ಳುತ್ತದೆ ; ರೂಪುಗೊಳ್ಳಬೇಕಾಗುತ್ತದೆ.

ಇಲ್ಲಿಗೆ ಒಂದು ಘಟ್ಟ ತಲುಪಿದಂತಾಗುತ್ತೆ; ಜೊತೆಗೆ ಇನ್ನೊಂದು ಪ್ರಶ್ನೆಯೂ ಇಲ್ಲಿದೆ. ಅದಕ್ಕೆ ಉತ್ತರ ಕಂಡುಕೊಂಡಾಗ ನಿಲುವಿನ ನೆಲಗಟ್ಟು ಭದ್ರವಾಗುತ್ತೆ ; ಒಂದು ಪೂರ್ಣರೂಪ ಬರುತ್ತೆ. ಒಂದು ವ್ಯವಸ್ಥೆಯನ್ನು ವಿರೋಧಿಸುವಾಗ ಅದರ ಬದಲಾಗಿ ಏನು ಎಂಬುದು ಆ ಪ್ರಶ್ನೆ. ಇದಕ್ಕೆ ಉತ್ತರ ಹುಡುಕಿಕೊಳ್ಳುವುದು ಬಹಳ ಕಷ್ಟವೇನಲ್ಲ. ಮೇಲೆ ಹೇಳಿದ ನಿಲುವು ತಳೆದವರು ಯಾವತ್ತೂ ಮೂಲಭೂತ ಬದಲಾವಣೆಯ ಪರವಾಗಿರುತ್ತಾರೆ. ವಿರೋಧಕ್ಕೆ ತುತ್ತಾದ ವ್ಯವಸ್ಥೆಯಲ್ಲಿ ಶೋಷಣೆಗೆ ಕಾರಣವಾದ ಅಂಗಗಳನ್ನು ಅಂಥವರು ಗುರುತಿಸಿರುತ್ತಾರಾದ್ದರಿಂದ ಅವಕ್ಕೆ ಪೂರ್ಣ ಪ್ರತಿಬಂಧಕವಾಗುವುದನ್ನೆ ಬಯಸುತ್ತಾರೆ ಅಥವಾ ಬಯಸ ಬೇಕಾಗುತ್ತೆ.

ಇವತ್ತಿನ ಸಾಮಾಜಿಕ ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳುವಾಗ ಕೆಲವು ಅಂಶ ಗಳನ್ನು ಗಮನಿಸುವುದು ಅಗತ್ಯವಾಗಿದೆ: ನಮ್ಮ ಸಾಮಾಜಿಕ ಮತ್ತು ತಾತ್ತ್ವಿಕ ಪರಂಪರೆ ಸತ್ಯ, ನ್ಯಾಯ ಪ್ರಾಮಾಣಿಕತೆ – ಇಂಥ ಮೂಲಭೂತ ಶಿಷ್ಟಮೌಲ್ಯ ಗಳನ್ನು ಕೊಡುವುದರ ಜೊತೆಗೆ, ಈ ಸಮಾಜದ ಕ್ರಿಯೆಗಳಿಗೆ ಕಣ್ಣಿಗೆ ಕಾಣದ ತಾಣದಲ್ಲಿ ಕಾರಣ ಹುಡುಕುವ ಅಪೂರ್ವ ಶ್ರದ್ಧೆಯ ಮಂದ ಬುದ್ಧಿಯನ್ನೂ ದಯಪಾಲಿಸಿದೆ. ವಿಧಿನಿಯಮ, ಪಾಪ, ಪುಣ್ಯಗಳು ನಮ್ಮದುರದೃಷ್ಟ ನಿರ್ಣಯ ವಾಗುವ ಅಂಶಗಳೆಂಬುದನ್ನು ಅರಿವು ಮಾಡಿಕೊಡದೆ, ಹಿಂದಿನ ಮತ್ತು ಮುಂದಿನ ಜನ್ಮಕ್ಕೂ ಅವನ್ನು ಚಾಚಿ, ಮನುಷ್ಯನ ಇಂದಿನ ಸ್ಥಿತಿಯನ್ನು ಆ ಮೂಲಕವೇ ಅಳೆಯುವಂತೆ ಪ್ರೇರೇಪಿಸಿದೆ. ಲೌಕಿಕ ಸಮಸ್ಯೆಗಳಿಗೆ ಅಲೌಕಿಕ ಕಾರಣ ಮತ್ತು ಪರಿಹಾರಗಳನ್ನು ಹುಡುಕುತ್ತ ಹೋದಂತೆ ಸಮಸ್ಯೆ ಮತ್ತಷ್ಟು ಗಾಢವಾಗುತ್ತೆ. ಈ ಗಾಢತೆಗೆ 'ಆಸಕ್ತರು' ಗೂಢತೆಯ ಮುಸುಕು ಹೊದಿಸುತ್ತಾರೆ. 'ಅಶಕ್ತರು' ಅದನ್ನು ನಂಬಬಿಡುತ್ತಾರೆ. ಆಗ ವಂಚನೆಯ ಸಭ್ಯಮಾರ್ಗ ಸುಲಭವಾಗಿ ತೆರೆದುಕೊಳ್ಳುತ್ತದೆ. ಇಂಥದನ್ನೆಲ್ಲ ಆರ್ಥಿಕ ಕ್ಷೇತ್ರದ 'ದಧೂತಿ ಜನ' ಬಹುಬೇಗ ಬಳಸಿಕೊಳ್ಳುತ್ತಾರೆ.

ಸಮಸ್ಯೆಯ ಮೂಲ ಇಲ್ಲಿಯವರೆಗೂ ಬರುತ್ತೆ. ಆದ್ದರಿಂದ ಇಂದು ಆರ್ಥಿಕ ಸ್ಥಿತಿಯನ್ನು ಹೊರತುಗೊಳಿಸಿ ಸಾಮಾಜಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದು ; ಬೇಕೆಂದೆ ಸಾಧ್ಯವಾಗುವುದಾದರೆ ಅದು ಸಾಧುವಾಗದು.

ಜನತೆ ಅರಿವಿಗಾಗಿ ಎದುರುನೋಡುವ ಬುದ್ಧಿಜೀವಿಗಳ ನಿಲುವಿನ ಆಳ ಅಗಲಗಳು ಹೇಗಿರಬೇಕಾಗುತ್ತದೆಯೆಂಬುದನ್ನಿಲ್ಲಿ ಗುರುತಿಸಬಹುದು. ಈ ಬಗ್ಗೆ ನಮ್ಮ ಸಾಹಿತಿಗಳು ಯೋಚಿಸಿಯೇ ಇಲ್ಲವೆಂದಲ್ಲ. ಆದರೆ ಸಾಮಾಜಿಕ ಪ್ರಜ್ಞೆಯನ್ನು ಸರಿಯಾದ ದಿಕ್ಕಿನಲ್ಲಿ ಕಂಡುಕೊಂಡವರು ಕಡಮೆ. ಸುಧಾರಣೆಯ ಶೌರ್ಯ ತೋರಿಸುವ ತುಡಿತವಿದ್ದೂ ಒಟ್ಟಾರೆ ಗಮನಾರ್ಹ ಸಾಮಾಜಿಕ ಸಂವೇದನೆಗೊಳಗಾಗದವರೂ ಹೆಚ್ಚಾಗಿದ್ದಾರೆ.

ಈಗ ಶ್ರೀ ಗೋಪಾಲಕೃಷ್ಣ ಅಡಿಗರನ್ನೆ ತೆಗೆದುಕೊಳ್ಳಿ. 'ಕಟ್ಟುವೆವು ನಾವು' ಎಂಬ ಕವನದಲ್ಲಿ "ಇರುವೆಲ್ಲವನು ಎಲ್ಲ ಜನಕೆ ತೆರವಾಗಿಸುವ। ಸಮ ಬಗೆಯ ಸಮ ಸುಖದ ಸಮ ದುಃಖದ। ಸಾಮರಸ್ಯದ ಸಾಮಗಾನಲಹರಿಯ ಮೇಲೆ। ತೇಲಿ ಬರಲಿದೆ ನೋಡು ನಮ್ಮ ನಾಡು।"—ಎಂದು ಬರೆದರು. 'ಸುಲಿಗೆಯೆಂಬ ಯಾಗ' ಪದ್ಯದಲ್ಲಿ "ಅನ್ನವೆಲ್ಲ ಚೆಲುವೆಲ್ಲ ಎಲ್ಲ ಸುಖ। ಎಲ್ಲ ಎಲ್ಲ ಬೆಳಕು। ಎಲ್ಲ ಜನಕು ತೆರವಾಗಬೇಕು ; ಮಿಗಿ। ಲುಂಟೆ ಗುರಿಯು ಇದಕು ?।"—ಎಂದು ಘೋಷಿಸಿದರು. ಇಲ್ಲಿ 'ಇರುವೆಲ್ಲವನು ಎಲ್ಲ ಜನಕೆ ತೆರವಾಗಿಸುವ' ಮತ್ತು ಅನ್ನ, ಚೆಲುವು, ಬೆಳಕು 'ಎಲ್ಲ ಜನಕು ತೆರವಾಗಬೇಕು' ಎಂಬ ಮಾತುಗಳನ್ನು ಗಮನಿಸಬೇಕು. 'ಇದು ಮೊದಲು' ಎಂಬ ಪದ್ಯದಲ್ಲಿನ "ಅನ್ನವನು ಕೊಡು ಮೊದಲು, ಬಟ್ಟೆಯನು ಕೊಡು ಉಡಲು। ಕಟ್ಟಿಕೊಡು ಮನೆಗಳನು......ಇದು ಮೊದಲು ಆಮೇಲೆ ಉಳಿದುದೆಲ್ಲ" ಎಂಬ ಸಾಲುಗಳನ್ನು ನೋಡಬೇಕು. ಈ ಪದ್ಯಗಳ ಕಲಾತ್ಮಕ ಸ್ವರೂಪದ ಬಗ್ಗೆ ಎಂಥ ಅಭಿಪ್ರಾಯವಾದರೂ ಇರಲಿ, ಇವು ಹೇಳುವ ವಿಷಯ ನಮ್ಮ ಕಾಲದ ಅಗತ್ಯವನ್ನು ತೀವ್ರವಾಗಿ ಕಂಡುಕೊಂಡಿದೆಯೆಂಬುದು ಒಂದು ಮುಖ್ಯ ಸಂಗತಿ. ಈ ಎಲ್ಲ ಮಾತುಗಳು ಒಟ್ಟಿನಲ್ಲಿ ಸಮತಾವಾದದ ಧ್ಯೇಯ ಧೋರಣೆಗಳಿಗೆ ಸರಿಹೊಂದುತ್ತವೆ. ಆದರೆ ಅದೇ ಅಡಿಗರು 'ಮಣ್ಣಿನವಾಸನೆ'ಯ ಒಂದು ಲೇಖನದಲ್ಲಿ ಸಮತಾವಾದ ವಿರೋಧೀ ನಿಲುವು ತಾಳಿದ್ದಾರೆ. ಇದು ಅವರ ಚುನಾವಣಾ ಸ್ಪರ್ಧೆಯಲ್ಲೂ ಸಾಬೀತಾಗಿದೆ. ಅಂದರೆ ಆ ಮಾತುಗಳೆಲ್ಲ ಬರೀ ಘೋಷಣೆಗಳಾಗಿಬಿಟ್ಟವು.

ಬದಲಾವಣೆಯಾಗುವುದೇ ತಪ್ಪು ಎಂದು ನನ್ನ ಅಭಿಪ್ರಾಯವಲ್ಲ; ಯಾರೂ ಬದಲಾಯಿಸಬಾರದೆಂದೂ ಅಲ್ಲ. ಬದಲಾವಣೆಯಾದದ್ದು ಏನು ಮತ್ತು ಹೇಗೆ ಎಂಬುದು ನನಗಿಲ್ಲಿ ಮುಖ್ಯ.

ಈ ಘಟ್ಟದಲ್ಲಿ ಇಷ್ಟು ಹೇಳಬಹುದು: ನಮ್ಮ ಬಹುಪಾಲು ಬುದ್ಧಿಜೀವಿಗಳು ಬಡವರನ್ನು ಕಂಡು ಅಯ್ಯೋ ಅನ್ನುತ್ತಾರೆ; ಅನುಕಂಪ ಹದೆಯುತ್ತಾರೆ. ಇಲ್ಲಿ

ಯಾರೂ ಸಾಮಾನ್ಯವಾಗಿ ಸಮಾನತೆ, ಜಾತಿನಾಶ, ಮುಂತಾದ ವಿಷಯಗಳ ವಿರುದ್ಧ ಮಾತಾಡುವುದಿಲ್ಲ; ಅದೇನೋ ಸರಿ. ಆದರೆ ಸಮಾಜಸ್ಥಿತಿಯ ಮೂಲಹೇತುವನ್ನು ಪತ್ತೆಹಚ್ಚುವ ಮಾರ್ಗದಲ್ಲಿ ತಮ್ಮ ಸಂತೃಪ್ತ ಭಾವ ಬುದ್ಧಿಗಳಿಂದ ಬಂಧಿತರಾಗಿ ಮೊದಲಹಂತದಲ್ಲೇ ನಿಂತುಬಿಡುತ್ತಾರೆ. ಹೀಗಾಗಿ ಅನೇಕ ಬುದ್ಧಿಜೀವಿಗಳಿಗೆ ಸಮಾನತೆ, ಜಾತಿನಾಶ, ಪ್ರಜಾಪ್ರಭುತ್ವ ಮುಂತಾದವು ರಾಜಕಾರಣಿಗಳ ಸಾಮಾನ್ಯ ಭಾಷಣದ ಸಂಪತ್ತಾದಷ್ಟೆ ಸಲೀಸಾಗಿ ಬಿಡಬಹುದು.

ಸಾಮಾಜಿಕ ಅರಿವಿನ ಆರ್ಭಟವಿದ್ದು ತಪ್ಪುಕಲ್ಪನೆಯ ತೆಪ್ಪ ಹತ್ತಿರುವವರೂ ನಮ್ಮಲ್ಲಿದ್ದಾರೆ.

ಇಂದು, ಕನ್ನಡ ಸಾಹಿತಿಗಳ ಕ್ಷೇತ್ರದಲ್ಲಿ ಬ್ರಾಹ್ಮಣ–ಶೂದ್ರಎಂಬ ಸಾಮಾಜಿಕ ಕಲ್ಪನೆ ಒಂದು ಸೈದ್ಧಾಂತಿಕ ನಿಲುವಾಗಿ ಕೇಳಿಬರುತ್ತಿದೆ. ವರ್ಣಾಶ್ರಮ ಧರ್ಮದಿಂದ ಆದ ಅನ್ಯಾಯಕ್ಕೆ ನಾವು ತೋರಿಸಬಹುದಾದ ಪ್ರತಿಕ್ರಿಯೆಯೆಂದರೆ ಅದರ ಮೂಲೋತ್ಪಾಟನೆಯ ಪ್ರಯತ್ನ. ಹಾಗಾಗಬೇಕಾದರೆ ನಮ್ಮ ನಿಲುವು ಇಡೀ ವರ್ಣಾಶ್ರಮ ವ್ಯವಸ್ಥೆಯ ವಿರೋಧಿಯಾಗಿರಬೇಕೇ ಹೊರತು ಮತ್ತೆ ಅದನ್ನೆ ಅವಲಂಬಿಸಿ ವರ್ಣಕಲಹ ಪ್ರೇರಕವಾಗಿರಬಾರದು. ಒಬ್ಬರಿಂದ ಇನ್ನೊಬ್ಬರಿಗೆ ಅನ್ಯಾಯ ಆಗಿಲ್ಲವೆಂದು ಇದರರ್ಥವಲ್ಲ. ಇಲ್ಲಿ ಒಂದು ಉದಾಹರಣೆ ಕೊಡಬಹುದು. ಒಬ್ಬ ಇನ್ನೊಬ್ಬನಿಗೆ ಮೋಸ ಮಾಡುತ್ತಾನೆಂದುಕೊಳ್ಳಿ. ಈ 'ಇನ್ನೊಬ್ಬ' ಆ 'ಒಬ್ಬ'ನಿಗೆ ಪ್ರತಿ ಮೋಸ ಮಾಡುವುದರಿಂದ ಸಮಸ್ಯೆ ಬಗೆಹರಿಯಿತೆ? ಈ 'ಇನ್ನೊಬ್ಬ' ಪ್ರತಿ ಮೋಸ ಮಾಡುವುದು ಸರಿ ಎಂದು ಒಪ್ಪಿಕೊಳ್ಳುವುದಾದರೆ 'ಆ ಒಬ್ಬ' ಮತ್ತೆ ಮೋಸಮಾಡುವುದು ಸರಿಯೆಂದೂ, 'ಇನ್ನೊಬ್ಬ' ಅದಕ್ಕೆ ಅರ್ಹನೆಂದೂ ಒಪ್ಪಿಕೊಂಡಂತಾಗುತ್ತದೆ. ಅಲ್ಲಿಗೆ ಪರಸ್ಪರ ಮೋಸಮಾಡುತ್ತಿರುವುದೇ ಒಟ್ಟು ಕ್ರಿಯೆಯಾಗುತ್ತದೆ. ಹೀಗಾಗದಿರಬೇಕೆಂದರೆ ಯಾರು ಯಾರಿಗೂ ಮೋಸಮಾಡದಿರುವಂಥ ಸ್ಥಿತಿಯನ್ನು ತರಬೇಕಾಗುತ್ತದೆ. ಅಂದರೆ ನಾನು ಹೇಳುವ ಮಾತು ಇದು : ಅನ್ಯಾಯಕ್ಕೆ ಕಾರಣವಾದ ಒಟ್ಟು ವ್ಯವಸ್ಥೆ ಹೋರಾಟಕ್ಕೀಡಾಗಬೇಕು. ಏಕೆಂದರೆ ಇವತ್ತಿನ ಸಮಾಜದಲ್ಲಿ ಶೋಷಣೆಯ ಮೂಲ, ಹಣ, ಅಧಿಕಾರ ಮತ್ತು ಕುಮ್ಮಕ್ಕುಕೊಡುವ ವ್ಯವಸ್ಥೆಯಲ್ಲಿದೆಯೆಂಬುದನ್ನು ಮರೆಯುವಂತಿಲ್ಲ. ಇಂದು ಆರ್ಥಿಕ ಶಕ್ತಿಯ ಪಾತ್ರ ಸಾಮಾಜಿಕವಾಗಿ ಬಹಳ ಮಹತ್ವದ್ದಾಗಿದೆ. ಆರ್ಥಿಕವಾಗಿ ಶಕ್ತನಾದವನೊಬ್ಬ ಮಿಕ್ಕೆಲ್ಲ ಸಂಗತಿಗಳನ್ನು ಗೌಣವಾಗಿಸಿ ಉಚ್ಚ ವರ್ಗದವನಾಗಲು ಇಲ್ಲಿ ಸಾಧ್ಯವಾಗುತ್ತೆ. ಮೇಲೆ ಹೇಳಿದ 'ಬ್ರಾಹ್ಮಣ–ಶೂದ್ರ ಸೈದ್ಧಾಂತಿಕ ನಿಲವು' ಇಂಥ ಮಹತ್ವದ ಸಂಗತಿಗಳನ್ನು ಮರೆಯುತ್ತದೆ ಮತ್ತು ಮರೆಸುತ್ತದೆ. ಒಂದುವೇಳೆ ಈ ಸಿದ್ಧಾಂತ ನಿಜಕ್ಕೂ ಸರ್ವ ಸಮಾನ ಸಮಾಜ ನಿರ್ಮಾಣಕ್ಕೆಡೆ ಮಾಡಿಕೊಡುವಷ್ಟು ಶಕ್ತವಾಗಿದ್ದರೆ, ಕರ್ನಾಟಕದಲ್ಲಿ ಹನ್ನೆರಡನೇ

ಶತಮಾನದಲ್ಲಿ ನಡೆದ ಬೃಹತ್ ಚಳವಳಿಯ ನಂತರವೂ ಸಾವಿೀಗ ಕಂಠ ಮತ್ತು ಕುಂಟ ಶೋಷಣೆ ಮಾಡಿಕೊಳ್ಳುವ ಅನಿವಾರ್ಯತೆ ಇರುತ್ತಿರಲಿಲ್ಲ. ಆದ್ದರಿಂದ ಈ ನಿಲುವಿನ ಸ್ಥೂಲರೂಪ ಕೆಲವರಿಗೆ ಬೇಗ ಹಿಡಿಸಬಹುದಾದರೂ ಇದು ಮತ್ತೊಮ್ಮೆ ದುರ್ಬಲವರ್ಗವೊಂದನ್ನು ಉಳಿಸುತ್ತದೆ ಅಥವಾ ಸೃಷ್ಟಿಸುತ್ತದೆಯೆಂಬುದನ್ನು ಗುರುತಿಸಬೇಕು. ಯಾವಾಗ ಶೋಷಣೆಯ ಮೂಲವನ್ನು ಹೋರಾಟದ ಕಣ್ಣು ಕಾಣುವುದಿಲ್ಲವೊ ಆಗ ದುರ್ಬಲ ಸೈನ್ಯವೊಂದು ಮತ್ತೆ ಉಳಿಯುವುದು ಅಲ್ಲಿಯೇ ಸ್ಪಷ್ಟ. ಈ ದುರ್ಬಲ ಸೈನ್ಯ ಮತ್ತೆ ಆಗಿನ ಶೋಷಕರ ವಿರುದ್ಧ ನಿಲ್ಲಬೇಕಾಗುತ್ತೆ. ಅಂದರೆ ಎಲ್ಲವೂ ಪುನರಾವೃತ್ತಿಯಾಗುತ್ತದೆ. ಆಗ ಈ ಸಿದ್ಧಾಂತ ಒಪ್ಪುವವರು ಈ ಪುನರಾವೃತ್ತಿಯನ್ನೂ ತಾತ್ವಿಕವಾಗಿ ಒಪ್ಪಿಕೊಂಡಂತಾಗುತ್ತೆ. ಅಂದಾಗ ಶೋಷಣೆಯ ಅಸ್ತಿತ್ವವನ್ನೂ ಪರೋಕ್ಷವಾಗಿ ಒಪ್ಪಿದಂತಾಗುತ್ತೆ. ಆದ್ದರಿಂದ ಸಮಗೀಗ ಬೇಕಾಗಿರುವುದು ಶೋಷಣೆಮಾಡುವ ಅವಕಾಶ-ಬ್ರಾಹ್ಮಣ, ಶೂದ್ರ ಅಥವಾ ಯಾರಿಗಾದರೂ ಸರಿ—ಇಲ್ಲದಂತೆ ಮಾಡುವುದೇ ಹೊರತು ಮತ್ತೆ ಸದರೀಸ್ಥಿತಿಯಲ್ಲಿ ಸಮಸ್ಯೆಯನ್ನು ಬದುಕಿಸಿಡುವುದಿಲ್ಲ.

ಸಾಹಿತ್ಯಸೃಷ್ಟಿಯ ದೃಷ್ಟಿಯಿಂದಲೂ ಅಷ್ಟೆ. ವೈದಿಕ ಅಥವಾ ಶೂದ್ರ ಪ್ರಜ್ಞೆಯೆಂಬುದು ಮುಖ್ಯವಾಗುವುದಿಲ್ಲ. ಈ ಸಂದರ್ಭದಲ್ಲಿ ಜಿ. ಎಸ್. ಶಿವರುದ್ರಪ್ಪನವರು ಹೇಳಿರುವ "ಶೂದ್ರಪ್ರಜ್ಞೆ ಇತ್ಯಾದಿ ಮಾತುಗಳೂ 'ನವ್ಯ' 'ರೊಮ್ಯಾಂಟಿಕ್' ಎಂಬ ಮಾತುಗಳಂತೆಯೆ ಸಾಹಿತ್ಯರಾಜಕೀಯದ ಪಾರಿಭಾಷಿಕ ಪದಗಳಾದಾವೇ ಹೊರತು ಇನ್ನೇನೂ ಆಗಲಾರವು". ಎಂಬ ಮಾತನ್ನು ಗಮನಿಸ ಬಹುದು.

ಸಾಹಿತ್ಯಸೃಷ್ಟಿಯ ವಿಷಯಕ್ಕೆ ಬಂದಾಗ ಮತ್ತೊಂದು ಮಾತನ್ನು ನೆನಪಿನಲ್ಲಿಡ ಬೇಕಾಗುತ್ತೆ. ಕೃತಿಯಲ್ಲಿ ಬರುವ ವಿವರ ಮತ್ತು ವಿಚಾರಗಳು ಮೊಟ್ಟಮೊದಲು ಸಾಮಾಜಿಕ ಸತ್ಯಗಳಾಗಿರಬೇಕು. ಪ್ರತಿಪಾದನೆಯ ಸ್ವರೂಪವೂ ಮುಖ್ಯ. ಜೊತೆಗೆ ಕೃತಿ ತಳೆಯುವ ಅಥವಾ ಹೊರಡಿಸುವ ನಿಲುವು ಯಾವುದೆಂಬುದು ಬಹುಮುಖ್ಯ. ಆದ್ದರಿಂದ ಸಾಮಾಜಿಕ, ರಾಜಕೀಯ ಅರಿವಿನ ವಸ್ತುವನ್ನುಳ್ಳ ಕೃತಿಗಳೆಲ್ಲ ಮಹತ್ವ ಪಡೆಯುವುದಿಲ್ಲ. ನನ್ನ ಈ ಸೂತ್ರಬದ್ಧ ಮಾತುಗಳ ವಿಸ್ತರಣೆಗೆ ಅನಂತಮೂರ್ತಿ ಯವರ 'ಭಾರತೀಪುರ' ಮತ್ತು ಭೈರಪ್ಪನವರ 'ದಾಟು' ಗಳ ಒಟ್ಟು ದೃಷ್ಟಿಯ ವಿಶ್ಲೇಷಣೆ ಸಹಾಯಕವಾದೀತೆಂದು ಭಾವಿಸುತ್ತೇನೆ. ಈ ಎರಡು ಕೃತಿ ಗಳಲ್ಲೂ ಶೋಷಣೆ, ಕ್ರಾಂತಿ ಮುಂತಾದ ಮಾತುಗಳು ಕೇಳಿಬರುತ್ತವೆ. ಆದರೆ ಪ್ರತಿಪಾದನೆಯ ಸ್ವರೂಪ, ಹೊರಡಿಸುವ ಅರ್ಥ, ನಿಲುವುಗಳಲ್ಲಿ ಬೇರೆಯಾಗಿ ನಿಲ್ಲುತ್ತವೆ.

ಕಡೆಗೆ ಕ್ರಾಂತಿಯ ವಿಫಲತೆಯನ್ನು ಹೇಳುವ 'ಭಾರತೀಪುರ'ದ ಬುಡದಲ್ಲಿ ಕೆಲವು ಅವಾಸ್ತವ ಸಂಗತಿಗಳಿವೆ; ಅವನ್ನು ಹೀಗೆ ಸಂಕ್ಷೇಪಿಸಬಹುದು :

1. ಇಲ್ಲಿ ಕ್ರಾಂತಿ ಮಾಡಬಯಸುವ ವ್ಯಕ್ತಿ ಮೊದಲೇ ಗಟ್ಟಿಯಿಲ್ಲ ; ಗಟ್ಟಿಯಿಲ್ಲದ ವ್ಯಕ್ತಿ ಕ್ರಾಂತಿ ಮಾಡುವ ಕಂಕಣ ತೊಟ್ಟು ಹೊರಟಾಗ, ಕಾದಂಬರಿಕಾರರು ನಿಜವಾದ ಕ್ರಾಂತಿಕಾರಿಗೆ ಎದುರಾಗುವ ಸವಾಲುಗಳನ್ನು ಶೋಧಿಸುವ ಶ್ರಮ ಪಡಬೇಕಾಗುವುದಿಲ್ಲ. ಆದ್ದರಿಂದ ತುಮುಲ ತಳಮಳಗಳಿಂದ ಎಳೆಯುತ್ತ ಹೊರಟು ಉದ್ದೇಶಿತ ಘಟ್ಟ ಮುಟ್ಟುವುದು ಸುಲಭವಾಗುತ್ತೆ.
2. 'ಭಾರತೀಪುರ' ಇವತ್ತಿನ ಪರಿಸರದಲ್ಲಿ ಹುಟ್ಟಿರುವ ಕೃತಿಯೆಂಬುದನ್ನು ಮರೆಯುವಂತಿಲ್ಲ. ಇವತ್ತು ದೇವಾಲಯ ಪ್ರವೇಶಕ್ಕಾಗಿ ಹರಿಜನ ಯುವಕರನ್ನು ಜಗನ್ನಾಥನಷ್ಟು ಬೆವರು ಬಸಿದು ತಯಾರಿಸಬೇಕಾಗಿಲ್ಲ. ಹರಿಜನರಿಂದ ದೇವಾಲಯ ಪ್ರವೇಶವಾಗುವುದಷ್ಟೆ ಮುಖ್ಯವಾದಾಗ ಆ ಕಾರ್ಯಕ್ಕೆ ಮನಸ್ಸು ಮಾಡುವ ಹರಿಜನ ಯುವಕರು ಸಿಕ್ಕುವುದು ಈಗ ಅಷ್ಟೊಂದು ಕಷ್ಟವಲ್ಲ. ಆದರೂ ಯಾವುದು ಅಷ್ಟು ಮುಖ್ಯವಲ್ಲವೊ ಅದನ್ನೇ ಇಲ್ಲಿ ರಂಜಕವಾಗಿ ವಿಸ್ತರಿಸಲಾಗಿದೆ.
3. ಬಹು ಮುಖ್ಯವಾದ ವಿಷಯವೆಂದರೆ— ಭಾರತೀಪುರದ ಜಡ್ಡುಬಿದ್ದ ಬದುಕಿಗೆ ಅಡಿಪಾಯದಂತಿದ್ದ ಮಂಜುನಾಥ ಶೋಷಣೆಯ ಮೂಲವೂ ಆಗುತ್ತಾನೆ. ಅಂಥ ಮಂಜುನಾಥನ ದೇವಾಲಯ ಪ್ರವೇಶ ಕ್ರಾಂತಿಯ ಹೆಜ್ಜೆಯೆಂದು ಹೊರಡುವುದು, ಅದೊಂದೇ ಮುಖ್ಯವಾಗುವುದು ಅಸಮಂಜಸ. ಏಕೆಂದರೆ ಬೇರೆಯವರಿಗಿರುವ ಪ್ರವೇಶ ಸವಲತ್ತು ತಮಗೂ ಬೇಕೆಂಬುದು ಪ್ರಧಾನ ಬೇಡಿಕೆಯಾದಾಗ ಶೋಷಕ ವ್ಯವಸ್ಥೆ ಹಾಗೇ ಉಳಿಯುತ್ತೆ. ಅದರಲ್ಲಿ ಹೊಸ ಪ್ರವೇಶಕರೂ ಶೇರುದಾರರಾಗಬೇಕಾಗುತ್ತೆ.

ಅಂದರೆ ಮೂಲಕಲ್ಪನೆಯಲ್ಲಿ ಕಂಡುಬರುವ ಅವಾಸ್ತವತೆ ಭಾರತೀಪುರವನ್ನು ಹೆಚ್ಚೆಂದರೆ ಸುಧಾರಣಾವಾದಿ ಕೃತಿಯಾಗಿಸಬಹುದು.

'ದಾಟು'ವಿನಲ್ಲೂ ದೇವಾಲಯ ಪ್ರವೇಶದ ಸನ್ನಿವೇಶವಿದೆ. ಇಲ್ಲಿ ಮೋಹನದಾಸನಿಗೂ ಮೊದಮೊದಲು ಇದೇ ಕ್ರಾಂತಿಯ ಹೆಜ್ಜೆಯಾಗಿ ಕಾಣುತ್ತೆ. ಆದರೆ ಜನರನ್ನು ಸಜ್ಜುಮಾಡಿ ದೇವಾಲಯದ ಒಳಹೋದಾಗ ಈ ಕಲ್ಲನ್ನು ನೋಡಲು ಇಷ್ಟೆಲ್ಲ ಪ್ರಯತ್ನವೆ ಎನ್ನಿಸುತ್ತೆ. ತನ್ನ ತಪ್ಪುಹೆಜ್ಜೆಯ ಅರಿವಾಗುತ್ತೆ. ಹೀಗಾಗಿ ಕಾದಂಬರಿಯ ಕಡೆಯ ಸನ್ನಿವೇಶ ಸಾಂಕೇತಿಕಾರ್ಥ ಪಡೆಯುತ್ತೆ ; ಮುಖ್ಯವಾಗುತ್ತೆ. ಮೋಹನದಾಸನ 'ಡೈನಾಮೆಂಟ್ ಸಿಡಿತದ ಪ್ರವಾಹ'ದಲ್ಲಿ ಸತ್ಯಭಾಮ ಜನಿವಾರ

ವನ್ನು ಕಿತ್ತೆಸೆಯುತ್ತಾಳೆ. ಇದು ಅವಳ ಅಲ್ಲಿಯುವರೆಗಿನ ನಂಬಿಕೆಗಳನ್ನು ಕಿತ್ತೆಸೆದು ತಿರುವು ಕೊಡುವ ಸಾಂಕೇತಿಕ ಘಟನೆ. ಸತ್ಯಭಾಮ ಜನಿವಾರ, ಹೋಮ ಮುಂತಾದವುಗಳಲ್ಲಿ ಶ್ರದ್ಧೆ ವಹಿಸಿದ್ದಾಗಲೂ ಅವಳಲ್ಲಿದ್ದ ದ್ವಂದ್ವದ ಸೂಕ್ಷ್ಮತೆಯನ್ನೂ, ಬೆಟ್ಟಯ್ಯನ ಮಗಳು ಜನಿವಾರವನ್ನು ಪರಿಮೋಲಿಟ್ಟು ಆತ್ಮಹತ್ಯೆ ಮಾಡಿಕೊಂಡಾಗಿನಿಂದ ಉಂಟಾಗುವ ಆದರ ತೀವ್ರತೆಯನ್ನೂ ಇಲ್ಲಿ ನೆನಸಬಹುದು. ಕಡೆಗೆ ಪ್ರವಾಹದಲ್ಲಿ ಜನಿವಾರ ಬಿಡುವ ಘಟನೆ–ಅದಕ್ಕೆ ಸಂಬಂಧಿಸಿದ ಅವಳ ಶ್ರದ್ಧೆಯ ಅರ್ಥ ಹೀನತೆಯನ್ನು ಸೂಚಿಸುತ್ತೆ. ಇನ್ನೊಂದು ಗಮನಾರ್ಹ ಅಂಶವೆಂದರೆ ದೇವಾಲಯ ಪ್ರವಾಹಕ್ಕೆ ಸಿಕ್ಕಿ ಮುಳುಗಿದ್ದು. ಕಾದಂಬರಿಯಲ್ಲಿ ಮೊದಲಿನಿಂದಲೂ ದೇವಾಲಯದ ಪ್ರಸ್ತಾಪ ಪ್ರಧಾನವೆನ್ನಿಸುವಷ್ಟು ಬಂದಿದೆ. ಇಲ್ಲಿ ಅದೊಂದು ವ್ಯವಸ್ಥೆ. 'ಈ ಪ್ರವಾಹದೆದುರು ಸರ್ಕಾರಿ ಗೋಡೆ ನಿಲ್ಲುವುದು ಸಾಧ್ಯವಿಲ್ಲವೆನಿಸಿತು' ಎಂಬಂಥ ಮಾತುಗಳನ್ನೂ ಅದು ಮುಳುಗುವ ಚಿತ್ರಕ್ಕೆ ಒತ್ತು ಬಿದ್ದಿರುವುದನ್ನೂ ಗಮನಿಸಬೇಕು. ಮೋಹನದಾಸ ಗುರಿಯಾಗಿಟ್ಟುಕೊಂಡ ದೇವಾಲಯದ ಕುಸಿತ 'ವ್ಯವಸ್ಥೆ'ಯ ಸಾಂಕೇತಿಕ ವಿನಾಶ. ಆದ್ದರಿಂದ 'ದಾಟು' ಹೊರಡಿಸುವ ನಿಲುವು ಹೆಚ್ಚು ಅರ್ಥ ಪೂರ್ಣ ಅನ್ನಿಸುತ್ತೆ.

ಈ ಎರಡು ಕೃತಿಗಳಲ್ಲಿ ಕೆಲವು ಒಂದೇ ಸ್ವರೂಪದ ಸಂಗತಿಗಳನ್ನು ನಿಭಾಯಿಸಿದರೂ ಯಾವುದು ಹೆಚ್ಚು ಮಹತ್ವದ್ದಾಗುತ್ತದೆಯೆಂಬುದಕ್ಕೆ ಈ ವಿವೇಚನೆ ಸಹಾಯಕವಾಗುತ್ತೆ ಎಂಬುದು ನನ್ನ ಭಾವನೆ.

ನಾನು ಇಷ್ಟು ಹೊತ್ತು ಹೇಳಿದ್ದರ ಒಟ್ಟುಮಾತು ಇದು: ಮೂಲಭೂತ ಬದಲಾವಣೆಯ ಆಲೋಚನೆ ಹುಟ್ಟಿಸುವ ಮತ್ತು ಹಬ್ಬಿಸುವ ಸಾಹಿತ್ಯರಚನೆ ಇಂದಿನ ಅಗತ್ಯಗಳಲ್ಲೊಂದು. ಅದರ ಹೊಣೆ ಸಾಹಿತಿಗಳದು. ಹೀಗೆಂದ ಕೂಡಲೆ ಒಂದೇ ವಸ್ತು ಗೂಟದ ಸುತ್ತ ಗಾಣದೆತ್ತಾಗಿ ತಿರುಗಬೇಕೆಂದಲ್ಲ; ಕಲಾತ್ಮಕ ಅಂಶಗಳನ್ನು ದೂರಮಾಡಬೇಕೆಂದೂ ಅಲ್ಲ. ಬದುಕು ದೊಡ್ಡದು; ಅಂದಮೇಲೆ ಶೋಷಣೆ ಮತ್ತು ವ್ಯವಸ್ಥೆಯ ಸ್ವರೂಪವೂ ದೊಡ್ಡದು. ಆದ್ದರಿಂದ ಈ ನಿಲುವಿನ ಹಿನ್ನೆಲೆಯಲ್ಲಿ ಸಾಹಿತ್ಯಕ್ರಿಯೆ ಬೇರೆ ಬೇರೆ ಸ್ತರಗಳಲ್ಲಿ ಸಮರ್ಥವಾಗಿ ತೊಡಗಲು ಸಾಧ್ಯ. ಇದೇ ಇವತ್ತಿನ ಮುಖ್ಯ ಸಂವೇದನೆಯಾಗಬೇಕು. ಹೀಗಾಗಬೇಕಾದರೆ ಸಾಹಿತ್ಯಕ್ಷೇತ್ರದ ಇಲ್ಲಿಯುವರೆಗಿನ ಕೆಲವು ಸಿದ್ಧಕಲ್ಪನೆ ಮತ್ತು ಧೋರಣೆಗಳನ್ನು ನಿರ್ಮಮತೆಯಿಂದ ಬಿಡಬೇಕಾಗುತ್ತೆ. ಇದಕ್ಕೆ ಪೂರಕವಾಗಿ ಮೊದಲು ಸಾಹಿತಿ ಈ ಸಮಾಜದಲ್ಲಿ ತಾತ್ತ್ವಿಕವಾಗಿ ತನ್ನನ್ನು ಗುರುತಿಸಿಕೊಳ್ಳಬೇಕಾಗುತ್ತೆ. ನಿಜಕ್ಕೂ ಹೀಗೆ ಗುರುತಿಸಿಕೊಂಡವರಿಗೆ ಒಂದು ಗಟ್ಟಿ ನಿಲುವು ತಳೆಯಲು ಸಾಧ್ಯ. ಹೀಗೆ ನಿಲುವು ತಳೆದವರಿಗೆ ಸಿದ್ಧಕಲ್ಪನೆ ಮುಂತಾದುವನ್ನು ಬಿಡಲು ಹೇಳಬೇಕಾಗುವುದಿಲ್ಲ. ಏಕೆಂದರೆ ಒಬ್ಬ ಸಾಹಿತಿ ಎಷ್ಟೆಷ್ಟು ಈ ಸಮಾಜವಲ್ಲಿ ತನ್ನನ್ನು ತಾತ್ತ್ವಿಕವಾಗಿ

ಗುರುತಿಸಿಕೊಳ್ಳುತ್ತ ನಿಲುವು ತಳೆಯುತ್ತ ಹೋಗುತ್ತಾನೊ ಅಷ್ಟಷ್ಟು ಸಿದ್ಧಕಲ್ಪನೆ, ಧೋರಣೆಗಳು ಕಳಚಿಕೊಳ್ಳುತ್ತ ಹೋಗುತ್ತವೆ. ಮುಖ್ಯವಾಗಿ ಆಗಬೇಕಾದ್ದೂ ಅದೇ. **ಜೊತೆಗೆ ತನ್ನ ಕೃತಿ ಮೂರ್‍ಕಾಲವೊ ನೂರ್‍ಕಾಲವೊ** ಉಳಿದು ನಭೋಮಂಡಲದಲ್ಲಿ ರಾರಾಜಿಸದಿದ್ದರೂ ಚಿಂತೆಯಿಲ್ಲ, ತನ್ನ ಕಾಲದ ಅಗತ್ಯವನ್ನು ಗುರುತಿಸಿದ, ಧ್ವನಿಸಿದ ವಾಣಿಯಾದರೆ ಸಾಕೆಂಬ ಭಾವನೆ ಸಾಹಿತಿಗಳಲ್ಲಿ ಬೆಳೆಯಬೇಕಾಗುತ್ತೆ.

ಕಡೆಯದಾಗಿ ಒಂದು ಮಾತು : ನಾನಿಲ್ಲಿ ಹೇಳಿದಂಥ ಸಾಹಿತ್ಯ ಸೃಷ್ಟಿಯಾದ ಬೆಳಗ್ಗೆಯೇ ಬದಲಾವಣೆ ಆಗಿಬಿಡುತ್ತದೆಯೆಂಬ ಭಾವನೆ ನನ್ನಲ್ಲಿಲ್ಲ. ಓದುಗರನ್ನು ಆಲೋಚನೆಗೆ ಹಚ್ಚುತ್ತ ಆ ಮೂಲಕ ಅಭಿಪ್ರಾಯಕ್ಕೆ ರೂಪಕೊಡುವುದು ಸಾಹಿತ್ಯಕ್ಕೆ ಸಾಧ್ಯವೆಂಬ ನಂಬಿಕೆ ನನ್ನದು. ಇದೂ ಆಗುವುದಿಲ್ಲವೆನ್ನುವುದಾದರೆ, ನಮ್ಮ ಬರವಣಿಗೆ, ಅದನ್ನು ಕುರಿತ ದೊಡ್ಡ ದೊಡ್ಡ ಮಾತು, ವಿಚಾರ–ವಿಮರ್ಶೆ, ಎಲ್ಲವೂ ವ್ಯರ್ಥ ಎಂದು ಹೇಳಬೇಕಾಗುತ್ತೆ.

# ಮಣ್ಣು–ಹೂವು

ಜಯಸುದರ್ಶನ

ತಪ್ಪಿಸಿಕೊಳ್ಳುವಂತಿರಲಿಲ್ಲ ಸೋದರ
ಮಾವನ ಮಗಳ ಮದುವೆ, ನನಗಂತು
ಒಂದು ಹೆಚ್ಚಿನ ಕೆಲಸವಿತ್ತು.

ಕಮಲನಿಗೆ ನನಗೆ ಬಾಲ್ಯದ ಒಡನಾಟ
ಗಂಡ-ಹೆಂಡಿರೆಂಬ ಹಿರಿಯರ
ಹಾಸ್ಯ, ನಮಗೆ ನಾಚಿಕೆಯ ನಟನೆ.

ಆ ಮೇಲೆ ನಾನು ಕವಿಯಾದೆ, ಕಮಲ
ಇಮ್ಮಡಿ ಪದವಿ ಪಡೆದ ವಿದ್ಯಾವಂತೆ
ಕನ್ನಡದ ಕವಿಗೆ ಮಗಳಿಗೆ ಎಲ್ಲಿಯ ಸಾಮ್ಯ ?

ಎಂದರು ಮಾವ ನನಗಂತು ದುಃಖ
ಎನಿಸಲಿಲ್ಲ, ಕಮಲ ಅತ್ತಳಂತೆ
ಮೂರು ಹಗಲು ಮೂರು ರಾತ್ರಿ.

ಒಂದು ದಿನ ನನ್ನ ಕಂಡಳು ಒಂಟಿ
ಕೇಳಿದಳು :...ಹೇಳು ಜಯಸುದರ್ಶನ
ನಿನಗೆ ಇದೆಯೇ ನಿಜವಾಗಿ ಧೈರ್ಯ ?

ನಾವಿಲ್ಲಿಂದ ಓಡಿಹೋಗೋಣ ದೂರ
ಬಹುದೂರ, ಅಪ್ಪನ ಕಾಟ ಇರುವುದಿಲ್ಲ
ನಮ್ಮ ಕನಸು ನನಸಾಗದಿರುವುದಿಲ್ಲ......

ನಾನು ಕವಿಯಾದರೂ ಪ್ರಾಜ್ಞನಂತೆ
ಹೇಳಿದೆ :...ಕಮಲ ನಾನು ನಿರುದ್ಯೋಗಿ
ಮೇಲಾಗಿ ಕವಿ. ನೀನು ವಿದ್ಯಾವಂತೆ, ಸಾಮ್ಯವೆಲ್ಲಿ ?

ನಾನು ನಿನ್ನನ್ನು ಪ್ರೀತಿಸುತ್ತೇನೆ ನಿಜ, ಆದರೆ
ನನ್ನ ಕೈಹಿಡಿದು ನಿನಗೆ ಸುಖವಿಲ್ಲ, ನಿನ್ನ
ಆದರ್ಶಗಳು ನನ್ನವುಗಳಿಗಿಂತ ಇದ್ದೀತು ಬೇರೆ...

ಕಮಲ ಅಳಲಿಲ್ಲ, ಮಾತನಾಡಲು ಇಲ್ಲ
ಮರಳಿದಳು ಬಂದಹಾಗೆ; ನನಗೆ ಮಾತ್ರ
ಅವಳಿಗೆ ಮಹದುಪಕಾರ ಮಾಡಿದ ತೃಪ್ತಿ.

ಈ ಹೆಣ್ಣಿಗೀಗ ಮದುವೆ, ಅದು ಮುಗಿದ
ತಕ್ಷಣವೆ ನನ್ನ ಮೇಲಿನ ಹೊರೆ ಇಳಿಯುತ್ತೆ
ನಾನಾಗಬಹುದು ನಿರಾಳ, ನಿರ್ಮೋಹಿ.

ಇದು ಹಿರಿಯಾಸೆ, ಕಮಲ ಸುಖದಿಂದ
ಇರುವುದನ್ನು ನೋಡಬೇಕೆಂಬ ಇನ್ನೊಂದಾಸೆ
ಪಲಾಯನಕೆ ಮೂಡಿದ ಪರಾರ್ಥದ ರೆಕ್ಕೆ.

ಮದುವೆಯಲ್ಲಿ ನನ್ನದೆ ಸಡಗರದ ಓಡಾಟ
ಮಾವನಿಗೆ ಒಳಗೊಳಗೆ ಮುನಿಸು, ಆದರೂ
ಮುಚ್ಚಿಡಲಾಗದ ಸಮಾಧಾನ.

ಈ ಲಫಂಗನಿಗೆ ನನ್ನ ಮಗಳ ಕಟ್ಟುವುದು
ತಪ್ಪಿತು ಸಧ್ಯ, ಒಳ್ಳೆಯ ವರ ಸಿಕ್ಕಿದನೆಂಬ
ಹಿಗ್ಗು, ನನಗೆ ಮುಂದೆ ಕೈಬೀಸುವ ನನ್ನ ಹಾದಿ.

ಮದುವೆಯಲಿ ನಾನು ಕಮಲಳ ಮುಖ
ನೋಡಲಿಲ್ಲ; ನೋಡುವ ಧೈರ್ಯವಾಗಲಿಲ್ಲ
ನಾನು ಕಳೆದುಕೊಳ್ಳುತ್ತಿದ್ದುದು ಒಂದು ಗಳಿಗೆ.

ನಾಳೆ ಈ ಗಳಿಗೆ ದಿನವಾಗುತ್ತೆ, ಮರು ವರ್ಷ ಇಡೀ
ವರ್ಷವಾಗುತ್ತೆ, ಕಾಲ ತೆರೆಯುವ ಒಂಟಿತನ ಎದುರು
ಧುತ್ತೆಂದು ನಿಲ್ಲುತ್ತೆ, ಹೃದಯ ಮಾತ್ರ ಸಂಪೂರ್ಣ.

ಮಾರನೆಯ ದಿನ ಕಮಲ ಹೊರಟು ನಿಂತಳು
ಗಂಡನ ಮನೆಗೆ, ವರ್ತಮಾನದಲಿ ಅರಳಿದ ಭವಿಷ್ಯತ್ತು
ನನ್ನ ಮನದ ದೀಪ ಬೇರೊಂದು ಬದುಕಿನ ಬೆಳಕು.

ಬಂದಳು ನಾನಿದ್ದ ಕಡೆ, ಚಾಚಿ ತುಟಿ ಕೆನ್ನೆಗೆ ಮುತ್ತು
ಕೊಟ್ಟಳು, ಹೇಳಿದಳು :... ನೀನೊಬ್ಬ ಕೈಲಾಗದ
ಕವಿತೆ ಬರೆಯುವ ಹೇಡಿ... ಅತ್ತಳು ತಬ್ಬಿಕೊಂಡು.

ನಾನು ನಿಂತೆ ಮೂಢ ಸನ್ನದಾಗಬೇಕಾಗಿದ್ದ
ಹೆಣ್ಣು ಹೋಗುತ್ತಿದ್ದಳು ಹೊಸ್ತಿಲಾಚೆ
ಬಿಟ್ಟು ನನ್ನ ಬಳಿ ತನ್ನ ಪ್ರೇಮದ ಹೃದಯ.

ಈಗ ನಾನಾರೋ, ಅವಳಾರೋ, ನಮ್ಮ
ದಾರಿಗಳು ಬೇರೆ ಬೇರೆ, ನಾನು ಒಂಟಿ
ಅವಳ ಪ್ರೇಮಕ್ಕೆ ನಿಂತ ಅಪಾತ್ರ ಸ್ಮರಣೆ.

ಈಗಲೂ ಅನಿಸುತ್ತೆ ನಾನು ಕಮಲಳ ಕೊಡುಗೆಗೆ
ಅರ್ಹನೆ? ನನ್ನನ್ನು ಮೀರಿದ ಅವಳ ಪ್ರೇಮ ನನ್ನ
ಸಾರ್ಥಕ ಮಾಡೀತು ಎಂಬ ಹಾರೈಕೆ.

ನೆನಪು ಹಸಿರಲ್ಲಿ ಅರಳಿದ ಮೊಗ್ಗು, ಮೊನ್ನೆ ಬಂತು
ಪತ್ರ, ಕಮಲಳಿಗೆ ಮಗುವಾಯ್ತಂತೆ, ನನಗೆ
ಹಿಡಿಸಲಾರದ ಹಿಗ್ಗು, ಇನ್ನೊಂದು ಮೊಗ್ಗು.

ನಾನಿನ್ನೂ ಒಂಟಿ, ನಾನು ಹಾಕಿದ ಗಿಡದಲ್ಲಿ
ಎಷ್ಟೋ ಹೂ ಬಿಟ್ಟು ಒಣಗಿವೆ, ಹೊಸ
ಮೊಗ್ಗುಗಳ ಒಡಲಲ್ಲಿ ಅರಳುವ ನಾಳೆಗಳು.

ಇದು ಎಂಥ ಸಂಬಂಧವೋ ಅಂತು ಒಮ್ಮೊಮ್ಮೆ
ವಿಚಿತ್ರ ಎನಿಸುತ್ತೆ, ಪ್ರೇಮಿಗಳ ಹೃದಯಗಳು
ಬಾಡುವುದಿಲ್ಲ ಕೂಡದಿದ್ದರೂ ಕೂಡ.

ಇಂಥ ಅನಿಸಿಕೆ ಬಂದಾಗಲೆಲ್ಲ ನನ್ನ ಹೃದಯ
ಪಕ್ಕಿಯಾಗುತ್ತೆ, ರೆಕ್ಕೆ ಬಡಿಯುತ್ತೆ, ಮನಸು
ಹಾಡುತ್ತೆ ಹಕ್ಕಿಯ ಹಾಡು, ನನ್ನದಲ್ಲ ಕವನ.

ಮದುವೆಯಾಗಿದ್ದರೆ ಕಮಲಳ, ನನ್ನ ಬಾಳು
ಒಂದಾಗಬಹುದಿತ್ತು, ಆದರೆ ಯಾರಿಗೆ
ಗೊತ್ತು ನನ್ನಂಥ ಹೇಡಿಯ ಜತೆ ಬಾಳ್ವೆ.

ಕಮಲಳಿಗೆ ಆಗಬಹುದಾಗಿತ್ತು ಅಸಹನೀಯ
ಬೆಸೆದುಕೊಂಡ ಹೃದಯಗಳಲ್ಲಿ ನೋವು
ಅವಳು ಪ್ರೇಮಕ್ಕೆ ಬಲಿಯಾದ ತ್ಯಾಗ.

ಮಣ್ಣಲ್ಲಿ ಹುಟ್ಟಿದರೂ ಹೂವು ಮಣ್ಣನ್ನು
ತಾಕಿದರೆ ಮಾಸುತ್ತೆ, ಹೂವಿಗೆ ಮಣ್ಣಿನ ಪುಷ್ಟಿ
ಮಣ್ಣಿಗೆ ಹೂವಿನಿರವೆ ಬಹುಮಾನ.

ಎಂತಲೇ ನನಗೆ ಸಮಾಧಾನ, ಮೊಗ್ಗು ಹೂವಾಗಿ
ಅರಳಬೇಕು, ಮಣ್ಣು ಇದ್ದಲ್ಲೇ ಇರಬೇಕು, ಮಣ್ಣಿಗೂ
ಹೂವಿಗೂ ಬೇರಿನಲ್ಲಿ ಮಾತ್ರ ನಿಲುವ ಸಂಬಂಧ,

# ಗದುಗಿನ ಶ್ರೀ ತೋಂಟದಾರ್ಯಮಠದ ಕಾಗದ-ಪತ್ರ ಸಾಹಿತ್ಯ

**ಜಿ. ಎಂ. ಉಮಾಪತಿ ಶಾಸ್ತ್ರಿ**

ಕನ್ನಡ ನಾಡು ಧರ್ಮದ ಬೀಡು. ಇಲ್ಲಿ ಶೈವ, ಜೈನ, ವೈಷ್ಣವ, ಮತ-ಪಂಥಗಳು ಹೆಚ್ಚಾಗಿ ಪರಸ್ಪರ ಸದ್ಭಾವನೆಯಿಂದ ಬಾಳಿ ಬದುಕಿದ ಪ್ರಸಂಗಗಳು ಶಾಸನೋಕ್ತವಾಗಿವೆ. ಅನೇಕ ಧಾರ್ಮಿಕ ಪೀಠಗಳು ಈ ಪವಿತ್ರ ಪರಂಪರೆಗೆ ಪರಮಾದರ್ಶವೆನಿಸಿ ಉಳಿದು ಬೆಳಗಿವೆ. ಅವುಗಳ ಪಂಕ್ತಿಯಲ್ಲಿ ಧಾರವಾಡ ಜಿಲ್ಲೆಯ ಗದುಗಿನಲ್ಲಿರುವ ಶ್ರೀ ತೋಂಟದ ಸ್ವಾಮಿಗಳ ಸಂಸ್ಥಾನಮಠ ಎಡೆಯೂರ ಶ್ರೀ ಜಗದ್ಗುರು ಸಿದ್ಧಲಿಂಗಯತಿವರ್ಯರ ಬಳಿವಿಡಿದು ಬಂದ ಪ್ರಸಿದ್ಧ ವಿರಕ್ತ ಗುರುಪೀಠ.

ನಾನು ಕಾಶಿಯಿಂದ ವ್ಯಾಸಂಗ ಮುಗಿಸಿಕೊಂಡು ಬಂದಮೇಲೆ 1950 ರಲ್ಲಿ ಶ್ರೀಶಿವಯೋಗ ಮಂದಿರ ಸಂಸ್ಥೆಯ ಮುಖಪತ್ರಿಕೆ 'ಸುಕುಮಾರ'ವನ್ನು ಪ್ರಾರಂಭಿಸಿದ್ದೆ. ಅದರ ತಿಂಗಳ ಸಂಚಿಕೆಗಳಲ್ಲಿ ನಾಡಿನ ಪ್ರಾಚೀನ ಗುರುಪೀಠಗಳ ಚರಿತೆಯನ್ನು ಅಲ್ಲಿ ದೊರೆಯುವ ಅಪೂರ್ವ ಓಲೆಗರಿ-ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಹಿತ ಪ್ರಕಟಿಸುವ ಯೋಜನೆ ಹಾಕಿಕೊಂಡಿದ್ದೆ. ಅದನ್ನು ನನ್ನ ಗುರುಮನೆ ಅನಂತಪುರದ (ಆನಂದಪುರಂ, ಜಿ. ಶಿವಮೊಗ್ಗ) ಶ್ರೀಮುರಘಾ ಮಠದಲ್ಲಿಯ ಹಸ್ತಪ್ರತಿ ಹೊತ್ತಿಗೆಗಳ ಸಂಶೋಧನೆಯೊಂದಿಗೆ ಪ್ರಾರಂಭಿಸಿದ್ದೆ. ಆಮೇಲೆ ಗದುಗಿನ ಶ್ರೀ ತೋಂಟದಾರ್ಯ ಮಠವನ್ನು ಸಂದರ್ಶಿಸಿದ್ದೆ. ಅಲ್ಲಿ ಅನೇಕ ಕಾಗದ-ಪತ್ರಗಳು ರಾಶಿಯಾಗಿ ಬಿದ್ದುದನ್ನು ಗಮನಿಸಿ ಅವನ್ನೆಲ್ಲ ಜೋಡಿಸಿ, ಗಂಟು ಕಟ್ಟಿ ಮರದ ದೊಡ್ಡ ಪೆಟ್ಟಿಗೆಯಲ್ಲಿ ಇಡಿಸಿ ಸಮಾಧಾನಪಟ್ಟಿದ್ದೆ. ಅಂದು ಕೆಲವು ಕಾಗದ-ಪತ್ರಗಳ ಟಿಪ್ಪಣಿಗಳನ್ನು ಬರೆದುಕೊಂಡೆ. ಇತಿಹಾಸದ ದೃಷ್ಟಿಯಿಂದ ಅವು ಬಹಳ ಉಪಯುಕ್ತವಾದ ಸಾಮಗ್ರಿಯೆನಿಸಿದವು.

ಗದುಗಿನ ಈ ಧಾರ್ಮಿಕ ಪೀಠಕ್ಕೆ ಸಂಬಂಧಿಸಿದ ಕನ್ನಡ ಪತ್ರ-ಸಾಹಿತ್ಯ ಅಮೂಲ್ಯ ಚಾರಿತ್ರಿಕ ನಿಧಿಯೆಂದರೆ ಅತಿಶಯದ ಮಾತಲ್ಲ. ಅವುಗಳ ಪರಿಶೀಲನೆಯಲ್ಲಿ ಪೀಠದ ಗತವೈಭವದ ಸಾಂಸ್ಕೃತಿಕ ಭವ್ಯಪರಂಪರೆ ಜೀವಂತವಾಗಿ ಸುಳಿದು ಬರುತ್ತದೆ. ಇದರ ಶಾಖಾಮಠಗಳು ನಾಡಿನ ಅದ್ಯಂತ ನಗರ-ಗ್ರಾಮಗಳಲ್ಲಿ ಪವಿತ್ರ ಸಂಸ್ಕೃತಿಯ ಕೇಂದ್ರಗಳಾಗಿ ನಿಂತಿವೆ. ವಿಜಾಪುರ ಜಿಲ್ಲೆಯ ಬಾದಾಮಿ, ಬಾಗಲಕೋಟೆ, ಹುನಗುಂದ ಸೀಮೆಗಳಲ್ಲಿ ಶ್ರೀತೋಂಟದ ಸ್ವಾಮಿಯ ಶಾಖಾಮಠಗಳು

ಈಗಲೂ ಅಸ್ತಿತ್ವದಲ್ಲಿವೆ. ಕೆಲವಂತೂ ನಾಮಾವಶೇಷವಾಗಿವೆ. ಈ ಮಠಗಳಿಗೆ ಅನೇಕ ಜನ ಶಿಷ್ಯರು ಜಾತಿ-ಮತಗಳ ಸಂಕೋಚವಿಲ್ಲದೆ ಅನನ್ಯ ಭಕ್ತಿಯಿಂದ, ತ್ರಿಕರಣ ಪೂರ್ವಕವಾಗಿ, ಸ್ವಸಂತೋಷ ಹಾಗೂ ಸ್ವಯಂಪ್ರೇರಣೆಯಿಂದ ಭೂಮಿಯ ದಾನ ನೀಡಿದ ಪ್ರಸಂಗಗಳು ಉಲ್ಲೇಖ ಪತ್ರಗಳಲ್ಲಿ ಹೃದಯಸ್ಪರ್ಶಿಯಾಗಿವೆ.

ಕನ್ನಡ ನಾಡಿನ ಚರಿತ್ರೆಯಲ್ಲಿ ಇದುವರೆಗೆ ಶಿಲಾಶಾಸನ ಮತ್ತು ತಾಮ್ರಪಟಗಳೇ ವಿಪುಲ ಸಾಮಗ್ರಿಯೊದಗಿಸಿದ್ದವು. ಅವುಗಳ ತರುವಾಯ ವಿಜಾಪುರದ ಶಾಹರ ಮತ್ತು ವಿಜಯನಗರದ ಮಹಾರಾಜರ ಆಳಿಕೆಯ ಕಾಲದಲ್ಲಿ ಕಾಗದ ಪತ್ರಗಳೇ ಹೆಚ್ಚಾಗಿ ಬಳಕೆಯಲ್ಲಿ ಬಂದವು. ನಾಡಿನ ಪ್ರಾಚೀನ ಮಠಮಾನ್ಯಗಳಲ್ಲಿ ಇಂದಿಗೂ ಉಳಿದಿರುವ ಅವನ್ನು ಆಸ್ಥೆಯಿಂದ ಸಂಗ್ರಹಿಸಿ, ಶ್ರದ್ಧೆಯಿಂದ ಪರಿಶೀಲಿಸಿ ಪ್ರಕಟಿಸಿದರೆ ಮರೆತುಹೋದ ಚರಿತೆಯ ಅನೇಕ ಸ್ವಾರಸ್ಯಮಯ ಹೊಸ ಪುಟಗಳು ಬೆಳಕಿಗೆ ಬಂದು ಕರ್ನಾಟಕ ಇತಿಹಾಸ ಇನ್ನೂ ಶ್ರೀಮಂತವಾಗಬಹುದಾಗಿದೆ.

ಈ ಕಾಗದ-ಪತ್ರಗಳಲ್ಲಿಯ ಪ್ರಾರಂಭದ ಸ್ವಸ್ತಿ, ಗುರುಗಳ ಪ್ರಶಸ್ತಿ, ದಾನಿಗಳ ವಂಶಸ್ತುತಿ, ಕೊನೆಗೆ ದತ್ತಿಯ ಪರಿಪಾಲನೆಗೆ ತಪ್ಪಿದವರನು ಕುರಿತ ಶಾಪೋಕ್ತಿ ಮುಂತಾಗಿ ಬರವಣಿಗೆ ಪ್ರಾಚೀನ ತಾಮ್ರಪಟಗಳ ಟಂಕರಣೆಯ ಅನುಕರಣೆಯಲ್ಲಿಯೇ ವಿನೂತನವಾಗಿದೆ.

**ಒಂದು**

ಪರಮ ಗುರುಭಕ್ತರಾದ ನಾಡಗೌಡರು – ದೇಸಾಯರು ಪೂಜ್ಯರ ಅನುಗ್ರಹ ಪಡೆದು ತಮ್ಮ ವಂಶದ ಶ್ರೇಯೋಭಿವೃದ್ಧಿಯ ಜೊತೆಗೆ ಪ್ರಜೆಗಳ ಕಲ್ಯಾಣವನ್ನೂ ಸಂಕಲ್ಪಿಸಿ ಗುರುಮಠಕ್ಕೆ ಭೂದಾನ ನೀಡುವ ಪರಂಪರೆಯಲ್ಲಿ ತ್ಯಾಗಮಯ ಭೋಗದ ಭಾರತೀಯ ಪರಮಾದರ್ಶದ ಹಿರಿಮೆ ಪಡಿಮೂಡಿದೆ. ಕ್ರಿ. ಶ. 1827 ರಲ್ಲಿ ಲಿಖಿತವಾದ ದಾನಪತ್ರವಿದು :

''ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ ।
ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ ।

ಸ್ವಸ್ತಿ ಶ್ರೀಮನ್ನೃಪ ಶಾಲಿವಾಹನ ಶಕ ವರ್ಷ ಸಂಖ್ಯೆ ೧೭೪೯ ನೆಯ ವ್ಯಯನಾಮ ಸಂವತ್ಸರ ಭಾದ್ರಪದ ಬಹುಳ ೬ ಗುರುವಾರ ಮೃಗಶಿರ ನಕ್ಷತ್ರ ಪುಣ್ಯಕಾಲ ಪುಣ್ಯಪ್ರದೇಶದಲ್ಲಿ ಶ್ರೀಮದವಿರಳ ಪರಂಜ್ಯೋತಿ ಸ್ವರೂಪ

ಸಚ್ಚಿದಾನಂದ ನಿತ್ಯಪರಿಪೂರ್ಣ ನಿರಾಕಾರಸ್ವರೂಪಿಗಳಾದ ಅನ್ನದಾನಿ[1] ಸ್ವಾಮಿಗಳವರ ಚರಣಾರವಿಂದಗಳಿಗೆ

ನಿಮ್ಮ ನಿಜಪಾದಭಜನಭಕ್ತಿನಿರತರಾದ ಮಹಾಲ್[2] ತಾರದಗಿ ತಾಲುಃ[3] ಬುಳ್ಳಪ್ಪನ ಕೊಪ್ಪದ ಸಿದ್ದಣ್ಣಗೌಡರ ಪುತ್ರ ಸಕ್ರೆಪ್ಪಗೌಡರು ದಾನಪತ್ರ ಬರಕೊಟ್ಟ ಕ್ರಮವೆಂತೆಂದರೆ—ತಮ್ಮ ನಿಜಭಕ್ತಿಪೂರ್ಣಫಲಪ್ರಾಪ್ತಿಯಿಂದ ಸಕಲ ಸಂಪತ್‌ಪ್ರಾಪ್ತಿಗಳಾಗಿ ನಿಜವಂಶೋದ್ಧಾರವಾಗಬೇಕೆಂದು ನಮ್ಮ ಇನಾಮಲೆ ಸ್ವಾಸ್ತಿಯೊಳಗೆ ಪಂಚಮ ಭಾಗದಲಿ ಮಠದ ಪೂರ್ತಿ ಭೂಮಿಯನು ಸೀಮಿಸಿ ನಿಧಿನಿಕ್ಷೇಪಗಳ ಸಹ ಧಾರಾದತ್ತ ಮಾಡಿ ಬರಕೊಟ್ಟಿದಿತೆ. ಆ ಚಂದ್ರಾರ್ಕವು ಅನುಭವಿಸಿಕೊಂಡು ನಮ್ಮ ಕಲ್ಯಾಣ ವರ್ಧಿಸುವುದು. ಇದಕ್ಕೆ ಮುಂದೆ ದಾರರಾದರೂ ನಮ್ಮ ವಂಶದಲ್ಲಿ ಹುಟ್ಟಿದವರು ನಡೆಸಿ ಕೊಡುವುದು ಎಂದು ಸಂಮ್ಮತದಿಂದ ಬರಕೊಟ್ಟ ಭೂಧಾನಪಟಕಾಗದವು."

## ಎರಡು

ಶಾ. ಶ. ೧೭೭೩ (ಕ್ರಿ.ಶ. ೧೮೫೧) ವಿರೋಧಿಕೃತ್ ಸಂವತ್ಸರ ವೈಶಾಖ ಶು. 13 ಸೋಮವಾರ ಹಣಮನಾಯಕ ದೇಸಾಯಿ, ಪರ[4] ದೇಸಾಯಿ[5] ಪರಗಣೆ[6]

---

1 ವೀರಶೈವ ವಿರಕ್ತ ಗುರುಗಳಲ್ಲಿ ಆಚರಣೆಯ ಕೆಲವು ಕಟ್ಟುಪಾಡುಗಳನ್ನು ಅನುಸರಿಸಿ ಕುಮಾರ, ಮುರುಘಾ, ಸಂಪಾದನ, ಕಂಬಿನ, ಬೆಲ್ಲಾಳ ಮುಂತಾದ ಸಮಯಗಳು ಪರಂಪರಿತವಾಗಿವೆ. ಬೆಲ್ಲಾಳ ಸಮಯಕ್ಕೆ ಶ್ರೀ ತೋಂಟದಾರ್ಯಮಠವೇ ಮೂಲಪೀಠ. ಈ ಪರಂಪರೆಯ ಶಾಖಾಮಠಗಳಲ್ಲಿ ದಾಸೋಹ ನಡೆಸುವ ಅನ್ನದಾನಿ ಅಭಿಧಾನದ ಸ್ವಾಮಿಗಳೇ ಹೆಚ್ಚು. 'ಬೆಲ್ಲಾಳ > ಬೇಲಾಳ' ಶಿವಯೋಗದ ಪಾರಿಭಾಷಿಕ ಪದ. 'ಬೆಲ್ಲಲಾಟ'ದ ತದ್ಭವ ರೂಪ. ಕುಮಾರ ಸಮಯದವರು ಶಿವಾನುಭವ ಚರಮಂತಿಕೆಯವರು. ಸಂಪಾದನ ಸಮಯದ ವಿರಕ್ತರು ಶಿವಶರಣರ ವಚನಗಳ ಸಂಕಲನ ಮಾಡಿ ಅವುಗಳಿಗೆ ಷಟ್‌ಸ್ಥಲಕ್ಕೆ ಸಂಬಂಧಿಸಿ ಶಾಸ್ತ್ರೀಯವಾಗಿ ಟೀಕು-ಟಿಪ್ಪಣಿ ಬರೆಯುವ ಆಚರಣೆಯವರು

2 ಸುತ್ತಲೂ ಹಳ್ಳಿಗಳಿರುವ ನಗರಪ್ರದೇಶ ಸೂಚಕ ಅರಬ್ಬಿ ಶಬ್ದ

3 ತ-ಅಲ್ಲುಕಃ (ಅ) = ಕೆಲವು ಮೌಜೇ(ಗ್ರಾಮಗಳು) ಕೂಡಿದ ಶಾಸಿತ ಪ್ರದೇಶ

4 ಪಾರ್ಸಿ ಶಬ್ದ. 'ಶಿರಃ' ಅಥವಾ 'ಶೀರ್ಷ' ಸಂಸ್ಕೃತ ಪದಗಳ ತದ್ಭವರೂಪ

5 'ದೇಶರಾಜ > ದೇಸರಾಯ > ದೇಸಾಯ > ದೇಸಾಯಿ' ಪದವು ಪೇಶವೆಯರ ಶಾಸನ ಕಾಲದಲ್ಲಿ ಬಳಕೆಯಲ್ಲಿ ಬಂದಿತು

6 ಪರ್ಗನಃ (ಪಾರ್ಸಿ) > ಪರ್ಗನಾ > ಪರಗನಾ > ಪರಗಾಣಾ > ಪರಗಣೆ; ಸುತ್ತಲೂ ಹಳ್ಳಿಗಳಿರುವ ಭೂಪ್ರದೇಶ. ಸಂ. ಪರಿಗಣಿತ

ಬಾದಾಮಿನಾಡ ಪಟ್ಟಗಳೆಟ್ಟಿ, ಪರಗಣೆ ಎರಡುರಗಿ ನಾಡಚವುಧರಿ[1], ಮಾಮುಲೆ[2] ಬಾಗಲಕೋಟೆ ಶಿರೂರ ನಾಯಕ ಇವರು ತೋಂಟದ ಮಹಾಸ್ವಾಮಿಗಳವರಿಗೆ ಭೂ ದಾನವನ್ನು ತಮ್ಮ ಸಂಸ್ಥಾನಕ್ಕೆ ಪುಣ್ಯವೃದ್ಧಿಯಾಗಲೆಂಬ ಇಚ್ಛೆಯಿಂದ 36 ಬೀಘೇ[3] ಭೂಮಿಯನ್ನು ಲಿಂಗಮುದ್ರೆ ಸಹಿತ ನಡೆಸಿ ದಾನವಿತ್ತರು. ಆ ಭೂಮಿಯಲ್ಲಿದ್ದ ನಿಧಿ-ನಿಕ್ಷೇಪ-ತರು-ಪಾಷಾಣ ಮೊದಲಾದವನ್ನು ಗುರುಗಳು ಶಿಷ್ಯಪರಂಪರವಾಗಿ ಅನುಭವಿಸಿಕೊಂಡು ಆಶೀರ್ವದಿಸುತ್ತಿರಬೇಕೆಂಬುದು ಜನನಾಯಕರ ಅಭಿಲಾಷೆ. ದಾನಪತ್ರದ ಅಂತ್ಯದಲ್ಲಿ—"ಬೇರೆಯವರು ನೀಡಿದ ದಾನವನ್ನು ನಡೆಸಿಕೊಂಡು ಬರುವುದು ತಾನು ಮಾಡಿದ ದಾನಕ್ಕಿಂತಲೂ ಎರಡು ಪಟ್ಟು ಹೆಚ್ಚು ಪುಣ್ಯಕಾರಿ. ಪರರು ದಾನವಿತ್ತ ಭೂಮಿಯನ್ನು ಅಪಹರಿಸುವುದರಿಂದ ತಾನು ಮಾಡುವ ನೀಡುವ

---

1 ಚತುರ್ಧಾಕರಧರ (ಸಂ.) – ನಾಲ್ಕು ತೆರನಾದ ಕರ ತೆಗೆದುಕೊಳ್ಳುವ ಅಧಿಕಾರ ಪಡೆದ ಮುಖ್ಯಸ್ಥ ; ಚೌಧರಿ, ಸಮಾಜ ಶಾ ಮುಖಿಯಾ (ಹಿಂ)

2 ಆದಿಲಶಾಹಿ ಆಳಿಕೆಯಲ್ಲಿ ಬಾಗಲಕೋಟೆ ನ್ಯಾಯಸ್ಥಾನವಾಗಿತ್ತು. ಮು ಅಮಲ್ (ಅರಬ್ಬಿ) > ಮಾಮಲಾ (ಹಿಂ) – (1) ವ್ಯಾಪಾರ ಇಲ್ಲವೆ ವ್ಯವಹಾರಗಳಲ್ಲಿ ಎರಡು ಪಕ್ಷಗಳ ವಿವಾದಾಸ್ಪದ ವಿಷಯ, ಜಗಳ, ತಂಟೆ, ಅಭಿಯೋಗ, ಮುಕದ್ದಮೆ (ಅ) ; (2) ನ್ಯಾಯಾಲಯ. The office of the Mamaledar (Kittel); ಕಚೇರಿ (ಕಚಹರಿ-ಹಿಂ.); 'ಮಾಮಲಾ' ಪದಕ್ಕೆ ಪಾರ್ಸಿಯ ಮತುಲ್ (ಆಳ್ವ) ಅರ್ಥದ 'ದಾರ' ಪ್ರತ್ಯಯ ಕೂಡಿ 'ಮಾಮಲೆದಾರ' ಶಬ್ದ ಉಂಟಾಗಿದೆ. ಅದಕ್ಕೆ 'ದೇಸಾಯಿ' ಪದ ಕೂಡಿ 'ಮಾಮಲೆದೇಸಾಯಿ' ಶಬ್ದವು ಪೇಶವೆ ಶಾಸನಕಾಲದಲ್ಲಿ ಕನ್ನಡಕ್ಕೆ ಬಂದು ಸೇರಿತು. 'ಮಾಮಲೆದಾರ' ಅಥವ 'ಮಾಮಲತದಾರ' ಪದಕ್ಕೆ ಸರಿಸಮಾನ ಅರ್ಥ ಕೊಡುವ ಇನ್ನೊಂದು ಶಾಸನಾಂಗ ಪದ 'ತಹಶೀಲದಾರ'. ತಹಶೀಲ (ಅ) - ಕರಗ್ರಹಣ ; ತಹಶೀಲದಾರ – ಕರ ವಸೂಲು ಮಾಡುವ ತಾಲೂಕ ಮಟ್ಟದ ಅಧಿಕಾರಿ ; ಇದೇ ಅರ್ಥದಲ್ಲಿ 'ಅಮಲದಾರ' ಶಬ್ದವೂ ರೂಢಿಯಲ್ಲಿದೆ. ಅಮಲ (ಅ) – ಶಾಸನ, ಆಡಳಿತೆ ; ಅಮಲದಾರ ರಾಜ್ಯಶಾಸನ ಸರಿಯಾಗಿ ನಡೆಯುವಂತೆ ನಿಯಂತ್ರಿಸುವ ಅಧಿಕಾರಿ. ಮಾಮಲೆ, ತಹಶೀಲು, ಅಮಲು ಈ ಮೂರು ಪದಗಳು ಒಂದೇ ಅರ್ಥದ ಪ್ರಯೋಗದಲ್ಲಿದ್ದರೂ ಅವುಗಳ ಮೂಲ ಯೌಗಿಕ ಅರ್ಥಗಳು (shades of meaning) ಭಿನ್ನವಾಗಿವೆ.

3 ಬೀಘಾ > ಬೀಗಾ > ಬೀಗೆ...'ವಿಂಶತಿವರ್ಗ'ದ ಅಪಭ್ರಂಶ. ಇಪ್ಪತ್ತುಮೂರು ಇಲ್ಲವೆ ದೊಡ್ಡ ಅಳತೆಗೋಲ ಚಚ್ಚೌಕು ಭೂಮಾಪನ ಸೂಚಕ. ಅದರ ಪರ್ಯಾಯವೇ ಕನ್ನಡ ಶಾಸನಗಳಲ್ಲಿಯ 'ಮತ್ತರು'. ಅದು 'ಮಹದ್‌ವಿಂಶತಿವರ್ಗ'ದ ತದ್ಭವ. 'ಎಕರೆ' ಪದವು 'ಏಕಮತ್ತರ'ದ ಅಪಭ್ರಂಶವಾಗಿರಬೇಕು. ಉತ್ತರ ಭಾರತದಲ್ಲಿ ಬೀಘಾ ಬಹಳ ಬಳಕೆಯಲ್ಲಿದೆ. 'ಬೀಸ್ ಬಿಸ್ವಾ' ಎಂದರೆ ಒಂದು ಬೀಘೆ. ಒಂದು ಬೀಘೆಯ ಇಪ್ಪತ್ತನೆಯ ಭಾಗವೇ ಬಿಸ್ವಾ (ಬೀಸವಾಂ). 'ಬಿಸ್ವಾ' ಐದು ಮೊಳ (ಒಂದು ಮಾರು) ಅಳತೆಯ ಸೂಚಕ. ಬೀಗೆ ಎಕರೆಗಿಂತ ಕಡಿಮೆ ಪ್ರಮಾಣದ ಹೊಲದಳತೆ. 1 ಎಕರೆ (ಎಕರ್-ಹಿಂ) – $1\frac{3}{5}$ ಬೀಘೆ (1 ಬೀಘೆ, 12 ಬಿಸ್ವೆ) ; 36 ಬೀಘೆ – $22\frac{1}{2}$ ಎಕರೆ : ಕಿಟ್ಟೆಲ ಕೋಶದಲ್ಲಿ ಈ ಶಬ್ದವಿಲ್ಲದಿರುವುದೊಂದು ಕೊರತೆ

ಧರ್ಮವೂ ವ್ಯರ್ಥವಾಗುವುದು". ಎಂಬ ಉದಾತ್ತ ಆದರ್ಶವನ್ನು ಜನರ ನೆನಪಿಗೆ ತಂದುಕೊಡುವ ಈ ಗ್ರಂಥ ಗಮನೀಯ :

> ಸ್ವದತ್ತಾದ್ ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ ।
> ಪರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇತ್ ॥

**ಮೂರು**

ಕಾಲ ನಿರ್ದೇಶವಿಲ್ಲದ ಈ ಕಾಗದದಲ್ಲಿ 'ಮಹಾನಾಯಕಾಚಾರ್ಯ ನಾಯಕ ಶಿರೋಮಣಿ ಚೌಡೇರ ಚೌಡಿ ಕದಂಬಾಗಡಿಯಂಕಭೀಮು' ಶಿಲ್ಲೆ ಬಾದಾಮಿ ಸೀಮೆಯ ದೇಸಾಯಿ, ಯಲ್ಲಬರಗಿ ಸೀಮೆ ನಾಡಪಟ್ಟಣಶೆಟ್ಟಿ, ಬಾಗಡಿಕೋಟೆ ಸೀಮೆ ಸರನಾಡ ಚೌಧರಿಗಳಾದ ಪವಾಡಿ ನಾಯಕರು 'ಅವಿರಳ ಪರಂಜ್ಯೋತಿ ನಿತ್ಯ ಶಿವಾನಂದಭರಿತ ರಾದ ರಾಜಮಾನ್ಯ ರಾಜಶ್ರೀ' ತೋಂಟದಾರ್ಯ ಸ್ವಾಮಿಗಳವರಿಗೆ ಬಿನ್ನಹಪೂರ್ವಕ ತೊರೆ ನೀರಲಗಿಯ ಇನಾಮತಿ ಜಮೀನನ್ನು ಮಾನ್ಯದ ಮಹತ್ತಿಗೆ ಬಿಡಿಸಿಕೊಟ್ಟ ಉಲ್ಲೇಖವಿದೆ.

**ನಾಲ್ಕು**

ಭಕ್ತರು ಗುರುಗಳಿಗೆ ಬಿನ್ನಹ ಪತ್ರ ಬರೆದುಕೊಳ್ಳುವ ಪದ್ಧತಿಯನ್ನು ಕ್ರಿ.ಶ. 1849 ರಲ್ಲಿ ಬರೆದ ಈ ಕಾಗದ ಸೂಚಿಸುತ್ತದೆ :

> ಶ್ರೀಮತ್ ಪರಮಪಾವನ-ಪವಿತ್ರ ಚಾರುಚರಿತ್ರ ಸಂಮೋಹಾಸಂಗ ಸನ್ಮಾರ್ಗ ಸಕಲ ದೇವತಾಶಿರಃಪ್ರಧಾನ ಸಾರಜನ ಸದುಹೃದಯ ಕರ್ಣಿಕಾ ನಿವಾಸ ಕರುಣರಸಭರಿತ ಕಾಮನಾಶನ ಅನಾದಿ ನಿರಂಜನ ಅಲ್ಲಮಪ್ರಭು ದೇವರ ಸಂಪ್ರದಾಯಕರಾದ ರಾಜಪೂಜಿತ ರಾಜಶ್ರೀ ತೋಂಟದ ಸ್ವಾಮಿ ಯವರ ದಿವ್ಯ ಪಾದಪದ್ಮಂಗಳಿಗೆ ಕಾರುಣ್ಯಪ್ರಿಯ ಭಕ್ತನಾದ ನಾಲವಾರದ ಬಸಪ್ಪನು ಮಾಡುವ ದೀರ್ಘದಂಡ ಬಿನ್ನಹ
>
> ಅದಾಗಿ ನಾವು ಈ ಕೀಲಕನಾಮ ಸಂವತ್ಸರ ಕಾರ್ತಿಕ [1]ವದಿ 1 ಶುಕ್ರ ವಾರದ ಸಾರೋದಕ್ಕೆ[2] ತಮ್ಮ ಅನುಗ್ರಹದಿಂದ ಪರಿಣಾಮದಲ್ಲಿ ಇರ್ಧೇವೆ. ತಮ್ಮ 'ಕಡೆಯಣ ಶಿವಾನಂದ ವೈಭವಂಗಳನು ನಿರಂತರ ಆಶೀರ್ವದಿಸಿ ಪತ್ರ ವನ್ನು ಬರಸಿ ಕೃತಾರ್ಥರ ಮಾಡುವಲ್ಲಿಗೆ ಕರ್ತೃಗಳೇ ಸೈ. ತದನಂತರ ರಾಜೇಶ್ರೀ...'

---

1 'ವೃದ್ಧಿ'ಯ ತದ್ಭವ, ಶುಕ್ಲಪಕ್ಷ ಸೂಚಕ

2 ಸ್ವರುದಯ = ಸೂರ್ಯೋದಯ ; ಸ್ವಃ > ಸ್ವರ್ = ಸೂರ್ಯ

**ಐದು**

ಶಾ.ಶ. 1716 (ಕ್ರಿ.ಶ. 1795) ಆನಂದನಾಮ ಸಂವತ್ಸರ ಕಾರ್ತಿಕ [1]ಬ. 6 ಗುರುವಾರ ಪುಷ್ಯ ನಕ್ಷತ್ರದ ಪುಣ್ಯಕಾಲದಲ್ಲಿ ಶ್ರೀಮದವಿರಳ ಪರಂಜ್ಯೋತಿ ಸ್ವರೂಪ ಸಚ್ಚಿದಾನಂದ ನಿತ್ಯಪರಿಪೂರ್ಣ ನಿರಾಕಾರ ಸ್ವರೂಪಿಗಳಾದ ಅನ್ನದಾನಿ ಸ್ವಾಮಿಗಳವರ ಚರಣಾರವಿಂದಗಳಿಗೆ 'ನಿಜಪದ ಭಜನ ಭಕ್ತಿನಿರತ'ರಾದ ಕಸಬೆ[2] ಅಣ್ಣಿಗೇರಿ ಸೀಮೆ ದೇಸಾಯಿ ಭದ್ರಪ್ಪಗೌಡರು ತಮ್ಮ ಇನಾಮತಿ[3] ಉಮ್ಮಳಿ (ಉಂಬಳಿ) ಮಜರೆ[4] ಬಸಾಪುರದ ಸೀಮೆಯಲ್ಲಿಯ ಭೂಮಿಯನ್ನು 'ಚಿಪರೀಮಾನ್ಯ'ವೆಂದು ನಿಧಿ–ನಿಕ್ಷೇಪ[5] ಸಹ ಧಾರಾದತ್ತವಾಗಿ ನೀಡಿದ ಉಲ್ಲೇಖವಿರುವ ದಾನ ಪತ್ರವಿದು.

**ಆರು**

ಗುರುಮಠಗಳಿಗೆ ನಾಡಗೌಡರು ಮತ್ತು ಮಹಾಜನರು ಭೂದಾನ ಮಾಡುವುದು ಧರ್ಮಕಾರ್ಯ ಅವ್ಯಾಹತವಾಗಿ ನಡೆಯಲೆಂದು. ಗ್ರಾಮ ದೇವಸ್ಥಾನಗಳ ಜೀರ್ಣೋದ್ಧಾರ, ಮಠಗಳ ಸ್ಥಾಪನೆ, ಅಲ್ಲಿ ಜಂಗಮಮೂರ್ತಿ ನೆಲಸಿ ದಾಸೋಹ ಪೂರ್ವಕ ಬೋಧೆ, ಕರ್ತೃಗದ್ದಿಗೆಯ ನಿತ್ಯಪೂಜೆ–ನಂದಾದೀಪಾರಾಧನೆ ಇವೆಲ್ಲ ಅವರ ದೃಷ್ಟಿಯಲ್ಲಿ ಅಖಂಡವಾಗಿ ನಡೆಯಬೇಕಾದ ಧರ್ಮಕಾರ್ಯಗಳು. ಅವುಗಳಿಗಾಗಿಯೇ ನಿಜಗುಣಿಗಳಾದ ಭಕ್ತರು ನೀಡುವುದು ಮಾಡುವುದು.

ಸ್ವಸ್ತಿ ಜಯಾಭ್ಯುದಯ ನೃಪ ಶಾಲಿವಾಹನ ಶಕ ೧೭೦೪ (ಕ್ರಿ.ಶ. ೧೭೮೩.) ಶುಭಕೃತ್ ಸಂವತ್ಸರದಲ್ಲಿ ಕಿಲ್ಲೆ[6] ಬಾದಾಮಿ ಸೀಮೆಯ ಸರ[7]ದೇಸಾಯಿ, ಯಲಬರಗಿ ಸೀಮೆಯ ಪಟ್ಟಣ ಶೆಟ್ಟಿ, ಬಾಗಡಿಕೋಟೆ ಸೀಮೆಯ ಸರನಾಡ ಚೌಧರಿ ಹನುಮಪ್ಪನವರು ಬರಸಿಕೊಟ್ಟ ದಾನಪತ್ರದಲ್ಲಿ ಸುಭೇದಾರ [8] ವಿಷ್ಣಪ್ಪನವರ ಇಚ್ಛೆ

---

1 ಬಹುಲ > ಬಹುಳ (ಕೃಷ್ಣಪಕ್ಷ)

2 ಕಸ್ಬಾ (ಅರಬ್ಬಿ) = ದೊಡ್ಡಗ್ರಾಮ

3 ಇನ್ ಆಮ್ (ಅ) = ಪುರಸ್ಕಾರ. ದಾನ : ಇನಾಮತಿ (ವಿ) = ಇನಾಮಿಗೆ ಸಂಬಂಧಪಟ್ಟ :

4 ಮಜರಾ (ಅ) = ಸಣ್ಣಗ್ರಾಮ

5 ಅಷ್ಟಭೋಗಗಳು—ನಿಧಿ. ನಿಕ್ಷೇಪ. ಅಕ್ಷೀಣ. ಆಗಾಮಿ. ಸಂಚಿತ. ಜಲ, ತರು. ಪಾಷಾಣ, ಇವೇ ಅಷ್ಟತೇಜಗಳು

6 ಕಿಲಾ (ಅರಬ್ಬಿ) = ದುರ್ಗ. ಕೋಟೆ. ಕೊತ್ತಳ : ಅದರಿಂದ ಕಿಲ್ಲೆದಾರ = ದುರ್ಗಪಾಲ

7 ಪಾರ್ಸಿ ಶಬ್ದ. (ಸಂಸ್ಕೃತ ಶಿರಸ್ ಅಥವಾ ಶೀರ್ಷದ ತದ್ಭವ)

8 ಸೂಬೇದಾರ = ಪ್ರಾಂತಶಾಸಕ. ಪ್ರದೇಶಾಧಿಕಾರಿ : ಸೂಬಾ (ಅ) = ಪ್ರಾಂತ. ಪ್ರದೇಶ ದಾರ (ಪಾರ್ಸಿ) = ಮತ್(ಉಳ್ಳ–ಹೊಂದಿದ) ಅರ್ಥವಿರುವ ಪ್ರತ್ಯಯ

ಯಂತೆ ಚೆಲುಲಿಂಗನ ಗುಡಿಯ ದುರಸ್ತಿಯು[1] ಮಾಡಿಸಿ, ಅದರ ನಿವೇಶನದಲ್ಲಿ ನಾಲ್ಕು ಮೂಲೆಗೆ ಶಿವಲಿಂಗ ಮುದ್ರೆಕಲ್ಲು ನಡೆಸಿ ಅಲ್ಲಿ ಒಬ್ಬ ಜಂಗಮ ಮೂರ್ತಿಯನ್ನು ನಿತ್ಯ ಧರ್ಮಕಾರ್ಯ ಕ್ರಮವಾಗಿ ನಡೆಸುವುದಕ್ಕಾಗಿ ನೇಮಿಸುವ ನಿರೂಪವಿಲ್ಲಿ ಉಲ್ಲಿಖಿತ ವಾಗಿದೆ.

**ಏಳು**

ಶಾ. ಶ. ೧೭೦೫ (ಕ್ರಿ.ಶ. ೧೭೮೪) ಶೋಭನ ಸಂವತ್ಸರದಲ್ಲಿ ಪೂಜ್ಯ ಶ್ರೀಗಳವರ ತಾರುಣ್ಯಪ್ರಿಯ ಭಕ್ತರು ಗದುಗು ರವುಡ ಕುಂದೆ ಸೀಮೆ ದೇಸಾಯಿ, ಕಿಲ್ಲೆ ಬಾದಾಮಿ ಸರದೇಸಾಯಿ, ಕಲಕೆರೆ ಸೀಮೆ ನಾಡಗೌಡರಾದ ಬಾಹದರ[2] ವೆಂಕಪ್ಪಯ್ಯನವರು ಬರೆಸಿದ ದಾನಪತ್ರವಿದು. ಇದರಲ್ಲಿ ಬಾದಾವಿ ಸೀಮೆಯ ಉಮ್ಮಳಿ ಗ್ರಾಮ ಉಮಚಗಿಯಲ್ಲಿ ಶಾಬಾಮಠದ ಧರ್ಮ ನಡೆಯಬೇಕೆಂದು ಮೂವತ್ತಾರು ಬೀಗೆ ಭೂಮಿ ಮಾರು ಹ್ಯಾಗ[3] ಜಕಾತಿ[4] ಮೇಲೆ ಹೇರಿಗೆ ಒಂದಕ್ಕೆ ರು.॥. 'ವಾಪಿಸ ಕೀ ಆಯ'[5] ಸಹ ಮಾಡಿಕೊಟ್ಟ ಉಲ್ಲೇಖ ವಿಶಿಷ್ಟವಾಗಿದೆ.

**ಎಂಟು**

ಗದಗು ನಗರದ ಕೆಲವು ಮನೆತನಗಳು ಶ್ರೀ ತೋಂಟದ ಸ್ವಾಮಿಗಳವರ ಮಠಕ್ಕೆ ಅತ್ಯಂತ ನಿಷ್ಠೆಯಿಂದ ಸೇವೆ ಸಲ್ಲಿಸುತ್ತ ಬಂದಿವೆ. ಅವುಗಳಲ್ಲಿ ಮಾನ್ವಿ, ಹುಂಬಿ, ವಾಲಿ ವಂಶಜರು ಆ ಭಾಕ್ತಿಕ ಪರಂಪರೆಯನ್ನು ಇಂದಿನ ವರೆಗೂ ಮುಕ್ಕಾಗದಂತೆ ಕಾಪಾಡಿಕೊಂಡು ಬಂದಿರುವರು. ಕೆಳಗಿನ ಪತ್ರದಲ್ಲಿ (ಕ್ರಿ.ಶ. ೧೯೧೪) ಆ ವರ್ತಕ ಮನೆತನಗಳ ಹಿರಿಯರ ಉಲ್ಲೇಖವಿರುವು ದೊಂದು ವೈಶಿಷ್ಟ್ಯ :

---

1 ದುರಸ್ತೀ (ಪಾರ್ಸಿ) = ಖಂಡಸ್ಫುಟಿತದ ಸುಧಾರಣೆ, ಜೀರ್ಣೋದ್ಧಾರ; 'ಮರಮ್ಮತ್' ಅದೇ ಅರ್ಥದಲ್ಲಿಯ ಇನ್ನೊಂದು ಅರಬ್ಬಿಪದ ಬಳಕೆಯಲ್ಲಿದೆ. ಅದರ ಕನ್ನಡ ತದ್ಭವ 'ಮರಾಮತು > ಮರಾಮತ್ತು.'

2 ಬಹಾದುರ (ಪಾರ್ಸಿ) = ಯುದ್ಧವೀರ ; 'ಬಹದ್ದೂರು' ಇನ್ನೊಂದ ತದ್ಭವ

3 $\frac{1}{4}$ ಹಣ = ಒಂದಾಣೆ ಎರಡು ಕಾಸು, ತೆರಿಗೆಯ ಆಕಾರ

4 'ಜಕಾತ' ಅರಬ್ಬಿ ಶಬ್ದ. ಕುರಾನಿನ ಪ್ರಕಾರ ಧರ್ಮಕಾರ್ಯಕ್ಕಾಗಿಯೇ ವಿನಿಯೋಗಿಸ ಬೇಕಾದ ಪ್ರತಿಯೊಬ್ಬ ವ್ಯಕ್ತಿಯ ವಾರ್ಷಿಕ ಉತ್ಪನ್ನದ ಇಪ್ಪತ್ತನೆಯ ಅಂಶ. ಮುಂದೆ ಅದು ಬರಿಯ ರಾಜಕರದ ಅರ್ಥದಲ್ಲಿ ರೂಢವಾಯಿತು

5 ವಾಪಸ (ಪಾರ್ಸಿ), ಅದರ ತದ್ಭವ. ವಾಪಸೀ ಆಯ = ಸಂತೆ ಮುಗಿದ ಮೇಲೆ ತಿರುಗಿ ಹೋಗುವಾಗ ವರ್ತಕ ಜನರಿಂದ ಬರುವ ಉತ್ಪತ್ತಿ

"ಶ್ರೀಮತ್ ಸಚ್ಚಿದಾನಂದ ಅವಿರಳ ಪರಂಜ್ಯೋತಿ
ಸದಾ ಶಿವಧ್ಯಾನ ನಿರತರಾದ ರಾಜಮಾನ್ಯರಾಜೇ ಶ್ರೀ
ದಂಬಳದ ತೋಟದ ಸ್ವಾಮಿಗಳವರಿಗೆ–"

ತಮ್ಮ ಅತ್ಯಂತ ಭಕ್ತರಾದ ಗದಗು ರವುಡಕುಂದೆ ಸೀಮೆ ದೇಸಾಯಿ ಪ॥ ಸಿಂಧನೂರು ಸೀಮೆ ನಾಡಗೌಡರಾದ ಮಥುರಾಬಾಯಿ ಸೀನ[1]ಪ್ಪಯ್ಯನವರ ಪುತ್ರ ವೆಂಕಪ್ಪಯ್ಯನವರ ಪುತ್ರರಾದ ಬಹಾದರ ಸೀನ[1]ಪ್ಪಯ್ಯನವರು ಬರಸಿ ಕೊಟ್ಟ ಇನಾಮು ಪತ್ರವೆಂತೆಂದರೆ ದಮ್ಮಳ[2]ಮಠದ ಗದಗಿಪೂಜಾ ದೀಪಾರಾಧನೆ ಧರ್ಮಕೃತ್ಯ ಉದ್ದೇಶ ರಾ॥ ಅಂದಾನೆಪ್ಪ ಮಾನವಿ ವ[3] ಹುಂಬಿ ವೀರಪ್ಪ ವ ವಾಲಿ ಲಿಂಗಣ್ಣ ಮುಂತಾದ ಸಮಸ್ತ ಗದಿಗಿನ ಇನಾಮತಿ ದೈವದವರು ಹೇಳಿಕೊಂಡ ಮೂಲ ಆ ಧರ್ಮ ನಡೆಯಬೇಕೆಂದು ನಮ್ಮ ಗದಿಗಿನ ಇನಾಮತಿ ಪೈಕಿ ಹೊಲ ಪುರಾಣದ ಭದ್ರಯ್ಯನ ಬಗಿ ಹೊಲಕೆ ಪೂರ್ವದಲ್ಲಿ ಇದ್ದುದು ಮಾರು ೧ ಒಂದು ಮೂವತ್ತಾರು ಬೀಘೆದಲಿ ಮಟಕೆ ಮಾಡಿಕೊಟ್ಟು ಇನಾಮತಿ ಅವರಿಗೆ ತಾಕೀದಿ ಪತ್ರ ಬರಕೊಟ್ಟು ಇಧೇವೆ, ಆ ಭೂಮಿ ತಂಮ್ಮ ಶಿಷ್ಯಪರಂಪರ ಅನುಭವಿಸಿ ದಂಮ್ಮಳದ ಮಠದ ಧರ್ಮ ನಡೆಸಿ ಸಂಸ್ಥಾನಕ್ಕೆ ಕಲ್ಯಾಣ ಚಿಂತಿಸಿಕೊಂಡು ಇಹುದೆಂದು ಬರಕೊಟ್ಟ ಇನಾಮ ಪತ್ರವು, ಆ ಭೂಮಿಯೊಳಗ ಇದ್ದಂತಾ ನಿಧಿನಿಕ್ಷೇಪಾದಿ ಅಷ್ಟತೇಜೋಪಾರ್ಜನೆಯುನ್ನು ಮಠಕೆ ಮಾಡಿಕೊಟ್ಟು ಇಧಿತೆ ॥ ಸ್ವದತ್ತಾದ್ವಿಗುಣಂ ಪುಣ್ಯಂ ಪರದತ್ತಾನು ಪಾಲನಂ ॥ ಪರದತ್ತಾಪಹಾರೇಣ ಸ್ವದತ್ತಂ ನಿಃಫಲಂ ಭವೇತ್ ॥ ೧ ॥ (ಅಂತ್ಯದಲ್ಲಿ ಮೋಡಿ ಲಿಪಿಯಲ್ಲಿ ಬರೆಹವಿದೆ.)

**ಒಂಬತ್ತು**

ಕ್ರಿ. ಶ. ೧೭೬೦ ರಲ್ಲಿ ಬರೆದ ಈ ಕಾರದ ಮಣ್ಣಿನ ಮಕ್ಕಳಾದ ರಡ್ಡಿ ರೈತರು 'ಲಿಂಗದ' 'ನಾಮದ' ಎಂಬ ಭೇದವಿಲ್ಲದೆ ಏಕೋಭಾವದಿಂದ ಶಿವಾಚಾರಪಥದಲ್ಲಿ ನಡೆದವರೆನ್ನುವ ಸತ್ಯವಿಲ್ಲಿ ಸುಸ್ಪಷ್ಟ :

---

1 'ಶ್ರೀನಿವಾಸ'ದ ತದ್ಭವ

2 ಸ್ಥಳಪುರಾಣದ ಪ್ರಕಾರ ಇದು ಪ್ರಾಚೀನ ಕಾಲದಿಂದ 'ಧರ್ಮಪುರ'ವೆನಿಸಿತ್ತು. ಶಿಬಿ ಚಕ್ರವರ್ತಿಯ ದಯಾಧರ್ಮದ ಕೃತ್ಯಗಳು ನಡೆದ ಪಾವನ ಸ್ಥಾನ: (ಧರ್ಮಪುರ > ಧಮ್ಮಪುರ > ದಮ್ಮಲ > ದಮ್ಮಳ > ಡಂಬಳ)

3 'ವ' ಇಲ್ಲಿ 'ಮತ್ತು' ಅರ್ಥದ ಸಮ್ಮುಚ್ಚಯದಲ್ಲಿ ಪ್ರಯುಕ್ತ. ಅದು ಕನ್ನಡದಲ್ಲಿ ಅನ್ಯಭಾಷೆಗಳಿಂದ ಹೇಗೆ ಬಂದಿತೆನ್ನುವುದನ್ನು ಶೋಧಿಸಬೇಕು. ಹಿಂದಿಯಲ್ಲಿಯ 'ವಾ' ವಿಕಲ್ಪಾರ್ಥಕ ಸಂಸ್ಕೃತ ಅವ್ಯಯ 'ಅಥವಾ'ದ ಅವಶಿಷ್ಟವಾಗಿದೆ. 'ವ' ಸಂಸ್ಕೃತದಲ್ಲಿಯ 'ವರಂಚ' 'ವರಂ' ಪದಗಳ ಅವಶೇಷವಾಗಿರಬಹುದೇ ? ಕನ್ನಡದಲ್ಲಿ ಸಮುಚ್ಚಯವಾಚಕ 'ವ' ಮರಾಠಿಯ ಪ್ರಭಾವದಿಂದ ನುಸುಳಿ ಬಂದಿರಬೇಕು. ಅರಬ್ಬಿಯ ಕ್ರಿಯಾವಿಶೇಷಣ ಅವ್ಯಯ 'ವ ಇಲ್ಲಾ'='ಇಲ್ಲದೆ ಇದ್ದರೆ ಎಂಬ ಅರ್ಥ ಕೊಡುತ್ತದೆ

"ಶ್ರೀಮತ್ ಪರಮ ಕೈಲಾಸ ಸಿಂಹಾಸನಾರೂಢ
ಪರಶಿವಲೀಲಾ ಸ್ವೀಕೃತ ಕಳೇವರರು ಮಪ್ಪ
ನಂದೀಶಾದಿ ರುದ್ರ ಪ್ರಮಥ ಗಣಂಗಳ
ಸಂಪ್ರದಾಯವಿಡಿದೊಪ್ಪುವ ಶ್ರೀ ಅನ್ನದಾನಿ
ಸ್ವಾಮಿಗಳ ಪಾದಕ್ಕೆ

೦॥ ನಿಮ್ಮ ಬಾಲಕರಾದ ತ॥ ಸಿರೋಳದ ಬರಮಣ್ಣಗೌಡನ ಮಕ್ಕಳು ರಾಯಪ್ಪಗೌಡ ವ ತಿಂಮಣಗೌಡ ವ ವೀರಣಗೌಡ ವ ಸಂಕಣಗೌಡ ನಮ್ಮ ಗುಳಗೊಂದಿ ಇನಾಮಗಾವ... ದಾನಪತ್ರ ಬರಕೊಟ್ಟ ಕ್ರಮವೆಂತೆಂದರೆ–ಗುಳಗೊಂದಿ ನಮ್ಮ ಹೊಸಮಾನ್ಯ ಸರ್ವಮಾನ್ಯದೊಳಗೆ ಹೊಲ ಮಾರು % ಜೀಗೆ ಒಂಬತ್ತು ನಾಕುವರೆ ವೊಳದ ಹಾಗದಲಿ ಶಿರೋಳದ ವಿರತಮಟಕೆ ನಂಮ್ಮ ಆತ್ಮಸಂತೋಷದಿಂದ ನಾಕು ಮೂಲಿಗೆ ಲಿಂಗಮುದ್ರಿ ಕಲ್ಲುಹಾರೆ ಸ್ತಾಪನಿ ಮಾಡಿ ಸ್ವಾಮಿಗಳ ಪಾದಕ್ಕೆ ಸಮರ್ಪಿತಮಾಡಿ ಇದ್ದೇವು. ನಮಗೆ ಸ್ವಾಮಿಗಳು ಸದಾ ಸರ್ವ ಕಾಲದಲಿ ಆಸೀರ್ವಾದ ಕೊಟ್ಟುಕೊಂಡು ಸುಕದಲಿ ಹೊಲ ಅನುಭವ ಮಾಡಿಕೊಂಡು ಇಮುದು. ನಮ್ಮ ವಳಗೆ ದಾರರೆ ಇಲ್ಲಿ ಹರಕತ್ತು ಮಾಡಿದರೆ ಸಿವಾಚಾರ ಕುಲಾಚಾರಕೆ ಹೊರತು. ನಮ್ಮ ಕುಲದೈವ ಪರುತದೇವರು ವೆಂಕಟೇಶ ಸಾಕ್ಷಿಯಾಗಿ ಕೊಟ್ಟು ಇಧೇವು. ನಂಮ್ಮ ಆತ್ಮಸಂತೋಷದಿಂದ ಬರಕೊಟ್ಟ ದಾನಪತ್ರ ॥... ಪ್ರಮಾತಿನಾಮ ಸಂವತ್ಸರದ ಜೇಷ್ಠ ಶುದ್ಧ ಪೂರ್ಣಿಮಿ[1] ಶಕೆ ೧೬೮೧ ಸ್ವದಸ್ತೂರ[2] ಯಿರಣಗೌಡರ ಬರಹ."

ಕೆಳಗೆ ಹಿರೇಮಠದ ಪಟ್ಟದ ದೇವರು, ದೇವಯ್ಯ ದೇವರು, ಇಟಗಿ ಬನ್ನಿಕೊಪ್ಪದ ಬೆಣ್ಣಪ್ಪಗೌಡರು ಮುಂತಾದ ಗ್ರಾಮಸ್ತರ ಸಾಕ್ಷಿಯ ಕನ್ನಡ ಹಸ್ತಾಕ್ಷರಗಳಿವೆ. ಕೆಲವು ಥೊಡಿಯಲ್ಲಿವೆ.

**ಹತ್ತು**

ಹಿಂದಿನ ಕಾಲದ ತಾಮ್ರಪಟ ಮತ್ತು ಶಿಲಾಶಾಸನಗಳಲ್ಲಿ ಭೂದಾನದ ಸೀಮೆಯ ಚಕ್ಕುಬಂದಿ ಸವಿಸ್ತರವಾಗಿರುತ್ತದೆ. ಅಲ್ಲಿ ಹೊಳೆಹಳ್ಳ ಬಹುಕಾಲ ಬಾಳುವ ಮರಗಳೇ ಗಡಿಯ ಗುರುತುಗಳಾಗಿರುತ್ತವೆ. ದಾನಭೂಮಿ ಐಮೂಲೆಯಾಗಿರಕೂಡದು. ಗಡಿಯನ್ನು ಗುರುತಿಸುವ ಈ ಪ್ರಾಚೀನ ಪದ್ಧತಿಯನ್ನೇ ೧೮–೧೯ನೆಯ ಶತಮಾನಗಳಲ್ಲಿಯೂ ಅನುಸರಿಸಿರುವುದನ್ನು ಈ ದಾನಪತ್ರದಲ್ಲಿ

1 ಕ್ರಿ. ಶ. 1760

2 ದಸ್ತೂರ (ಪಾರ್ಸಿ) = ಹಸ್ತದ; ರೀತಿ, ನಿಯಮ. ಪದ್ಧತಿಯ ಅರ್ಥದಲ್ಲಿಯೂ ಈ ಪದದ ಪ್ರಯೋಗವಿದೆ

ಕಾಣುತ್ತೇವೆ. ಶಾ. ಶ. ೧೭೨೮ (ಕ್ರಿ. ೧೮೦೭) ಅಕ್ಷಯ ನಾಮ ಸಂವತ್ಸರ ಫಲ್ಗುಣ ವದ್ಯ ದಶಮಿ ಗುರುವಾರ ಮೌಜೆ ಮಲ್ಲಾಪುರ ಬಣಗೌಡನ ಗಿರಿಯಪ್ಪಗೌಡನ ಮಗ ಲಿಂಗಣಗೌಡನು ಬರಕೊಟ್ಟ ಭೂದಾನಪತ್ರ :

"ವಿರಕ್ತಮಠದ ದೀಪಾರಾಧನೆ ನಡೆಯಬೇಕೆಂದು ತ್ರಿಕರಣ ಶುದ್ಧವಾಗಿ ಆತ್ಮಸಂತೋಷದಿಂದ ತಮ್ಮ ಇನಾಮು ಹೊಲ ನಾಲ್ಕುವರಿ ಮಾರು ಪೈರೆ ಬಾಲಪ್ಪ ಗೌಡರವರ ದೀಪಾರಾಧನೆ ಹೊಲಕ್ಕೆ ಹೊಂದಿ ಉತ್ತರ ಭಾಗಕ್ಕೆ ಹೊಲ ಮಾರು೯- ಒಂದು ವೀಸಾ[1] ಪಶ್ಚಿಮ ಭಾಗಕ್ಕೆ ಅರಹುಣಸಿ ಹಾದಿ ಮೊದಲು ಮಾಡಿಕೊಂಡು ದಕ್ಷಿಣ ಭಾಗಕ್ಕೆ ಹಳ್ಳ ಪರಿಯಂತರ ಚೌಮೂಲಿ ಶುದ್ಧವಾಗಿ ಮಾನ್ಯ ಪೂರ್ವಕ್ಕೆ ಕೊಟ್ಟು ಇರ್ಧೇವೆ. ಶಿಷ್ಯ ಪಾರಂಪರವಾಗಿ ಅನುಭವಿಸಿಕೊಂಡು ಶ್ರೀದೇವರ ಗದ್ದುಗೆಗೆ ದೀಪಾರಾಧನೆಮಾಡಿ ಸುಖದಲ್ಲಿ ಬಹುದ್ಧು. ಇದಕ್ಕೆ ನಾನು ಅಥವ ನಮ್ಮ ವಂಶದ ವಳಗಾಗಿ ದಾರಾರು ವಬ್ಬರು ದಿಕ್ಕತು ಮಾಡಿದರೆ ಶಿವಾಚಾರ ಕುಲಾಚಾರಕ್ಕೆ ಹೊರತು."

**ಹನ್ನೊಂದು**

ಶಾ. ಶ. 1700 (ಕ್ರಿ.ಶ. 1779) ಮಾರ್ಗಶಿರ ಬಹುಳ 12ರಲ್ಲಿ ಆಗೇರ ಸಿದ್ದೋಜಿಯ ಹಾವಳಿಯಿಂದ ಹಾಳಾದ ಗ್ರಾಮದ ಪುನರ್ನಿವೇಶನಕ್ಕಾಗಿ ಆ ಗ್ರಾಮವನ್ನು ತೋಂಟದ ಸ್ವಾಮಿಗಳವರಿಗೆ ಅಧೀನಗೊಳಿಸಿ ಶ್ರೀಮನ್ಮಹಾನಾಯಕಾಚಾರ್ಯ ಬಾಗುಳಿ ಬಸಪ್ಪನಾಯಕ ಅಯ್ಯನವರು ಹಂಪ ಸಾಗರದ ಗೌಡ-ಸೇನಬೋಗರು[2], ಪ್ರಜೆಗಳು, ದೈವದವರು, ನಿಯೋಗಸ್ತರು[3], ಅಂಗಡಿಕಾರರು

---

1 ವೀಸಾ = $\frac{1}{16}$ ಹಣ = $3\frac{1}{2}$ ಕಾಸು; ತೆರಿಗೆಯ ಆಕಾರ: 1 ಹಣ = 4 ಆಣೆ, 8 ಕಾಸು;

2 ‘ಶಾನಭಾಗ’ ವೈದಿಕ ವಾಙ್ಮಯದಲ್ಲಿಯ ವಿಶಿಷ್ಟ ಪಾರಿಭಾಷಿಕ ಶಬ್ದ. ‘ಸಾನ್ನಾಯ್ಯ’ ವೆಂಬ ಹವಿಸ್ಸಿನಿಂದ ಅಗ್ನಿಗೆ ಆಹುತಿ ನೀಡುವ ಯಜ್ಞದ ಅಧ್ವರ್ಯು ಅಥವಾ ಋತ್ವಿಜ. "ಸಾನಾಯ್ಯಂ ಹವಿರಗ್ನೌ"—ಅ. ಕೋ. (ದ್ವಿ.ಕಾಂ. ಬ್ರಹ್ಮವರ್ಗ, ಶ್ಲೋಕ ೨೭) ; ದೇವತೆಯೊಂದನ್ನು ಉದ್ದೇಶಿಸಿ ನಿವೇದಿಸುವ ಹವಿರ್ಭಾಗವೇ ಸಾನ್ನಾಯ್ಯ. "ದೇವತೋದ್ದೇಶೇನ ತ್ಯಕ್ತಂ ಸನ್ನೀಯತೆ ಇತಿ ಸಾನ್ನಾಯ್ಯಂ ಹವಿರ್ವಿಶೇಷಂ"—ಶಿಶುಪಾಲವಧ ಕಾವ್ಯ (ಸರ್ಗ ೧೧, ಶ್ಲೋಕ ೪೧. ಮಲ್ಲಿನಾಥೀಯ ಟೀಕೆ) : ತುಪ್ಪದೊಡನೆ ಕೂಡಿದ ಅಗ್ನಿಗೆ ಆಹುತಿಯಾದ ವಿಶಿಷ್ಟ ದ್ರವ್ಯ : Any substance mixed with clarified butter and offered as an oblation to fire (Apte) ; ಸಾನ್ನಾಯ್ಯ ಭಾಗಯೋಗ್ಯನಾದ ಬ್ರಾಹ್ಮಣನೇ ಕರಣಿಕ ವೃತ್ತಿಯಲ್ಲಿದ್ದು ಗ್ರಾಮಾಧಿಕಾರಿ ಗೌಡನಿಗೆ ಸಹಕಾರಿಯಾಗಿರುತ್ತಿದ್ದನು. ಸಾನ್ನಾಯ್ಯ ಭಾಗ> ಶ್ಯಾನ್ನಭಾಗ> ಶಾನಭಾಗ> ಸಾನಭಾಗ> ಸೇನಭೋಗ : "ಶಾನಭವ. ಶಾನಭಾಗ, ಶ್ಯಾನಭೋಗ ಸಾನಭಾಗ, ಸಾನಭೋಗ, ಸೇನಬೋವ—the clerk of a village, (Kittel) -

3 ನಿಯೋಗಸ್ಥ = ರಾಜ್ಯದ ಅಧಿಕಾರದಲ್ಲಿರುವವ : ನಿಯೋಗ - ಸರಕಾರಿ ಕೆಲಸ. ಸೇವೆ. appointment, duty

ಮುಂತಾದ ಸಮಸ್ತರಿಗೆ ಬರಸಿಕೊಟ್ಟ ಕೌಲುಕ್ರಮದ ಪತ್ರ ಕನ್ನಡನಾಡ ಸಾಮಾಜಿಕ ವ್ಯವಸ್ಥೆಯ ಇತಿಹಾಸದಲ್ಲಿಯೇ ಹೊಸತು. ಮನೆಯಿದ್ದವರು, ಹೊಸದಾಗಿ ಮಾಳಿಗೆ ಮನೆ ಕಟ್ಟಿದವರು ಅರೆಗಂದಾಯ–ಬಿರಾಡ ಕೊಡುವ ಕರಾರಿದ್ದರೆ ಹುಲ್ಲುಮನೆಗಳಲ್ಲಿ ವಾಸಿಸುವ ಬಡವರು ಎರಡು ವರ್ಷ ಬಿರಾಡ ಕೊಡಬೇಕಾಗಿರಲಿಲ್ಲ. ಆನಂತರವೂ ಅವರಿಗೆ, ಅರೆಗಂದಾಯದ ಸವಲತ್ತನ್ನು ದಯಾಳು ಶ್ರೀಗಳವರು ದಯಪಾಲಿಸಿದ್ದರು.

**ಹನ್ನೆರಡು**

ಶ್ರೀ ತೋಂಟದಾರ್ಯಮಠದ ಧಾರ್ಮಿಕ ಆಚರಣೆಯ ಪರಂಪರೆಯಲ್ಲಿ ವಿಶಾಲ ಮನೋಭಾವ ಹಾಸುಹೊಕ್ಕಾಗಿ ಸಾಮಾಜಿಕರಲ್ಲಿ ಪರಸ್ಪರ ಸೌಹಾರ್ದವನ್ನು ನೆಲೆಗೊಳಿಸಿತ್ತು. ಶ್ರೀಗಳವರು ತಮ್ಮ ಪೀಠದ ಸ್ಥಾನಮಾನದ ಒಣಪ್ರತಿಷ್ಠೆಯ ಹಮ್ಮಿನಲ್ಲಿ ಪರಮತಸ್ಥರ ಮನವನ್ನು ಎಂದೂ ನೋಯಿಸಿದವರಲ್ಲ. ಬ್ರಾಹ್ಮಣ ರಾಜಾಧಿಕಾರಿಯೊಬ್ಬರಿಗೆ ತಾವೇ ಬರೆದ ಈ ಪತ್ರದಲ್ಲಿ ಅವರ ಲೌಕಿಕ ಜಾಣ್ಮೆ ಒಡೆದು ಕಾಣುತ್ತದೆ :

"ಶ್ರೀಮದ್ಗುರು ಸಿದ್ಧೇಶ್ವರ ಚರಣಸಂಭವ
ತೋಟದ ಸ್ವಾಮಿಗಳು

ಅಖಂಡ ಲಕ್ಷ್ಮಿಯಲಂಕೃತ, ಲಕ್ಷ್ಮೀಕಟಾಕ್ಷೇಕ್ಷಣ ನಯ ವಿನಯ ದಯಾ ದಾಕ್ಷಿಣ್ಯಾದಿ ಸಮಸ್ತ ಸದ್ಗುಣಾಭರಣ ವಿಭೂಷಿತ ನಂಮ್ಮ ಅತಿಶಯಾನಂದ ಪ್ರೇಮಿಗಳಾದ ಗದುಗಿನ ಸುಭೇದಾರ ಆನಂದರಾಯರಿಗೆ ಸಕಲ ಕಲ್ಯಾಣಪ್ರದವಾಗಲೆಂದು ಹರಸಿ ಕಳುವಿಸಿದ್ದೇವೆ. ಅದಾಗಿ ನಾವು ಮನ್ಮಥ ಸಂ. ಜೇಷ್ಠ 4 ನಿಲುವಿಗೆ ಬಂಕಾಪುರದಲ್ಲಿ ಶಿವಾನಂದಭರಿತರಾಗಿದ್ದೇವೆ. ನಿಮ್ಮ ಪರಿಣಾಮವ ಬರಸುತ ಬಹುದು. ತರುವಾಯ ರಾ॥ ಗೋವಿಂದರಾಯರು ದೇಶಕುಲಕರ್ಣಿ ರುದ್ರಪ್ಪನವರು ನಿಮಗೆ ಕಾಗದ ಬರಸಿದಾರೆ. ಅದರಿಂದ ನಿಮಗೆ ಸಕಲವು ತಿಳಿ ಬಂದೀತು. ಹಂತೇಲಿ ಇದ್ದಾಂತ ಯಿರಾರತ್ತಯ್ಯನ ಬಗೆವು ಸನದ ನಿಮಗೆ ನಕಲ ಬರಸಿದ್ದಾರೆ. ಅವನ್ನು ನೀವು ದೈವದವರು ಮನಸಿಗೆ ತಂದು ರಾ॥ ಅಪ್ಪನವರಿಗೆ ಯಾವ ಪ್ರಕಾರ ಕಾಗದ ಬರಸಬೇಕೋ ಆ ಪ್ರಕಾರ ಕಾಗದ ಬರಸಿ...ಸಕಲ ಮಾತಿನ ವಾಂಚಲ್ಯ ನಿಮ್ಮನ್ನೇ ಕೂಡಿದ ಮೇಲೆ ನೂತನವಾಗಿ ಬರಸುವದೇನಿದೆ

ಯಿಂತಿ ಆ॥"

**ಹದಿಮೂರು**

ಷಟ್‌ಸ್ಥಲ ಚಕ್ರವರ್ತಿ, ಶ್ರೀ ಸಿದ್ಧಲಿಂಗ ಯತಿರಾಜನು ಗುರುವರ್ಯನ ಸೇವೆ ಮಾಡಿ ಅನುಗ್ರಹ ಪಡೆದು ಸಾವಿರಾರು ಚರಮೂರ್ತಿ ವಿರಕ್ತರೊಡನೆ ಜಗದುದ್ಧಾರಕ್ಕಾಗಿ ಆಸೇತು-ಹಿಮಾಚಲ ಸಂಚರಿಸಿದ ಚರಿತೆ ಪುರಾಣ ಪ್ರಸಿದ್ಧ :

ಪೊಡಮಟ್ಟು ಗುರುವಿನಡಿದಾವರೆಗೆ ನಲವಿನಿಂ
ಪೊಡವಿಯುಂ ಸಲಹಬೇಕೆಂದು ಚರಮೂರ್ತಿಗಳ
ಗಣದೊಡಗೂಡಿ ಸಮುತ್ತೇಜಿಸಿಪ್ಪ ಭಸ್ಮಘುಂಟಿಕೆಯು
ಸದ್ಭಾವವೆಂಬ ॥

ದೃಢವಾದ ದಂಡವ ದಯಾಕಮಂಡಲವ ನೆರೆ
ಸಡಗರದೆ ವೈರಾಗ್ಯವೆಂದೆಂಬ ಕಪ್ಪರವ
ಪಿಡಿದು ಸುಜ್ಞಾನವೆಸಿಸುವ ಕಂತೆದೊಟ್ಟು ನಡೆದಂ ಶರಣರ
ಧಿನಾಥನು ॥

ಪೆಂಪಿನಿಂದಖಿಲ ದೇಶಂಗಳಂ ನೋಡುತ್ತ-
ಲಂಪಿನಿಂದವಿಮುಕ್ತ ಸೌರಾಷ್ಟ್ರ ನೀಲಕಂ
ಠಂ ಪರ್ವತಂ ಕೊಲ್ಲಿಪಾರೆ ಕೇತಾರ ದ್ರಾಕ್ಷಾರಾಮ ಗೋಕರ್ಣವು ।
ಪಂಪೆ ಶಿವಗಂಗೆ ರಾಮೇಶ್ವರಂ ಪೊನ್ನಾಂಬ-
ಲಂ ಪಿರಿದೆನಿಪ ಕಾಳಹಸ್ತಿಯೆಂದೆಂಬಿವುಗ
ಳಂ ಪದುಳದಿಂ ಚರಿಸುತರುಣಾಚಲಕ್ಕೆ ಬಂದಂ ಚಿದಾನಂದ।
ಮಯನು ॥

'ಸುಜನ ವ್ರಜವಜ್ರ ಪಂಜರಾಯಮಾಣ' ಗುರುವರೇಣ್ಯ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯು 'ಲೋಕೋಪಕಾರಾಯ' ದೇಶ ಸಂಚಾರ ಮಾಡಿದ ವಿಸ್ತಾರವನ್ನು ಶ್ರೀಮಠದ ಚರಮೂರ್ತಿ ಶಿಷ್ಯ, ಬೆಂಕೆಯ್ಯನವರು ಬಿನ್ನಯಿಸಿಕೊಂಡ ಪತ್ರದ ಒಕ್ಕಣಿಕೆಯಲ್ಲಿ ತಿಳಿಯಬಹುದಾಗಿದೆ :

"ಶ್ರೀ ಅರ್ಧನಾರೀಶ್ವರ

ಶ್ರೀಮತ್ ಕಮಲಜ ಕಮಲಾಕಾಂತ ಸಂಕ್ರಂದನಾದಿ ಸುರನರ ಕಿನ್ನರ ಕಿಂಪುರುಷ ಗರುಡಗಂಧರ್ವ ಸಿದ್ಧ ವಿದ್ಯಾಧರ ಯಕ್ಷರಕ್ಷ ಸೋರಗ ಪೂಜಿತ ಪಾದಾರವಿಂದ ಸಕಲ ಫಲಪ್ರದ ಸರ್ವ ಬ್ರಹ್ಮಾಂಡ ಸಾರ್ವಭೌಮ ಸಕಳ ನಿಷ್ಕಳ ಸ್ವರೂಪ ಸಕಲ ಜಗದಾದಿಕಾರಣರೂಪ ಪರಶಿವಪರಾವತಾರಮೂರ್ತಿ ನಿಖಿಲವೇದ ವೇದಶಿರಃ ಶಿವಾಗಮ ಪುರಾಣ ಪ್ರಶಾಖೆ ಪ್ರತಿಪಾದ್ಯಮಾನ ಶ್ರೀವೀರಶೈವ ಷಟುಸ್ಥಳ ಶಿವಯೋಗ ಶಿವಾದ್ವೈತ ಪ್ರತಿಸ್ಥಾಪನಾಚಾರ್ಯ ನಿರತಿಶಯ ಭಕ್ತಿಜ್ಞಾನ ವೈರಾಗ್ಯದ್ವಿಗುಣ ಮಣಿಗಣ ರತ್ನಾಕರಾಯಮಾನ ಶಿವಸಮಯ ಶರಣಾಗತ ಸುಜನವ್ರಜವಜ್ರ ಪಂಜರಾಯಮಾನ ಷಟುಸ್ಥಲಾಚಾರ್ಯ ಪರಮ ಪ್ರಸನ್ನಕೃಪಾಪಾತ್ರ ಶಿವಧ್ಯಾನ ಶಿವಜ್ಞಾನ ಶಿವವ್ರತ ಶಿವಾರ್ಚನನಿಷ್ಠ ಕಾಶಿಕೇತಾರ

---

1 ಸ. ಪು. (ಸಂಧಿ ೩, ಪದ್ಯ ೫–೬)

ಶ್ರೀಶೈಲ ಗಂಡರೆ ತುಂಗಭದ್ರಾದಿ ಗಣ್ಯ ಸುಪುಣ್ಯ ತೀರ್ಥಕ್ಷೇತ್ರ ಸಂಚರಣ ಪರಮ ಸ್ವತಂತ್ರ ಶಿವಪರಾವತಾರ ನಿರಾಧಾರ ನಿರ್ವಿಚಾರ ಜ್ಞಾನರೂಪ ರಾಜಾಧಿರಾಜ ಪೂಜಿತ ರಾಜಮಾನ್ಯ ರಾಜ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಹೃತ್ಕಮಲದಲ್ಲಿ ಉದ್ಭವರಾದ ಶ್ರೀತೋಂಟದ ಸ್ವಾಮಿಗಳ ಪಾದಪದ್ಮಯುಗ್ಮಂಗಳಿಗೆ–"

ಇಲ್ಲಿ ದಂಡಿಯ ಪದಲಾಲಿತ್ಯವು ಲಾಸ್ಯವಾಡುತ್ತದೆ. ಶ್ರೀತೋಂಟದಮಠದ ಶಿಷ್ಯಪರಂಪರೆಯಲ್ಲಿ ಸಂಸ್ಕೃತ – ಕನ್ನಡ ಉಭಯಭಾಷೆಗಳಲ್ಲಿ ಪಾರಂಗತರಾದ ಕವಿಗಳು, ವಾಗ್ಮಿಗಳು, ಪಂಡಿತರು ಅನೇಕರು. 'ಸಿದ್ಧೇಶ್ವರ ಪುರಾಣ'ದ ಕವಿವಿರಕ್ತ ತೋಂಟದಾರ್ಯರು[1] (ಕ್ರಿ. ಶ. 1560) ಸಂಸ್ಕೃತದಲ್ಲಿ ವ್ಯಾಕರಣಾದಿ ಶಾಸ್ತ್ರಗಳನ್ನು ಕುರಿತು ವಿದ್ವಾಂಸರೊಡನೆ ಚರ್ಚೆಮಾಡುವ ಯೋಗ್ಯತೆಯನ್ನು ಪಡೆದಿದ್ದರು.

"ಸುತಮಹಾಶಾಸ್ತ್ರಾರ್ಥ ಚತುರನೆಂದೆನಿಸುವ-
ಪ್ರತಿಮ ಗುಣಗಂಭೀರ ಸುತ್ತಭಕ್ತವಿತತಿ ಪೂ-
ಜಿತ ವಿರತ ತೋಂಟದಾರ್ಯಂ........."

ಶ್ರೀತೋಂಟದ ಸ್ವಾಮಿಗಳ ಶಾಖಮಠಗಳಲ್ಲಿ ವಿರಕ್ತ ತೋಂಟದಾರ್ಯರಂತಹ ಜಂಗಮಮೂರ್ತಿಗಳು ವಿರಾಜಮಾನರಾಗಿದ್ದುಕೊಂಡು ಧರ್ಮದ ಅಭಿವೃದ್ಧಿಯೊಂದಿಗೆ ಸಾಹಿತ್ಯಕೃಷಿಯನ್ನೂ ಮಾಡಿ ಜನಮಾನ್ಯರಾಗಿದ್ದರು.

ಈ ಪತ್ರಸಾಹಿತ್ಯದಲ್ಲಿ ಫಸಲಿ[2] ಅಥವ ಇಸ್ವಿ ವರ್ಷಕ್ರಮವನ್ನು ಉಲ್ಲೇಖಿಸದೆ ಎರಡು ಸಾವಿರ ವರ್ಷಗಳ ಹಿಂದೆ ಗೋದಾವರಿಯಿಂದ ಕಾವೇರಿಯವರೆಗೆ ಬೆಳುವಲ ವಿಷಯದ ಸೀಮೆಯನ್ನು ವಿಸ್ತರಿಸಿ ಆಳಿದ ಮೊದಲ ಕನ್ನಡ ಚಕ್ರವರ್ತಿ ಶಾತವಾಹನ ಮಹಾರಾಜನ ಸ್ಮಾರಕ ಶತಕವನ್ನೇ ಬಳಸಿರುವುದೊಂದು ವಿಶೇಷ.

ವರ್ತಮಾನ ಕನ್ನಡನಾಡ ಉತ್ತರ ಗಡಿಯೆನಿಸಿದ ವಿಜಾಪುರದ ಸೀಮೆಯಲ್ಲಿ ಆದಿಲಶಾಹಿ[3] ಶಾಸನದ ಪ್ರಭಾವದಿಂದ ದಖನಿ ಹಿಂದಿಯ ಭಾಷೆ ಬೆಳೆಯಿತು.

---

1 ಅವರ ಇತರ ಕೃತಿಗಳು : (೧) ಚಿದಾನಂದ ಸಿಂಧು, (೨) ಪಾಲ್ಕುರಿಕೆ ಸೋಮೇಶ್ವರ ಪುರಾಣ,(೩) ಮನೋವಿಜಯ ಟೀಕು, (೪) ಶತಕತ್ರಯ ಟೀಕು, (೫) ಪಂಚಪ್ರಕಾರ ಗದ್ಯ, (೬) ಸಿದ್ಧಲಿಂಗೇಶ್ವರ ಶತಕ, (೭) ಕರ್ಣಾಟಕ ಶಬ್ದಮಂಜರಿ; ೨ ಸ. ಪು. (ಸಂ. ೧, ಪು.೨೪)

2 ಫಸ್ಲ (ಅ) = ಋತುಕಾಲ, ಕೃಷಿಯ ಉತ್ಪತ್ತಿ, ಬೆಳೆ; ಫಸ್‌ಲೀಸನ್ ಎಂಬ ಶತಮಾನವನ್ನು ಅಕಬರ ಬಾದಶಾಹನು ಪ್ರಾರಂಭಿಸಿದ್ದನು. ಉತ್ತರಭಾರತದಲ್ಲಿ ಜನರು ಕೃಷಿಗೆ ಸಂಬಂಧಪಟ್ಟ ಕಾರ್ಯಗಳಲ್ಲಿ ಈ ಕಾಲಮಾನವನ್ನೇ ಬಳಸುತ್ತಾರೆ. ಈಗ ಫಸ್ಲಿ ಸನ್ ೧೩೮೩ ನಡೆಯುತ್ತಿದೆ

3 ಶಾಹ ಮೀರಾಜಿ (ಕ್ರಿ. ಶ. ೧೪೬೬), ಬುರಹಾನುದ್ದೀನ ಜಾನಂ (೧೫೨೨), ಮುಹಮ್ಮದ ಕುಲ್ಲಿ (೧೫೮೦-೧೬೧೨) ಮೊದಲಾದ ಸೂಫಿಸಂತ ಕವಿಗಳು ಪ್ರಸಿದ್ಧರಾದವರು

ಅದರಲ್ಲಿ ಅಪೂರ್ವ ಸಾಹಿತ್ಯದ ನಿರ್ಮಾಣವೂ ಆಯಿತು. ಆದರಿಂದ ಉರ್ದು ಭಾಷೆ ಶ್ರೀಮಂತವಾಯಿತು. ಈ ದಖನಿ ಕನ್ನಡದಲ್ಲಿ ಸಹಜವಾಗಿ ನುಸುಳಿ ಬಂದಿತು. ಜನಬಳಕೆಯು ಹೊಸಗನ್ನಡ ನುಡಿಗೆ ಕಳೆ ತಂದಿತು. ದಖನಿ ಹಿಂದಿಯಲ್ಲಿಯ ಅರಬ್ಬಿ ಪಾರ್ಸಿ ಶಬ್ದಗಳು ಕನ್ನಡದ ವ್ಯಾವಹಾರಿಕ ಭಾಷೆಗೆ ಹೇಗೆ ರೂಪುಕೊಟ್ಟವೆಂಬುದು ಈ ಪತ್ರಸಾಹಿತ್ಯದಲ್ಲಿ ಬಂದಿರುವ ಶಬ್ದಗಳ ಕೆಳಗಿನ ತಾಳೆಯಿಂದ ತಿಳಿದುಬರುವುದು :

| ಮೂಲಶಬ್ದ | ಭಾಷೆ | ಲಿಂಗ | ಹಿಂದಿ | ಕನ್ನಡ ರೂಪ | ಅರ್ಥ |
|---|---|---|---|---|---|
| ಇನ್ ಆಮ | ಅರಬ್ಬಿ | ಪುಲ್ಲಿಂಗ | ಇನಾಮ್ | ಇನಾಮು | ದಾನ, ಪುರಸ್ಕಾರ |
| ಕಸ್ಬಃ | ಅ | ಪುಂ | ಕಸ್‌ಬಾ | ಕಸಬೆ | ದೊಡ್ಡ ಗ್ರಾಮ |
| ಕಾಗಜ | ಪಾರ್ಸಿ | ಪುಂ | ಕಾಗದ್ | ಕಾಗದ | ಹಾಳೆ |
| ಕಿಲಃ | ಅ | ಪುಂ | ಕಿಲಾ | ಕಿಲ್ಲೆ | ಕೋಟೆ |
| ಜಕಾತ | ಅ | ಸ್ತ್ರೀ | ಜಕಾತ್ | ಜಕಾಲೆ | ಕರ |
| ಜಮೀನ | ಪಾ | ಸ್ತ್ರೀ | ಜಮೀನ್<br>ಜಮೀಂ | ಜಮೀನು | ಹೊಲ |
| ತ ಅಲ್ಲುಕಃ | ಅ | ಪುಂ | ತಾಲೂಕಾ | ತಾಲ್ಲುಕು<br>ತಾಲೂಕು<br>ತಾಲ್ಲೋಕು<br>ತಾಲೊಕು | ತಾಲೂಕು |
| ತಾಕೀದ | ಅ | ಸ್ತ್ರೀ | ತಾಕೀದ್ | ತಾಕೀದಿ<br>ತಾಕೀತು | ಎಚ್ಚರಿಕೆ |
| ದಸ್ತೂರ | ಪಾ | ಪುಂ | ದಸ್ತೂರ್ | ದಸ್ತೂರು | ಬರೆಯುವ ರೀತಿ |
| ದಿಕ್ಕತ | ಅ | ಸ್ತ್ರೀ | ದಿಕ್ಕತ್ | ದಿಕ್ಕತು | ಅಡ್ಡಿ |
| ನಕ್ಲ | ಅ | ಸ್ತ್ರೀ | ನಕಲ್ | ನಕಲು | ಪ್ರತಿಲಿಪಿ |
| ಪರ್ಗನಃ | ಪಾ | ಪುಂ | ಪರ್ಗನಾ | ಪರಗಣೆ | ಪರಿಗಣ (ಸಂ.)<br>ಗ್ರಾಮಮಂಡಲ |
| ಫಸ್ಲ | ಅ | ಸ್ತ್ರೀ | ಫಸಲ್ | ಪಸಲು | ಬೆಳೆ<br>ಕೃಷಿಯು<br>ಉತ್ಪಾದನೆ |
| ಬಹಾದುರ | ಪಾ | ವಿಶೇಷಣ | ಬಹಾದುರ್ | ಬಹದ್ದೂರು<br>ಬಾಹಾದರ<br>ಬಾಹಾದ್ದುರ | ವೀರ |
| ಮಜರಃ | ಅ | ಪುಂ | ಮಜರಾ | ಮಜರೆ | ಸಣ್ಣ ಗ್ರಾಮ |

| | | | | | |
|---|---|---|---|---|---|
| ಮಹಾಲ | ಅ | ಪುಂ | ಮಹಾಲ್ | ಮಹಾಲು | ಗ್ರಾಮ ಮಂಡಲ |
| ಮಾಮಲಃ | ಅ | ಪುಂ | ಮಾಮಲಾ | ಮಾಮಲೆ | ನ್ಯಾಯ ನಿರ್ಣಯ ನ್ಯಾಯಲಯ |
| ಸನದ್ | ಅ | ಸ್ತ್ರೀ | ಸನದ್ | ಸನದು | ಪ್ರಮಾಣ ಪತ್ರ |
| ಸರ | ಪಾ | ವಿ | ಸರ್ } ಸಿರ್ } | ಸರ | ಮುಖ್ಯ |
| ಸೂಬೇದಾರ | ಅ-ಪಾ | ವಿ | ಸೂಬೇದಾರ್ | ಸುಭೇದಾರ | ಪ್ರಾಂತಾಧಿಕಾರಿ |

ಸಾಮಾನ್ಯವಾಗಿ ಅರಬ್ಬಿ ಅದಂತಗಳ ಉಚ್ಚಾರ ವಿಸರ್ಗಾಂತ ಸಂಸ್ಕೃತ ಶಬ್ದಗಳಂತೆಯೇ ಆಗುತ್ತದೆ. ಅಲ್ಲಿಯು ವಿಸರ್ಗ 'ಹ' ಮಹಾಪ್ರಾಣದ ಅನುಕರಣೆಯಲ್ಲಿದೆ. ಹಿಂದಿಯಲ್ಲಿ ಈ 'ಅಹ' ಆಕಾರವಾಗಿ ಪರಿವರ್ತನೆ ಹೊಂದುತ್ತದೆ: ಅಃ> ಅಹ> ಆ. ಈ ಆದಂತಗಳು ಸಂಸ್ಕೃತ ಸ್ತ್ರೀಲಿಂಗ ಆಕಾರಾಂತ ಶಬ್ದಗಳಂತೆ ಕನ್ನಡದಲ್ಲಿ ಏದಂತವಾಗುವುದನ್ನು ಮೇಲಿನ ತಾಳಿಯಲ್ಲಿ ಗಮನಿಸುತ್ತೇವೆ. ಹಿಂದಿಯಲ್ಲಿ ಪದ್ಯಾಂತ ಅಕಾರದ ಉಚ್ಚಾರವಾಗುವುದಿಲ್ಲ. ಆದರೆ ಕನ್ನಡದಲ್ಲಿ ಅದಂತವು ಉದಂತವಾಗುವ ಅಪಭ್ರಂಶ ನಿಯಮದ ಪ್ರಯೋಗ ಸ್ಫುಟವಾಗಿದೆ. ನಾಟ್ಯಶಾಸ್ತ್ರಕಾರ ಭರತ ಮುನಿಯು ಹಿಮಾಚಲ, ಸಿಂಧು, ಸೌಂವೀರ ಜನಪದಗಳಲ್ಲಿಯ ನಟರು ಉಕಾರ ಬಹುಲ ಭಾಷೆಯನ್ನು ಪ್ರಯೋಗಿಸಬೇಕೆಂದು ವಿಧಿಸಿರುವನು[1]. ಕನ್ನಡವೂ ಉಕಾರ ಬಹುಳ ದೇಸಿ ಭಾಷೆ. 'ಶಬ್ದಮಣಿ ದರ್ಪಣ'ಕಾರನಿಗೂ[2] ಈ ನಿಯಮ ಒಪ್ಪಿತವೇ. ಮೇಲಿನ ತಾಳೆಯಲ್ಲಿ ಈ ಉದಾದೇಶ ವೈಶಿಷ್ಟ್ಯ ಸ್ಫುಟವಾಗಿದೆ.

ಹದಿನೆಂಟನೆಯ ಶತಮಾನದ ಕನ್ನಡ ಮಾತಿನ ಮೋಡಿಯಲ್ಲಿ ಸಂಸ್ಕೃತ–ದಖನಿ ಭಾಷೆಗಳ ಗಂಗಾ–ಜಮುನಿಯ ಛಾಯೆ ಮನೋಜ್ಞವಾಗಿದೆ. ಭಾಷಾ ವಿಜ್ಞಾನ ಹಾಗು ಸಮಾಜಶಾಸ್ತ್ರಗಳ ಅಭ್ಯಾಸದ ದೃಷ್ಟಿಯಿಂದ ಈ ಪತ್ರ ಸಾಹಿತ್ಯದಲ್ಲಿ ಸಂಶೋಧಕರಿಗೆ ಸಾಕಷ್ಟು ಸಾಮುಗ್ರಿ ಸಿಗುವಲ್ಲಿ ಸಂದೇಹವಿಲ್ಲ.

---

1 ಹಿಮವತ್ ಸಿಂಧು ವೀರಾನ್ ಯೇಽನ್ಯದೇಶಾನ್ ಸಮಾಶ್ರಿತಾಃ।
ಉಕಾರಬಹುಲಾಂ ತೇಷು ನಿತ್ಯಂ ಭಾಷಾಂ ಪ್ರಯೋಜಯೇತ್ ॥

2 ತಳಿಗುಮದಂತ ಪದಾಂತಂ
ಗಳೆತ್ವಮುಮನಿತ್ವವೃತ್ತಿಯು ಮನುತ್ವಮುಮಂ ॥

—ಶ. ಮ. ದ. (ಅಧ್ಯಾಯ 7, ಸೂತ್ರ 278)

## ಆಧಾರ ಗ್ರಂಥಗಳು

1. ಶ್ರೀ ಸಿದ್ಧೇಶ್ವರ ಮಹಾಪುರಾಣ (ವಿರಕ್ತ ತೋಂಟದಾರ್ಯ ಕೃತ),
ಪ್ರಕಾಶಕರು : ಶ್ರೀ ಜ. ತೋಂಟದಾರ್ಯ ಮಹಾ ಸಂಸ್ಥಾನ ಮಠ, ಗದಗ, 1951

2. ಉರ್ದು-ಹಿಂದಿ ಕೋಶ : ಶ್ರೀರಾಮಚಂದ್ರ ವರ್ಮಾ, 1940, ದ್ವಿ. ಸಂಸ್ಕರಣ

3. ಸಂಕ್ಷಿಪ್ತ ಹಿಂದೀ ಶಬ್ದ ಸಾಗರ : ರಾಮಚಂದ್ರ ವರ್ಮ್ಮಾ, ಕಾಶೀ ನಾಗರೀ ಪ್ರಚಾರಿಣೀ ಸಭಾ, ವಾರಣಾಸಿ, ಐದನೆಯ ಸಂಸ್ಕರಣ

4. The Practical Sanskrit-English Dictionary :
Vaman Shivaram Apte, Revised Ed. 1924

5. Kittel's Kannada-English Dictionary (Revised Ed.)
Madras Univesrity, 1971

6. ದಕ್ಖಿನೀ ಹಿಂದೀ ಕಾವ್ಯಧಾರಾ : ಶ್ರೀ ರಾಹುಲ ಸಾಂಕೃತ್ಯಾಯನ,
ಬಿಹಾರ ರಾಷ್ಟ್ರಭಾಷಾ ಪರಿಷತ್, ಪಟನಾ 1959

7. ಶಬ್ದಮಣಿದರ್ಪಣಂ (ಕೇಶಿರಾಜ ಕವಿಕೃತ ; ಸಂಪಾದಕರು-ಎಫ್. ಕಿಟ್ಟೆಲ,
ಪ್ರಕಾಶಕರು–ಬಾಸೆಲ್ ಮಿಶನ್ ಬುಕ್ ಡಿಪೊ, ಮಂಗಳೂರು, 1872

8. ಜಂತ್ರಿ (Indian Chronological Tables)
ಸಂ : ಶ್ರೀ ಆರ್. ಎಸ್. ಪಂಚಮುಖಿ, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, 1953

## ಪಾಂಡಿತ್ಯ

**ಶೈಲಜಾ ಉಡಚಣ**

ಅವನು ;
ಕೆರೆದು, ಕ್ಯಾಕರಿಸಿಕೊಂಡು,
ಮುಖ ಕೆಂಪಗೆ ಮಾಡಿಕೊಂಡು,
ಮೈಯುಬ್ಬಿಸಿ ನಡೆದಾಗ ;
ನನಗೂ ಗುದಗುದಿಯಾಗುತ್ತದೆ.

ಮೈಯ್ಯ ಮೂಲೆ ಮೂಲೆಯ
ತುರಿಕೆ ತೀರಿ, ಆರಿ ;
ದೇಹದಾದ್ಯಂತ ಕೆಂಡವಾಗಿ,
ಉರಿದೇಳುವ ;
ಬಿಚ್ಚಿದಾಗಲೆಲ್ಲ ಬೆಳಕಿನ
ಮಳೆಗರೆವ ;
ಜ್ವಾಲಾಮುಖಿಯ ಭಾಗ್ಯವೆಂದು
ಪಡೆವೆನೋ !

ಅಲ್ಲಿಯವರೆಗೆ,
ಕೆಮ್ಮಿದವರನ್ನು ನೋಡಿ,
ಕೆಮ್ಮುವ ಅಂಟು ರೋಗಕ್ಕೆ
ಬಲಿಯಾಗಿ ;
ಪಂಡಿತಳಾಗಿದ್ದೇನೆ.

# ರೇಖೀಯ ಹಿಂಚಲನೆ ಮತ್ತು ಸಹಸಂಬಂಧ*

**ಟಿ. ಶ್ರೀವೆಂಕಟರಮಣ**

## 1 ಮುನ್ನೋಟ

ನಮ್ಮ ಸುತ್ತಮುತ್ತಲಿನ ಭೌತ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವುಗಳೊಳಗೆ ಒಂದಕ್ಕೊಂದು ಸಂಬಂಧಗಳಿವೆಯೇ ಎಂಬ ಕುತೂಹಲ ಉಂಟಾಗುವುದಿದೆ. ಉದಾಹರಣೆಗೆ, ಕಾಲ ಮತ್ತು ಬೆಳವಣಿಗೆಗಳ ನಡುವಿನ ಸಂಬಂಧ, ಚಲಿಸುತ್ತಿರುವ ವಾಹನದಲ್ಲಿ ಕಾಲ ಮತ್ತು ವೇಗಗಳ ನಡುವಿನ ಸಂಬಂಧ; ದತ್ತ ಉಷ್ಣತೆಯಲ್ಲಿ ಒತ್ತಡ ಮತ್ತು ಒಂದು ಅನಿಲದ ಗಾತ್ರಗಳ ನಡುವಿನ ಸಂಬಂಧ ಇತ್ಯಾದಿ. ಈ ಕುತೂಹಲ ಬರಿಯ ಕುತೂಹಲವಾಗಿ ಉಳಿಯದೆ ಬೌದ್ಧಿಕ ಜೀವಿಗಳ ಗಮನ ಸೆಳೆದಾಗ ಇಂಥ ಸಂಬಂಧಗಳ ಕ್ರಮಬದ್ಧ ಅಧ್ಯಯನದ ಸಫಲ ಪ್ರಯತ್ನಗಳು ನಡೆದವು. ಎರಡು ಚರಗಳ ನಡುವಿನ ಸಂಬಂಧ ರೇಖೀಯ (linear) ವಾಗಿದ್ದಾಗ ಅದರ ಸ್ವರೂಪವನ್ನು ತಿಳಿಯುವ ವಿಧಾನಗಳ ಸ್ಥೂಲ ಪರಿಚಯವನ್ನು ಮಾಡಿಕೊಡಲು ಪ್ರಸ್ತುತ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

## 2 ಪ್ರವೇಶ

ಒಂದು ಭಾನುವಾರ ಸಂಜೆ. ನಿಮ್ಮ ಗೆಳೆಯನನ್ನು ನೋಡಲು ನೀವು ಅವನ ಮನೆಗೆ ಹೋಗುತ್ತೀರಿ. ಮನೆಯ ಬಾಗಿಲು ಮುಚ್ಚಿದೆ. ಒಳಗಿನಿಂದ ಚಿಲಕ ಕೂಡ ಹಾಕಿದೆ. ಮನೆಯವರ ಗಮನ ಸೆಳೆಯಲು ವಿದ್ಯುತ್‌ಕರೆಗಂಟೆಯ ಗುಂಡಿಯನ್ನು ಒತ್ತುತ್ತೀರಿ. ಗಂಟೆ ಬಾರಿಸುತ್ತದೆ. ನಿಮ್ಮ ಗೆಳೆಯ ಕಾಣಿಸಿಕೊಳ್ಳುತ್ತಾನೆ. ಹಸನ್ಮುಖನಾಗುತ್ತಾನೆ. ಮನೆಯ ಬಾಗಿಲು ತೆರೆಯುತ್ತಾನೆ. ನಿಮಗೆ ಒಳಕ್ಕೆ ಸ್ವಾಗತ. ಮುಂದಿನ ಸಂಭ್ರಮದ ವಿವರಗಳನ್ನು ನಿಮ್ಮ ಕಲ್ಪನೆಗೆ ಬಿಟ್ಟು, ನಿಮ್ಮ ಮಿತ್ರನ ಗಮನವನ್ನು ಸೆಳೆದ ಕರೆಗಂಟೆಯ ಸದ್ದಿಗೆ ಕಾರಣವನ್ನು ಗಮನಿಸಿ.

---

* ಈ ಲೇಖನದ ಸಿದ್ಧತೆಗೆ ಶ್ರೀ ಜಿ. ಟಿ. ನಾರಾಯಣರಾವ್, ವಿಜ್ಞಾನ ಸಂಪಾದಕರು. ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ಇವರು ನೀಡಿರುವ ಸಲಹೆ ಮತ್ತು ಪ್ರೋತ್ಸಾಹಗಳನ್ನು ಲೇಖಕ ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತಾನೆ. ಬೆಂಗಳೂರು ವಿಶ್ವವಿದ್ಯಾಲಯದ ಸಂಖ್ಯಾಕಲನ ವಿಜ್ಞಾನ ವಿಭಾಗದ ಇತರ ಅಧ್ಯಾಪಕ ಸಹೋದ್ಯೋಗಿಗಳು ಕೊಟ್ಟ ಕೆಲವು ಸೂಚನೆಗಳು ಕೂಡ ಲೇಖನವನ್ನು ಪರಿಷ್ಕರಿಸಲು ಸಹಾಯಕವಾಗಿವೆ

ನೀವು ಗುಂಡಿ ಒತ್ತಿದ್ದು ಕಾರಣ. ಗಂಟೆ ಬಾರಿಸಿದ್ದು ಅದರ ಪರಿಣಾಮ. ಇದು ಸ್ಪಷ್ಟ. ಅಂದರೆ, ಗುಂಡಿ ಒತ್ತಿದ್ದು ಮತ್ತು ಗಂಟೆ ಬಾರಿಸಿದ್ದು ಇವುಗಳ ನಡುವೆ ಕಾರಣ–ಪರಿಣಾಮ ಸಂಬಂಧವಿದೆ. ಇಲ್ಲಿ ಇರುವ ಸಂಬಂಧ ನೇರ ಮತ್ತು ತೀರ ಸರಳ. ಸಂಬಂಧಗಳು ಇಷ್ಟು ಸ್ಪಷ್ಟವಿದ್ದಲ್ಲಿ ಅವುಗಳ ಅಧ್ಯಯನ ಮತ್ತು ವಿಶ್ಲೇಷಣೆ ಅನವಶ್ಯ. ಎರಡು ಚರಗಳ ನಡುವಿನ ಇಷ್ಟು ಸ್ಪಷ್ಟವಲ್ಲದ, ಆದರೆ ವಾಸ್ತವವಾಗಿರುವ ಸಂಬಂಧಗಳನ್ನು ಅರಿಯುವುದು ನಮ್ಮ ಸಮಸ್ಯೆ. ಅಂಥ ಸಂಬಂಧಿತ ಚರಗಳು ನಮ್ಮ ಚಟುವಟಿಕೆಗಳ ವಿವಿಧ ರಂಗಗಳಲ್ಲಿ ಆಗಾಗ ಇದಿರಾಗುತ್ತವೆ. ಸೆಪ್ಟೆಂಬರ್ ತಿಂಗಳಿನಲ್ಲಿ ಬಿದ್ದ ಮಳೆ ಮತ್ತು ಸುಗ್ಗಿಯ ಬೆಳೆ, ಶಾಲಾ ವಿದ್ಯಾರ್ಥಿಗಳ ತೂಕ ಮತ್ತು ಎತ್ತರ, ಮದುಮಗನ ಮತ್ತು ಮದುಮಗಳ ವಯಸ್ಸುಗಳು, ಸಕ್ಕರೆಯ ಬೆಲೆ ಮತ್ತು ಅದಕ್ಕೆ ಮಾರುಕಟ್ಟೆಯಲ್ಲಿರುವ ಬೇಡಿಕೆ, ಒಂದು ಕುಟುಂಬದ ಮಾಸಿಕ ಆದಾಯ ಮತ್ತು ಖರ್ಚು—ಇವು ಕೆಲವು ನಿದರ್ಶನಗಳು. ಇಂಥ ಚರಗಳ ನಡುವಿನ ಸಂಬಂಧದ ಕ್ರಮಬದ್ಧ ಅಧ್ಯಯನದ ಕಡೆಗೆ ಗಮನ ಹರಿಸಿದವರಲ್ಲಿ ಮೊದಲಿಗರು ಇಬ್ಬರು ಆಂಗ್ಲ ಮೇಧಾವಿಗಳು ; ಸರ್ ಫ್ರಾನ್ಸಿಸ್ ಗಾಲ್ಟನ್ (Sir Francis Galton, 1822–1911) ಮತ್ತು ಕಾರ್ಲ್ ಪಿಯರ್‌ಸನ್ (Karl Pearson, 1857–1936). ಅವರು ತಿಳಿಸಿರುವ ಕೆಲವು ವಿಧಾನಗಳ ಪರಿಚಯ ಮಾಡಿಕೊಳ್ಳೋಣ.

## 3 ದ್ವಿಚರ ರೇಖೀಯ ಪ್ರತಿರೂಪ

X ಮತ್ತು Y ಒಂದಕ್ಕೊಂದು ಸಂಬಂಧವಿರುವ ಎರಡು ಚರಗಳನ್ನು ಸೂಚಿಸಲಿ. ವ್ಯಕ್ತಿಗಳ ಎತ್ತರಗಳಿಗೆ ಸಂಬಂಧಿಸಿದ ಕೋಷ್ಟಕ 3-1ರ ದತ್ತಾಂಶಗಳಲ್ಲಿ X = ತಂದೆಯ ಎತ್ತರ, Y = ಮಗನ ಎತ್ತರ

**ಕೋಷ್ಟಕ 31**

(ಅಳತೆಗಳು ಇಂಚುಗಳಲ್ಲಿ)

| | | | | | | | | | | |
|---|---|---|---|---|---|---|---|---|---|---|
| X | 69 | 70 | 69 | 68 | 70 | 73 | 69 | 67 | 69 | 64 |
| Y | 68 | 69 | 72 | 67 | 70 | 71 | 72 | 66 | 71 | 65 |

ತಂದೆಯ ಎತ್ತರ ಮಗನ ಎತ್ತರದ ಮೇಲೆ ಪರಿಣಾಮ ಬೀರುತ್ತದೆ (ಮಗನ ಎತ್ತರ, ತಂದೆಯ ಎತ್ತರದ ಮೇಲೆ ಪರಿಣಾಮ ಬೀರುವುದು ಸಾಧ್ಯವಿಲ್ಲ, ಈಗಿನ ಕಾಲದಲ್ಲಿ ಕೂಡ !) ಎಂದು ತಿಳಿದರೆ, ಅವುಗಳ ನಡುವಿನ ಸಂಬಂಧವನ್ನು

$$Y = f(X) \ldots\ldots\ldots\ldots \ldots\ldots \qquad 3{\cdot}1$$

ಎಂದು ಬರೆಯುತ್ತೇವೆ. Y ಎಂಬುದು Xನ ಒಂದು ಉತ್ಪನ್ನ (function) ಎಂದು ಇದರ ಅರ್ಥ. ಇಲ್ಲಿ X ಒಂದು ಸ್ವತಂತ್ರಚರ. Y, X ನ ಮೇಲೆ ಹೊಂದಿಕೊಂಡಿದೆ. Y ಒಂದು ಅವಲಂಬಿ ಚರ. X ಮತ್ತು Y ಗಳ ನಡುವಿನ ಸಂಬಂಧದ ಸ್ವರೂಪವನ್ನು ಸಿಗದಿಮಾಡುವುದು ಮುಂದಿನ ಹೆಜ್ಜೆ. ಎರಡು ಚರಗಳ ನಡುವಿನ ಸಾಧ್ಯವುಳ್ಳ ಎಲ್ಲ ಸಂಬಂಧಗಳ ಪೈಕಿ ರೇಖೀಯ ಸಂಬಂಧ ಅತ್ಯಂತ ಸರಳರೂಪದ್ದು. ಸಮೀಕರಣ ರೂಪದಲ್ಲಿ ಇದನ್ನು

$$Y = a + bX \qquad 3{\cdot}2$$

ಎಂದು ಬರೆಯುತ್ತೇವೆ. ಇಲ್ಲಿ a, b ಗಳು ಸಂಬಂಧದ (ಅವ್ಯಕ್ತ) ಪ್ರಾಚಲಗಳು (parameters) ಅವುಗಳ ಮೌಲ್ಯಗಳನ್ನು ತಿಳಿಯಬೇಕಾಗಿದೆ. ಅಂದರೆ, ದತ್ತಾಂಶಗಳನ್ನು ಉಪಯೋಗಿಸಿ a,bಗಳ ಮೌಲ್ಯಗಳನ್ನು ಅಂದಾಜುಮಾಡಬೇಕಾಗಿದೆ.

ವಾಸ್ತವ ಪ್ರಪಂಚದಲ್ಲಿ ನಮಗೆ ಇದಿರಾಗುವ ಸಂಬಂಧಿತ ಚರಗಳು (3.2)ರಲ್ಲಿ ಇರುವಂಥ ಖಚಿತ ನಿಯಮಗಳನ್ನು ಶಿಸ್ತಿನಿಂದ, ಚಾಚೂ ತಪ್ಪದೆ ಅನುಸರಿಸುವುದು ಬಹಳ ಅಪರೂಪ. ಎರಡು ಚರಗಳ ನಡುವಿನ ಸಂಬಂಧ ಅಷ್ಟೊಂದು ನಿಖರವಾಗಿದ್ದಲ್ಲಿ ಅದನ್ನು ಅಂದಾಜುಮಾಡುವುದು ಸಂಖ್ಯಾಕಲನೀಯ ಸಮಸ್ಯೆಯೂ ಅಲ್ಲ. ಯಾಕೆಂದರೆ, ಇಲ್ಲಿ ಚರಗಳು ಒಂದು ನಿರ್ದಿಷ್ಟ ಗಣಿತಸಮೀಕರಣದಿಂದ ಅಚ್ಚುಕಟ್ಟಾಗಿ ಬಂಧಿಸಲ್ಪಟ್ಟಿವೆ. ಈ ಪರಿಸ್ಥಿತಿಗೆ ವ್ಯಾಸೀಯ ವಿರುದ್ಧವಾಗಿ, ಅರ್ಥಾತ್ ಸಂಬಂಧವಿಲ್ಲದ ಚರಗಳೂ ಇವೆ. ಗಣಿತದಲ್ಲಿ ವಿದ್ಯಾರ್ಥಿಗಳ ಅಂಕಗಳು ಮತ್ತು ಅವರ ತಂದೆಯಂದಿರ ಎತ್ತರಗಳು ; ವ್ಯಕ್ತಿಯ I Q (Intelligence quotient) ಮತ್ತು ಅವನ ಬೂಟಿನ ಉದ್ದ ಇವು ಎರಡು ಅಂಥ ನಿದರ್ಶನಗಳು. ಇಂಥ ಸಂದರ್ಭಗಳಲ್ಲಿ ಸಂಬಂಧ ಕಂಡುಬಂದರೂ ಅದು ಕೇವಲ ಕಾಕತಾಳೀಯ, ಇಮಾಂಸಾಬಿಗೂ ಗೋಕುಲಾಷ್ಟಮಿಗೂ ಇರುವ ಸಂಬಂಧ. ಈ ಎರಡು ವೈಪರೀತ್ಯಗಳ ನಡುವಿದ್ದು, ವಾಸ್ತವವಾಗಿ ಅರ್ಥಪೂರ್ಣವಾಗಿರುವ, ಸಂಬಂಧಗಳನ್ನು ತಿಳಿಯುವುದು ಸಂಖ್ಯಾಕಲನೀಯ ಸಮಸ್ಯೆ. ಇದಕ್ಕೆ ಎರಡು ಮುಖಗಳಿವೆ :

(i) Xನ ಮೌಲ್ಯ ತಿಳಿದಿದ್ದಾಗ, Yಯ ಮೌಲ್ಯವನ್ನು ಅಂದಾಜುಮಾಡುವುದು ಮತ್ತು ಅಂಥ ಅಂದಾಜುಮೌಲ್ಯ ಎಷ್ಟರಮಟ್ಟಿಗೆ ನಂಬಲರ್ಹ ಎಂದು

ತಿಳಿಯುವುದು. ಇದಕ್ಕೆ ಹಿಂಜಲನೆ[1] (regression) ಯ ಸಮಸ್ಯೆ ಎಂದು ಹೆಸರು.

(ii) X ಮತ್ತು Y ಗಳ ನಡುವಿನ ಸಂಬಂಧದ ಗಹನತೆಯನ್ನು ಅಳೆಯುವ ಒಂದು ಮಾನವನ್ನು ಪಡೆಯುವುದು. ಇದಕ್ಕೆ ಸಹಸಂಬಂಧ (correlation)ದ ಸಮಸ್ಯೆ ಎಂದು ಹೆಸರು.

ಮೇಲಿನ ಎರಡು ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುವ ಉದ್ದೇಶದ ಜೊತೆಗೆ ಮಾನವನ ಮೂಲಭೂತ ಬೌದ್ಧಿಕ ಕುತೂಹಲವೂ ಸೇರಿಕೊಂಡಿದೆ. ಪ್ರಪಂಚದ ವಿದ್ಯಮಾನಗಳು ಈಗ ಆಗುತ್ತಿರುವಂತೆಯೇ ಯಾಕೆ ಆಗುತ್ತಿರಬೇಕು ಎಂಬ ಜಿಜ್ಞಾಸೆ, ಹಿನ್ನೆಲೆಯಲ್ಲಿರುವ ನಿತ್ಯಸತ್ಯಗಳನ್ನು ಅರಿಯುವ ಇಚ್ಛೆ—ಇವು ಪ್ರಬಲ ಪ್ರೇರಕಬಲಗಳು. ಈ ಬಲಗಳು ಸಂಶೋಧನಾಪ್ರವೃತ್ತಿಯು ಮಾನವನಿಗೆ ಜ್ಞಾನಗಂಗೆಯಲ್ಲಿ ಮೀಯಲು ಅತ್ಯಂತ ಸಹಕಾರಿಯಾಗಿವೆ.

ವಾಸ್ತವ ಪ್ರಪಂಚದಲ್ಲಿ ಇದಿರಾಗುವ ಸಂಬಂಧಿತ ಚರಗಳು (3.2) ರಲ್ಲಿ ಇರುವಂಥ ನಿರ್ಬಂಧಗಳನ್ನು ಚಾಚೂ ತಪ್ಪದೆ ಅನುಸರಿಸುವುದು ಅಸಾಧ್ಯವಾದರೂ, ಅವು ಅಂಥ ನಿರ್ಬಂಧಗಳನ್ನು ಸರಿಸುಮಾರಾಗಿ ಅನುಸರಿಸಬಹುದು. ಅದೂ ಅಲ್ಲದೆ, ರೇಖೀಯ ಸಂಬಂಧ ಇತರ ಅನೇಕ ರೀತಿಯ ಸಂಬಂಧಗಳಿಗೆ ತೃಪ್ತಿಕರ ಸಮೀಪವರ್ತಿಯಾಗಿದೆ. ಆದ್ದರಿಂದ (3.2) ರ ಬಲಬದಿಯಲ್ಲಿ ಒಂದು ಯಾದೃಚ್ಛಿಕ ಪದ (random term) ವನ್ನು ಸೇರಿಸಿಕೊಂಡು ನಾವು ಮುಂದುವರಿಯುತ್ತೇವೆ. ಈ ವಿಧಾನ ವಿಶದವಾಗಲು ಕೆಳಗಿನ ನಿದರ್ಶನವನ್ನು ಗಮನಿಸಿ.

ಕುಟುಂಬಗಳ ಮಾಸಿಕ ಆದಾಯ (X) ಮತ್ತು ಖರ್ಚು (Y) ಗಳ ಸಂಬಂಧದ ಕುರಿತು ನಾವು ಅಧ್ಯಯಿಸುತ್ತಿದ್ದೇವೆ. ಎಲ್ಲ ಕುಟುಂಬಗಳನ್ನು ಅವುಗಳಲ್ಲಿರುವ ಸದಸ್ಯರ ಸಂಖ್ಯೆ ಮತ್ತು ಇತರ ವೈಶಿಷ್ಟ್ಯಗಳಿಗೆ ಅನುಸಾರವಾಗಿ ಬೇರೆ ಬೇರೆ ವರ್ಗಗಳಾಗಿ ವಿಂಗಡಿಸಲಾಗಿದೆ. ಅಂಥ ವರ್ಗದಲ್ಲಿರುವ ಕುಟುಂಬಗಳ ಪೈಕಿ n ಕುಟುಂಬಗಳ ಮಾಸಿಕ ಆದಾಯ ಮತ್ತು ಖರ್ಚುಗಳ ಬಗ್ಗೆ ವಿವರಗಳನ್ನು ಸಂಗ್ರಹಿಸಲಾಗಿದೆ. ಆ ವರ್ಗದೊಳಗೆ X ಮತ್ತು Y ಗಳ ನಡುವಿನ ಸಂಬಂಧವನ್ನು ಅರಿಯಬೇಕಾಗಿದೆ.

---

1 Regression ಎಂಬ ಪದವನ್ನು ಗಾಲ್ಟನ್ ಅವರು ವ್ಯಕ್ತಿಗಳ ಎತ್ತರಗಳ ಅನುವಂಶಿಕತೆಯನ್ನು ಅಧ್ಯಯಿಸುತ್ತ ಮೊದಲು ಉಪಯೋಗಿಸಿದರು. ಅತಿ ಕುಬ್ಜ ಅಥವಾ ಅತಿ ಎತ್ತರದ ತಂದೆ ತಾಯಿಗಳ ಮಕ್ಕಳ ಎತ್ತರಗಳು ಜನರ ಸಾಮಾನ್ಯ ಎತ್ತರದ ಮಟ್ಟಕ್ಕೆ 'ಹಿಂಜಲಿಸುವುವು' (regress, ಜಗಿಯುವುವು) ಎಂದು ಅವರು ಗುರುತಿಸಿದರು. ಆದರೆ, ಪ್ರಚಲಿತ ಉಪಯೋಗದಲ್ಲಿ regression ಎಂಬ ಪದದ ವ್ಯಾಪ್ತಿ ಜೀವವಿಜ್ಞಾನಕ್ಕೆ ಮಾತ್ರ ಸೀಮಿತವಾಗಿಲ್ಲ. ಅದು ಕೇವಲ ಒಂದು ಐತಿಹಾಸಿಕ ಕುರುಹು, ಹಾಗೂ ಒಂದು ಬಹಳ ಅನುಕೂಲವಾದ ಪಾರಿಭಾಷಿಕ ಪದ

ಅಂಥ ವರ್ಗದೊಳಗೆ ಕೂಡ ಸಮ ಆದಾಯವುಳ್ಳ ಕುಟುಂಬಗಳ ಖರ್ಚುಗಳು ಸ್ಥಿರವಾಗಿ ಸಮವಾಗಿರುವುದು ಅಪರೂಪ. ಅವು ಭಿನ್ನ ಭಿನ್ನವಾಗಿರುವುದೇ ನಿರೀಕ್ಷಿಸಬಹುದಾದ ಪರಿಸ್ಥಿತಿ. ಅಂಥ ಖರ್ಚುಗಳು ಆ ಆದಾಯಕ್ಕೆ ಉಚಿತವಾದ ಒಂದು ನಿರ್ದಿಷ್ಟ ಮಟ್ಟದ ನೆರೆಯಲ್ಲಿರುತ್ತವೆ ಎಂದು ಮಾತ್ರ ನಿರೀಕ್ಷಿಸಬಹುದು. ಈ ವಿವರಗಳನ್ನು ಸೂತ್ರರೂಪದಲ್ಲಿ ತಿಳಿಸುವ ಪ್ರಯತ್ನದಲ್ಲಿ


$$Y = a + bX + u \qquad \ldots \qquad 3.3$$

ಎಂದು ಬರೆಯುತ್ತೇವೆ. u ಎಂಬುದು ಋಣ ಅಥವಾ ಧನ ಮೌಲ್ಯಗಳನ್ನು ಹೊಂದಬಹುದಾದ ಒಂದು ಯಾದೃಚ್ಛಿಕ ಚರ. ಒಂದು ನಿರ್ದಿಷ್ಟ ಆದಾಯ ($=X'$) ಉಳ್ಳ ಎಲ್ಲ ಕುಟುಂಬಗಳನ್ನು ಗಮನಿಸಿದರೆ ಅವುಗಳ ಖರ್ಚುಗಳ ನಿರೀಕ್ಷಿತ ಮಟ್ಟ ($a+bX'$). ಆದರೆ ನಿಜವಾಗಿ ಆದ ಖರ್ಚುಗಳು ($a+bX'+u_1$), ($a+bX'+u_2$), ($a+bX'+u_3$) ಇತ್ಯಾದಿ. ಇಲ್ಲಿ $u_1$, $u_2$, $u_3$ ಇತ್ಯಾದಿಗಳ ಕುಟುಂಬಗಳ ವಾಸ್ತವ ಖರ್ಚು ಮತ್ತು ನಿರೀಕ್ಷಿತ ಖರ್ಚಿನ ವ್ಯತ್ಯಾಸಗಳನ್ನು ಸೂಚಿಸುತ್ತವೆ. ಹೀಗಾಗಿ, ಖರ್ಚಿನ ಮೇಲೆ ಪ್ರಭಾವವನ್ನು ಬೀರಬಲ್ಲ ಅನೇಕ ಚಿಕ್ಕಪುಟ್ಟ ಕಾರಣಗಳ ಸಮ್ಮಿಲಿತ ಪರಿಣಾಮವನ್ನು u ಪದ ತೋರಿಸುತ್ತದೆ. ಕುಟುಂಬದ ಸದಸ್ಯರ ವಯಸ್ಸುಗಳು, ಯಜಮಾನ ಮತ್ತು ಯಜಮಾನಿಯರ ಹವ್ಯಾಸಗಳು– ಸಿಗರೇಟು ಸೇದುವವರೇ? ಸಿನಿಮಾ ನೋಡುವವರೇ ? ನಾಜೂಕು ಪ್ರಿಯರೇ ? ದುಂದುಗಾರಿಕೆಯವರೇ ? ಇತ್ಯಾದಿ ಚಿರಪರಿಚಿತ ವಿಚಾರಗಳು ಖರ್ಚಿನ ಮೇಲೆ ಖಂಡಿತವಾಗಿಯೂ ಪ್ರಭಾವ ಬೀರುತ್ತವೆ. ಇಂಥ ಚಿಕ್ಕಪುಟ್ಟ ಕಾರಣಗಳ ಇರುವಿಕೆ, ಇಲ್ಲದಿರುವಿಕೆಗಳು ಕುಟುಂಬದ ಖರ್ಚಿನ ಮೇಲೆ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ಪ್ರಭಾವ ಬೀರುತ್ತಿರಬಹುದಾದ್ದರಿಂದ, ಈ ಎಲ್ಲ ಕಾರಣಗಳ ಸಮ್ಮಿಲಿತ ಪರಿಣಾಮ ಸಾಕಷ್ಟು ಚಿಕ್ಕದು ಎಂದು ನಿರೀಕ್ಷಿಸಬಹುದು.

$X_1, X_2, \ldots, X_n$ ಗಳ, ಏರಿಕೆ ಕ್ರಮದಲ್ಲಿ ಆದಾಯದ n ಮಟ್ಟಗಳು. ಪ್ರತಿಯೊಂದು ಮಟ್ಟದಿಂದಲೂ ಒಂದೊಂದು ಕುಟುಂಬವನ್ನು ಆರಿಸಲಾಗಿದೆ. ಹೀಗಾಗಿ, n ಕುಟುಂಬಗಳ ಒಂದು ಪ್ರತಿಚಯ(Sample)ದೊರೆತಿದೆ. ($X_1, Y_1$), ($X_2, Y_2$), …($X_n, Y_n$) ಗಳು ಅನುರೂಪವಾದ ಆದಾಯ ಮತ್ತು ಖರ್ಚುಗಳನ್ನು ಸೂಚಿಸುತ್ತವೆ.

ಇವನ್ನು ಗ್ರಾಫ್‌ಕಾಗದದ ಮೇಲೆ ಒಂದಕ್ಕೊಂದು ಲಂಬವಾಗಿರುವ X, Y–ಅಕ್ಷಗಳ XY–ಸಮತಲದಲ್ಲಿ ಗುರುತಿಸಿದರೆ, ಆಗ ಪ್ರತಿಚಯದಲ್ಲಿರುವ ಮೌಲ್ಯಗಳು n ಬಿಂದುಗಳನ್ನು ಕೊಡುತ್ತವೆ. ಇಂಥ ನಕ್ಷೆಗೆ ಚದರಿಕೆ ಚಿತ್ರ (scatter

diagram) ಎಂದು ಹೆಸರು. ಬಿಂದುಗಳ ಸಾಪೇಕ್ಷ ಸ್ಥಾನಗಳನ್ನು ಮತ್ತು ಅವು




ಚಿತ್ರ 3.1

ಗಳ ಚದರಿಕೆಯನ್ನು ಸುಲಭವಾಗಿ ಗ್ರಹಿಸಲು ಚದರಿಕೆ ಚಿತ್ರ ನಮಗೆ ಅತ್ಯಂತ ಸಹಾಯಕವಾಗಿದೆ. u ಮೌಲ್ಯಗಳು ಒಂದಕ್ಕೊಂದು ಸಂಬಂಧವಿಲ್ಲದೆ ಪರಸ್ಪರ ಸ್ವತಂತ್ರವಾಗಿದ್ದರೆ, ಆಗ ಚದರಿಕೆ ಚಿತ್ರದಲ್ಲಿರುವ ಬಿಂದುಗಳು ಸರಿಸುಮಾರಾಗಿ ಯಾದೃಚ್ಛಿಕವಾಗಿ, ಸರಳರೇಖೆ $Y = a + bX$ ನ ನೆರೆಯಲ್ಲಿ, ಎಲ್ಲೆಡೆಯೂ ಹರಡಿರುತ್ತವೆ.

ವಾಸ್ತವಿಕತೆಗೂ ಚಿತ್ರ 3.1 ರಲ್ಲಿರುವ ಪರಿಸ್ಥಿತಿಗೂ ಇರುವ ವ್ಯತ್ಯಾಸವೇನು ? ವಾಸ್ತವಿಕತೆಯಲ್ಲಿ (a, b ಗಳ ಮೌಲ್ಯಗಳು ತಿಳಿಯದಿರುವುದರಿಂದ) ಸರಳರೇಖೆ $Y = a + bX$ ತಿಳಿದಿರುವುದಿಲ್ಲ. ಚಿತ್ರದಲ್ಲಿ ಗುರುತಿಸಿರುವ ಬಿಂದುಗಳು ಮಾತ್ರ ತಿಳಿದಿರುತ್ತವೆ. ಹೀಗಾಗಿ, ಚಿತ್ರ 3.1 ರಲ್ಲಿ ತೋರಿಸಿರುವ $Y = a + bX$ ಸರಳ ರೇಖೆ ನಿಜವಾಗಿ ಅವ್ಯಕ್ತ. ನಮ್ಮ ಬಳಿ ಇರುವುದು X, Y ಗಳ n ಜೊತೆ ಮೌಲ್ಯ ಗಳು ಮಾತ್ರ. ಇವುಗಳ ಆಧಾರದಿಂದ ಮತ್ತು u–ಪದವನ್ನು ಕುರಿತು ಕೆಲವು ತರ್ಕಬದ್ಧವಾದ ಅಭಿಗೃಹೀತ (logical assumption) ಗಳನ್ನು ಉಪಯೋಗಿಸಿ ಕೊಂಡು ಅವ್ಯಕ್ತ ಪ್ರಾಚಲಗಳಾದ a, b ಗಳನ್ನು ಅಂದಾಜುಮಾಡುವುದು ನಮ್ಮ ಉದ್ದೇಶ. ಈ ಉದ್ದೇಶ ಸಾಧನೆಗೆ ಒಂದು ಮಾರ್ಗವನ್ನು ವಿಭಾಗ 4 ರಲ್ಲಿ ವಿವರಿಸ ಲಾಗಿದೆ.

## 4 ಕನಿಷ್ಟತಮ–ವರ್ಗ ಅಂದಾಜುಕಾರಿಗಳು

ಯಾದೃಚ್ಛಿಕಚರ (random variable) u ವನ್ನು ಕುರಿತು ಕೆಳಗಿನ ನಾಲ್ಕು ಅಭಿಗೃಹೀತಗಳನ್ನು[2] ಉಪಯೋಗಿಸಿಕೊಂಡು ನಾವು ಮುಂದುವರಿಯುತ್ತೇವೆ.

$$Y_i = a + bX_i + u_i, \quad i = 1, 2, \ldots, n \qquad \ldots \quad 4.1a$$

$$E(u_i) = 0, \quad i = 1, 2, \ldots, n \qquad \ldots \quad 4.1b$$

$$E(u_i u_j) = 0, \quad i \neq j;\ i, j = 1, 2, \ldots, n \qquad \ldots \quad 4.1c$$

$$E(u_i^2) = \sigma_u^2, \quad i = 1, 2, \ldots, n \qquad \ldots \quad 4.1d$$

ದತ್ತಾಂಶದಲ್ಲಿರುವ ಮೌಲ್ಯಗಳನ್ನು

$$\begin{array}{|l|} \hline X_1, X_2, \ldots\ldots\ldots, X_n \\ Y_1, Y_2, \ldots\ldots\ldots, Y_n \\ \hline \end{array} \qquad \ldots \quad 4.2$$

ಎಂದು ಸೂಚಿಸೋಣ. ಅವುಗಳ ಸರಾಸರಿಗಳನ್ನು

$$\overline{X} = \frac{1}{n}\sum_{i=1}^{n} X_i, \qquad \overline{Y} = \frac{1}{n}\sum_{i=1}^{n} Y_i \qquad \ldots \quad 4.3$$

ಎಂದು ಬರೆಯೋಣ. ಚದರಿಕೆ ಚಿತ್ರದಲ್ಲಿ (ಚಿತ್ರ 4.1) $(\overline{X}, \overline{Y})$ ಬಿಂದುವಿನಿಂದ X,Y ಅಕ್ಷಗಳಿಗೆ ಲಂಬಗಳನ್ನು ಎಳೆಯಲಾಗಿದೆ. ಅವ್ಯಕ್ತರೇಖೆ $Y = a + bX$ನ ಅಂದಾಜಾಗಿ ದತ್ತಬಿಂದುಗಳ ಮೂಲಕ ಒಂದು ಸರಳರೇಖೆಯನ್ನು ಎಳೆಯಬೇಕಾಗಿದೆ.

2 $u_i$ ಒಂದು ಯಾದೃಚ್ಛಿಕಚರ. ಅದು ತೆಗೆದುಕೊಳ್ಳಬಹುದಾದ ಮೌಲ್ಯಗಳು $u_{i1}, u_{i2}, \ldots$ ಈ ಮೌಲ್ಯಗಳನ್ನು $u_i$ ತೆಗೆದುಕೊಳ್ಳುವ ಸಂಭಾವ್ಯತೆ ( probability ) ಗಳು ಅನುಕ್ರಮವಾಗಿ $p_{i1}, p_{i2} \cdots$

ಆಗ

$$E(U_i) = \sum_{k=1}^{\infty} U_{ik}\, p_{ik} \qquad \text{(ವಿತರಣೆಯ ನಿರೀಕ್ಷೆ)}$$

$$E(U_i U_j) = \sum_{k=1}^{\infty}\sum_{k'=1}^{\infty} U_{ik}\, U_{jk'}\, p_{ik}\, p_{jk'}$$

$$E(U_i^2) = \sum_{k=1}^{\infty} U^2_{ik}\, p_{ik} \qquad \text{(ವಿತರಣೆಯ ಚಲನೀಯ)}$$

ಚಿಕ್ಕಪುಟ್ಟ ಕಾರಣಗಳ ಸಮ್ಮಿಲಿತ ಪರಿಣಾಮವನ್ನು $U_i$–ಪದ ತೋರಿಸುವುದರಿಂದ ಅದರ ನಿರೀಕ್ಷಿತ ಮೌಲ್ಯ, $E(U_i) = O$ ಎಂದು ತಿಳಿಯುತ್ತೇವೆ (4.1b). $U_i$, $U_j$ $(i \neq j)$ಗಳ ಸಹ ಚಲನೀಯ (Covariance) ಸೊನ್ನೆ ಎಂಬುದನ್ನು (4.1c) ಪ್ರದರ್ಶಿಸುತ್ತದೆ. $U_i$ಗಳ ಚಲನೀಯ (Variance)ಗಳು ಸಮ ಎಂಬುದನ್ನು (4.1d) ಪ್ರದರ್ಶಿಸುತ್ತದೆ


ಈ ಅಂದಾಜು ಗೆರೆಯನ್ನು

$$\widehat{Y} = \widehat{a} + \widehat{b}\ X \qquad \ldots \qquad 4.4$$

ಎಂದು ಬರೆಯೋಣ. ಇಲ್ಲಿ

$\widehat{Y}$ = ದತ್ತ X ಮೌಲ್ಯಕ್ಕೆ ಅನುರೂಪವಾದ Yಯ ಅಂದಾಜುಮೌಲ್ಯ : ಅಂದರೆ, ಅಂದಾಜು ಗೆರೆಯ ಮೇಲಿನ ಅನುರೂಪವಾದ ಬಿಂದುವಿನ (X – ಅಕ್ಷದಿಂದ) ಎತ್ತರ.

$\widehat{a}, \widehat{b}$ = ಅವ್ಯಕ್ತ ಪ್ರಾಚಲ (a,b)ಗಳ ಅಂದಾಜು ಮೌಲ್ಯಗಳು. ಇಂಥ ಅಂದಾಜು ಗೆರೆಯನ್ನು ಪಡೆಯಲು $\widehat{a, b}$ ಗಳಿಗೆ (ದತ್ತಾಂಶಗಳ ಉತ್ಪನ್ನಗಳಾಗಿ) ಸೂತ್ರಗಳನ್ನು ಪಡೆಯಬೇಕು.




ಚಿತ್ರ 4.1

ಬಿಂದುಗಳ ಚದರಿಕೆಯಲ್ಲಿ P ($X_i$, $Y_i$) ಎಂಬುದು ಯಾವುದೇ ಒಂದು ಬಿಂದು. P ಯಿಂದ X–ಅಕ್ಷಕ್ಕೆ ಲಂಬ PT. ಅದು ನಮ್ಮ ಅಂದಾಜುಗೆರೆಯನ್ನು R ಬಿಂದುವಿನಲ್ಲಿ ದಾಟುತ್ತದೆ, $\overline{Y}$–ಗೆರೆಯನ್ನು Q ಬಿಂದುವಿನಲ್ಲಿ ದಾಟುತ್ತದೆ :

$$OT = X_i,\ PT = Y_i \text{ ಮತ್ತು } RT = \widehat{Y}_i$$

P ಮತ್ತು ಅಂದಾಜು ಗೆರೆಗಳ ನಡುವಿನ ಲಂಬದೂರವನ್ನು

$$PR = (Y_i - \widehat{Y}_i) = e_i \qquad \ldots \qquad 4.5$$

ಎಂದು ಸೂಚಿಸೋಣ. $e_i$ ಎಂಬುದು Yಯ ಕಂಡುಬಂದ ಮೌಲ್ಯ ಮತ್ತು ಅನುರೂಪವಾದ ಅಂದಾಜು ಮೌಲ್ಯಗಳ ಅಂತರ. ದತ್ತಬಿಂದು ಅಂದಾಜು ಗೆರೆಯ ಮೇಲ್ಗಡೆ ಇದ್ದರೆ, ಆಗ ಶೇಷ (residual) $e_i$ ಧನವಾಗಿರುತ್ತದೆ; ಕೆಳಗಡೆ

ಇದ್ದರೆ ಅದು ಋಣವಾಗಿರುತ್ತದೆ. ಇಂಥ ಶೇಷಗಳ ಚಿಹ್ನೆಗಳನ್ನು ಕಡೆಗಣಿಸಿ, ಕೇವಲ ಅವುಗಳ ಗಾತ್ರವನ್ನು ಪರಿಶೀಲಿಸಿದರೆ ಅವು ದತ್ತ ಬಿಂದುಗಳು ಅಂದಾಜು ಗೆರೆಯಿಂದ ಎಷ್ಟೆಷ್ಟು ದೂರದಲ್ಲಿವೆ ಎಂಬ ವಿಚಾರವನ್ನು ತಿಳಿಸುತ್ತವೆ. ದತ್ತ ಬಿಂದುಗಳಿಗೆ ಅಂದಾಜುಗೆರೆ ತೃಪ್ತಿಕರವಾಗಿ ಹೊಂದಿಕೊಳ್ಳಬೇಕಾದರೆ ಈ ಶೇಷಗಳು (ಗಾತ್ರದಲ್ಲಿ) ಸಾಕಷ್ಟು ಕಡಿಮೆ ಇರಬೇಕು ಎಂಬುದು ಸ್ವಯಂಸ್ಪಷ್ಟ. ಶೇಷಗಳ ಚಿಹ್ನೆ ಭೇದದ (ಋಣ ಮತ್ತು ಧನ ಚಿಹ್ನೆಗಳ) ತೊಡಕಿನಿಂದ ಪಾರಾಗಲು $e_i$ಯ ಮೌಲ್ಯಗಳ ವರ್ಗಗಳನ್ನು ಉಪಯೋಗಿಸಿಕೊಳ್ಳುತ್ತೇವೆ. S ಎಂಬುದು ಶೇಷ $e_i$ಗಳ ವರ್ಗಗಳ ಮೊತ್ತವಾಗಿರಲಿ ; ಸಂಕ್ಷೇಪವಾಗಿ,

$$S = \sum_{i=1}^{n} e_i^2 \qquad \ldots \qquad 4{\cdot}6$$

ಅಂದಾಜುಗೆರೆಗೆ ಸಾಪೇಕ್ಷವಾಗಿ ದತ್ತಬಿಂದುಗಳ ಚದರಿಕೆಯ ಒಟ್ಟು ಪರಿಮಾಣವನ್ನು S ಸೂಚಿಸುತ್ತದೆ. ಬಿಂದುಗಳ ಚದರಿಕೆ ಹೆಚ್ಚಾದಂತೆ S ನೇರವಾಗಿ ಹೆಚ್ಚಾಗುತ್ತದೆ. $e_i$ ಗಳ ವರ್ಗಗಳ ಮೊತ್ತವಾದ್ದರಿಂದ, S ಋಣವಾಗಿರುವುದು ಅಸಾಧ್ಯ ಎಂಬುದನ್ನು ಗಮನಿಸಿ. $\widehat{a}, \widehat{b}$ ಗಳ ಬೇರೆ ಬೇರೆ ಮೌಲ್ಯಗಳು ಬೇರೆ ಬೇರೆ ಅಂದಾಜುಗೆರೆಗಳನ್ನು ಕೊಡುತ್ತವೆ. ಇವುಗಳೊಂದಿಗೆ Sನ ಮೌಲ್ಯವೂ ಬದಲಾಗುತ್ತಿರುತ್ತದೆ. ಅಂದರೆ

$$S = f(\widehat{a}, \widehat{b}) \qquad \ldots \qquad 4{\cdot}7$$

ಎಂದು ಬರೆಯಬಹುದು. S ಎಂಬುದು $\widehat{a}, \widehat{b}$ಗಳ ಒಂದು ಉತ್ಪನ್ನ ಎಂದು ಅರ್ಥ. [(3.1) ರಲ್ಲಿರುವ ಉತ್ಪನ್ನದ ಸ್ವರೂಪ ಈ ಉತ್ಪನ್ನದ ಸ್ವರೂಪದಂತೆಯೇ ಇರಬೇಕೆಂದಿಲ್ಲ]. ಕನಿಷ್ಠತಮ–ವರ್ಗತತ್ವ[1] (Principle of least squares)ದ ಪ್ರಕಾರ $f(\widehat{a}, \widehat{b})$ಯ ಮೌಲ್ಯಅತ್ಯಂತ ಕಡಿಮೆ ಇರುವಂತೆ $\widehat{a}$ ಮತ್ತು $\widehat{b}$ ಗಳನ್ನು ರಚಿಸಬೇಕು. ಅದಕ್ಕಾಗಿ ಕಲನ ಶಾಸ್ತ್ರ (Calculus) ದ ಒಂದು ಮೂಲತತ್ವ[1]ವನ್ನು

---

1 ಕನಿಷ್ಠತಮ–ವರ್ಗತತ್ವವನ್ನು ಗೌಸ್ (Gauss 1777-1855) ಆಕಾಶಕಾಯಗಳ ವೀಕ್ಷಣೆಯ ಸಂದರ್ಭದಲ್ಲಿ ಆವಿಷ್ಕರಿಸಿದ. ಈತನ ಪೂರ್ಣ ಹೆಸರು ಯೋಹಾನ್ ಕಾರ್ಲ್ ಫ್ರೀಡರಿಚ್ ಗೌಸ್. ಈತ ಜರ್ಮನಿಯ ಮಹಾ ಗಣಿತ ವಿದ್ವಾಂಸ. ಇ. ಟಿ. ಬೆಲ್ ಎಂಬ ಗಣಿತ ಚರಿತ್ರಕಾರ ಗೌಸನನ್ನು 'The Prince of Mathematicians' ಎಂದು ಸಾರ್ಥಕವಾಗಿ ಗೌರವಿಸಿದ್ದಾನೆ

ಉಪಯೋಗಿಸಿ ಕೆಳಗಿನ ಎರಡು ಏಕಕಾಲಿಕ ಸಮೀಕರಣಗಳನ್ನು ಪಡೆಯುತ್ತೇವೆ.

$$\sum_{i=1}^{n} (Y_i - \widehat{a} - bX_i) = O \qquad \ldots \qquad 4.8$$

---

1 $\frac{\delta}{\delta \widehat{a}} f(\widehat{a}, \widehat{b}) = 0, \qquad \frac{\delta}{\delta \widehat{b}} f(\widehat{a}, \widehat{b}) = 0$ ಮತ್ತು

$\frac{\delta^2}{\delta \widehat{b^2}} f(\widehat{a}, \widehat{b}) > 0, \qquad \frac{\delta^2}{\delta \widehat{b^2}} f(\widehat{a}, \widehat{b}) > 0$ ಆದರೆ ಮತ್ತು

ಆದರೆ ಮಾತ್ರ $\widehat{a}, \widehat{b}$ ಗಳ ಅಂಥ ಮೌಲ್ಯಗಳಿಗೆ $f(a, b)$ ಕನಿಷ್ಠತಮವಾಗಿರುವುದೆಂದು ಅನಂತ ಸೂಕ್ಷ್ಮಗಳ ಕಲನ ಶಾಸ್ತ್ರ (Infinitesimal Calculus) ದ ಒಂದು ಮೂಲತತ್ವ ತಿಳಿಸುತ್ತದೆ. ಇಲ್ಲಿ $\frac{\delta}{\delta \widehat{a}} f(\widehat{a}, \widehat{b}), \ \frac{\delta}{\delta \widehat{b}} f(\widehat{a}, \widehat{b})$ ಗಳು ಅನುಕ್ರಮವಾಗಿ $\widehat{a}, \widehat{b}$ ಗಳನ್ನು ಕುರಿತು $f(\widehat{a}, \widehat{b})$ ಯ ಪ್ರಥಮ ದರ್ಜೆಯ ಆಂಶಿಕ ಅವಕಲನಾಂಕಗಳು (first order partial differential coefficients). $\frac{\delta^2}{\delta \widehat{a^2}} f(\widehat{a}, \widehat{b}), \ \frac{\delta^2}{\delta \widehat{b^2}} f(\widehat{a}, \widehat{b})$ ಗಳು ಎರಡನೆಯ ದರ್ಜೆಯ ಅವಕಲನಾಂಕಗಳು.

$$f(\widehat{a}, \widehat{b}) = \sum_{i=1}^{n} (Y_i - \widehat{Y}_i)^2$$

$$= \sum_{i=1}^{n} (Y_i - \widehat{a} - \widehat{b} X_i)^2$$

$$\therefore \ \frac{\delta}{\delta \widehat{a}} f(\widehat{a}, \widehat{b}) = -2 \sum_{i=1}^{n} (Y_i - \widehat{a} - \widehat{b} X_i) \qquad \ldots \qquad (i)$$

$$\frac{\delta}{\delta \widehat{b}} f(\widehat{a}, \widehat{b}) = -2 \sum_{i=1}^{n} X_i (Y_i - \widehat{a} - \widehat{b} X_i) \qquad \ldots \qquad (ii)$$

$$\frac{\delta^2}{\delta \widehat{b^2}} f(\widehat{a}, \widehat{b}) = (-2)(-n) = 2n > 0 \qquad \ldots \qquad (iii)$$

$$\frac{\delta^2}{\delta \widehat{b^2}} f(\widehat{a}, \widehat{b}) = (-2) \sum_{i=1}^{n} (-X_i^2) = 2 \sum_{i=1}^{n} X_i^2 > 0 \ldots \ (iv)$$

$\frac{\delta}{\delta \hat{b}} f(\hat{a}, \hat{b}) = 0, \quad \frac{\delta}{\delta \hat{b}} f(\hat{a}, \hat{b}) = 0$ ಎಂದು ಬರೆದಾಗ ರೇಖೀಯ ಸಂಬಂಧದ ಪ್ರಸಾಮಾನ್ಯ ಸಮೀಕರಣಗಳು ದೊರೆಯುತ್ತವೆ

$$\sum_{i=1}^{n} X_i (Y_i - \hat{a} - \hat{b} X_i) = O$$

ಈ ಸಮೀಕರಣಗಳನ್ನು ಸುಲಭರೂಪಕ್ಕೆ ತಂದಾಗ,

$$\sum_{i=1}^{n} Y_i = n\hat{a} + \hat{b} \sum_{i=1}^{n} X_i \qquad \ldots \quad 4.9$$

$$\sum_{i=1}^{n} X_i Y_i = \hat{a} \sum_{i=1}^{n} X_i + \hat{b} \sum_{i=1}^{n} X_i^2$$

ಎಂದು ದೊರೆಯುತ್ತದೆ. ಈ ಎರಡು ಸಮೀಕರಣಗಳಿಗೆ ರೇಖೀಯ ಸಂಬಂಧದ ಪ್ರಸಾಮಾನ್ಯ ಸಮೀಕರಣಗಳು (normal equations) ಎಂದು ಹೆಸರು. n, $\Sigma Y_i$, $\Sigma X_i$, $\Sigma X_i Y_i$ ಮತ್ತು $\Sigma X_i^2$ ಗಳ ಮೌಲ್ಯಗಳನ್ನು ದತ್ತಾಂಶ ಗಳಿಂದ ಪಡೆದು (4.9) ರಲ್ಲಿ ಆದೇಶಿಸಿದಾಗ ಎರಡು ಅವ್ಯಕ್ತಗಳು ($\hat{a}$ ಮತ್ತು $\hat{b}$) ಇರುವ ಎರಡು ಏಕಕಾಲಿಕ ಸಮೀಕರಣಗಳು ದೊರೆಯುತ್ತವೆ. ಅವನ್ನು ಬಿಡಿಸಿದಾಗ $\hat{a}$, $\hat{b}$ ಗಳ ಮೌಲ್ಯಗಳು ದೊರೆಯುತ್ತವೆ. ಇವು a, b ಗಳ ಕನಿಷ್ಠತಮವರ್ಗ ಅಂದಾಜು ಮೌಲ್ಯಗಳು (least-squares estimates). ಈಗ

$$\hat{Y} = \hat{a} + \hat{b}X \qquad \ldots \quad 4.10$$

ಎಂಬುದು Y, X ನ ಮೇಲೆ ಹಿಂಚಲಿಸುವ ರೇಖೆಯ ಅಂದಾಜು.

(4.9) ರಲ್ಲಿರುವ ಸಮೀಕರಣಗಳನ್ನು ಬಿಡಿಸುವ ಇನ್ನೊಂದು ರೀತಿ ಹೀಗಿದೆ: ಅದರಲ್ಲಿರುವ ಮೊದಲನೆ ಸಮೀಕರಣದ ಎರಡೂ ಬದಿಗಳನ್ನು n ನಿಂದ ಭಾಗಿಸಿದಾಗ

$$\frac{1}{n} \sum_{i=1}^{n} Y_i = \hat{a} + \hat{b} \frac{1}{n} \sum_{i=1}^{n} X_i$$ ಎಂದಾಗುತ್ತದೆ.

ಅಂದರೆ $\bar{Y} = \hat{a} + \hat{b}\bar{X}$ … 4.11

ಹೀಗಾಗಿ, ಬಿಂದು ($\bar{X}$, $\bar{Y}$) ಸರಳರೇಖೆ $\hat{Y} = \hat{a} + \hat{b}X$ ನ ಮೇಲೆ ಇದೆಯೆಂದಾಯಿತು. ಅಂದರೆ, ಕನಿಷ್ಠತಮ-ವರ್ಗ ತತ್ತ್ವವನ್ನು ಉಪಯೋಗಿಸಿ ಪಡೆದ ಅಂದಾಜು ಗೆರೆ ಪ್ರತಿಚಯದ ಸರಾಸರಿ ಬಿಂದು ($\bar{X}$, $\bar{Y}$) ನ ಮೂಲಕ ಹಾದುಹೋಗುತ್ತದೆ. (4.11) ನ್ನು (4.4) ರಿಂದ ಕಳೆದಾಗ

$$(\hat{Y} - y) = \hat{b}(x - \bar{X})$$

ಎಂದು ಸಿಗುತ್ತದೆ.

$(X_i - \overline{X}) = x_i$, $(Y_i - \overline{Y}) = y_i$, $(\widehat{Y}_i - \overline{Y}) = \widehat{y}_i$ ಎಂದು ಸೂಚಿಸಿದರೆ, ಆಗ ಕನಿಷ್ಠತಮ-ವರ್ಗ ರೇಖೆಯ ಸಮೀಕರಣ

$$\widehat{y} = \widehat{b}\,x \qquad \ldots \qquad 4.12$$

ಎಂದಾಗುತ್ತದೆ. ಚಿತ್ರ (4.1) ರಲ್ಲಿ ಶೇಷ $e_i$ ಯನ್ನು

$$e_i = Y_i - \widehat{Y}_i = (Y_i - \overline{Y}) - (Y_i - \overline{Y}) = (Y_i - \widehat{Y}_i)$$

$$= (y_i - \widehat{b}x_i)$$ ಎಂದು ಬರೆಯಬಹುದು.

ಆಗ ಶೇಷಗಳ ವರ್ಗಗಳ ಮೊತ್ತ

$$\sum_{i=1}^{n} e_i^2 = \sum_{i=1}^{n} (y_i - \widehat{b}\,x_i)^2$$ ಎಂದಾಗುತ್ತದೆ.

$\sum_{i=1}^{n} e_i^2$ ವನ್ನು $\widehat{b}$ ಕುರಿತು ಕನಿಷ್ಠತಮಗೊಳಿಸಿದಾಗ[1]

$$\widehat{b} = \frac{\sum_{i=1}^{n} x_i y_i}{\sum_{i=1}^{n} x_i^2} = \frac{\sum_{i=1}^{n} (X_i - \overline{X})(Y_i - \overline{Y})}{\sum_{i-1}^{n} (x_i - \overline{X})^2} \qquad \ldots \qquad 4\cdot13$$

ಬಳಿಕ $\widehat{a}$ ಯ ಮೌಲ್ಯವನ್ನು ಪಡೆಯಲು ಅಂದಾಜು ಗೆರೆ ಪ್ರತಿಚಯದ ಸರಾಸರಿ ಬಿಂದುವಿನ ಮೂಲಕ ಹಾದುಹೋಗುತ್ತದೆ ಎಂಬ ವಿಚಾರವನ್ನು ಉಪಯೋಗಿಸಿಕೊಳ್ಳುತ್ತೇವೆ. ಅಂದರೆ

$$\widehat{a} = \overline{Y} - \widehat{b}\,\overline{X} \qquad \ldots \qquad 4\cdot14$$

---

1 $$\frac{\delta}{\delta b} \sum_{i=1}^{n} (y_i - \widehat{b}x_i)^2 = O$$

$$\Rightarrow -2 \sum_{i=1}^{n} x_i (y_i - \widehat{b}x_i) = O$$

$$\Rightarrow \quad \widehat{b} = \frac{\sum_{i=1}^{n} x_i y_i}{\sum_{i=1}^{n} x_i^2}$$

**ನಿದರ್ಶನ 4–1** ಹಣ್ಣುಗಳ ಸಂಖ್ಯೆ ಕಡಿಮೆ ಇರುವ ಸೇಬಿನ ಮರಗಳ ಬೆಳೆಗೆ ಹುಳಗಳಿಂದ ಹಾವಳಿ ಅತ್ಯಧಿಕವೆಂದು ಊಹಿಸಲಾಗಿದೆ. ಹನ್ನೆರಡು ಮರಗಳನ್ನೊಳಗೊಂಡ ಪ್ರಯೋಗವೊಂದರ ಫಲಿತಾಂಶಗಳು ಕೆಳಗಿವೆ. ಇಲ್ಲಿ X= ಒಂದು ಮರದಲ್ಲಿರುವ ಹಣ್ಣುಗಳ ಸಂಖ್ಯೆ (ಶತಕಗಳಲ್ಲಿ); Y= ಹುಳುಗಳಿದ್ದ ಹಣ್ಣುಗಳು ಶೇಕಡಾ.

**ಕೋಷ್ಟಕ 4–1**

| | | | | | | | | | | | | |
|---|---|---|---|---|---|---|---|---|---|---|---|---|
| X | 15 | 15 | 12 | 26 | 18 | 12 | 8 | 38 | 26 | 19 | 29 | 22 |
| Y | 52 | 46 | 38 | 37 | 37 | 37 | 34 | 25 | 22 | 22 | 20 | 14 |

ಚಿತ್ರ 4.2 ರಲ್ಲಿ ದತ್ತಾಂಶಗಳಿಗೆ ಚದರಿಕೆ ಚಿತ್ರವನ್ನು ಎಳೆಯಲಾಗಿದೆ. ಈ ಸಂದರ್ಭದಲ್ಲಿ ಸರಿಹೊಂದುವ $Y = a + bX + u$ ಎಂಬ ಪ್ರತಿರೂಪವನ್ನು ಪಡೆಯಲು ಅವಶ್ಯವಿರುವ ಲೆಕ್ಕಾಚಾರಗಳನ್ನು ಕೋಷ್ಟಕ 4–2ರಲ್ಲಿ ಕೊಡಲಾಗಿದೆ.

**ಕೋಷ್ಟಕ 4–2**

| X | Y | $X^2$ | $Y^2$ | XY |
|---|---|---|---|---|
| (1) | (2) | (3) | (4) | (5) |
| 15 | 52 | 225 | 2704 | 780 |
| 15 | 46 | 226 | 2116 | 690 |
| 12 | 38 | 144 | 1444 | 456 |
| 26 | 37 | 676 | 1369 | 962 |
| 18 | 37 | 324 | 1369 | 666 |
| 12 | 37 | 144 | 1369 | 444 |
| 8 | 34 | 64 | 1156 | 272 |
| 38 | 25 | 1444 | 625 | 950 |
| 26 | 22 | 676 | 484 | 572 |
| 19 | 22 | 361 | 484 | 418 |
| 29 | 20 | 841 | 400 | 580 |
| 22 | 14 | 484 | 196 | 308 |
| $\Sigma X = 240$ | $\Sigma Y = 384$ | $\Sigma X^2 = 5708$ | $\Sigma Y^2 = 13716$ | $\Sigma XY = 7098$ |

(4.9) ರಲ್ಲಿ ಸೂಕ್ತ ಮೌಲ್ಯಗಳನ್ನು ಆದೇಶಿಸಿದಾಗ ಕೆಳಗಿನ ಎರಡು ಸಮೀಕರಣಗಳು ದೊರೆಯುತ್ತವೆ.

$$384 = 12\hat{a} + 240\hat{b}$$

$$7098 = 240\hat{a} + 5708\hat{b}$$


ಈ ಸಮೀಕರಣಗಳನ್ನು ಬಿಡಿಸಿದಾಗ

$$\hat{b} = -\ 0.641 \qquad \hat{a} = 44.82$$

ಆದ್ದರಿಂದ ಕನಿಷ್ಠತಮ–ವರ್ಗ ರೇಖೆಯ ಅಂದಾಜು

$$\hat{Y} = 44.82 - 0.641\,\hat{X}$$

ಈ ರೇಖೆಯನ್ನೂ ಚಿತ್ರ 4.2 ರಲ್ಲಿ ತೋರಿಸಿದೆ.




ಚಿತ್ರ 4.2 ಚದರಿಕೆ ಚಿತ್ರ ಮತ್ತು Y, X ನ ಮೇಲೆ ಹಿಂಚಲಿಸುವ ರೇಖೆಯ ಅಂದಾಜು
(ಕೋಷ್ಟಕ 4.1 ದತ್ತಾಂಶಗಳು)

## 5 ಕನಿಷ್ಠತಮ-ವರ್ಗ ಅಂದಾಜುಕಾರಿ[1]ಗಳ ವೈಶಿಷ್ಟ್ಯಗಳು

ಅಂದಾಜುಕಾರಿಗಳ ವೈಶಿಷ್ಟ್ಯಗಳನ್ನು ಅರಿಯಲು ಅವುಗಳ ಪದೇ ಪದೇ ಉಪಯೋಗದಿಂದ ದೊರೆಯುವ ಅಂದಾಜುಮೌಲ್ಯಗಳ ನಡೆವಳಿಕೆಯನ್ನು ಅಭ್ಯಸಿಸುವುದು ರೂಢಿ. n ವಸ್ತುಗಳಿರುವ ಹಲವು ಪ್ರತಿಚಯಗಳನ್ನು ಪಡೆಯಲಾಗಿದೆ ಎಂದು ಭಾವಿಸೋಣ. ಪ್ರಾಯೋಗಿಕ ಪರಿಸರದಲ್ಲಿ ಸ್ವತಂತ್ರಚರ X ನ ಮೌಲ್ಯಗಳ ಮೇಲೆ ಪ್ರಯೋಗಕಾರನಿಗೆ ಹತೋಟಿಯಿದೆ ಎಂದು ತಿಳಿಯಬಹುದಾದರೆ, ಈ ಪುನರಾವರ್ತಿತ ಪ್ರತಿಚಯನಗಳಲ್ಲಿ X–ನ ಮೌಲ್ಯಗಳು ಬದಲಾಗುತ್ತಿಲ್ಲ-ಅವು ಸ್ಥಿರೀಕೃತ ಸ್ಥಿರಾಂಕಗಳು (fixed constants) ಎಂದು ಪರಿಗಣಿಸಬಹುದು. u ಪದದ ಏರಿಳಿತಗಳಿಂದಾಗಿ Y ಯ ಮೌಲ್ಯಗಳು ಪ್ರತಿಚಯದಿಂದ ಪ್ರತಿಚಯಕ್ಕೆ ಬದಲಾಗುತ್ತಿರುತ್ತವೆ. $\widehat{a}, \widehat{b}$ ಗಳಿಗೆ ಸೂತ್ರಗಳನ್ನು ಉಪಯೋಗಿಸಿ ಪ್ರತಿಯೊಂದು ಪ್ರತಿಚಯಕ್ಕೆ ಅನುರೂಪವಾಗಿಯೂ $\widehat{a}, \widehat{b}$ ಗಳ ಮೌಲ್ಯಗಳನ್ನು ಪಡೆಯಬಹುದು. ಹೀಗಾಗಿ, ಒಂದೊಂದು ಪ್ರತಿಚಯಕ್ಕೆ ಒಂದೊಂದರಂತೆ $\widehat{a}, \widehat{b}$ ಗಳ ಮೌಲ್ಯಗಳ ಜೊತೆಗಳ ಸರಣಿ ದೊರಕುವುದು. ಈ ರೀತಿ ದೊರಕುವ $\widehat{a}, \widehat{b}$ ಗಳ ಸಂಭಾವ್ಯತಾ ವಿತರಣೆ (probability distribution) ಯನ್ನು ಗಮನಿಸಿದರೆ $\widehat{a}, \widehat{b}$ ಗಳ ಗುಣಧರ್ಮಗಳೇನು ? ಇನ್ನೂ ಸ್ಪಷ್ಟವಾಗಿ, $\widehat{a}, \widehat{b}$ ಗಳ ನಿರೀಕ್ಷಿತ ಮೌಲ್ಯ (expected value) ಮತ್ತು ಚಲನೀಯ (variance) ಗಳೇನು ? ಮತ್ತು ಸಾಧ್ಯವುಳ್ಳ ಇತರ ಅಂದಾಜುಕಾರಿಗಳೊಡನೆ ಹೋಲಿಸಿದಾಗ $\widehat{a}, \widehat{b}$ ಗಳ ಸ್ಥಾನಮಾನಗಳೇನು ? ಈ ಪ್ರಶ್ನೆಗಳಿಗೆ ಉತ್ತರ ಕೆಳಗಿದೆ.

(i) ಕನಿಷ್ಠತಮವರ್ಗ ಅಂದಾಜುಕಾರಿಗಳು Y ಮೌಲ್ಯಗಳ ರೇಖೀಯ ಉತ್ಪನ್ನ (linear function) ಗಳು. ಇದು ಮೊತ್ತಮೊದಲು ಗಮನಿಸಬೇಕಾದ ವಿಚಾರ. ಯಾಕೆಂದರೆ (4.13) ರನ್ನು ಉಪಯೋಗಿಸಿ,

---

1 ಅಂದಾಜುಮಾಡುವ ವಿಧಾನ ಅಥವಾ ಸೂತ್ರಕ್ಕೆ ಅಂದಾಜುಕಾರಿ (estimator) ಎಂದು ಹೆಸರು. ಯಾವುದೇ ಒಂದು ಸಂದರ್ಭದಲ್ಲಿ ಈ ಸೂತ್ರ ನೀಡುವ ಸಂಖ್ಯಾ ಮೌಲ್ಯಕ್ಕೆ ಅಂದಾಜುಮೌಲ್ಯ ಎಂದು ಹೆಸರು

ಉದಾಹರಣೆಗೆ $\widehat{b} = \frac{\Sigma xy}{\Sigma x^2}$ ಎಂಬುದು ಒಂದು ಅಂದಾಜುಕಾರಿ;

$\widehat{b} = -0.641$ ಒಂದು ಅಂದಾಜುಮೌಲ್ಯ

$$\hat{b} = \frac{\Sigma x_i y_i}{\Sigma x_i^2}$$

$$= \frac{\Sigma x_i (Y_i - \overline{Y})}{\Sigma x_i^2}$$

$$= \frac{\Sigma x_i Y_i}{\Sigma x_i^2} - \frac{\overline{Y} \Sigma x_i}{\Sigma x_i^2} \quad \ldots \quad 5.1$$

$$= \Sigma w_i Y_i$$

$\because \quad \Sigma x_i = \Sigma (X_i - \overline{X}) = \Sigma X_i - n \overline{X} = 0$

ಇಲ್ಲಿ $w_i = \dfrac{X_i}{\Sigma x_i^2}$ ... 5.2

ಹೀಗಾಗಿ, $\hat{b}$ ಎಂಬುದು $Y_i$ಗಳ ಒಂದು ರೇಖೀಯ ಉತ್ಪನ್ನ. ಸಮೀಕರಣ (4.14)ನ್ನು ಪುನರ್ರಚಿಸಿದಾಗ, $\hat{a}$ ಕೂಡ $Y_i$ ಗಳ ರೇಖೀಯ ಉತ್ಪನ್ನ ಎಂದು ದೊರೆಯುತ್ತದೆ :

ನಿಜವಾಗಿ $\hat{a} = \Sigma \left( \dfrac{1}{n} - \overline{X} w_i \right) Y_i$ ... 5.3

ಎಂದು ತೋರಿಸಬಹುದು.

(ii) ಕನಿಷ್ಠತಮವರ್ಗ ಅಂದಾಜುಕಾರಿಗಳ ನಿರೀಕ್ಷಿತಮೌಲ್ಯ ಅನುರೂಪವಾದ ಪ್ರಾಚಲದ ಮೌಲ್ಯಕ್ಕೆ ಸಮವಾಗಿದೆ. $\hat{b}$ ನ ನಿರೀಕ್ಷಿತಮೌಲ್ಯವನ್ನು ಪಡೆಯಲು (4.1a) ಯಿಂದ $Y_i$ ಯ ಸ್ವರೂಪವನ್ನು ಆದೇಶಿಸಿಕೊಂಡರಾಯಿತು.

$Y_i = a + b X_i + u_i,$ ... 4.1a ಯಿಂದ

ಆದ್ದರಿಂದ, $\hat{b} = \Sigma w_i Y_i$ ... 5.1 ರಿಂದ

$$= \Sigma w_i (a + bX_i + u_i)$$

$$= a \Sigma w_i + b \Sigma w_i X_i + \Sigma w_i u_i$$

$$= b + \Sigma w_i u_i \quad \ldots \quad 5.4$$

[$\Sigma w_i = 0$ ಮತ್ತು $\Sigma w_i X_i = 1$ ಆದ್ದರಿಂದ.]

ಹೀಗಾಗಿ, $E(\hat{b}) = b + \Sigma w_i E(u_i)$

$$= b \quad \ldots \quad 5.5$$

$\because$ (4.1b) ಯಿಂದ $E(u_i) = 0, i = 1, 2, \ldots, n.$

$X_i$ ಗಳು ಸ್ಥಿರೀಕೃತ ನಿಶ್ಚಲಗಳು ಎಂದು ತಿಳಿದುದರಿಂದ, $w_i$ ಗಳೂ ನಿಶ್ಚಲಗಳಾದುವು. ಹೀಗಾಗಿ, ನಿರೀಕ್ಷಿತ ಮೌಲ್ಯಗಳನ್ನು ಪಡೆಯುವ ವ್ಯವಹಾರದಲ್ಲಿ Y

ಮತ್ತು u ಗಳು ಮಾತ್ರ ಚರಗಳು. (5.5) ಒಂದು ಬಹಳ ಉಪಯುಕ್ತ ಫಲಿತಾಂಶ. ಅದರ ಪ್ರಕಾರ ಪುನರಾವರ್ತಿತ ಪ್ರತಿಚಯನಗಳಲ್ಲಿ ದೊರೆಯುವ $\widehat{b}$ ಗಳ ನಿರೀಕ್ಷಿತ ಮೌಲ್ಯ ಅವ್ಯಕ್ತ ಪ್ರಾಚಲ b ಗೆ ಸಮವಾಗಿರುವುದು. $\widehat{b}$ ಎಂಬುದು b ಯ ಒಂದು ರೇಖೀಯ ಅನಭಿನತ ಅಂದಾಜುಕಾರಿ (Linear unbiased estimator) ಎಂದು ಹೇಳುತ್ತೇವೆ. ಇದೇ ರೀತಿ

$$E(\widehat{a}) = a \qquad \ldots \qquad 5.6$$

ಎಂದೂ ತೋರಿಸಬಹುದು. ಅಂದರೆ $\widehat{a}$ ಎಂಬುದು a ಯ ಒಂದು ರೇಖೀಯ ಅನಭಿನತ ಅಂದಾಜುಕಾರಿ.

(iii) ಸಾಧ್ಯವುಳ್ಳ ಎಲ್ಲ ಸರಳ ಅನಭಿನತ ಅಂದಾಜುಕಾರಿಗಳ ಪೈಕಿ ಕನಿಷ್ಠತಮವರ್ಗ ಅಂದಾಜುಕಾರಿಗಳ ಚಲನೀಯಗಳೇ ಅತ್ಯಂತ ಕಡಿಮೆ ಎಂಬುದು ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶ. ಯಾವುದೇ ಒಂದು ಅಂದಾಜುಕಾರಿಯ ಚಲನೀಯ ಕಡಿಮೆ ಇದ್ದಷ್ಟು ಹಿತ. ಸ್ಥೂಲವಾಗಿ ಹೇಳುವುದಾದರೆ, ಈ ಚಲನೀಯ ಕಡಿಮೆಯಾದಂತೆ ಅಂದಾಜುಕಾರಿ ಕೊಡುವ ಮೌಲ್ಯ ಅಂದಾಜು ಮಾಡಲ್ಪಡುವ ಪ್ರಾಚಲದ ನಿಜಮೌಲ್ಯದಿಂದ ದೂರವಿರುವ ಸಂಭಾವ್ಯತೆ ಕಡಿಮೆಯಾಗುತ್ತದೆ. $\widehat{a}$, $\widehat{b}$ ಗಳ ಚಲನೀಯಗಳು ಕೆಳಗಿನಂತಿವೆ.

$$\text{ಚಲನೀಯ} \; (\widehat{b}) = \frac{\sigma_u^2}{\Sigma x_i^2} \qquad \ldots \qquad 5.7$$

$$\text{ಚಲನೀಯ} \; (\widehat{a}) = \left[\frac{\Sigma X_i^2}{n\Sigma x_i^2}\right] \sigma_u^2 \qquad \ldots \qquad 5.8$$

$\sigma_u^2$ ತಿಳಿದಿರದಿದ್ದರೆ, ಅದನ್ನು $\widehat{\sigma_u}^2 = \frac{1}{(n-2)} \Sigma e_i^2$ ಎಂದು ಅಂದಾಜು ಮಾಡಬಹುದು. $E(\widehat{\sigma_u}^2) = \sigma_u^2$ ಎಂದೂ ತೋರಿಸಬಹುದು.

## 6 Y ಯ ಮೇಲೆ X ನ ಹಿಂಚಲನೆ

ಮೇಲಿನ ವಿವರಣೆಗಳಲ್ಲಿ X ಒಂದು ಸ್ವತಂತ್ರಚರ, Y ಒಂದು ಅವಲಂಬಿಚರ ಎಂದು ಪರಿಗಣಿಸಲಾಯಿತು. X ಮತ್ತು Y ಗಳ ನಡುವಿನ ಸಂಬಂಧದಲ್ಲಿ, X ಸ್ವತಂತ್ರಚರ, X ಅವಲಂಬಿಚರ ಎನ್ನುವಂತಿದ್ದರೆ, ಆಗ


$$X = a' + b'Y + u' \qquad \ldots \qquad 6.1$$

ಎಂದು ಬರೆದು, a′, b′ ಗಳನ್ನು ಅಂದಾಜುಮಾಡಬಹುದು. a′, b′ ಗಳ ಕನಿಷ್ಠತಮವರ್ಗ ಅಂದಾಜುಕಾರಿಗಳು

$$\widehat{b'} = \frac{\Sigma x_i y_i}{\Sigma \bar{Y}_i^2} = \frac{\Sigma(X_i - \bar{X})(Y_i - \bar{Y})}{\Sigma (Y_i - Y)^2} \qquad \ldots \qquad 6.2$$

$$\widehat{a'} = \bar{X} - \widehat{b'}\,\bar{Y} \qquad \ldots \qquad 6.3$$

ಎಂದಾಗುತ್ತದೆ. Xನ ಮೇಲೆ Y ಯ ಹಿಂಚಲನೆಯನ್ನು ಪಡೆಯಲು ಚದರಿಕೆಚಿತ್ರದಲ್ಲಿ ಅಂದಾಜುರೇಖೆಯಿಂದ ದತ್ತಬಿಂದುಗಳಿಗಿರುವ ಲಂಬದೂರಗಳ (Y–ಅಕ್ಷಕ್ಕೆ ಸಮಾಂತರ ದೂರಗಳ) ವರ್ಗಗಳ ಮೊತ್ತವನ್ನು ಕನಿಷ್ಠತಮಗೊಳಿಸಲಾಯಿತು (ಚಿತ್ರ 4.1). Yಯ ಮೇಲೆ Xನ ಹಿಂಚಲನೆಯನ್ನು ಪಡೆಯಲು ಅಂದಾಜುರೇಖೆಯಿಂದ ದತ್ತಬಿಂದುಗಳಿಗಿರುವ ಕ್ಷಿತಿಜೀಯ ದೂರ (horizontal distance)ಗಳ ವರ್ಗಗಳ ಮೊತ್ತವನ್ನು ಕನಿಷ್ಠತಮಗೊಳಿಸಲಾಗುವುದು (ಚಿತ್ರ 6.1).




ಚಿತ್ರ 6.1

ಇಲ್ಲಿ $e_i' = (X_i - \widehat{X}_i)$ ... 6.4

ಮತ್ತು $\Sigma e_i'^2$ ನ್ನು ಕನಿಷ್ಠತಮಗೊಳಿಸಲಾಗಿದೆ. ಕೋಷ್ಟಕ (4.1) ರಲ್ಲಿರುವ ದತ್ತಾಂಶಗಳಿಗೆ,

$$\widehat{b'} = -0.4076, \qquad \widehat{a'} = 33.04$$

**ಟಿಪ್ಪಣಿ :** ದತ್ತ ಸಂದರ್ಭವೊಂದರಲ್ಲಿ ಸ್ವತಂತ್ರಚರ ಯಾವುದು ಅವಲಂಬಿಚರ ಯಾವುದು ಎನ್ನುವುದು ಸ್ಪಷ್ಟವಿದ್ದರೆ, ಆಗ ಸ್ವತಂತ್ರಚರಕ್ಕೆ X ಎಂದೂ, ಅವಲಂಬಿಚರಕ್ಕೆ Y ಎಂದೂ ನಾಮಕರಣ ಮಾಡಬಹುದಾದ್ದರಿಂದ, Xನ ಮೇಲೆ Y ಯ ಹಿಂಚಲನೆಯನ್ನು ಪಡೆದರೆ ಸಾಕು. ಎರಡೂ ಹಿಂಚಲನೆಗಳನ್ನು ಪಡೆಯುವ ಶ್ರಮವಿಲ್ಲ.

## 7 ಸಹಸಂಬಂಧದ ಗುಣಾಂಕ

X ಮತ್ತು Y ಗಳ ನಡುವಿನ ರೇಖೀಯ ಸಂಬಂಧ ಎಷ್ಟು ಗಹನವಾದದ್ದು, ಬಲವಾದದ್ದು ಎಂಬ ವಿಚಾರವನ್ನು ತಿಳಿಯುವ ಪ್ರಯತ್ನ ನಮ್ಮನ್ನು ಸಹಸಂಬಂಧದ ಪರಿಕಲ್ಪನೆಯೆಡೆಗೆ ಒಯ್ಯುತ್ತದೆ. ದತ್ತ X ನ ಮೌಲ್ಯ $\bar{X}$ ಗಿಂತ ಜಾಸ್ತಿ ಇರುವಾಗ, ಅನುರೂಪವಾದ Y ಯ ಮೌಲ್ಯ $\bar{Y}$ ಗಿಂತ ಜಾಸ್ತಿ ಇರುವ ಹಾಗೂ ದತ್ತ X ನ ಮೌಲ್ಯ $\bar{X}$ ಗಿಂತ ಕಡಿಮೆ ಇರುವಾಗ ಅನುರೂಪವಾದ Y ಯ ಮೌಲ್ಯ $\bar{Y}$ ಗಿಂತ ಕಡಿಮೆ ಇರುವ ಪ್ರವೃತ್ತಿ ತೋರಿಬರುತ್ತಿದ್ದರೆ, ಆಗ X ಮತ್ತು Y ಗಳ ನಡುವೆ ಧನ ಸಹಸಂಬಂಧ (positive correlation) ಇದೆ ಎನ್ನುತ್ತೇವೆ. ದತ್ತ X ನ ಮೌಲ್ಯ $\bar{X}$ ಗಿಂತ ಜಾಸ್ತಿ ಇರುವಾಗ, ಅನುರೂಪವಾದ Y ಯ ಮೌಲ್ಯ $\bar{Y}$ ಗಿಂತ ಕಡಿಮೆ ಇರುವ ಹಾಗೂ ದತ್ತ X ನ ಮೌಲ್ಯ $\bar{X}$ ಗಿಂತ ಕಡಿಮೆ ಇರುವಾಗ ಅನುರೂಪವಾದ Y ಯ ಮೌಲ್ಯ $\bar{Y}$ ಗಿಂತ ಜಾಸ್ತಿ ಇರುವ ಪ್ರವೃತ್ತಿ ತೋರಿಬರುತ್ತಿದ್ದರೆ, ಆಗ X ಮತ್ತು Y ಗಳ ನಡುವೆ ಋಣ ಸಹಸಂಬಂಧ (negative correlation) ಇದೆ ಎನ್ನುತ್ತೇವೆ. ಈ ವ್ಯಾಖ್ಯೆ ಎರಡು ಅಭಿಗೃಹೀತಗಳ ಮೇಲೆ ಆಧಾರಿತವಾಗಿದೆ : (i) ದೊರಕಿರುವ $(X_i, Y_i)$ ಜೊತೆಗಳು ಸಾಕಷ್ಟು ದೊಡ್ಡ ಸಮಷ್ಟಿಯೊಂದರಿಂದ ಆರಿಸಲ್ಪಟ್ಟ ಯಾದೃಚ್ಛಿಕ ಪ್ರತಿಚಯಗಳು. (ii) ಆ ಸಮಷ್ಟಿಯಲ್ಲಿ Y, X ನ ಮೇಲೆ ಅವಲಂಬಿಸಿರುವ ಒಂದು ಯಾದೃಚ್ಛಿಕಚರ. ಆರಿಸಲ್ಪಟ್ಟ ಪ್ರತಿಚಯ ಸಾಕಷ್ಟು ದೊಡ್ಡದಿರುವಾಗ, ದೊರೆಯುವ Y ಮೌಲ್ಯಗಳು ಸಮಷ್ಟಿಯ ಸಂಭಾವ್ಯತಾ ವಿತರಣೆಯ ರೂಪರೇಖೆಗಳನ್ನು ತೃಪ್ತಿಕರವಾಗಿ ತಿಳಿಸುತ್ತವೆ.

ಚರಗಳು ಸಂಬಂಧಿತವಾಗಿರುವಾಗ ಚದರಿಕೆ ಚಿತ್ರದಲ್ಲಿರುವ ಬಿಂದುಗಳು ಹೆಚ್ಚು ಕಡಿಮೆ ಖಚಿತವಾದ ಪ್ರವೃತ್ತಿಯುಳ್ಳ ಪಟ್ಟಿ (band) ಯೊಂದರೊಳಗೆ ಹೊಂದಿಕೊಳ್ಳುತ್ತವೆ. ಈ ಪ್ರವೃತ್ತಿ ರೇಖೀಯ ಎಂದು ತಿಳಿದು ಆ ತಳಹದಿಯ ಮೇಲೆ ರಚಿತವಾದ ಸಿದ್ಧಾಂತಕ್ಕೆ ರೇಖೀಯ ಸಹಸಂಬಂಧ ಸಿದ್ಧಾಂತ ಎಂದು ಹೆಸರು. ಚಿತ್ರ (7.1) ರಲ್ಲಿ $x$ ಮತ್ತು $y$ ಅಕ್ಷಗಳ ಮೂಲಬಿಂದುವನ್ನು $(\bar{X}, \bar{Y})$ ನಲ್ಲಿ ತೆಗೆದುಕೊಳ್ಳಲಾಗಿದೆ. $x = (X - \bar{X})$, $y = (Y - \bar{Y})$.




ಚಿತ್ರ 7.1

ಚದರಿಕೆ ಚಿತ್ರದಲ್ಲಿ ಬಿಂದುಗಳು $xy$–ಸಮತಲದ ನಾಲ್ಕು ಖಂಡಗಳಲ್ಲೂ ವ್ಯಾಪಿಸಿರುವುದನ್ನು ಗಮನಿಸಿ. ಈ ನಾಲ್ಕು ಖಂಡಗಳಲ್ಲಿ $x, y$ ನಿರ್ದೇಶಕಗಳ ಚಿಹ್ನೆಗಳು ಕೆಳಗಿನಂತಿವೆ :

ಖಂಡ I ರಲ್ಲಿ $x$ ಮತ್ತು $y$ ಎರಡೂ ಧನವಾಗಿರುತ್ತವೆ.

ಖಂಡ II ರಲ್ಲಿ $x$ ಋಣ, ಆದರೆ $y$ ಧನವಾಗಿರುತ್ತದೆ.

ಖಂಡ III ರಲ್ಲಿ $x$ ಮತ್ತು $y$ ಎರಡೂ ಋಣವಾಗಿರುತ್ತವೆ.

ಖಂಡ IV ರಲ್ಲಿ $x$ ಧನ, ಆದರೆ $y$ ಋಣವಾಗಿರುತ್ತದೆ.

ಹೀಗಾಗಿ, ಖಂಡ I ಅಥವಾ ಖಂಡ III ರಲ್ಲಿ ಇರುವ ಎಲ್ಲ ಬಿಂದುಗಳಿಗೂ $xy$ ಗುಣಲಬ್ಧ ಧನವಾಗಿರುವುದು ; ಖಂಡ II ಅಥವಾ ಖಂಡ IV ರಲ್ಲಿರುವ ಎಲ್ಲ ಬಿಂದುಗಳಿಗೂ ಅದು ಋಣವಾಗಿರುವುದು. ಇರುವ ನಾಲ್ಕು ಖಂಡಗಳಲ್ಲಿ ಬಿಂದುಗಳ ಹರಡಿಕೆಯನ್ನು ಇಂಥ ಎಲ್ಲ ಗುಣಲಬ್ಧಗಳ ಮೊತ್ತ ವಿವರಿಸುತ್ತದೆ ಎಂದು ಪರಿಗಣಿಸಬಹುದು. ಈ ಮೊತ್ತ ಧನವಾಗಿರುವಾಗ, ಧನ ಗುಣಲಬ್ಧಗಳದೇ ಮೇಲುಗೈಯಾದುದರಿಂದ, ಬಿಂದುಗಳ ಪ್ರವೃತ್ತಿ ಖಂಡ III ಮತ್ತು I ರ ಮೂಲಕವಿರುವುದು ; ಅದು ಋಣವಾಗಿರುವಾಗ, ಋಣ ಗುಣಲಬ್ಧಗಳದೇ ಮೇಲುಗೈಯಾದುದರಿಂದ, ಬಿಂದುಗಳ ಪ್ರವೃತ್ತಿ ಖಂಡ II ಮತ್ತು IV ರ ಮೂಲಕವಿರುವುದು. ಈ ಮೊತ್ತ ಸೊನ್ನೆಯಾಗಿದ್ದರೆ, ಆಗ ಬಿಂದುಗಳಲ್ಲಿ ಖಚಿತ ಪ್ರವೃತ್ತಿಯಿಲ್ಲ ; ಅವು ನಾಲ್ಕು ಖಂಡಗಳಲ್ಲೂ ಏಕಪ್ರಕಾರವಾಗಿ ಹರಡಿವೆ. ಹೀಗಾಗಿ, ಋಣ ಮತ್ತು ಧನ ಗುಣಲಬ್ಧಗಳ ಮೊತ್ತಗಳು ಒಂದನ್ನೊಂದು ಸಮದೂಗುತ್ತವೆ. ಈ ಕಾರಣಕ್ಕಾಗಿ, ಪ್ರತಿಚಯದಲ್ಲಿರುವ ಸಹಸಂಬಂಧದ ಸಹಜಮಾನವಾಗಿ $xy$ ಗುಣಲಬ್ಧಗಳ ಮೊತ್ತವನ್ನು (ಅಂದರೆ $\Sigma xy$ ಯನ್ನು) ಉಪಯೋಗಿಸಬಹುದು. ಆದರೆ ಈ ಮಾನದಲ್ಲಿ ಎರಡು ಕೊರತೆಗಳಿವೆ :

(i) ಪ್ರತಿಚಯದಲ್ಲಿರುವ ಮೌಲ್ಯಗಳ ಸಂಖ್ಯೆ ಹೆಚ್ಚಿರುವಾಗ $\Sigma xy$ ಗಾತ್ರದಲ್ಲಿ ದೊಡ್ಡದಾಗಿರಬಹುದು.

(ii) X ಮತ್ತು Y ಗಳ ಅಳತೆಯ ಮಾನಗಳು $\Sigma xy$ ಯ ಮೌಲ್ಯದ ಮೇಲೆ ಅನಿಶ್ಚಿತ ಪರಿಣಾಮ ಬೀರುತ್ತವೆ.

ಮೊದಲನೆಯ ಕೊರತೆಯನ್ನು ನಿವಾರಿಸಲು $\Sigma xy$ ಗೆ n ನಿಂದ ಭಾಗಿಸುತ್ತೇವೆ; ದೊರೆಯುವ ಸರಾಸರಿ $\left(\frac{1}{n}\Sigma xy\right)$ ಮಿತವಾದ ಗಾತ್ರದ್ದಾಗಿರಬಹುದು. ಎರಡನೆಯ ಕೊರತೆಯನ್ನು ನಿವಾರಿಸಲು $\frac{1}{n}\Sigma xy$ ಗೆ ಪ್ರತಿಚಯದಲ್ಲಿ ಕಂಡುಬಂದ X ಮತ್ತು Y ಗಳ ಶಿಷ್ಟ ವಿಚಲನೆಗಳಿಂದ (standard diviations $S_x$ and $S_y$) ಭಾಗಿಸು

ತ್ತೇವೆ. ದೊರಕುವ ಈ ಮಾನವನ್ನು ಸಾರ್ವತ್ರಿಕವಾಗಿ r ಎಂದು ಸೂಚಿಸುತ್ತೇವೆ. ಸೂತ್ರರೂಪದಲ್ಲಿ.

$$r = \frac{1}{n} \Sigma \left(\frac{x_i}{S_x}\right)\left(\frac{y_i}{S_y}\right)$$

$$= \frac{1}{n} \Sigma \left(\frac{X_i - \overline{X}}{S_x}\right)\left(\frac{Y_i - \overline{Y}}{S_y}\right) \quad \ldots \quad 7.1$$

ಇಲ್ಲಿ $S_x^2 = \frac{1}{n} \Sigma (X_i - \overline{X})^2$ ... 7.2

$$S_y^2 = \frac{1}{n} \Sigma (Y_i - \overline{Y})^2$$

ಆಚರಣೆಯಲ್ಲಿ ಉಪಯೋಗಿಸಿಕೊಳ್ಳಲು r ನ ಕೆಳಗಿನ ರೂಪಗಳು ಬಹಳ ಅನುಕೂಲ ವಾಗಿವೆ.

$$r = \frac{\Sigma (X_i - \overline{X})(Y_i - \overline{Y})}{\left[\Sigma(X_i - \overline{X})^2 \, \Sigma(Y_i - \overline{Y})^2\right]^{\frac{1}{2}}} = \frac{\Sigma x_i y_i}{\left[\Sigma x_i^2 \cdot \Sigma y_i^2\right]^{\frac{1}{2}}} \quad \ldots \quad 7.3$$

ಗುಣಾಂಕ r ನ್ನು ಪಿಯರ್‌ಸನ್ನರ (Karl Pearson) ಸಹಸಂಬಂಧದ ಗುಣಾಂಕ ಎನ್ನುವುದಿದೆ. r ನ ಮೌಲ್ಯ −1 ಮತ್ತು +1 ಗಳ ನಡುವೆ ಇರುತ್ತದೆಂದು ತೋರಿಸಬಹುದು.

(7.3) ನ್ನು ಪುನರ್ರಚಿಸಿದಾಗ

$$r = \frac{n(\Sigma XY) - (\Sigma X)(\Sigma Y)}{\left[n(\Sigma X^2) - (\Sigma X)^2\right]^{\frac{1}{2}} \left[n(\Sigma Y^2) - (\Sigma Y)^2\right]^{\frac{1}{2}}} \quad \ldots \quad 7.4$$

ಎಂದು ದೊರೆಯುತ್ತದೆ. ಕೋಷ್ಟಕ 4_1 ರ ದತ್ತಾಂಶಗಳಿಗೆ ಈ ಸೂತ್ರವನ್ನು ಉಪಯೋಗಿಸಿದಾಗ,

$$r = \frac{12(7098) - (240)(384)}{\left[12(5708) - (240)^2\right]^{\frac{1}{2}} \left[12(13716) - (384)^2\right]^{\frac{1}{2}}}$$

$= -0.51$ (ಸಂಕ್ಷೇಪಿಸಿದಾಗ) ಎಂದು ಸಿಗುತ್ತದೆ.

**8 ಹಿಂಚಲನೆಯ ಮತ್ತು ಸಹಸಂಬಂಧದ ಗುಣಾಂಕಗಳ ಬಾಂಧವ್ಯ**

ಫಲಿತಾಂಶ (4.13), (6.2) ಮತ್ತು (7.3) ಗಳನ್ನುಪಯೋಗಿಸಿ

$$\widehat{b\,b'} = r^2 \quad \ldots \quad 8.1$$

ಎಂದು ತಾಳೆನೋಡಬಹುದು. ಅದೂ ಅಲ್ಲದೆ $\Sigma x_i y_i$ ಧನವಾಗಿರುವಾಗ $\widehat{b}, \widehat{b'}$ ಮತ್ತು r ಇವು ಮೂರೂ ಧನವಾಗಿರುತ್ತವೆ. $\Sigma x_i y_i$ ಸೊನ್ನೆಯಾಗಿರುವಾಗ ಮೂರೂ ಸೊನ್ನೆಯಾಗಿರುತ್ತವೆ ಮತ್ತು $\Sigma x_i y_i$ ಋಣವಾಗಿರುವಾಗ ಮೂರೂ ಋಣವಾಗಿರುತ್ತವೆ. ಅಂದರೆ, $\widehat{b}, \widehat{b'}$ ಮತ್ತು r ಗಳ ಚಿಹ್ನೆಗಳೆಲ್ಲ ಒಂದೇ. ಸ್ನೆಡೆಕರ್ (Snedecor) ಅವರು ಹೇಳಿರುವ ಕೆಳಗಿನ ಮಾತುಗಳಿಂದ ಹಿಂಚಲನೆ ಮತ್ತು ಸಹಸಂಬಂಧಗಳ ನಡುವಿನ ಸಾಮ್ಯ ಮತ್ತು ವ್ಯತ್ಯಾಸಗಳು ಸ್ಪಷ್ಟವಾಗುತ್ತವೆ.

"ಹಿಂಚಲನೆಯ ಎರಡು ಗುಣಾಂಕಗಳ ಜ್ಯಾಮಿತೀಯ ಮಧ್ಯಕ r. ಅಂದರೆ $r = \sqrt{\widehat{b}\,\widehat{b'}}$ ಚರಗಳ ನಡುವಿನ ಸಂಬಂಧವನ್ನು ಅಳೆಯುವಲ್ಲಿ ಈ ಎರಡು ತರದ (ಹಿಂಚಲನೆಯ ಮತ್ತು ಸಹ ಸಂಬಂಧದ) ಗುಣಾಂಕಗಳ ಬಾಂಧವ್ಯವನ್ನು ಇದು ಸ್ಪಷ್ಟಪಡಿಸುತ್ತದೆ. ಒಂದು ಚರ (Y) ಇನ್ನೊಂದು ಚರ (X) ದ ಮೇಲೆ ಹೊಂದಿಕೊಂಡಿದೆ ಎಂದು ತಿಳಿಯಬಹುದಾದರೆ ಆಗ ಹಿಂಚಲನೆಯ ಗುಣಾಂಕ ಸೂಕ್ತ. Y ಯ ಮೌಲ್ಯಗಳು ಸ್ವಲ್ಪಮಟ್ಟಿಗೆ X ನಿಂದ ನಿಯಂತ್ರಿತವಾಗಿರಬಹುದು ಅಥವಾ ಪ್ರೇರಿತವಾಗಿರಬಹುದು – ದೇಹದ ಕೆಲವು ಗ್ರಂಥಿಗಳು ಸುರಿಸುವ ರಸಗಳು ಅಂಗಾಂಗಗಳ ಗಾತ್ರಗಳಲ್ಲಿ ಏರಿಳಿತಗಳನ್ನು ಉಂಟುಮಾಡುವಂತೆ; ಅಥವಾ, ಪೌಷ್ಟಿಕ ಆಹಾರಗಳನ್ನೊಳಗೊಂಡ ಪ್ರಯೋಗಗಳಲ್ಲಿ ತೂಕದ ಹೆಚ್ಚಳ (Y) ಮೂಲತೂಕ (X) ದಿಂದ ಪ್ರೇರಿತವಾಗಿರುವಂತೆ. ಅಂಥ ಸಂದರ್ಭಗಳಲ್ಲಿ ಬೇಕಾಗಿರುವ ಹೆಚ್ಚಿನ ಮಾಹಿತಿಯನ್ನು X ನ ಮೇಲೆ Y ಯ ಹಿಂಚಲನೆ ಕೊಡುತ್ತದೆ, ಮತ್ತು ಆಗ ದತ್ತ X ನ ಮೌಲ್ಯಕ್ಕೆ ಅನುರೂಪವಾದ Y ಯ ಮೌಲ್ಯವನ್ನು ಅಂದಾಜು ಮಾಡಲು ಪ್ರಯತ್ನಿಸುವುದು ಸೂಕ್ತ. ಆದರೆ, ಸಹೋದರ ಸಹೋದರಿಯರ ಎತ್ತರಗಳಂಥ ಚರಗಳ ಸಂಬಂಧದ ವಿಚಾರದಲ್ಲಿ ಸಹ ಸಂಬಂಧದ ಗುಣಾಂಕ ಸೂಕ್ತ. ಈ ಎರಡು ಎತ್ತರಗಳು ಆನುವಂಶಿಕತೆಯ ಕ್ಲಿಷ್ಟ ವಿದ್ಯಮಾನದ ಮೂಲಕ ಸಂಬಂಧಿತವಾಗಿದ್ದರೂ ಒಂದು ಇನ್ನೊಂದರ ಪರಿಣಾಮ ಎನ್ನುವಂತಿಲ್ಲ. ಸಹ ಸಂಬಂಧ ಎಂಬುದು ಒಂದು ದ್ವಿಮುಖ ಸಂಬಂಧದ ಒಂದು ರೀತಿಯ ಸರಾಸರಿ. ಆದರೆ ಹಿಂಚಲನೆ ಏಕಮುಖವಾದದ್ದು. ಹಿಂಚಲನೆ ಅಥವಾ ಸಹಸಂಬಂಧ ಅಥವಾ ಅವೆರಡೂ ಪರಿಕಲ್ಪನೆಗಳನ್ನು ಉಪಯೋಗಿಸಿ ಅಧ್ಯಯಿಸಬಹುದಾದ ಹಲವಾರು ಚರಗಳು ಇದ್ದೇ ಇವೆ. ನಮ್ಮ ಗಮನದಲ್ಲಿರುವ ಬಾಂಧವ್ಯದ ಸ್ವರೂಪವನ್ನು ಮನಸ್ಸಿನಲ್ಲಿ ಸ್ಪಷ್ಟವಾಗಿ ಇಟ್ಟುಕೊಂಡಿರುವುದಷ್ಟೇ ಅವಶ್ಯ".

r ನ ಮೌಲ್ಯ ಗಾತ್ರದಲ್ಲಿ ಜಾಸ್ತಿ ಆದಷ್ಟು, ಹಿಂಚಲನೆಯ ಎರಡು ರೇಖೆಗಳ ನಡುವಿನ ಕೋನ ಕಡಿಮೆಯಾಗುತ್ತದೆ ಮತ್ತು ಚದರಿಕೆ ಚಿತ್ರದಲ್ಲಿ ಬಿಂದುಗಳ ಹರಡಿ

ಕೆಯು ವಲಯು ಅಗಲಕಿರಿದಾಗುತ್ತದೆ. $r = +1$ ಅಥವಾ $-1$ ಆಗಿರುವಾಗ ಹಿಂಚಲನೆಯು ಎರಡು ರೇಖೆಗಳು ಒಂದರಲ್ಲೊಂದು ಲೀನವಾಗುತ್ತವೆ. $r = 0$ ಆಗಿರುವಾಗ ಅವು ಒಂದಕ್ಕೊಂದು ಲಂಬವಾಗಿರುತ್ತವೆ.

## 9 ಸಹಸಂಬಂಧದ ಗುಣಾಂಕ ತಿಳಿಸುವುದೇನನ್ನು ?

ಚದರಿಕೆ ಚಿತ್ರದಲ್ಲಿ ಬಿಂದುಗಳ ಪ್ರವೃತ್ತಿ ರೇಖೀಯುವಾಗಿರುವಾಗ ಮಾತ್ರ X ಮತ್ತು Y ಗಳ ನಡುವಿನ ಸಂಬಂಧದ ಸಂಬಲರ್ಹ ಮಾನವಾಗಿ r ನ್ನು ಉಪಯೋಗಿಸಬಹುದು. ಆಗ r ನ ಮೌಲ್ಯ ಸೊನ್ನೆಗೆ ಸಾಕಷ್ಟು ಸಮೀಪವಿದ್ದರೆ ಅದು X ಮತ್ತು Y ಗಳ ನಡುವಿನ ರೇಖೀಯ ಸಂಬಂಧ ಬಹಳ ಕ್ಷೀಣ ಎಂದು ತಿಳಿಸುತ್ತದೆ. ಅಂದರೆ X ಮತ್ತು Y ಗಳು ಹೆಚ್ಚುಕಡಿಮೆ ಸ್ವತಂತ್ರಚರಗಳು. $r > 0$ ಆಗಿರುವಾಗ X ಮತ್ತು Y ಗಳ ನಡುವೆ ಧನ ಸಹಸಂಬಂಧವಿದೆ. ಒಂದು ಚರದ ಮೌಲ್ಯ ಹೆಚ್ಚಾದಂತೆ ಇನ್ನೊಂದರ ಮೌಲ್ಯವೂ ಹೆಚ್ಚಾಗುವುದು, ಒಂದರ ಮೌಲ್ಯ ಕಡಿಮೆಯಾದಂತೆ ಇನ್ನೊಂದರ ಮೌಲ್ಯವೂ ಕಡಿಮೆಯಾಗುವುದು ಎಂದು ಸ್ಥೂಲವಾಗಿ ತಿಳಿಯಬಹುದು. $r < 0$ ಆಗಿರುವಾಗ X ಮತ್ತು Y ಗಳ ನಡುವೆ ಋಣ ಸಹಸಂಬಂಧವಿದೆ. ಒಂದು ಚರದ ಮೌಲ್ಯ ಹೆಚ್ಚಾದಂತೆ ಇನ್ನೊಂದರ ಮೌಲ್ಯ ಕಡಿಮೆಯಾಗುವುದು ಮತ್ತು ಒಂದರ ಮೌಲ್ಯ ಕಡಿಮೆಯಾದಂತೆ ಇನ್ನೊಂದರ ಮೌಲ್ಯ ಹೆಚ್ಚಾಗುವುದು ಎಂದು ಸ್ಥೂಲವಾಗಿ ತಿಳಿಯಬಹುದು. r ನ ಮೌಲ್ಯ $+1$ರ ಸಮೀಪವಿದ್ದರೆ Y, Xನ ಮೇಲೆ (ಅಥವಾ X, Yಯ ಮೇಲೆ) ಬಹಳ ಮಟ್ಟಿಗೆ ನೇರವಾಗಿ ಹೊಂದಿಕೊಂಡಿದೆ. ನ ಮೌಲ್ಯ $-1$ ರ ಸಮೀಪವಿದ್ದರೆ Y, Xನ ಮೇಲೆ (ಅಥವಾ X, Yಯ ಮೇಲೆ) ಬಹಳ ಮಟ್ಟಿಗೆ ವ್ಯಸ್ತವಾಗಿ ಹೊಂದಿಕೊಂಡಿದೆ.

ಚದರಿಕೆ ಚಿತ್ರದಲ್ಲಿ ಬಿಂದುಗಳ ಪ್ರವೃತ್ತಿ ವಕ್ರರೇಖೀಯುವಾಗಿದ್ದರೆ, ಆಗ r ಸಹಸಂಬಂಧದ ನಂಬಲರ್ಹ ಮಾನವಲ್ಲ. ಇಂಥ ಸಂದರ್ಭಗಳಲ್ಲಿ Y, Xನ ಮೇಲೆ ಬಹಳ ಮಟ್ಟಿಗೆ ಹೊಂದಿಕೊಂಡಿದ್ದಾಗಲೂ r ಸೊನ್ನೆಯ ಸಮೀಪವಿರುವುದು ಸಾಧ್ಯವಿದೆ. (ಚಿತ್ರ 9.1) ಇಲ್ಲಿ ಚರಗಳ ಸಹಸಂಬಂಧವನ್ನು ಅರಿಯಲು ಬೇರೆ ಮಾನವೊಂದನ್ನು ರಚಿಸಿ ಉಪಯೋಗಿಸಬೇಕು. ಆದ್ದರಿಂದ, X ಮತ್ತು Yಗಳು ಸ್ವತಂತ್ರ ಚರಗಳಾಗಿದ್ದರೆ, ಆಗ ಸಹಸಂಬಂಧದ ಗುಣಾಂಕ (r) ಸೊನ್ನೆ; ಆದರೆ $r = 0$ ಆಗಿದ್ದಾಗ X ಮತ್ತು Yಗಳು ಸ್ವತಂತ್ರಚರಗಳಾಗಿರಲೇಬೇಕೆಂದಿಲ್ಲ. ಅವು ವಕ್ರರೇಖೀಯುವಾಗಿ ಸಂಬಂಧಿ




ಚಿತ್ರ 9.1 $r = 0$

ಸಿರಬಹುದು. ಇಲ್ಲಿ ಇನ್ನೊಂದು ಸಾಧ್ಯತೆಯನ್ನೂ ನಾವು ಗಮನಿಸಬೇಕು. ಚದರಿಕೆ ಚಿತ್ರದಲ್ಲಿ ಬಿಂದುಗಳು ಎರಡು ಅಥವಾ ಹೆಚ್ಚು ಗುಂಪುಗಳಲ್ಲಿ ಹಂಚಿಹೋಗಿದ್ದರೆ (ಚಿತ್ರ 9.2) ಆಗ ದತ್ತಾಂಶಗಳ ಈ ವೈಶಿಷ್ಟ್ಯದಿಂದಾಗಿಯೇ (ನಿಜವಾದ ಸಂಬಂಧ ವಿಲ್ಲದೆಯೇ) r ನ ಮೌಲ್ಯ ಹೆಚ್ಚಿರುವುದು ಸಾಧ್ಯವಿದೆ.



ಚಿತ್ರ 9.2

ಚಿತ್ರ 9.2 ರಲ್ಲಿರುವ ಎರಡು ಗುಂಪುಗಳನ್ನು ಗಮನಿಸಿ. ವೈಯಕ್ತಿಕವಾಗಿ ನೋಡಿದರೆ ಪ್ರತಿಯೊಂದು ಗುಂಪಿನಲ್ಲೂ r ಹೆಚ್ಚು ಕಡಿಮೆ ಸೊನ್ನೆ. ಆದರೆ ಒಟ್ಟಾಗಿ r ನ ಮೌಲ್ಯ ಸಾಕಷ್ಟು ಹೆಚ್ಚಿದ್ದೆ. ಗುಂಪುಗಳನ್ನು ಬೇರೆ ಬೇರೆ ಎಂದು ಪರಿಗಣಿಸಲು ಯಾವುದಾದರೂ ತಾರ್ಕಿಕ ತಳಹದಿ ಇದ್ದರೆ ಅದೇ ರೀತಿ ಮಾಡುವುದು ಕ್ಷೇಮ. ಹೀಗಾಗಿ, r ನ ಮೌಲ್ಯ ನಿಜವಾಗಿ ತಿಳಿಸುವುದೇನು ಎಂಬುದನ್ನು ಅರಿಯಲು ಮತ್ತು ಅಂಥ ಮೌಲ್ಯದ ಅರ್ಥಪೂರ್ಣ ವೈಶಿಷ್ಟ್ಯವನ್ನು ತಿಳಿಯಲು ಚದರಿಕೆ ಚಿತ್ರದ ಆಧಾರದಿಂದ ಅಥವಾ ಹಿಂದಿನ ಅನುಭವದಿಂದ ಚರಗಳ ನಡುವಿನ ಸಂಬಂಧ ರೇಖೀಯ ಎನ್ನುವ ಅನುಮಾನ ಸಿಂಧುವೇ ಎಂದು ಮೊದಲು ಗಮನಿಸುವುದು ಸುರಕ್ಷಿತ ಮಾರ್ಗ.

## 10 ಪ್ರತಿಚಯದಿಂದ ಸಮಷ್ಟಿಗೆ

ಕೋಷ್ಟಕ 4.1 ರಲ್ಲಿ 12 ಸೇಬಿನ ಮರಗಳ ಹಣ್ಣುಗಳ ಬೆಳೆ ಮತ್ತು ಹುಳುಗಳಿದ್ದ ಹಣ್ಣುಗಳ ಶೇಕಡಾ, ಇವುಗಳ ಬಗ್ಗೆ ಮಾಹಿತಿಯಿದೆ. ಇದನ್ನು ಅಂಥ ಎಲ್ಲ ಸೇಬಿನ ಮರಗಳ ಸಮಷ್ಟಿ (Population) ಯಿಂದ ಪಡೆದ ಒಂದು ಪ್ರತಿಚಯ ಎಂದು ತಿಳಿಯಬಹುದು. ಪ್ರತಿಚಯಗಳು ಕೊಡುವ ಮಾಹಿತಿಯ ಆಧಾರದ ಮೇಲೆ ಸಮಷ್ಟಿಯ ವೈಶಿಷ್ಟ್ಯಗಳ ಬಗ್ಗೆ ಅನುಮಾನಿಸುವುದು ಆಗಾಗ ಇದಿರಾಗುವ ಒಂದು ಸಮಸ್ಯೆ. ಇಲ್ಲಿ ಗಮನಿಸಬೇಕಾದ ಹಲವು ವಿಚಾರಗಳಿವೆ. ಪ್ರತಿಚಯದಲ್ಲಿ ಧನ (ಅಥವಾ ಋಣ) ಸಹಸಂಬಂಧ ಕಂಡುಬಂದರೆ, ಸಮಷ್ಟಿಯಲ್ಲೂ ಸಹಸಂಬಂಧವಿದೆ ಎಂದಿರಲೇಬೇಕೆಂದಿಲ್ಲ. ಪ್ರತಿಚಯದಲ್ಲಿರುವ ವಸ್ತುಗಳ ಸಂಖ್ಯೆ ಕಡಿಮೆಯಾದಂತೆ ದೊರೆತ r ನ ಮೌಲ್ಯದ ಲಕ್ಷ್ಯಾರ್ಹತೆ (significance) ಕೂಡ ಕಡಿಮೆ. ನಿದರ್ಶನಕ್ಕಾಗಿ, 19 ವಿದ್ಯಾರ್ಥಿಗಳ ಒಂದು ಗುಂಪಿನಲ್ಲಿ ಅವರು ಕೊನೆಯ ಗಣಿತ ಪರೀಕ್ಷೆಯಲ್ಲಿ ಪಡೆದ ಅಂಕಗಳಿಗೂ, ಅವರ ಹೆಸರುಗಳ ಮೊದಲ ಅಕ್ಷರಗಳಿಗೂ, (A ಗೆ 1, B ಗೆ 2 ಇತ್ಯಾದಿ ಮೌಲ್ಯಗಳನ್ನು ಕೊಡಲಾಯಿತು) ಸಹಸಂಬಂಧದ ಗುಣಾಂಕ 0.34 ಎಂದು ದೊರೆಯಿತು. ಇಂಥ ಚರಗಳು ನಿಜವಾಗಿಯೂ ಸಂಬಂಧಿಸಿರುವುದು ಅಶಕ್ಯವೆನ್ನಬಹುದಾದ್ದರಿಂದ,

ಪ್ರತಿಚಯನದ ಏರಿಳಿತದಿಂದಾಗಿಯೇ, ಕಂಡುಬಂದ ಈ ಸಹಸಂಬಂಧ ಆದರ ನಿಜಮೌಲ್ಯ ಸೊನ್ನೆಯಿಂದ ಭಿನ್ನವಾಗಿರಬೇಕು.

X ಮತ್ತು Y ಗಳು ಪರಸ್ಪರ ಸ್ವತಂತ್ರವಾಗಿದ್ದರೂ, ಅವೆರಡು ಕಾಲಗತಿಯಲ್ಲಿ ಹೆಚ್ಚುಕಡಿಮೆ ಒಂದೇ ರೀತಿಯಲ್ಲಿ (ಅಥವಾ ವಿರುದ್ಧ ರೀತಿಗಳಲ್ಲಿ) ಏರಿಳಿಯುತ್ತಿರುವುದುಂಟು. ಆದ್ದರಿಂದ, ಪ್ರತಿಚಯದಲ್ಲಿರುವ ಮೌಲ್ಯಗಳು ಸಾಕಷ್ಟು ದೊಡ್ಡ ಕಾಲಾವಧಿಯನ್ನು ವ್ಯಾಪಿಸಿದ್ದರೆ, X ಮತ್ತು Y ಗಳ ನಡುವೆ ಅರ್ಥಹೀನ ಸಹಸಂಬಂಧ ಕಂಡುಬರಬಹುದು. ಇಂಥ ಎರಡು ಉತ್ತಮ ನಿದರ್ಶನಗಳು ಕೆಳಗಿವೆ:

(i) 1866 ಮತ್ತು 1911 ರ ನಡುವೆ ಇಂಗ್ಲೆಂಡ್ ಮತ್ತು ವೇಲ್ಸ್‌ಗಳ ಆಂಗ್ಲಿಕನ್ ಇಗರ್ಜಿಗಳಲ್ಲಿ ನಡೆದ ಮದುವೆಗಳ ಪ್ರಮಾಣ ಮತ್ತು ಅದೇ ಅವಧಿಯಲ್ಲಿ ಸಂಭವಿಸಿದ ಶಿಷ್ಟೀಕೃತ ಮೃತ್ಯು ದರ (Standardized mortality rate) ಇವುಗಳಿಗೆ ಬಹಳ ಹೆಚ್ಚಿನ ಸಹಸಂಬಂಧ ($r=0.951$) ಕಂಡುಬಂತು. ಈ ಅವಧಿಯಲ್ಲಿ ಎರಡು ಚರಗಳೂ ವೈಯಕ್ತಿಕವಾಗಿ ತೀವ್ರ ಇಳಿಕೆಯ ಪ್ರವೃತ್ತಿಯನ್ನು ತೋರ್ಪಡಿಸಿದ್ದು ಈ ಸೋಜಿಗದ ವಿದ್ಯಮಾನಕ್ಕೆ ನಿಜವಾದ ಕಾರಣ. ಈ ಪ್ರವೃತ್ತಿಯನ್ನು ಪ್ರತ್ಯೇಕಿಸಿ, ಉಳಿದ ಶೇಷಗಳ ನಡುವೆ ಸಹಸಂಬಂಧವನ್ನು ಪಡೆದಾಗ $r=0 \cdot 19$ ಎಂದು ದೊರೆಯಿತು.

(ii) 40 ವರ್ಷಗಳ ಒಂದು ಅವಧಿಯಲ್ಲಿ ನಾರ್ವೆಯ ಒಸ್ಲೋ ನಗರದಲ್ಲಿಯ ಕೊಕ್ಕರೆಗಳ ಸಂಖ್ಯೆ ಮತ್ತು ಶಿಶುಗಳ ಜನನಗಳ ವಾರ್ಷಿಕ ಸಂಖ್ಯೆಗಳ ನಡುವೆ $r=0.86$ ಎಂದು ದೊರೆಯಿತು! ಈ ಸಹಸಂಬಂಧ ಅರ್ಥವತ್ತಾಗಿದ್ದಲ್ಲಿ ಕುಟುಂಬ ನಿಯಂತ್ರಣ ವಿಭಾಗದವರು ಇಂದೇ ಕೊಕ್ಕರೆಗಳ ನಿರ್ಮೂಲನ ಕೈಗೊಂಡಾರು!!

ಯೂಲ್ (Yule) ಅವರು ಇಂಥ ಸಹಸಂಬಂಧಗಳನ್ನು ಅರ್ಥಹೀನ ಸಹಸಂಬಂಧಗಳು (nonsense correlations) ಎಂದು ಕರೆದಿದ್ದಾರೆ.

## 11 ಇನ್ನೊಂದು ಸಮಸ್ಯೆ ಮತ್ತು ಅದಕ್ಕೆ ಪರಿಹಾರ

ಒಂದು ಸೌಂದರ್ಯಸ್ಪರ್ಧೆ. ಹಲವು ಬೆಡಗಿನ ರಾಣಿಯರು ಸೌಂದರ್ಯ ರಾಣಿಯ ಪಟ್ಟಕ್ಕಾಗಿ ಸ್ಪರ್ಧಿಸಲಿದ್ದಾರೆ. ಜನರು ಕಿಕ್ಕಿರಿದು ಸೇರಿದ್ದಾರೆ. ತೀರ್ಪುಗಾರರು ಸಭಾಂಗಣದ ಮುಂಭಾಗದಲ್ಲಿ, ವೇದಿಕೆಯ ಬಳಿ, ಗಂಭೀರವಾಗಿ ಆಸೀನರಾಗಿದ್ದಾರೆ. ಸುಂದರಿಯರು ಒಬ್ಬೊಬ್ಬರಾಗಿಯೇ ವೇದಿಕೆಯ ಮೇಲೆ ಕಾಣಿಸಿಕೊಂಡು, ಮೆಲ್ಲಮೆಲ್ಲನೆ ಚಲಿಸುತ್ತ ಕಣ್ಮರೆಯಾಗುತ್ತಿದ್ದಾರೆ. ಜನರೆಲ್ಲ ಎವೆಯಿಕ್ಕದೆ ನೋಡುತ್ತಿದ್ದಾರೆ. ಆದರೆ, ತೀರ್ಪುಗಾರರ ಕೆಲಸ ಇನ್ನೂ ಕಠಿನ. ಸ್ಪರ್ಧಿಗಳ ಸೌಂದರ್ಯಗಳ ತುಲನೆಮಾಡಿ ಯಾವಳು ಪಟ್ಟಕ್ಕೆ ಅರ್ಹಳು, ಉಳಿದವರ ಸ್ಥಾನಗಳೇನು ಎಂದು ನಿರ್ಧರಿಸುವ ಜವಾಬ್ದಾರಿ ಅವರದು. ಅಂತೂ ಕೊನೆಗೆ,

ಲತಾಂಗಿಯೊಬ್ಬಳಿಗೆ ಸೌಂದರ್ಯರಾಣಿಯ ಪಟ್ಟಕಟ್ಟಲಾಗುತ್ತದೆ. ಸಭಿಕರಿಂದ ಪ್ರಚಂಡ ಕರತಾಡನ ಮತ್ತು ಹರ್ಷೋದ್ಗಾರವಾಗುತ್ತವೆ. ಈ ಸಂಭ್ರಮವೆಲ್ಲ ಮುಗಿದ ಬಳಿಕ, ಬೌದ್ಧಿಕ ಕುತೂಹಲಿಯೊಬ್ಬ ತೀರ್ಪುಗಾರರ ಸೌಂದರ್ಯದೃಷ್ಟಿಗಳಲ್ಲಿ ಹೊಂದಾಣಿಕೆಯಿದೆಯೇ ಎಂದು ತಿಳಿಯಬಯಸುತ್ತಾನೆ. ಸೌಂದರ್ಯವನ್ನು ಅಳೆದು ಮೀಟರುಗಳಲ್ಲೋ, ಕಿಲೋಗ್ರಾಂಗಳಲ್ಲೋ ಹೇಳಲು ಬಾರದ್ದರಿಂದ, ಯಾವುದೇ ಎರಡು ತೀರ್ಪುಗಾರರ ಅಭಿಪ್ರಾಯಗಳ ನಡುವಿನ ಸಹಸಂಬಂಧವನ್ನು ವಿಭಾಗ 7 ರಲ್ಲಿ ವಿವರಿಸಿರುವ ವಿಧಾನದ ನೇರ ಉಪಯೋಗದಿಂದ ತಿಳಿಯಲು ಬಾರದು. ಸೌಂದರ್ಯ ಎಂಬುದು ಅಳೆದು ಸಂಖ್ಯಾರೂಪದಲ್ಲಿ ತಿಳಿಸಲಾಗದ ಒಂದು ಗುಣ. ಇಂಥ ಪರಿಸ್ಥಿತಿಗಳಲ್ಲಿ ತೀರ್ಪುಗಾರರು ತಮ್ಮ ತಮ್ಮ ಅಭಿಪ್ರಾಯದಂತೆ ಅತ್ಯಂತ ಸುಂದರಿಗೆ, 1, ಮತ್ತಿನವಳಿಗೆ 2 — ಈ ರೀತಿಯಾಗಿ ಸ್ಥಾನಗಳನ್ನು ಕೊಡಬಹುದು. ಯಾವುದೇ ಎರಡು ತೀರ್ಪುಗಾರರ ಅಭಿಪ್ರಾಯಗಳ ಹೊಂದಾಣಿಕೆಯನ್ನು ಅರಿಯಲು, ಸ್ಪರ್ಧಿಗಳಿಗೆ ಅವರು ಕೊಟ್ಟಿರುವ ಅನುರೂಪವಾದ ಸ್ಥಾನಗಳ ನಡುವಿನ ಸಹಸಂಬಂಧವನ್ನು ಪಡೆಯಬಹುದು. ಸ್ಪರ್ಧಿಗಳ ಸಂಖ್ಯೆ n ಎಂದು ಭಾವಿಸೋಣ. A ಮತ್ತು B ಇಬ್ಬರು ತೀರ್ಪುಗಾರರು. ಅವರು ಸ್ಪರ್ಧಿಯೊಬ್ಬಳಿಗೆ ಕೊಟ್ಟ ಸ್ಥಾನಗಳನ್ನು $(x_i, y_i)$ ಸೂಚಿಸುತ್ತವೆ. ಸ್ಪರ್ಧಿಗಳಲ್ಲಿ ಯಾವ ಇಬ್ಬರನ್ನೂ ಸಮ ಸುಂದರಿಯರು ಎಂದು ತಿಳಿಯದಿದ್ದರೆ $x_i$ ತೆಗೆದುಕೊಳ್ಳಬಹುದಾದ ಮೌಲ್ಯಗಳು 1, 2, ……, n. $y_i$ ತೆಗೆದುಕೊಳ್ಳಬಹುದಾದ ಮೌಲ್ಯಗಳು ಕೂಡ 1, 2, ……, n. ಆಗ, ಸ್ಥಾನಗಳ ಸಹಸಂಬಂಧದ ಗುಣಾಂಕ (rank correlation coefficient) ವನ್ನು ಕೆಳಗಿನ ಸರಳ ಸೂತ್ರವನ್ನು ಉಪಯೋಗಿಸಿ ಪಡೆಯಬಹುದು.

$$\rho_{AB} = 1 - \frac{6 \sum_{i=1}^{n} (x_i - y_i)^2}{n(n^2 - 1)} \qquad \ldots \qquad 11.1$$

ಕೆಳಗಿನ ಸಂದರ್ಭಗಳಲ್ಲಿ ಸ್ಥಾನಗಳ ಸಹಸಂಬಂಧದ ಗುಣಾಂಕ ಒಂದು ಉಪಯುಕ್ತ ಮಾನ :

(i) ಅರಿಯಬೇಕಾಗಿರುವ ವಸ್ತುಲಕ್ಷಣಗಳಿಗೆ ಸಂಖ್ಯಾಮೌಲ್ಯಗಳನ್ನು ಕೊಡಲು ಸಾಧ್ಯವಿಲ್ಲ. ಆದರೆ ವಸ್ತುಗಳನ್ನು ಯೋಜಿಸಿ, ಸ್ಥಾನಗಳನ್ನು ಕೊಡುವುದು ಸಾಧ್ಯ.

(ii) ಸಂಖ್ಯಾಮೌಲ್ಯಗಳನ್ನು ಕೊಡಲಾಗಿದೆಯಾದರೂ ಅವು ಅವ್ಯಕ್ತವಾಗಿರುವ (ಅಥವಾ ಕಳೆದುಹೋಗಿರುವ) ಮತ್ತು ವಸ್ತುಗಳ ಅನುರೂಪಸ್ಥಾನಗಳು ತಿಳಿದಿರುವ ಸಂದರ್ಭಗಳು.

## 12 ಹಿನ್ನೋಟ

ಎರಡು ಚರಗಳ ನಡುವಿನ ರೇಖೀಯ ಸಂಬಂಧವನ್ನು ಅಳೆಯುವ, ಅಳೆದು ಅರಿಯುವ ವಿಧಾನಗಳ ಮೇಲೆ ನಮ್ಮ ಗಮನ ಈ ಲೇಖನದಲ್ಲಿ ಕೇಂದ್ರೀಕೃತವಾಗಿದೆ. ವಾಸ್ತವಿಕ ಪ್ರಪಂಚದಲ್ಲಿ ನಮಗೆ ಇದಿರಾಗುವ ಎಲ್ಲ ಚರಗಳು ಇಂಥ ಸರಳ ನಿಯಮವನ್ನು ಸರಿಸುಮಾರಾಗಿಯಾದರೂ ಗೌರವಿಸುತ್ತವೆ ಎಂಬ ಭರವಸೆಯಿಲ್ಲ. ಎರಡು ಚರಗಳ ನಡುವಿನ ಅರೇಖೀಯ ಸಂಬಂಧಗಳ ಸಮಸ್ಯೆಯನ್ನು ಇದು ಒಡ್ಡುತ್ತದೆ. $Y = abX$, $Y = aX^b$, $Y = ae^bX$, $Y = a + \frac{b}{X}$, $Y = a_o + a_1X + a_2X^2 + \ldots\ldots\ldots + a_pX^p$

ಇವು ಅಂಥ ಕೆಲವು ನಿದರ್ಶನಗಳು. ಅದೂ ಅಲ್ಲದೆ, ಎರಡಕ್ಕಿಂತ ಹೆಚ್ಚು ಚರಗಳನ್ನೊಳಗೊಂಡ ಸಂಬಂಧಗಳ ಸಮಸ್ಯೆಯೂ ಇದೆ. $Y = a_o + a_1X_1 + a_2X_2$ ಇದು ಮೂರು ಚರಗಳ ನಡುವಿನ ಅಂಥ ಒಂದು ಸಂಬಂಧ. ನಮ್ಮ ಅಧ್ಯಯನಗಳು ಪರಿಪೂರ್ಣವಾಗಲು ಮತ್ತು ಅನುಷ್ಠಾನದಲ್ಲಿ ಸಮರ್ಪಕತೆಯನ್ನು ಪಡೆಯಲು ಮೇಲಿನ ಸಮಸ್ಯೆಗಳಿಗೂ ಪರಿಹಾರಗಳು ಅವಶ್ಯ. ಈ ಎರಡು ಸಮಸ್ಯೆಗಳ ಬಗ್ಗೆ ವ್ಯಾಪಕ ಅಧ್ಯಯನ ಈಗಾಗಲೇ ನಡೆದಿದೆ [1].

## 13 ಉಪಯೋಗಿಸಲ್ಪಟ್ಟ ಪಾರಿಭಾಷಿಕ ಪದಗಳು

Assumptions : ಅಭಿಗೃಹೀತಗಳು
Calculus : ಕಲನಶಾಸ್ತ್ರ
Correlation : ಸಹ ಸಂಬಂಧ
Correlation coefficient : ಸಹ ಸಂಬಂಧದ ಗುಣಾಂಕ
Covariance : ಸಹಚಲನೀಯ
Dependent Variable : ಅವಲಂಬಿಚರ
Estimate : ಅಂದಾಜು ಮಾಡು, ಅಂದಾಜುಮೌಲ್ಯ
Estimator : ಅಂದಾಜುಕಾರಿ
Expected Value : ನಿರೀಕ್ಷಿತಮೌಲ್ಯ
Function : ಉತ್ಪನ್ನ
Geometric mean : ಜ್ಯಾಮಿತೀಯ ಮಧ್ಯಕ
If and only if : ಆದರೆ ಮತ್ತು ಆದರೆ ಮಾತ್ರ
Independent Variable : ಸ್ವತಂತ್ರಚರ
Least-squares estimators : ಕನಿಷ್ಠತಮವರ್ಗ ಅಂದಾಜುಕಾರಿಗಳು
Least-sequares principle : ಕನಿಷ್ಠತಮವರ್ಗ ತತ್ವ
Linear function : ರೇಖೀಯ ಉತ್ಪನ್ನ
Linear model : ರೇಖೀಯ ಪ್ರತಿರೂಪ
Linear unbiased estimator : ರೇಖೀಯ ಅಸಭಿಸತ ಅಂದಾಜುಕಾರಿ

Negative correlation : ಋಣ ಸಹ ಸಂಬಂಧ
Non-linear relations : ಅರೇಖೀಯ ಸಂಬಂಧಗಳು
Nonsense correlation : ಅರ್ಥಹೀನ ಸಹ ಸಂಬಂಧ
Normal equations : ಪ್ರಸಾಮಾನ್ಯ ಸಮೀಕರಣಗಳು
Parameter : ಪ್ರಾಚಲ
Partial differential coefficient : ಆಂಶಿಕ ಅವಕಲನಾಂಕ
Population : ಸಮಷ್ಟಿ
Positive correlation : ಧನ ಸಹಸಂಬಂಧ
Probability : ಸಂಭಾವ್ಯತೆ
Probability distribution : ಸಂಭಾವ್ಯತಾ ವಿತರಣೆ
Random term : ಯಾದೃಚ್ಛಿಕಪದ
Random variable : ಯಾದೃಚ್ಛಿಕಚರ
Rank correlation coefficient : ಸ್ಥಾನಗಳ ಸಹಸಂಬಂಧದ ಗುಣಾಂಕ
Regression : ಹಿಂಚಲನೆ
Regression coefficients : ಹಿಂಚಲನೆಯ ಗುಣಾಂಕಗಳು
Residual : ಶೇಷ
Scatter diagram : ಚದರಿಕೆ ಚಿತ್ರ
Significance : ಲಕ್ಷ್ಯಾರ್ಹತೆ
Simultaneous equations : ಏಕಕಾಲಿಕ ಸಮೀಕರಣಗಳು
Standard deviation : ಶಿಷ್ಟ ವಿಚಲನೆ
Standardized mortality rate : ಶಿಷ್ಟೀಕೃತ ಮೃತ್ಯುದರ
Variable : ಚರ
Variance : ಚಲನೀಯ

## 14 ಆಧಾರ ಗ್ರಂಥಗಳು

[1] Draper, N. R. and Smith, H., 'Applied Regression Analysis,' John Wiley & Sons, Inc. New York, 1966

[2] Johnston, J., 'Econometric Methods', Mc Graw-Hill Book Company, Inc. New York, 1963

[3] Kenney, J. F. and keeping, E. S., 'Mathematics of Statistics' Part one, 3d. ed, D Van Nostrand Company New York, 1965

[4] Yule, G. U. and Kendall, M. G., 'An Introduction to the Theory of Statistics, 14th ed., Griffin, London, 1950

# ಊರು ನಾನು ಸಾವು

**ಜಯಂತ ಕಾಯ್ಕಿಣಿ**

ಅಂದುಕೊಂಡ ಹಾಗೆ ಒಂದು
ಮುಂಜಾನೆ ಆ ಊರಲ್ಲಿ ಬಸ್ಸಿನಿಂದಿಳಿದೆ
ಸ್ವಾಗತವಿಲ್ಲ ಕಿರುನಗೆಯಿಲ್ಲ ಯಾಕೆ
ಬಂದೆ ಎಂಬ ಪ್ರಶ್ನಪತ್ರಿಕೆ ಮುಖಗಳಿಲ್ಲ
ಯಾಕಿರಬಹುದು ?
ಓಹೋ ಊಹಿಸುತ್ತ ನಿಲುವಿಗೆ ಬಂದೆ
ಬಹುಶಃ ಯಾರೋ ಸತ್ತಿರಬಹುದು ಯಾವ ಕುಟುಂಬದ್ದೋ ಆಶಾ
ಜ್ಯೋತಿ ಬತ್ತಿರಬಹುದು ಸರಾಗ ದುಡಿಯುತ್ತಿದ್ದ
ದೇಹವೊಂದರಂಗಗಳು
ಆಹಾರ ಕೊರತೆಯಿಂದ ಶಾಶ್ವತ ಮುಷ್ಕರಗೊಂಡಿರಬಹುದು-ಹೀಗಾಗಿ
ಸಂಬಂಧಕ್ಕೆ ನೆರೆಹೊರೆಗೆ ಕೇರಿಗೆ ಊರಿಗೇ
ಸೂತಕ ಬಡಿದಿರಬಹುದು—ಪಾಪ ! ಎಂದುಕೊಂಡೆ
ನನ್ನದನ್ನೆಲ್ಲ ನಾನೇ ಹೊತ್ತುಕೊಂಡು
ಹೆಜ್ಜೆ ಕೀಳುತ್ತ ಸಾವಿನ ವಾಸನೆಯಲ್ಲೆ ಹುಡುಕಿದೆ
ದುಃಖ ನೋವು ಕಿಕ್ಕಿರಬಹುದಾದ
ಆ ಮನೆ ಮಠ ಧರ್ಮಶಾಲೆ ಅಥವಾ ಅಂಗಡಿ ಗೋಡೌನುಗಳನ್ನು
ಕೆಂಪು ಕುಂಕುಮವಾದ ಅಥವಾ ಕೆಸರು ಬಾವಿಗಳಾದ ಕಣ್ಣುಗಳನ್ನು
ಚಟ್ಟಗಳು ಸಿದ್ಧವಾಗಿ ಸಿದಿಗೆ ಬಿಗಿದು ಗೋವಿಂದಾ
ನೆರೆದಿರಬಹುದಾದ ಅಂಗಳಗಳನ್ನು
ಅತ್ತರೇನು ಪ್ರಯೋಜನ ತಂದುಕೊಳ್ಳಿ ಸಮಾಧಾನ
ಎಂದು ಸಂತೈಸಬಹುದಾದ ಸುಲಭದವಕಾಶಕ್ಕೆ ಹಪ ಹಪಿಸಿದೆ
ಇಲ್ಲ ಸಧ್ಯ ಹಾಗೇನೂ ನಡೆದ ಹಾಗಿಲ್ಲ
ಕಿರ್‌ಬಾಗಿಲುಗಳು ಸಿಮೆಂಟು ಚಿಟ್ಟೆಗಳು ಎದುರಿನ ಬೀದಿಯಲ್ಲಿ
ಸಾರಿಸಿದ ಕುರುಹು-ಮಸಕು ರಂಗೋಲಿ-ಹಾಗೇ ಇವೆ
ಎಲ್ಲೂ ಏನೂ ವ್ಯಕ್ತಿ ಅಥವಾ ವೈಯುಕ್ತಿಕತೆ ಸತ್ತ ಧ್ವನಿಯಿಲ್ಲ

ನಡೆಯುತ್ತ ನಡೆಯುತ್ತ ದಿಕ್ಕು ಬದಲಾಯಿಸಿದೆ
ದಕ್ಷಿಣವಿದ್ದವ ಉತ್ತರವಾದೆ ದಾಮರು ರಸ್ತೆ
ಮಣ್ಣಿನ ಓಣಿಗೆ ತಿರುಗಿ ಇಕ್ಕಟ್ಟಾಗಿ ಕೊನೆಗೆ ಕಾಲುದಾರಿಗೆ ಬಂದೆ
ಊಹೂಂ–ಸುತ್ತಲೂ ಮನೆಗಳು ಮುರಿದ ಜಕ್ಕಡಿ
ಫಳ ಫಳ ಚರ್ಮದ ಸೀಟಿನ ಸೈಕಲ್ಲು ಶೇಂಗಾಸಿಪ್ಪೆ ಉಸಿರಿನ
ಅವಶೇಷಗಳು

ಯಾರೂ ಸತ್ತಹಾಗಿಲ್ಲ ಬಿಕ್ಕಿ ಬಿಕ್ಕಿ ಆಕಾಶಕ್ಕೆ ಮುಖವೆತ್ತಿ
ಅತ್ತಹಾಗಿಲ್ಲ–ಹಾಗಿದ್ದರೆ ಈ ಮೌನವೇಕೆ ?
ಸುತ್ತಲ ಏರಿಳಿತದ ಕುರಿತು ಈ ಉದಾಸೀನವೇಕೆ ?
ಯೋಚನೆಯಾಗುತ್ತ ಬೇಲಿಗಳ ಜಿಗಿದು ಹಿತ್ತಲಲ್ಲಿ
ಅಲೆದೆ—

ಈಗ ತಾನೇ ಹೂ ಕಿತ್ತ ಗಿಡಗಳು
ಹಣ್ಣುದುರಿ ಹಸಿ ತೊಟ್ಟಿನ ಗಾಯ ಹೊತ್ತ ಸಪೋಟ
ಬಿಂಬಲ ಗಿಡ ಮರಗಳು
ಸುಳಿದೆಗೆದು ಅರಳರಳಿ ಬರುವ ಗಿಳಿ ಹಸಿರು ಬಾಳೆ
ಇವ್ಯಾವೂ ಸತ್ತಿಲ್ಲ ನೋವಿನ ಚಿಸ್ಟೆಯೇ ಇಲ್ಲ
ಬಾಯಾರಿದೆ—
ಪಕ್ಕದ ಬಾವಿಯಲ್ಲಿ ಇಣಿಕಿದರೆ ಕೊಡದ ಜತೆಗೇ
ಬಿದ್ದ ಹಗ್ಗ ಕುಣಿಕೆ ಯಾರ ಹೆಣವೂ ಇಲ್ಲ
ಸಿಮೆಂಟು ಕಟ್ಟೆಯ ಮೇಲೆ ಕೆತ್ತಿರುವ ಇಸವಿ
ತೋಡಿದವನ ಪುಣ್ಯ ನಾಮಾಮೃತ
ಹಾಗಾದರೆ ಇಲ್ಲಿ ಸಾವು ಇಲ್ಲ !

ಬಿಸಿಲು ಬಿರುಸಾಗಿ ಊರ್ಧ್ವಕ್ಕೆ ಕಣ್ಣೆತ್ತೆ ಎತ್ತೇತ್ತರ
ಮುಗಿಲು ಚಿಮ್ಮಿನಿಂತ ಅಡಿಕೆ ತೆಂಗುಗಳ ಕಂಡೆ
ಹತ್ತಿದೆ ಜಾರುತ್ತ ಜಾರುತ್ತ ಜಾರಿದಷ್ಟು ಹಿಡಿತ
ಬಿಗಿಗೊಳಿಸುತ್ತ ಹತ್ತಿದೆ ಹತ್ತುತ್ತ ಸುತ್ತ ನೋಡಲು
ಯತ್ನಿಸಿದೆ ಅಕ್ಕಪಕ್ಕದಲ್ಲಿದ್ದವೆಲ್ಲ ಸರಕ್ಕನೆ ಕೆಳಗಿಳಿದಂತೆ
ಆಕಾರಗಳು ಪುಟ್ಟದಾಗುತ್ತ ಹೋದವು
ಗುಡ್ಡದ ತುದಿ ಫ್ಯಾಕ್ಟರಿ ಚಿಮಣಿ ಶಿಖರಗಳು ಶಿಖರಗಳಾಗೇ
ಉಳಿದವು ಗಾಳಿಯೂ ದುಃಖಿಸುವಂತಿತ್ತು ಏಕಾಕಿ ದೃಷ್ಟಿ !

ಇಲ್ಲ
ಈ ಪಕ್ಷಿನೋಟಕ್ಕೂ ಯಾವ ಘನ ವಟುಕಲಿಲ್ಲ
ಚೀರುಗಳು ಆಕ್ರಂದನಗಳು ಅಥವಾ ಮರಣಕ್ಕೆ ವಾಚ್ಯ
ಸಂಕೇತಗಳಾಗಿ ಜೊಗಳುವ ನಾಯಿಗಳು ಹಾರುವ ಹಕ್ಕಿಗಳು
ಯಾವವೂ
ನನ್ನ ಸಂವಹನಕ್ಕೆ ಪುಷ್ಟಿಕೊಡಲಿಲ್ಲ

ನನ್ನ ತೀವ್ರತೆಗಳೆಲ್ಲ ಸಡಿಲಾಗಿ
ಇಳಿದೆ ಗದ್ಗದಗೊಂಡು
ಪುನಃ ಕೇರಿ ಕೆರೆ ಬೀದಿ ಅಂಗಡಿ ಸಾಲು ಹೋಟಲುಗಳ
ನಿರ್ಲಿಪ್ತ ದೃಷ್ಟಿ ಹಾಯ್ತು ಸುತ್ತಾಡಿ ಸುತ್ತಾಡಿ
ಸೂಕ್ಷ್ಮಗಳ ಹುಡುಕೀ ಹುಡುಕೀ ಗುರುತೇ ಸಿಕ್ಕದೆ
ಮರಳಿ ಸ್ಟ್ಯಾಂಡಿಗೆ ಬಂದೆ
ಅದೇ ಬಸ್ಸು—ತಟಕ್ಕನೆ ಹತ್ತಿ ಕೂತೆ

ಅಗ್ಗದ ಕ್ಷಣಗಳದ್ದೇ ಚಲಾವಣೆ
ಬಿಸಿಲೇರಿದ್ದಷ್ಟೆ ಬದಲಾವಣೆ
ಇದ್ಯಾಕೆ ಹೀಗಿರಬಹುದು ?   ಹಾಗಾದರೆ ಸತ್ತವರು ಯಾರು ?
ಸತ್ತದ್ದು ಏನು ?   ಈ ಸಾವಿನ ಮುದ್ರೆ ಯಾವ ಥರದ್ದು ?
ಊರಿಗೆ ಊರೇ ಸತ್ತು ಹೋಗಿರಬಹುದೆ ?   ಅಥವಾ
ನಾನೆ ?

ಅಯ್ಯೋ-ಗುರುತೇ ಸಿಕ್ಕಲಿಲ್ಲ ಅಕ್ಕ ಪಕ್ಕದ ಪ್ರಯಾಣಿಕರಿಗೆ
ಅಪರಿಚಿತರಾದರು ನಾನಿವರಿಗೇ ವಸ್ತುವೇ ಅಲ್ಲವೆಂಬಂತೆ
ಕಂಡಕ್ಟರ ಸಹಿತ ಸಾವಿರಾರು ಪುಕಾರು ಚುಚ್ಚಿ
ಲಗೇಜಿನೊಂದಿಗೆ ಧಡಕ್ಕನೆ
ಇಳಿಸಿಬಿಟ್ಟರು          ಬಸ್ಸು ಹೊರಟೇ ಹೋಯ್ತು

ಈಗ ಸತ್ತ ಊರಿನ ಅಥವಾ ಊರ ಸಾವಿನ
ಒಂದು ಅವಿಭಾಜ್ಯ ಅಂಗವಾಗಿ
ನಾನು ನಿಂತಿದ್ದೇನೆ—

ಬಹುಶಃ ಇದೇ ನನ್ನ ಸಾವೋ ಏನೋ......

# ತಂಬೂರ ಶಾಸನಗಳು

ಆರ್. ಎನ್. ಗುರವ

## 2 ಕದಂಬ ಜಯಕೇಶಿಯ ಶಾಸನ (ಕ್ರಿ.ಶ. 1146)

ಪ್ರಸ್ತುತ ಶಾಸನವು ತಂಬೂರ ಹತ್ತಿರ ಈಶ್ವರ ದೇವಾಲಯದ ಆವರಣದಲ್ಲಿ ಇರುತ್ತದೆ. ಶಾಸನವು ಒಡೆದು ಮೂರು ತುಂಡುಗಳಾಗಿದೆ. ಮೊದಲನೆಯ ತುಂಡಿನಲ್ಲಿ ಶಿರೋಭಾಗದ ವಿಗ್ರಹಗಳು ಹಾಗೂ ಮೊದಲಿನ ಮೂರು ಸಾಲುಗಳಿರುತ್ತವೆ. ತ್ರಿಕೋಣಾಕಾರವಾಗಿರುವ ಎರಡನೆಯ ತುಂಡು ಚಿಕ್ಕದಾಗಿದ್ದು, ಅದರಲ್ಲಿ 4 ರಿಂದ 6 ನೆಯ ಸಾಲುಗಳ ಕೆಲವು ಅಕ್ಷರಗಳು ಮಾತ್ರ ಇರುತ್ತವೆ. ಮೂರನೆಯ ತುಂಡು ದೊಡ್ಡದಾಗಿದ್ದು ಅದರಲ್ಲಿ ಶಾಸನದ ಉಳಿದ ಭಾಗವಿರುತ್ತದೆ. ಹೀಗಿದ್ದರೂ ಶಾಸನದ ಪಾಠಕ್ಕೆ ಅಷ್ಟೇನೂ ಹಾನಿ ಸಂಭವಿಸಿಲ್ಲ. ಆದರೆ ಶಾಸನದ ನಡುವಿನ ಭಾಗದಲ್ಲಿ 33–37 ಸಾಲುಗಳಿಗೆ ಸಂಬಂಧಿಸಿದ ಕೆಲವು ಅಕ್ಷರಗಳು ಕಚ್ಚುಗಳಿಂದ ನಾಶವಾಗಿವೆ. ಅಕ್ಷರಗಳು ಅಂದವಾಗಿ, ಆಳವಾಗಿ ಹಾಗು ಸ್ಪಷ್ಟವಾಗಿ ಕಂಡರಿಸಲ್ಪಟ್ಟಿವೆ. ಅಕ್ಷರಗಳ ಸರಾಸರಿ ಎತ್ತರ 1/2 ಅಂಗುಲವಿರುತ್ತದೆ. ಸಂಸ್ಕೃತದಲ್ಲಿದ್ದ ಮಂಗಲ ಹಾಗೂ ಫಲಶ್ರುತಿ ಪದ್ಯಗಳನ್ನು ಬಿಟ್ಟರೆ ಮಿಕ್ಕ ಶಾಸನವು ಕನ್ನಡ ಭಾಷೆಯಲ್ಲಿರುತ್ತದೆ. ತಂಬೂರಿನ ಮೊದಲನೆಯ ಶಾಸನದಂತೆ[1] ಈ ಶಾಸನವೂ ಚಂಪೂ ಶೈಲಿಯಲ್ಲಿದೆ; ಬಂಧವು ಪ್ರೌಢವಾಗಿದೆ.

**ಶಾಸನದಲ್ಲಿಯ ಅರಸು ಮನೆತನಗಳು :** ಶಾಸನ ಕಾಲದಲ್ಲಿ, ಕಲ್ಯಾಣ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲದೇವನ (ಕ್ರಿ.ಶ. 1138–51) ಸಾರ್ವಭೌಮಾಧಿಪತ್ಯದಲ್ಲಿ ಗೋವೆಯ ಕದಂಬ ಮನೆತನದ ಮಹಾಮಂಡಳೇಶ್ವರ ಎರಡನೆಯ ಜಯಕೇಶಿಯು ಕೊಂಕಣಪ್ರೊಂಬಯ್ನೂರು, ಪಲಸಿಗೆ ಪನ್ನಿರ್ಚ್ಛಾಸಿರ ಮತ್ತು ಕವಡಿದ್ವೀಪ ಸವಾಲಕ್ಷಗಳನ್ನು ಗೋವೆಯ ನೆಲೆವೀಡಿನಿಂದ ಆಳುತ್ತಿದ್ದನು. ಈತನ ತಮ್ಮ ತ್ರಿಭುವನಮಲ್ಲದೇವ. ಜಯಕೇಶಿಯ ಪಿರಿಯರಸಿ ಮೈಳಲ ಮಹಾದೇವಿ. ಇವಳು ವಿಕ್ರಮ ಚಕ್ರವರ್ತಿಯ ಮಗಳು. ಚಕ್ರಿಯು ಇವಳನ್ನು ಜಯಕೇಶಿಗೆ ಮದುವೆ ಮಾಡಿಕೊಟ್ಟ ವಿಷಯ, ಶಾಸನದ 4, 5, 6 ನೆಯ ಪದ್ಯಗಳಲ್ಲಿ ಬರುತ್ತದೆ. ಜಯಕೇಶಿಗೆ ಪೆರ್ಮಾಡಿದೇವ, ವಿಜಯಾದಿತ್ಯ ಹಾಗೂ ಸಾವಿತ್ರಿಯೆಂಬ ಮೂರು

---

1 ಸಾಧನೆ. 3-3. ಪು. 90-106. ಪ್ರಸ್ತುತ ಲೇಖನದಲ್ಲಿ ಮೊದಲನೆಯ ಶಾಸನವೆಂದು ಉಲ್ಲೇಖಿಸಿದಾಗ – ಇದೇ ಎಂದು ತಿಳಿಯಬೇಕು

ಮಕ್ಕಳು. ಇವರಲ್ಲಿ ಸಾವಿತ್ರಿಯು ಇಬ್ಬರಿಗೂ ಹಿರಿಯಳು. ಸಾವಿತ್ರಿಯನ್ನು ತ್ರೈಲಪ್ಪನಸುತನಾದ ಗಂಗಿದೇವನಿಗೆ ಕೊಟ್ಟಿದ್ದರು. ತ್ರೈಲಪ್ಪನು ವಿಕ್ರಮ ಚಕ್ರವರ್ತಿಯ ಕಿರಿಯ ಮಗನಾಗಿರಬಹುದು[1]; ಇಲ್ಲವೆ ಹಾನಗಲ್ಲ ಕದಂಬ ಮನೆತನದ ತ್ರೈಲಪನಾಗಿರಬಹುದು[2]. ಆದರೆ, ಇವರಿಬ್ಬರಿಗೂ ಗಂಗಿದೇವನೆಂಬ ಮಗನಿದ್ದ ವಿಷಯ, ಇನ್ನೂ ವಿದಿತವಿಲ್ಲ. ಜಯಕೇಶಿಗೆ ಸಾವಿತ್ರಿಯೆಂಬ ಹಿರಿಯ ಮಗಳಿದ್ದ ಸಂಗತಿ ಮತ್ತು ಆತನಿಗೆ ತ್ರಿಭುವನಮಲ್ಲನೆಂಬ ಸಹೋದರನಿದ್ದ ವಿಷಯ, ಈ ಶಾಸನದಿಂದ ಹೊಸದಾಗಿ ಕಂಡುಬರುತ್ತವೆ. ಡಾ. ಫ್ಲೀಟರ ಬೊಂಬಾಯಿ ಗೆಝೆಟೀಯರ[3]ನಲ್ಲಿ, ಹಾಗೂ ಡಾ. ಮೊರೆಸರ 'ಕದಂಬ ಕುಲ[4]'ದಲ್ಲಿ ಈ ಹೆಸರುಗಳು ಬಂದಿರುವುದಿಲ್ಲ.

ತಂಬೂರಿನ ಮೊದಲನೆಯ ಶಾಸನದಲ್ಲಿ ಜಯಕೇಶಿಯ ಅಕ್ಕ ಪದ್ಮಲದೇವಿಯ ಹೆಸರು ಹೊಸದಾಗಿ ಬಂದಿದೆ. ಆದುದರಿಂದ **ಗೋವೆಯ ಕದಂಬ** ಮನೆತನದ ಈ ನಡುವಿನ ಕಾಲದ **ವಂಶಾವಳಿ** ಹೀಗೆ ಆಗುತ್ತದೆ[5] :

**ವಿಜಯಾದಿತ್ಯ I**

- ಪದ್ಮಲದೇವಿ
- **ಜಯಕೇಶಿ II**
  - **ಹಿರಿಯರಸಿ ಮೈಳಲ ಮಹಾದೇವಿ**
    - **ಸಾವಿತ್ರಿ** (ಪತಿ : ಗಂಗಿದೇವ)
    - **ಪೆರ್ಮಾಡಿದೇವ**
    - **ವಿಜಯಾದಿತ್ಯ II**
- ಉದಯಮರ್ಮದೇವ
- ತ್ರಿಭುವನಮಲ್ಲ

**ಶಾಸನ ಸಾರಾಂಶ** : ಎರಡನೆಯ ಜಯಕೇಶಿಯ ಆಳಿಕೆಯಲ್ಲಿ ತಂಬೂರ ಸಂಸ್ಥಾನವು ಮಾದಿರಾಜ ದಂಡನಾಯಕನ ಪ್ರಭುತ್ವದಲ್ಲಿ ಇತ್ತು. ಮಾದಿರಾಜನ ಪ್ರಶಸ್ತಿ ಹಾಗೂ ವರ್ಣನೆ ಶಾಸನದಲ್ಲಿ ಸವಿಸ್ತರವಾಗಿ ಬಂದಿದೆ. ಆತನ ತಂದೆ

---

1 Epi. Ind. XXVII p. 73; Akkalkot Inscription of Siadhar Indarasa; S.I.I. IX–I. No. 221, pp. 224–25, C.A.D.1120; A. P. G. A. S. No. 3. Avancha, Mn. 40. p. 28 A. D. 1113, ck

2 Kadamba Kula, pp. 126, ff.

3 Bombay Government Gazetteer. Vol-I. Part II. p. 565.

4 The Kadamba Kula, pp. 167

5 The Kadambas of Goa and their Inscriptions: Thesis: Dr. R. N. Gurav, unpublished; genealogical table, pp. 28-29

ಚಂಗಚಮೂಪ, ತಾಯಿ ಆಚಲದೇವಿ, ಅಣ್ಣ ಜಯಕೇಶಿ ಹಾಗೂ ಮಗ ನಾರಸಿಂಹ. ಮೊದಲ ಶಾಸನದಲ್ಲಿ ಇದೇ ಪ್ರಕಾರ ಅವರ ವಂಶಾವಳಿ ಬಂದಿದೆ. ಅದರಲ್ಲಿ ಅಣ್ಣನಾದ ಜಯಕೇಶಿಗೆ ಪ್ರಾಮುಖ್ಯ; ಇದರಲ್ಲಿ ತಮ್ಮನಾದ ಮಾಧವನಿಗೆ ಪ್ರಾಶಸ್ತ್ಯ. ಮುಂದೆ, ಮಾದಿರಾಜನ ಅಧೀನನಾದ ಸೇಣಿಗ ಬೊಪ್ಪನ ಉಲ್ಲೇಖ ಬರುತ್ತದೆ. ಬೊಪ್ಪಣನ ತಂದೆ ಬೀರ, ತಾಯಿ ಮಾರವ್ವೆ ಮತ್ತು ಅಣ್ಣ ದಮ್ಮಣ್ಣ. ಆತನ ಗುರುಗಳು ಕುಂದುಂಗೊಳದ ಸ್ವಯಂಭು ದೇವಸ್ಥಾನದ ಆಚಾರ್ಯ ವಾಗೀಶ್ವರದೇವರು. ಆ ಗುರುಗಳ ಸಂಪ್ರದಾಯ ಮೂವರ ಕೋಣೆ, ಶಕ್ತಿಪರ್ಷೆ, ಪರ್ವತಾವಳಿ. ಬೊಪ್ಪನು ತಂಬೂರ ಗ್ರಾಮದಲ್ಲಿ ಬಂದು ಜೌಡೇಶ್ವರ ದೇವಾಲಯವನ್ನು ಕಟ್ಟಿಸಿದನು. ಈ ಶಿವಾಲಯಕ್ಕೆ ಮಾದಿರಾಜ ದಂಡನಾಯಕನು ಉಕ್ತವಾದ ತಿಥಿಯಲ್ಲಿ ದೇವರ ಸೇವೆಗಾಗಿ ತೋಟ, ಗದ್ದೆ, ಹಕ್ಕಲುಗಳನ್ನು ದಾನ ಮಾಡಿದನು. ನಕರ ಸಮೂಹದವರು, ಪನ್ನವಣಿಗರು, ತೇಲಿಗರಯ್ವತ್ತೊಕ್ಕಲು, ಸೇಣಿಗರೊಕ್ಕಲುಗಳು—ಹೀಗೆ ಬೇರೆ ಬೇರೆ ಸಂಘ-ಸಂಸ್ಥೆಯವರು ದೇವರಿಗೆ ಕೆಲವು ದಾನಗಳನ್ನು ಬಿಟ್ಟರು. ದೇವಾಲಯವನ್ನು ಕಟ್ಟಿದ ಶಿಲಾಕರ್ಮಿಗಳಾದ ಕೇತ ಮತ್ತು ಮುದ್ದ ಇವರಿಗೆ ಮಾದಿರಾಜ ದಂಡನಾಯಕ ಹಾಗೂ ವಾಗೀಶ್ವರ ದೇವರು ಭೂಮಿ ಹಾಗೂ ಮನೆಗಳ ದಾನ ನೀಡಿದರು.

ಪ್ರಸ್ತುತ ಶಾಸನ ಹಾಗೂ ಅದೇ ತೇದಿಯ ಹಲ್ಯಾಳ[2] ಶಾಸನಗಳು ಎರಡನೇ ಜಯಕೇಶಿಯ ಕೊನೆಯ ಶಾಸನಗಳಾಗಿರುತ್ತವೆ. ಇಲ್ಲಿಯವರೆಗೆ ಗೊತ್ತಿದ್ದ ಶಾಸನಗಳಲ್ಲಿ ಖಾನಾಪೂರ ತಾಲೂಕಿನ ಅಸೋಗೆಯ ತಾಮ್ರಪಟವು[3] (ಕ್ರಿ.ಶ. 1134) ಈ ಜಯಕೇಶಿಯ ಕೊನೆಯ ಶಾಸನ. ಪ್ರಸ್ತುತ ಶಾಸನ ಹಾಗೂ ಹಲ್ಯಾಳ ಶಾಸನಗಳಿಂದ ಆತನ ಕಾಲ 10 ವರ್ಷಗಳಿಂದ ಮುಂದೆ ಸಾಗುತ್ತದೆ. ಕ್ರಿ.ಶ. 1147-48 ರಿಂದ ಜಯಕೇಶಿಯ ಹಿರಿಯ ಮಗನಾದ ಶಿವಚಿತ್ತ ಪೆರ್ಮಾಡಿದೇವನ ಆಳಿಕೆ ಪ್ರಾರಂಭವಾಗುತ್ತದೆ. ಅಂದರೆ ಪ್ರಸ್ತುತ ಶಾಸನ ಜಯಕೇಶಿಯ ಆಳಿಕೆಯನ್ನು, ಅದರ ಕೊನೆಯ ಭಾಗದ ಸಮೀಪಕ್ಕೆ ಒಯ್ದು ಮುಟ್ಟಿಸುತ್ತದೆ. ತಂಬೂರಿನ ಮೊದಲನೆಯ ಶಾಸನವು ಕ್ರಿ.ಶ. 1125 ರಲ್ಲಿ ಕಂಡರಿಸಿದ್ದು. ಅದು ಜಯಕೇಶಿಯ ಸ್ವತಂತ್ರ ಆಳಿಕೆಯ ಮೊದಲ ವರ್ಷದ ಶಾಸನವಾಗಿರುತ್ತದೆ. ಹೀಗೆ ತಂಬೂರಿನಲ್ಲಿ ಜಯಕೇಶಿಯ ಮೊದಲ ಹಾಗೂ ಕೊನೆಯ ಶಾಸನಗಳು ದೊರಕುತ್ತವೆ.

---

1 Epi. Ind, Vol. XIII, pp. 316, ff. Narendra Inscription

2 The Kadambas of Goa and their Inscriptions; Inscription No. 38

3 B.E.S.M. Publication. No. 41. pp. 9 ff. also Epi. Ind XXVI pp. 304 ff

**ರಾಜ್ಯ ವಿಸ್ತಾರ**: ಈ ಶಾಸನದಲ್ಲಿ (ಕ್ರಿ. ಶ. 1144) ಹೇಳಿದ ಗೋವೆಯ ಕದಂಬರ ರಾಜ್ಯ ವಿಸ್ತಾರ, ಮೊದಲನೆಯ ಶಾಸನದಲ್ಲಿ (ಕ್ರಿ. ಶ. 1125) ಇದ್ದಂತೆಯೇ ಇದೆ. ಅಂದರೆ ಜಯಕೇಶಿಯು ಸ್ವತಂತ್ರವಾಗಿ ರಾಜ್ಯವಾಳಲು ಪ್ರಾರಂಭಮಾಡಿದಾಗ ಹಾಗೂ ಆತನ ಕೊನೆಯ ವರ್ಷಗಳಲ್ಲಿ ಆತನ ರಾಜ್ಯವಿಸ್ತಾರ ಒಂದೇ ಸಮನಾಗಿತ್ತು.

**ಶಾಸನ ತಿಥಿ**: 46-47 ನೇ ಸಾಲುಗಳಲ್ಲಿ 'ಸಕವರ್ಷ 1066 ನೆಯ ರಕ್ತಾಕ್ಷಿ ಸಂವತ್ಸರದ ಪುಷ್ಯದಮಾವಾಸ್ಯೆ ಸೋಮವಾರ ವುತ್ತರಾಯಣ ಸಂಕ್ರಮಣ'ವೆಂದು ಬಂದಿದೆ. ರಕ್ತಾಕ್ಷಿ ಸಂವತ್ಸರವು ಶಕವರ್ಷ 1066 ಕ್ಕೆ ಸರಿಯಾಗಿ ಗತವರ್ಷ ಬರುತ್ತಿದ್ದು ಅದಕ್ಕೆ ಸಮಾನವಾಗಿ ಕ್ರಿ. ವ. 1044 ಆಗುತ್ತದೆ. ಈ ಸಂವತ್ಸರದಲ್ಲಿ ಪುಷ್ಯ ಅಮಾವಾಸ್ಯೆ ಮಂಗಳವಾರ ಬರುತ್ತಿದ್ದು, ಶಾಸನದಲ್ಲಿ ಸೋಮವಾರವೆಂದು ಹೇಳಲಾಗಿದೆ. ಈ ಅಮಾವಾಸ್ಯೆ ಮಂಗಳವಾರ ದಿವಸ ಸೂರ್ಯೋದಯದ ನಂತರ 6 ಘಂಟೆಯವರೆಗಿದ್ದ ಮೂಲಕ ದಾನಕ್ಕೋಸ್ಕರ ಸೋಮವಾರವೆಂದು ಹೇಳಿದಂತೆ ಕಾಣುತ್ತದೆ. ಆದುದರಿಂದ ಪ್ರಸ್ತುತ ತಿಥಿ **ಕ್ರಿ. ಶ. 1144 ಡಿಸೆಂಬರ 25 ಸೋಮವಾರಕ್ಕೆ** ಸರಿಹೋಗುತ್ತದೆ. ಉತ್ತರಾಯಣ ಸಂಕ್ರಮಣವು ಅದಕ್ಕೂ ಹಿಂದಿನ ದಿವಸವೆಂದರೆ ರವಿವಾರ ತಾ. 24ನೇ ದಿವಸ ಸೂರ್ಯೋದಯದ ನಂತರ 14 ಘಂಟೆ 30 ನಿಮಿಷಕ್ಕೆ ಸಂಭವಿಸಿತ್ತು.

**ಶಾಸನದಲ್ಲಿಯ ಭೌಗೋಲಿಕ ಉಲ್ಲೇಖಗಳು**: (1) ಗೋವೆ (ಸಾಲು 7); (2) ಕೊಂಕಣವೊಂಬಯ್ಯೂರು (ಸಾ. 7); (3) ಪಲಸಿಗೆ ಪನ್ನಿಚ್ಛಾಸಿರ (ಸಾ. 7); (4) ಕವಡಿದ್ವೀಪ ಸಮಾಲಕ್ಕ (ಸಾ. 7-8); (5) ಮಾವಳೆನಾಡು (ಸಾ. 22, 44-45); (6) ತಮ್ಮಿಯೂರು ಪನ್ನಿರ್ಪಳ್ಳಿ (ಸಾ. 22-23, 45); (7) ತಾಂಬ್ರಪುರಂ (ಸಾ. 25, 39); (8) ಕುಂದುಂಗೊಳ (ಸಾ. 42); (9) ಹುಲಿ-ಗೋಡು ಪನ್ನಿರ್ಪಳ್ಳಿ (ಸಾ. 45); (10) ಮಾವಳೆ ಪನ್ನಿರ್ಪಳ್ಳಿ (ಸಾ. 45); (11) ಕೋಟೆ ಕಿಱುವತ್ತಿ (ಸಾ. 45); (12) ನೆಲ್ಕುಂದ (ಸಾ. 45-46); (13) ಗಂಗಾಸಾಗರ (ಸಾ. 62); (14) ವಾರಣಾಸಿ (ಸಾ. 62); (15) ಪ್ರಯಾಗೆ (ಸಾ. 62); (16) ಕುರುಕ್ಷೇತ್ರ (ಸಾ. 62); (17) ಗಂಗಾಯಮುನೆಗಳೆರಡರ ಸಂಗಮ (ಸಾ. 64).

1. **ಗೋವೆ**[1]: ಇದು ತರುವಾಯದ ಕದಂಬರ ಬಹುಕಾಲದಿಂದ ನಡೆದು ಬಂದ ರಾಜಧಾನಿ. ಹೀಗಿರುವುದರಿಂದ ಡಾ. ಫ್ಲೀಟರು ಈ ತರುವಾಯದ ಕದಂಬರಿಗೆ ಗೋವೆಯ ಕದಂಬರೆಂದು ಕರೆದರು. ಅದೇ ಹೆಸರು ಈ ಮನೆತನಕ್ಕೆ ರೂಢವಾಗಿದೆ. ಗೋವೆಗೆ ಕನ್ನಡದಲ್ಲಿ ಗೋವಗೆಯೆಂದೂ ಹಾಗು ಸಂಸ್ಕೃತದಲ್ಲಿ ಗೋಪಾ, ಗೋಪಕಪಟ್ಟಣ, ಗೋಪಕಪುರೀ ಎಂಬ ಹೆಸರುಗಳು ಶಾಸನಗಳಲ್ಲಿ

1 ಅಕ್ಷಾಂಶ 15° 30′; ರೇಖಾಂಶ 73° 57′. Indian Atlas Sheet No. 41

ಕಂಡುಬರುತ್ತವೆ. ವಿಜಯನಗರ ಅರಸರು ಮತ್ತು ಪೋರ್ತುಗೀಜರು ಈ ಗೋವೆಯನ್ನು ತಮ್ಮ ಆಡಳಿತದ ರಾಜಧಾನಿಯಾಗಿಟ್ಟುಕೊಂಡಿದ್ದರು. ಈಗ ನಕಾಶೆಯಲ್ಲಿ ಗೋವೆಯೆಂದು ತೋರಿಸಿರುವ ಗ್ರಾಮದ ಪೂರ್ವಕ್ಕೆ ಸ್ವಲ್ಪ ಅಂತರದಲ್ಲಿ ಮೂಲ ಇಲ್ಲವೆ ಹಳೆಯ ಗೋವೆಯಿದ್ದು, ಆ ಸ್ಥಳದಲ್ಲಿ ಇನ್ನೂ ಕೆಲವು ಪ್ರಾಚೀನ ಅವಶೇಷಗಳು ಕಂಡುಬರುತ್ತವೆ. ಗೋವೆಯು ಈ ಕದಂಬರ ರಾಜಧಾನಿಯೆಂಬ ಉಲ್ಲೇಖ ಮೊದಲನೆಯ ಸಲ ಅಮ್ಮಿನಭಾವಿಯ ಒಂದನೆಯ ಜಯಕೇಶಿಯ ಶಾಸನದಲ್ಲಿ[1] (ಕ್ರಿ. ಶ. 1071–72) ಬರುತ್ತದೆ. ಗೋವೆಯು ರಾಜಧಾನಿಯಾಗುವುದಕ್ಕಿಂತ ಮುಂಚೆ ಚಂದ್ರಾಪುರ[2] ಮತ್ತು ಅಣಿಲಾಪುರ[3]ಗಳು ತರುವಾಯದ ಕದಂಬರ ರಾಜಧಾನಿಗಳಾಗಿದ್ದವು.

2 ಕೊಂಕಣವೊಂಭಯ್ನೂಱು, (4) ಕವಡಿದ್ವೀಪ ಸಪಾದಲಕ್ಷ, (5) ಮಾವಳಿ ನಾಡು (ಮಾವಳಿಯಯ್ನೂಱು,) (6) ತಮ್ಮಿಯೂರು ಪನ್ನಿರ್ಪಳ್ಳಿ, (7) ತಾಂಬ್ರಾಪುರ ಮತ್ತು (11) ಕೋಟಿಕಿಱುವತ್ತಿ –ಇವು ಮೊದಲನೆಯ ಶಾಸನದಲ್ಲಿ ಬಂದಿವೆ.[14]

3 **ಪಲಸಿಗೆ ಪನ್ನಿಚ್ಛಾಸಿರ** : ಪಲಸಿಗೆ ಗ್ರಾಮವನ್ನು ಮುಖ್ಯ ಮಾಡಿಕೊಂಡ, ಸಾಂಪ್ರದಾಯಿಕವಾಗಿ ಹನ್ನೆರಡು ಸಾವಿರ ಹಳ್ಳಿಗಳುಳ್ಳ ಆಡಳಿತದ ಒಂದು ವಿಭಾಗ. ಶಾಸನ ಕಾಲದಲ್ಲಿ ಅದರಲ್ಲಿ 1100 ಹಳ್ಳಿಗಳು ಮಾತ್ರ ಇದ್ದವು. ಪಲಸಿಗೆ ಗ್ರಾಮ ಈಗಿನ ಹಲಸಿ.[5] ಇದು ಬೆಳಗಾಂವ ಜಿಲ್ಲೆಯ ಖಾನಾಪುರ ತಾಲೂಕಿನಲ್ಲಿ ಖಾನಾಪುರದಿಂದ ದಕ್ಷಿಣ-ಪೂರ್ವಕ್ಕೆ ಸುಮಾರು 14 ಕಿ.ಮೀ. ಅಂತರದಲ್ಲಿದೆ.[6]

8 **ಕುಂದಗೋಳ** : ಈಗಿನ ಕುಂದಗೋಳ ಧಾರವಾಡ ಜಿಲ್ಲೆಯ ಒಂದು ತಾಲೂಕ ಸ್ಥಳ. ಹುಬ್ಬಳ್ಳಿಯಿಂದ ದಕ್ಷಿಣಪೂರ್ವಕ್ಕೆ ಸುಮಾರು 15 ಕಿ.ಮೀ. ಅಂತರದಲ್ಲಿದೆ. ಇಲ್ಲಿ ಒಂದು ಶಂಭುಲಿಂಗ ಹೆಸರಿನ ಪ್ರಾಚೀನ ದೇಗುಲವುಂಟು. ಅದೇ ಶಾಸನದಲ್ಲಿ ಹೇಳಿದ ಸ್ವಯಂಭು ದೇವಸ್ಥಾನವಾಗಿರಬಹುದು.

9 **ಹುಲಿಗೋಡು ಪನ್ನಿರ್ಪಳ್ಳಿ** : ಹುಲಿಗೋಡು ಗ್ರಾಮದ ಉಲ್ಲೇಖ ಮೊದಲನೆಯ ಶಾಸನದಲ್ಲಿ ಬಂದಿದೆ. ಈ ಹುಲಿಗೋಡ ಪ್ರಮುಖವಾಗಿದ್ದ ಹನ್ನೆರಡು ಹಳ್ಳಿಗಳ ಒಂದು ಚಿಕ್ಕ ವಿಭಾಗ.

---

1 S.II. XI, p. II ; No. 121, p. 139
2 ಗೋವಾರಾಜ್ಯದಲ್ಲಿಯ ಸಾಲ್ಸೆಟ್ಟ ತಾಲೂಕಿನ ಈಗಿನ ಚಾಂದೋರ
3 ಧಾರವಾಡ ತಾಲೂಕಿನ ಈಗಿನ ಅಳ್ನಾವರ
4 ಸಾಧನೆ, 3–3
5 ಅಕ್ಷಾಂಶ 15°31′, ರೇಖಾಂಶ 74°39′ ; Indian Atlas Sheet No. 41
6 ಹೆಚ್ಚಿನ ವಿವರಗಳಿಗಾಗಿ ಸಾಧನೆ 3–3 ನೋಡಿರಿ

10 **ಮಾವಳೆ ಪನ್ನಿರ್ಚಳ್ಳಿ** : ಮೊದಲನೆಯ ಶಾಸನದಲ್ಲಿ ಮಾವಳ್ಳಿ ಹಾಗೂ ಮಾವಳೆಯುಯ್ಯೂಜು ಎಂಬ ಉಲ್ಲೇಖವಿದೆ. ಇಲ್ಲಿ ಮಾವಳೆ ಹನ್ನೆರಡು ಹಳ್ಳಿಗಳೆಂದು ಉಲ್ಲೇಖವಾಗಿದೆ. ಮಾವಳ್ಳಿ ಗ್ರಾಮ ಮುಖ್ಯವಾಗಿದ್ದ ಹನ್ನೆರಡು ಹಳ್ಳಿಗಳ ಒಂದು ಚಿಕ್ಕ ವಿಭಾಗ. ಈಗ ಧಾರವಾಡ ಜಿಲ್ಲೆ, ಧಾರವಾಡ ತಾಲೂಕ, ಧಾರವಾಡ ಹೋಬಳಿ ಎಂದು ಇರುವಂತೆ, ಶಾಸನಕಾಲದಲ್ಲಿ ಮಾವಳೆಯುಯ್ಯೂಜು ಹಾಗೂ ಮಾವಳೆಪನ್ನಿರ್ಚ್ಛಳ್ಳಿಯೆಂದು ಇದ್ದುವು.

11 **ನೆಲುಂದ** : ಇದು ಈಗಿನ ಜೆಲ್ವಂತರ. ಕಲಘಟಗಿಯಿಂದ ದಕ್ಷಿಣಕ್ಕೆ ಸುಮಾರು 5 ಕಿ. ಮಿ. ಅಂತರದಲ್ಲಿದೆ. ಈ ಗ್ರಾಮದಲ್ಲಿರುವ ಶಾಸನದಲ್ಲಿ (ಕ್ರಿ. ಶ. 1149) ಇದರ ಹೆಸರು ನೆಲ್ಕುಂದ ಎಂದು ಬಂದಿದೆ.[1]

12 **ಗಂಗಾಸಾಗರ** : ಗಂಗಾನದಿ ಹಾಗೂ ಬಂಗಾಲ ಉಪಸಾಗರ ಇವುಗಳ ಸಂಗಮದಲ್ಲಿದ್ದ ಪಟ್ಟಣ. ಅದೊಂದು ಪವಿತ್ರವಾದ ತೀರ್ಥಯಾತ್ರಾಸ್ಥಳವಾಗಿತ್ತು. ಮಹಾಭಾರತದಲ್ಲಿ ಅದನ್ನು ಮಹತ್ವದ ಪುಣ್ಯಕ್ಷೇತ್ರವೆಂದು ಕರೆಯಲಾಗಿದೆ. ಅದು ವಂಗದೇಶದ ಪುರಾತನ ರಾಜಧಾನಿಯೂ ಆಗಿತ್ತು. ಶಬ್ದಕಲ್ಪದ್ರುಮದಲ್ಲಿ ಉದಾಹೃತವಾದ, ಕೂರ್ಮಪುರಾಣದಲ್ಲಿಯ ಪದ್ಯ ಅದನ್ನು ಹೀಗೆ ವರ್ಣಿಸುತ್ತದೆ :

> 'ಗಂಗಾಯಾಂ ಚ ಜಲೇ ಮೋಕ್ಷೋ ವಾರಣಸ್ಯಾಂ ಜಲೇಸ್ಥಲೇ ।
> ಅಂತರಿಕ್ಷೇ ಚ ಗಂಗಾಯಾಂ ಗಂಗಾಸಾಗರ ಸಂಗಮೇ ॥ "

ಗಂಗಾನದಿಯು ಪ್ರವಾಹದಲ್ಲಿ ಬದಲಾವಣೆಯಾದ ಕಾರಣ, ಹಾಗೂ ವಂಗ ರಾಜ್ಯದ ಇಳಿಗಾಲದ ಮೂಲಕ ಗಂಗಾಸಾಗರದ ಮಹತ್ವವು ದಿನೇ ದಿನೇ ಕಡಿಮೆಯಾಗುತ್ತಾ ಹೋಯಿತು. ಕ್ರಿ. ಶ. 1842ರ ಸುಮಾರಿಗೆ ಈ ಪಟ್ಟಣವು ಸಮುದ್ರದ ತೆರೆಗಳಿಂದ ಪೂರ್ತಿ ನಾಶವಾಗಿಹೋಗಿದೆ. ಆದರೆ ಶಾಸನಕಾಲದಲ್ಲಿ ಅದೊಂದು ಅರ್ಘ್ಯ ತೀರ್ಥವಾಗಿದ್ದು ಅದರ ಮಹಿಮೆ ಕರ್ನಾಟಕದಲ್ಲಿಯೂ ಹರಡಿತ್ತು.[2]

13 **ವಾರಣಾಸಿ** : ವಾರಣಾ ಮತ್ತು ಅಸಿ ನದಿಗಳ ಸಂಗಮದಲ್ಲಿರುತ್ತದೆ. ಹೀಗಿರುವುದರಿಂದ ಈ ಸ್ಥಳಕ್ಕೆ ವಾರಣಾಸಿಯೆಂದು ಹೆಸರು ಬಂದಿದೆ. ಮಹಾಭಾರತದಲ್ಲಿ ಇದು ಗಂಗಾ ಮತ್ತು ಗೋಮತಿ ನದಿಗಳ ಸಂಗಮದಲ್ಲಿತ್ತೆಂದು ಉಲ್ಲೇಖವಿದೆ. ವಾರಣಾಸಿಯು ಕಾಶಿ ರಾಜ್ಯದ ರಾಜಧಾನಿಯಾಗಿತ್ತು. ಇಲ್ಲಿಯ ವಿಶ್ವೇಶ್ವರ

---

1 The Kadambas of goa and their Inscriptions : Part III, Inscription No. 39. pp. 621-26

2 D.C. Sircar : Studies in the geography of Ancient and Mediaeval India; pp. 172-183

ದೇವಾಲಯು ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದು; ವೀರಶೈವರ ಪಂಚ ಪೀಠಗಳಲ್ಲೀ ಒಂದು ಆಗಿದೆ. ಶೈವರಿಗೆ ಪರಮ ಪವಿತ್ರವಾದ ಕ್ಷೇತ್ರವಿದು.[1]

14 **ಪ್ರಯಾಗೆ** : ಗಂಗಾ-ಯಮುನೆಗಳೆರಡರ ಸಂಗಮಸ್ಥಳದಲ್ಲಿರುವ ಪುಣ್ಯ ತೀರ್ಥಸ್ಥಾನ. ಅಲಹಾಬಾದಕ್ಕೆ ತೀರ ಹತ್ತಿರವಿದ್ದು ಇದೇ ಅಲಹಾಬಾದವಾಗಿದೆ.

15 **ಕುರುಕ್ಷೇತ್ರ** : 'ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ' ಎಂಬ ಭಗವದ್ಗೀತೆಯ ಮೊದಲನೆಯ ಶ್ಲೋಕ ಬಹು ಜನರಿಗೆ ವಿದಿತವಿರುತ್ತದೆ. ಇದು ಈಗಿನ ಠಾಣೇಶ್ವರ. ಠಾಣೇಶ್ವರದ ಪರಿಸರದಲ್ಲಿದ್ದ ಸೋನಪ್ರಸ್ಥ (ಈಗಿನ ಸೋನಪತ್), ಪಾಣಿಪ್ರಸ್ಥ (ಈಗಿನ ಪಾನಿಪತ್), ಅಮಿನ ಮುಂತಾದ ಸ್ಥಳಗಳು ಈ ಕುರುಕ್ಷೇತ್ರದಲ್ಲಿ ಸಮಾವೇಶವಾಗಿದ್ದುವು. ಠಾಣೇಶ್ವರದ ದಕ್ಷಿಣಕ್ಕೆ ಐದು ಮೈಲುಗಳಲ್ಲಿದ್ದ ಈ ಅಮಿನವೇ ಅಭಿಮನ್ಯು ಕ್ಷೇತ್ರವಾಗಿದ್ದು, ಚಕ್ರವ್ಯೂಹ ದಲ್ಲಿ ಕುಮಾರ ಅಭಿಮನ್ಯುವಿನ ವಧೆ ಹಾಗೂ ಅರ್ಜುನನಿಂದ ಅಶ್ವತ್ಥಾಮನ ಶಿರಚ್ಛೇದ ಇಲ್ಲಿ ನಡೆದುವು. ಠಾಣೇಶ್ವರದ ದಕ್ಷಿಣಕ್ಕೆ ಹನ್ನೊಂದು ಮೈಲುಗಳಲ್ಲಿದ್ದ 'ನಗ್ದು' ಎಂಬಲ್ಲಿ ಭೀಷ್ಮನು ತೀರಿಕೊಂಡನು. ಠಾಣೇಶ್ವರದ ದಕ್ಷಿಣ-ಪಶ್ಚಿಮಕ್ಕೆ 1 ಕಿ. ಮೀ. ಅಂತರದಲ್ಲಿ ಭಾರತಯುದ್ಧದಲ್ಲಿ ಮಡಿದ ವೀರರನ್ನು ದಹನಮಾಡಿದ ಸ್ಮಶಾನಭೂಮಿ ಇರುತ್ತದೆ. ಈ ಪ್ರಕಾರ ಕೌರವ-ಪಾಂಡವರ ಧರ್ಮಯುದ್ಧದಿಂದ ಪುನೀತವಾದ ಇದು, ಒಂದು ಯಾತ್ರಾಸ್ಥಳವಾಯಿತು. ಸ್ಥಾಣು ತೀರ್ಥವೆಂದು ಅದಕ್ಕೆ ಹೆಸರು. ಮಹಾದೇವನ ಸ್ಥಾಣುನಾಮಾಂಕಿತ ದೇವಾಲಯ, ಠಾಣೇಶ್ವರದ ದಕ್ಷಿಣಕ್ಕೆ ಅರ್ಧಮೈಲಿನಲ್ಲಿತ್ತು. ಹನ್ನೊಂದನೆಯ ಶತಮಾನದಲ್ಲಿ ಅದು ಖ್ಯಾತಿವೆತ್ತ ತೀರ್ಥಯಾತ್ರಾಸ್ಥಳವಾಗಿತ್ತೆಂದು ಅಲ್ಬೆರುನಿ ಬರೆದಿರುತ್ತಾನೆ.[2] ಕರ್ನಾಟಕದ ಈ ಕಾಲದ ಶಾಸನಗಳಲ್ಲಿ ಅದೊಂದು ಅರ್ಘ್ಯಕ್ಷೇತ್ರವೆಂದು ಮೇಲಿಂದಮೇಲೆ ಉಲ್ಲೇಖ ಗಳು ಬರುತ್ತವೆ.

16 **ಗಂಗಾಯಮುನೆಗಳೆರಡಱ ಸಂಗಮ** : ಇದುವೇ ಪ್ರಯಾಗೆ.

**ಶಾಸನದಲ್ಲಿಯ ಭಾಷಿಕ ಹಾಗೂ ಪಾರಿಭಾಷಿಕ ಶಬ್ದಗಳು** :

1 ತ್ರೈಭೋಗಾಭ್ಯಂತರಂ (ಸಾ. ೧೧); ಪಿರಿಯಗಳೆ (ಸಾ. ೫೦); ಗರ್ದ್ದೆ (ಸಾ. ೫೦); ಪಕ್ಕಲ (ಸಾ. ೫೧), ಸಟ್ಟುಗ (ಸಾ. ೫೩); ಸೊಂಟಿಗೆ (ಸಾ. ೫೪); ತೆಲ್ಲಗರಯ್ವತ್ತೊಕ್ಕಲು (ಸಾ. ೫೪).*

---

1 Nando Lal Dey : The geographical Dictionary of Ancient Mediaeval India; pp. 23-25

2 ಅದೇ, ಪುಟ, 110

* ಈ ಶಬ್ದಗಳ ಟಿಪ್ಪಣಿಗಳು ಮೊದಲನೆಯ ಶಾಸನದಲ್ಲಿ ಬಂದಿವೆ

2 **ವೇಳಾಪಟ್ಟಣ** (ವೇಲಾಪಟ್ಟಣ) (<ಸಾ. ೪–೫) : ಬಂದರು, ರೇವು.

3 **ಆದಿರಾಜ ಚರಿತಂ** (ಸಾ. ೫): ಆದರ್ಶಭೂತರಾದ ರಾಜರಂತೆ ಚಾರಿತ್ರ್ಯವುಳ್ಳವನು. ಇದೇ ಪ್ರಕಾರ ಕಲಚುರಿಯ ಜೋಗಮರಸನನ್ನು ಹಾಗೂ ಸೋಯಿದೇವರಸನನ್ನು ಮಡಗಿಹಾಳ[1] ಮತ್ತು ಮುತ್ತಗೆ[2] ಶಾಸನಗಳಲ್ಲಿ 'ವಿಶ್ರುತನಾದಿರಾಜಬಳವತ್ತೇಂ ಜೋಗಮಂ ಜೋಗಮಂ' ಎಂದು 'ಆದಿರಾಜಚರಿತಂ' ಎಂದು ವರ್ಣಿಸಿದ ಉಲ್ಲೇಖಗಳು ಬರುತ್ತವೆ. ಆದಿರಾಜರಾರೆಂಬುದರ ವಿಷಯದಲ್ಲಿ ನೀಲಗುಂದ ಶಾಸನದಲ್ಲಿ[3] 'ಯೋ ಹಸತಿ ಗುಣೈರಾದಿರಾಜಾನ್ ನಳಾದೀನ್' ಎಂದು ತೈಲಪನಿಗೆ ಹೋಲಿಸಿ, ಹರಿಹರ ಶಾಸನದಲ್ಲಿ[4] 'ಪುರುಪುಚ್ಛಂ. ಸಗರಂ, ಭಗೀರಥನೃಪಾಳಂ, ಕಾರ್ತವೀರ್ಯ್ಯಾರ್ಜ್ಜುನಂ ಭರತಂ, ಪುರೂರವಂ, ಪೃಥು, ದಿಳೀಪಮುಖ್ಯವಾದ ಆದಿರಾಜರ್' ಎಂದು ಪೊಲಾಳ್ವನಿಗೆ ಹೋಲಿಸಿ, ಹಾಗೂ ಲಕ್ಷ್ಮೇಶ್ವರ ಶಾಸನದಲ್ಲಿ[5] 'ನಳ, ನಹುಷ ನೃಗಾದ್ಯಾದಿ ಭೂಪಾಳತಾಳೀಚರಿತಂ' ಎಂದು ಯುವರಾಜ ಜಯಸಿಂಹನಿಗೆ ಹೋಲಿಸಿ ವರ್ಣನೆಗಳು ಬರುತ್ತವೆ. ಹೀಗೆ ನಳ, ನಹುಷ, ನೃಗ, ಪುರುಪುಚ್ಛ (ಕೃತ್ಸ), ಸಗರ, ಭಗೀರಥ, ಕಾರ್ತವೀರ್ಯಾರ್ಜ್ಜುನ, ಭರತ, ಪುರೂರವ, ಪೃಥು, ದಿಳೀಪಾದಿ ಅರಸರು ಆದಿರಾಜರೆಂದು ಗಣಿಸಲ್ಪಡುತ್ತಿದ್ದರು.

4 **ಹರಭೂಪ್ರಸೂತಂ** (ಸಾ. 5) : ಕದಂಬ ವಂಶವು ಹರ ಮತ್ತು ಧರಣಿ ಇವರ ಸಂಯೋಗದಿಂದ ಉತ್ಪನ್ನವಾಗಿರುತ್ತದೆಯೆಂದು ತರುವಾಯದ ಕದಂಬರ ಕಾಲದ ಗ್ರಹಿಕೆ. ಈ ಕದಂಬರ ಪ್ರಶಸ್ತಿಯಲ್ಲಿ 'ಹರಧರಣೀಪ್ರಸೂತ' ಎಂಬ ಉಲ್ಲೇಖವು ಮೇಲಿಂದ ಮೇಲೆ ಬರುತ್ತದೆ. ನರೇಂದ್ರ ಶಾಸನದಲ್ಲಿ[6] ಈ ಪ್ರಸಂಗದ ವರ್ಣನೆ ಈ ಬಗೆಯಾಗಿರುತ್ತದೆ :

> ಶ್ರೀಮತ್ತ್ರೈಲೋಕ್ಯನಾಥಂ ತ್ರಿಪುರಜಯಮಂ ಭಾಳಲೋಳಾಕ್ಷಿಯಿಂದು-
> ದ್ದಾಮಂ ಮಾಡಲ್ಕೆ ಬೇಗಂ ಶ್ರಮಮೊಡರಿಸೆ ಬಂದೊಂದು ಭಾಸ್ವತ್ಕದಂಬಾ
> ರಾ ಮೋದ್ಯಚ್ಛಾಯೆಯೊಳ್ ನಿಂದೆಸೆವ ಬೆಮರನುಪ್ರ್ವೀತಳಕ್ಕಿಕ್ಕೆಲಕ್ಷ್ಮೀ-
> ಧಾಮಂ ಪುಟ್ಟಿತ್ತು ಭೂಬೃನ್ಮುಕುಟಮಣಿ ಗಣಾಳಂಬ ಕಾದಂಬ ವಂಶ ॥

---

1 Epi. Ind., Vol. xv; p 319, l. 11; AD. 1172

2 Kundanagar K.G.: Inscriptions in Northern Karnatak, elc., p. 32; AD. 1108

3 Epi. Ind. Vol. IV; p. 206, l. 9; AD. 982

4 Epi. Ind., Vol. XI; Dn. 25; AD. 1224

5 Epi. Ind., Vol. XVI, E.C., Vol. XI, p. 60, b, 7-8; AD. 1081

6 E.I. XVI; p-60, l. 7–8; AD. 1081

5 **ಬಾಹುಬಳ ಬಾವನ್ನವೀರ** (ಸಾ. 20) : ಬಾಹುಬಳದಲ್ಲಿ ಬಾವನ್ನ ವೀರರಂತೆ ಶೂರನಿದ್ದವನು. ಗದಗ ತಾಲೂಕಿನ ಹೊಸೂರ ಶಾಸನವೊಂದರಲ್ಲಿ[1] ಬೊಪ್ಪರಸನನ್ನು ಬಾವನ್ನವಿರಾಗ್ರಗಣ್ಯನೆಂದು ವರ್ಣಿಸಲಾಗಿದೆ. ಮುಂಡರಗಿ ತಾಲೂಕಿನ ಡೋಣಿ ಶಾಸನವೊಂದರಲ್ಲಿ[2] ಎಗುರಮೂನೂರ್ವರನ್ನು, ಶರಣಾಗತರನ್ನು ರಕ್ಷಿಸುವುದರಲ್ಲಿ ಹಾಗೂ ಶತ್ರುಬಳವನ್ನು ಸಂಹರಿಸುವುದರಲ್ಲಿ ಬಾವನ್ನವೀರರಿಗೆ ಹೋಲಿಸಲಾಗಿದೆ. ಈ ಎರಡನೆಯ ಸಂದರ್ಭ ಕುರಿತು ಡಾ. ಚಿದಾನಂದ ಮೂರ್ತಿಯವರು 'ಈ ಬಾವನ್ನವೀರರು ಯಾರು' ಎಂದು ಪ್ರಶ್ನೆಯನ್ನೆತ್ತಿರುತ್ತಾರೆ.[3] ಗುಲಬುರ್ಗಾ ಜಿಲ್ಲೆಯ ತಾಲೂಕಾ ಸ್ಥಳವಾದ ಸೇಡಂ ಗ್ರಾಮದ ಶಾಸನವೊಂದರಲ್ಲಿ[4] ಬಾವನ್ನ ವೀರರ ಬಗ್ಗೆ ಹೀಗೆ ಹೇಳಿರುತ್ತದೆ :

**ಏದೊರೆಯಸ್ಸೇಡಿಂಬದ-**
**ನಾದಿಯ ಬಾವನ್ನವೀರರೊಳ್ಮಚ್ಚರದಿಂ ।**
**ಕಾದುವರಾರ್ಕ್ಕಾಂಜೀ ಪುಟ-**
**ಭೇದನ ಪಟುತರಕವಾಟಪುಟ ವಿಘಟನರೊಳ್ ॥**

ಹೀಗೆ ಈ ಬಾವನ್ನವೀರರು ಈ ಸೇಡಿಂಬ ಕೋಟೆಯ ವೀರರಾಗಿರುತ್ತಾರೆ. ಬಾದಾಮಿ ಚಾಲುಕ್ಯ ಹಾಗೂ ಕಂಚೀಪಲ್ಲವರ ನಡುವಿನ ಬದ್ಧವೈರತ್ವದ ಕಾಲದಲ್ಲಿ ಈ ಸೇಡಿಂಬದ ವೀರರು ಪ್ರಸಿದ್ಧಿಗೆ ಬಂದಂತೆ ಕಾಣುತ್ತದೆ. ಬಾವನ್ನ ಸಂಖ್ಯೆಯು ಸಾಂಪ್ರದಾಯಿಕವಾಗಿರುತ್ತದೆ. ಬಾವನ್ನವೀರರೆಂಬುದು ಆ ವೀರರ ಪಡೆಯ ಹೆಸರು. ಕಾಲಕಾಲಕ್ಕೆ ಪಡೆಯಲ್ಲಿಯ ವೀರರು ಬೇರೆಯಾದರೂ ಪಡೆಯ ಹೆಸರು ಹಾಗೆಯೇ ಉಳಿದು ಬಂದಿದೆ. ಬ್ರಿಟೀಶರು ತಮ್ಮ ಆರಂಭದ ಕಾಲದಲ್ಲಿ ನಮ್ಮ ದೇಶದಲ್ಲಿ ಪಡೆಗಳ ಹೆಸರುಗಳನ್ನಿಟ್ಟಿದ್ದು (ಗುರ್ಖಾ ರೈಫಲ್ಸ ; ಇತ್ಯಾದಿ) ಅವು ಇನ್ನೂವರೆಗೂ ಹಾಗೇ ಉಳಿದು ಬಂದಿವೆ. ಡಾ. ಪಾಂ. ಭೀ. ದೇಸಾಯಿಯವರು ಬಾವನ್ನವೀರರ ಬಗ್ಗೆ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[5]

6 **ವಿಪ್ರಕೇದಾರ** (ಸಾ. 20) : ವಿಪ್ರರಲ್ಲಿ ಕೇದಾರಕ್ಷೇತ್ರದಂತೆ ಪವಿತ್ರ ಹಾಗೂ ಉಚ್ಚತರನಾದವನು. ಕೇದಾರವು ಹಿಮಾಲಯ ಪರ್ವತದಲ್ಲಿ ಸು. ೧೧೭೫೫ ಅಡಿ ಎತ್ತರದಲ್ಲಿರುವ ಒಂದು ಶಿಖರ ; ಉತ್ತರ ಪ್ರದೇಶದ ಗಢವಾಲ ಜಿಲ್ಲೆಯಲ್ಲಿರು

---

1 S.I.I. XV ; No. 36, p-44, l. 8-9 ; AD. 1148
2 S.I.I. XI-II ; No. 181, p-241, l. 14-15 ; AD. 1094.
3 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ; ಪು. 442
4 Andhra Pradesh Govt. Arch, Series, No. 3. p. 95, l. 52-54 AD. 1130
5 Jainism in South India; p. 268

ತ್ತದೆ. ಈ ಶಿಖರದಲ್ಲಿರುವ ಕೇದಾರನಾಥ ದೇವಾಲಯ ಅಖಿಲ ಹಿಂದುಸ್ಥಾನದಲ್ಲಿ ಪ್ರಸಿದ್ಧ ಪುಣ್ಯಕ್ಷೇತ್ರವಾಗಿದೆ.[1]←12 ಜ್ಯೋತಿರ್ಲಿಂಗಗಳಲ್ಲಿ ಇದೂ ಒಂದು.

7 **ಬಳಿಯ** (ಸಾ. 22) : ಗ್ರಾಮಗಳ ಸ್ಥಳ ನಿರ್ದೇಶನ ಮಾಡುವ ಸಂದರ್ಭಗಳಲ್ಲಿ ಬಳಿಯ ಶಬ್ದಕ್ಕೆ 'ಒಳಗಣ, ಪ್ರವಿಷ್ಟ, ಸಮಾವೇಶಗೊಂಡ' ಎಂಬ ಅರ್ಥಗಳಾಗುತ್ತವೆ. ಅಲ್ಲಿ ಈ ಶಬ್ದಕ್ಕೆ 'ಹತ್ತಿರ, ಸಮೀಪ' ಎಂಬ ಅರ್ಥವಾಗುವುದಿಲ್ಲ'. ಬನವಾಸಿ ಬಳಿಯ ಬಂಕಾಪುರದ ನೆಲೆವೀಡಿನೊಳ್,[2] 'ಪರಿಗಟ್ಟಿಗೆ ಮೂನೂರರ ಬಳಿಯ ಬಾಡಂ ಮಿಣಂಜಿಗ'[3] –ಈ ಉದಾಹರಣೆಗಳಲ್ಲಿ ಬಂಕಾಪುರವಾಗಲಿ, ಮಿಣಜಿಗೆಯಾಗಲಿ, ಬನವಾಸಿಯ ಹತ್ತಿರ, ಇಲ್ಲವೇ ಹಗರಟಗೆಯ ಹತ್ತಿರ ಇರುವುದಿಲ್ಲ. ಇಲ್ಲಿ 'ಒಳಗಣ, ಪ್ರವಿಷ್ಟ' ಎಂಬ ಅರ್ಥವು ಹೆಚ್ಚು ಯುಕ್ತವಾಗುತ್ತದೆ. ಕೆಲವೆಡೆ ಒಳಗಣ ಹಾಗೂ ಬಳಿಯ ಈ ಎರಡೂ ಸಮಾನಾರ್ಥಕ ಶಬ್ದಗಳು ಯುಮಳಶಬ್ದವಾಗಿ ಉಪಯೋಗಿಸಲ್ಪಟ್ಟಿವೆ. 'ಅಂಕುಲಗೆ ಎಂಬತ್ತಱೊಳಗಣ ಬಳಿಯ ಬಾಡಯಿಟ್ಟಿಗೆ ಹಳ್ಳಿ' ಎಂದು ಉಸ್ಮಾನಾಬಾದ ಜಿಲ್ಲೆಯ ತುಳಜಾಪುರ ತಾಲೂಕಿನ ಇಟ್ಕಳ ಗ್ರಾಮದ ಶಾಸನದಲ್ಲಿ[4] ಪ್ರಯೋಗ ಬರುತ್ತದೆ.

8 **ಏಕಪ್ರಭುಸಾಮ್ಯ** (ಸಾ. 22,46) = ಏಕಭೋಗದ ಪ್ರಭು ಎಂದು ಮನಗುಂಡಿ ಶಾಸನದಲ್ಲಿ ಪ್ರಯೋಗವಿದೆ.[5] ತ್ರಿಭೋಗದಲ್ಲಿದ್ದ ಮೂರು ತರಗತಿಯ ಸ್ವಾಮ್ಯಗಳೊಳಗೆ ಕಡಿಮೆ ತರಗತಿಯ ಗ್ರಾಮದ ಮಟ್ಟದ ಸ್ವಾಮ್ಯವಿದು. ಒಂದು ಗ್ರಾಮದ ಪ್ರಾಥಮಿಕ ಅಧಿಕಾರ ಮತ್ತು ಅದಕ್ಕೆ ಸಲ್ಲುವ ಆದಾಯುಗಳು ಈ ಏಕಭೋಗದಲ್ಲಿ ಅಡಕವಾಗಿವೆ. ಪ್ರಸ್ತುತ ಶಾಸನದಲ್ಲಿ ತಂಬೂರ ಗ್ರಾಮದ ಬಾಗಿಲ್ವಾಗ ಏಕಭೋಗದ ಪ್ರಭುವಿಗೆ ಸಲ್ಲುವ ಆದಾಯುಗಳಲ್ಲಿ ಒಂದಾಗಿದ್ದುದು ಕಂಡು ಬರುತ್ತದೆ.

9 **ಮೂವರ ಕೋಣೆ, ಶಕ್ತಿಪರ್ಷೆ, ಪರ್ವತಾವಳಿ** (ಸಾ. 41,42) : ಕಾಳಾಮುಖ ಅಥವಾ ಲಾಕುಳಶೈವ ಗುರುಗಳ ಒಂದು ಸಂಪ್ರದಾಯ.

10 **ಅಂಗಭೋಗ** (ಸಾ. 48) : ಸ್ನಾನ, ಗಂಧ, ಪುಷ್ಪ, ಧೂಪ, ವಸ್ತ್ರಾಭರಣಾದಿಗಳಿಂದ ದೇವರ ವಿಗ್ರಹವನ್ನು ಪ್ರಸಾಧನಗೊಳಿಸುವ ಕಾರ್ಯಗಳು.

11 **ರಂಗಭೋಗ** (ಸಾ. 48) : ದೇವರ ಮನರಂಜನಕ್ಕಾಗಿ ದೇವಾಲಯದ ರಂಗಮಂಟಪದಲ್ಲಿ ನಡೆಯುವ ಗೀತವಾದ್ಯ ನೃತ್ಯಾದಿ ಕಾರ್ಯಕ್ರಮಗಳು.

---

1 E. I. V, p.221, Foot-note 4. Dr. Fleet or Ablur inscription

2 S.II. XV, p-3, l. 25; A.D. 1074; Nidagundi Inscription

3 Ibid, p-81, l.112–13; AD 1184; Minajagi Inscription

4 ಕ. ಭಾ, 3–4, ಪು. 9, 1

5 K.I., Vol. V. No. 70, p-261, l. 14

12. **ಚೈತ್ರ** (ಸಾ. 48) : ಚೈತ್ರ ಮಾಸದಲ್ಲಿ ದವನದ ಹುಣ್ಣಿಮೆಯ ದಿವಸ ದೇವರಿಗೆ, ದವನದ ಪತ್ರಿಯನ್ನೇರಿಸಿ ದೇವರನ್ನು ಶೃಂಗರಿಸುವ ದಮನಾರೋಪಣವೆಂಬ ಉತ್ಸವ.

13. **ಪವಿತ್ರ** (ಸಾ. 48) : ಶ್ರಾವಣ ಮಾಸದಲ್ಲಿ ನೂಲಹುಣ್ಣಿಮೆಯ ದಿವಸ ದೇವರಿಗೆ ನೂಲಿನ ಹಾರವಾಗಲಿ, ಯಜ್ಞೋಪವೀತವಾಗಲಿ ತೊಡಿಸಿ ದೇವರನ್ನು ಶೃಂಗರಿಸುವ ಪವಿತ್ರಾರೋಪಣವೆಂಬ ಉತ್ಸವ. ಈ ಉತ್ಸವದ ಅಂಗವಾಗಿ ವೇದಪಾರಾಯಣ, ಬ್ರಾಹ್ಮಣ ಭೋಜನ, ಮುಂತಾದ ಕಾರ್ಯಕ್ರಮಗಳು ಜರುಗುತ್ತವೆ.

14. **ಖಂಡಸ್ಫುಟಿತ ಜೀರ್ಣೋದ್ಧಾರ** (ಸಾ. 48) : ಕಾಲಾಂತರದಿಂದ ಜೀರ್ಣವಾಗುವ ಇಲ್ಲವೆ ಒಡೆದು ಹೋಗುವ ದೇವಸ್ಥಾನದ ಭಾಗಗಳನ್ನು ಸರಿಪಡಿಸುವ ಕಾರ್ಯ.

15. **ಮಡವಾಯ** (ಸಾ. 49) : ಹಾನಗಲ್ಲ ತಾಲೂಕಿನ ಬಾಳೂರ ಶಾಸನದಲ್ಲಿಯೂ[1] ಈ ಶಬ್ದ ಇದೇ ಸಂದರ್ಭದಲ್ಲಿ ಬರುತ್ತದೆ: 'ಇಪ್ಪತ್ತು ಗದ್ಯಾಣ ಹೊನ್ನಂ ಕೊಟ್ಟು ಕೂರ್ಮಜಿಗೆಜಿ‌ಯ ಮೊಡಲೇರಿಯ ಮಡವಾಯುಲ್ಲಿ ಇಪ್ಪತ್ತೈದು ಕಮ್ಮ್ರಗದ್ದೆಯಂ ಮಾಱುಗೊಣ್ಡು' ಎಂದು'. ಕೆರೆಯ ಹೆಗ್ಗಾಲುವೆಯಲ್ಲಿ ಹರಿಯುವ ನೀರನ್ನು ತೋಟದ ಮಡಿಗಳಿಗಾಗಲಿ, ಗದ್ದೆಗಳಿಗಾಗಲಿ ಪೂರೈಸುವದಕ್ಕೋಸ್ಕರ ಆ ಕಾಲುವೆಯಿಂದ ತೆಗೆದ ಶಾಖೆ, ಸಣ್ಣ ಕಾಲುವೆ ಈ ಮಾಡವಾಯ. ಅಡಿವಳ ಕೆರೆಯ ಬಡಗಣ ತೂಬಿನಿಂದ ಹೊರಡುವ ಕಾಲುವೆಯ ಪ್ರಥಮ ಉಪ ಶಾಖೆಯಲ್ಲಿರುವ ತೋಟ ಎಂದು ತಾತ್ಪರ್ಯ. ಮುದ್ದಣನ ರಾಮಾಶ್ವಮೇಧದಲ್ಲಿ 'ಪರಿವ ಕಾಲ್ವಾಯಿಂ' ಎಂದು ಪ್ರಯೋಗ ಬರುತ್ತದೆ.[2]

16. **ಮತ್ತರ್** (ಸಾ. 50) : ಮತ್ತರದ ರೂಪಾಂತರ.[3]

17. **ಮೇಲ್ವಣ್ಣು** (ಸಾ. 50) : ಮೇಲ್ತರಗತಿಯ, ಒಳ್ಳೆಯ ಭೂಮಿ.

18. **ನಕರ ಸಮೂಹ** (ಸಾ. 52) : ನಕರವೆಂದು ಮೊದಲನೆಯ ಶಾಸನದಲ್ಲಿ ಬಂದಿದೆ. ವರ್ತಕ ಮಂಡಳಿಗಳ ಸಮೂಹ.

19. **ಹನ್ನವಣಿಗರ ಸಮೂಹ** (<ಪರ್ಣ ವಣಿಗ್) (ಸಾ. 52) : ಎಲೆಯ ಮಾರಾಟಗಾರರ ಸಂಘ.

---

1 Ibid, No. 20 ; p-73-74, 1 56-57. AD. 1125

2 ರಾಮಾಶ್ವಮೇಧಂ ಕಾವ್ಯಾಲಯ ಪ್ರಕಟಣೆ ; 122-14

3 ಸಾಧನೆ 3-3, ಪು. 96 ನೋಡಿ

20. **ಪಾಗ** (<ಹಾಗ) (ಸಾ. 54) ; ಒಂದು ನಾಣ್ಯ ವಿಶೇಷ. ನಾಲ್ಕು ಹಾಗಗಳೆಂದರೆ ಒಂದು ಪಣ ; ಹತ್ತು ಪಣಗಳೆಂದರೆ ಒಂದು ಗದ್ಯಾಣ. ಗದ್ಯಾಣವು ಸುಮಾರು ಅರ್ಧತೊಲೆ ತೂಕದ ಬಂಗಾರದ ನಾಣ್ಯ.

21. **ಸೇಣಿಗರು** (< ಶ್ರೇಣಿ) (ಸಾ. 55) : ವ್ಯಾಪಾರಸ್ಥರು (General Marchants)

22. **ಮಾನ್ಯ ಮನ್ನಣೆ** (ಸಾ. 55) ಯಮಳ ಶಬ್ದ. ಮನ್ನಣೆಯು ಗೌರವ ಧನವೆಂದು ಒಡಂಬಟ್ಟದ್ದು. ಮಾನ್ಯವೆಂದರೆ ಇನಾಮು ಎಂದರ್ಥ. ಗ್ರಾಮದ ಪ್ರಭುವಾಗಿದ್ದ ಮಾದಿರಾಜ ದಂಡನಾಯಕನಿಗೆ ಸಲ್ಲುವ ಉಂಬಳಿಯಲ್ಲಿ ಒಂದು.

(23) **ಬಾಗಿಲ್ವಾಗ** (<ಬಾಗಿಲು+ಪಾಗ) (ಸಾ. 55-56) : ಪ್ರತಿ ಬಾಗಿಲಿಗೆ, ಅಂದರೆ ಮನೆಗೆ ವಿಧಿಸಲಾಗುವ ತೆರಿಗೆ. ಇಲ್ಲಿ ಪಾಗ ಶಬ್ದಕ್ಕೆ ಹಣ, ದುಡ್ಡು (Money) ಎಂದು ಸಾಮಾನ್ಯ ಅರ್ಥ. ಈ ಮನೆತೆರಿಗೆ, ಕೆಲವು ಮನೆಗಳಿಗೆ ಒಂದು ಪಾಗದಷ್ಟು ಇದ್ದು, ಇನ್ನು ಕೆಲವು ಮನೆಗಳಿಗೆ ಹೆಚ್ಚು ಕಡಿಮೆ ಇರಬಹುದು. ಈ ಬಾಗಿಲ್ವಾಗ ಮಾದಿರಾಜ ದಂಡನಾಯಕನ ಮಾನ್ಯ ಮನ್ನಣೆಯಲ್ಲಿ ಒಂದಾಗಿತ್ತು.

(24) **ಕಾಕುಳಿ** (ಸಾ. 59) : ಕಾಡುಕುಳಿ. ತನ್ನಷ್ಟಕ್ಕೆ ತಾನೇ, ನಿಸರ್ಗತಃ ಆಗಿದ್ದ ಕುಳಿ; ನೀರು ನಿಲ್ಲುವ ತೆಗ್ಗು.

(25) **ದೇವರ ಪುರವರ್ಗ್ಗ** (ಸಾ. 60) : ದೇವಾಲಯದ ಪರಿಸರದಲ್ಲಿರುವ ಕಾಲೂರು (hamlet). ದೇವಾಲಯದ ಸೇವಕರ ಮನೆಗಳು, ದೇವರ ಸಲುವಾಗಿ ಬೇಕಾಗುವ ಗಂಧ, ಧೂಪ, ಪುಷ್ಪ, ದೀಪ, ಹಣ್ಣು-ಹಂಪಲು, ಎಲೆ-ಅಡಿಕೆ ಮುಂತಾದ ವಸ್ತುಗಳನ್ನು ಮಾರುವವರಿಗೆ ಇರಲು ಮನೆ ಹಾಗೂ ವ್ಯಾಪಾರಕ್ಕೆ ಅಂಗಡಿಗಳು, ಯಾತ್ರಿಕರ ಸಲುವಾಗಿ ಅನ್ನಛತ್ರಾದಿಗಳು, ಮಠಗಳು ಇತ್ಯಾದಿಗಳಿಗೆ ರಚಿಸಿದ ಪ್ರತ್ಯೇಕವಾದ ಕಿರುಗ್ರಾಮ. ಈಗಿನ ಕಾಲದಲ್ಲಿಯೂ ಯಲ್ಲಮ್ಮನ ಗುಡಿ, ಹಂಪೆಯ ವಿರೂಪಾಕ್ಷ, ಶ್ರೀಶೈಲ ಮುಂತಾದ ದೊಡ್ಡ ದೊಡ್ಡ ದೇವಸ್ಥಾನಗಳ ಸುತ್ತಲೂ ಇಂಥ ಪುರಗಳನ್ನು ನಾವು ನೋಡಬಹುದು. ದೇವಾಲಯದಂತೆ ದೇವಪುರನನ್ನು ರಚಿಸುವುದು ಧಾರ್ಮಿಕ ಕಾರ್ಯಗಳಲ್ಲಿ ಒಂದಾಗಿತ್ತು. 'ಗದುಗಿನ ಶ್ರೀ ತ್ರಿಕೂಟೇಶ್ವರದೇವರ್ಗ್ಗೆ ಪುರವ ಮಾಡುವಲ್ಲಿ'[1], 'ದೇವಲಾಯಮಂ ಪತ್ತಿಸಿ ಪುರಮಂ ಮಾಡಿಸಿ', 'ಪುರಮಂ[2] ರಚಿಯಿಸಿ'[3], ಎಂದು ಅನೇಕ ನಿದರ್ಶನಗಳು

---

1. S. I. I., XV, No. 59, Annigeri ; P. 85. 1. 60–61 AD. 1184
2. E. C., VII, 88. Sante Gadur, Shimoga P. 101, l. 36. A. D. 1203
3 Kundanagar K. G. ; Bijapur Museum, No. 21 A, P 97 27, AD, 278

ಶಾಸನಗಳಲ್ಲಿ ಕಂಡುಬರುತ್ತವೆ. ಈ ದೇವರ ಪುರವು ಬ್ರಹ್ಮಪುರಿಯಿಂದ ಬೇರೆಯಾಗಿತ್ತು.

(26) **ಕಯ್ಯ** (ಸಾ. 60) : ಮೊದಲನೆಯ ಶಾಸನದಲ್ಲಿ[1] ಒಂದು ಕಯ್ಯ ಎಂದರೆ ಮೂರು ಅಡಿಗಳೆಂದು ಹೇಳಿದ್ದೇನೆ. ಈ ಹೇಳಿಕೆಗೆ ಶಾಸನದ ಆಧಾರವನ್ನು ಇಲ್ಲಿ ಉದ್ಧೃತಮಾಡುತ್ತೇನೆ. ವಿಜಾಪುರ ಜಿಲ್ಲೆಯ ಮನಗುಳಿ ಶಾಸನವೊಂದರಲ್ಲಿ[2] 'ಆ ನಿವೇಶನದ ಪ್ರಮಾಣು ತೆಂಕಣಾದಿಯಿಂ ಮೊದಲೊಂದು ಬಡಗಣ ಮೇರೆವರಂ **ನಾಲ್ಗೇಣ ಪ್ರಮಾಣಿನ ಕಯ್ಯ**ಲು ಪರಿಸೂತ್ರದಿಂ ಪಡುವಲ್ ಮೂಗಯ್ಯ ಬಟ್ಟೆಯುಂ ಕಳೆದಿನ್ನೇಸಱದಗಲದಲ್ ನಿವೇಶನದಗಲವಱುಗಯಿ ನೀಳ ಪದಿನಯ್ದು ಕಯ್ಯ ಪ್ರಮಾಣು॥' ಈ ಅವತರಣಿಕೆಯಲ್ಲಿ ಒಂದು ಕಯ್ಯವೆಂದರೆ ನಾಲ್ಕು ಗೇಣುಗಳೆಂದು ಸ್ಪಷ್ಟವಾಗಿ ಹೇಳಿದೆ. ಒಂದು ಗೇಣು ಎಂದರೆ 9 ಅಂಗುಲ. ಹೀಗೆ ನಾಲ್ಕು ಗೇಣುಗಳೆಂದರೆ 36 ಅಂಗುಲ ಇಲ್ಲವೆ ಎರಡು ಮೊಳ. ಇದು ಮೂರು ಅಡಿ ಉದ್ದವಾಗುವುದು. ಆದ್ದರಿಂದ ಒಂದು ಕಯ್ಯ ಮೂರು ಅಡಿಗಳಿಗೆ ಸಮವಾಗುತ್ತದೆ. ಡಾ. ಬಾರ್ನೆಟ್ ಅವರು ಕಯ್ಯ ಶಬ್ದಕ್ಕೆ Cubits (ಮೊಳ) ಎಂದು ಭಾಷಾಂತರ ಮಾಡಿದ್ದಾರೆ.[3] ಆದರೆ ಆರ್. ನರಸಿಂಹಾಚಾರ್ಯರು ಈ ಶಬ್ದಕ್ಕೆ hands (ಕರಗಳು) ಎಂದು ಭಾಷಾಂತರ ಮಾಡಿದ್ದು ಅರ್ಥನಿಷ್ಪತ್ತಿಗೆ ಹೆಚ್ಚು ಸಮೀಪವಿರುತ್ತದೆ.[4]

(27) ಗೆಯಿದ **ಚಿಂನಾಣೆಯ** ಕಯ್ಯಲು ದಸವಂದಮಂ (ಸಾ. 61) : ತಂಬೂರ ಸಂಸ್ಥಾನದೊಳಗೆ ಉತ್ಪಾದಿಸಿದ ವಸ್ತುಗಳಿಂದ **ಕುಶಲಕರ್ಮಿಗಳಿಗೆ** ಬರುವ ಗಳಿಕೆಯ ಮೇಲೆ ವಿಧಿಸಲ್ಪಡುವ ದಸವಂದದ ತೆರಿಗೆ ಎಂದು ಅರ್ಥವಿದ್ದಂತೆ ಕಾಣುತ್ತದೆ. ದಸವಂದ ( < ದಶಬಂಧ ) ಎಂದರೆ ಹತ್ತರಲ್ಲಿ ಒಂದು ಭಾಗ.

(28) **ಉಭಯಮುಖಿ** (ಸಾ. 63) : ಕರುಹಾಕುತ್ತಿರುವ ಹಸು. ಉಭಯಮುಖಿ ಹಾಗೂ ಉಭಯಮುಖಿದಾನದ ಫಲ ಇವುಗಳ ಬಗ್ಗೆ ಯಾಜ್ಞವಲ್ಕ್ಯಸ್ಮೃತಿಯಲ್ಲಿಯ ಈ ಎರಡು ಶ್ಲೋಕಗಳನ್ನು ನೋಡಬಹುದು.[5]

---

1. ಸಾಧನೆ ; 3–3 ಪು 97
2. E. I. V, P. 18-19 ; l, 51-53 ; A. D. 1142
3. E.I., XII; Belguam Inscription; P 30, l. 46; A.D. 1204
4. Hyderabad Archaeological Series, No. 7 : Bodhan Inscription, P. 4 ; l. 34-35 ; A. D. 1056
5. ಯಜ್ಞವಲ್ಕ್ಯಸ್ಮೃತಿ, I. 206-7

ಸವತ್ಸರೋಮತುಲ್ಯಾನಿ ಯುಗಾನ್ಯುಭಯತೋಮುಖೀಂ ।
ದಾತಾಸ್ಯಾಃ ಸ್ವರ್ಗಮಾಪ್ನೋತಿ ಪೂರ್ವೇಣ ವಿಧಿನಾ ದದತ್ ॥
ಯಾವದ್ವತ್ಸಸ್ಯ ಪಾದೌ ದ್ವೌಮುಖಂ ಯೋಸ್ಯಾಂ ಚದೃಶ್ಯತೇ ।
ತಾವದ್ಗೌಃಪೃಥಿವೀ ಜ್ಞೇಯಾ ಯಾವದ್ಗರ್ಭಿಂ ನ ಮುಂಚತಿ ॥

**ಶಾಪಾಸನಠ** [1]

[ ವೃತ್ತಗಳು : ಅನುಷ್ಟುಭ್ ; ೧, ೨೧, ೨೨ ; ಮತ್ತೇಭವಿಕ್ರೀಡಿತಂ : ೨, ೧೨, ೧೫, ೧೮ ; ಕಂದ : ೩ ರಿಂದ ೮, ೧೩, ೧೭, ೨೦ ; ಚಂಪಕಮಾಲೆ : ೯ ; ಉತ್ಪಲಮಾಲೆ : ೧೦, ೧೧, ೧೬ ; ಶಾರ್ದೂಲವಿಕ್ರೀಡಿತಂ : ೧೪ ; ಮಹಾಸ್ರಗ್ಧರೆ : ೧೯ ]

೧ ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ [ । * ] ತ್ರೈಲೋಕ್ಯನಗರಾರಂಭಮೂಳ ಸ್ತಂಭಾಯ ಶಂಭವೇ ॥ [ ೧ * ]

೨ ಸ್ವಸ್ತಿ [ । * ] ಸಮಸ್ತ ಭುವನಾಶ್ರಯ ಶ್ರೀ ಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭ–

೩ [ಟ್ಟಾ]ರಕ [ಸತ್ಯಾ] ಶ್ರಯಕುಳತಿಳಕ ಚಾಳುಕ್ಯಾಭರಣ ಶ್ರೀಮಜ್ಜಗದೇಕ ಮಲ್ಲದೇವರ ವಿಜಯರಾಜ್ಯಮುತ್ತರೋ–

೪ ತ್ತರಾಭಿವೃದ್ಧಿ ಪ್ರವರ್ದ್ಧಮಾನ[ಮಾಚಂದ್ರಾರ್ಕ್ಕತಾರಂಬರಂಸಲುತ್ತ]ಮಿರೆ ॥ ತತ್ಪಾ [ದ ಪದ್ಮೋಪಜೀವಿ ॥ ಜ]ಯಲಕ್ಷ್ಮೀ ನಿಳಯಂ ಸಮಸ್ತವನ ವೇಳಾವಟ್ಟ–

೫ ಣಾಧೀಶಸುದ್ರಯಶಶ್ರೀಯುತ ನಾದಿರಾಜ ಚರಿತ [೦] ಕಾದ [ಂಬವಂಶೋದ್ಭವಂ] [೧೧] ರಾಜಂ ಹರಭೂಪ್ರಸೂತನಖಿಳ–

೬ ಕ್ಷ್ಮಾಪಾಳಜೈತ್ರಧ್ವಜಂ ಜಯಕೇಸಿಕ್ಷಿತಿಪಾಳಕಂ ನೆಗರ್ದ್ದನೀ ವಿಶ್ವಂಭರಾಚಕ್ರದೊಳ್ ॥ [ ೨* ] ಸ್ವಸ್ತಿ [ । * ] [ಸಮಸ್ತ ಪ್ರಶಸ್ತಿ] ಸಹಿತಂ ಶ್ರೀಮನ್ಮಹಾ–

೭ ಮಣ್ಡಳೇಶ್ವರಂ ಜಯಕೇಸಿದೇವನ್ನಿಜರಾಜಧಾನಿ ಗೋವೆಯೋಳ್ ಕೊಂಕಣ-ವೊಂಭಯ್ನೂಱುಮಂ ಪಲಸಿಗೆ ಪನ್ನಿರ್ಚ್ಛ [ಸಿರಮುಮಂ ಕವಡಿದ್ವೀ]ಪ-

೮ ಸಮಾಲಕ್ಕಮುಮಂ ದುಷ್ಟನಿಗ್ರಹ ವಿಶಿಷ್ಟ ಪ್ರತಿಪಾಳನೆಯಿಂದುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂ ಸುಖಸಂಕಥಾ ವಿನೋದದಿಂ [ವಿಜ]-

೯ ಯ ರಾಜ್ಯಂ ಸಲುತ್ತಮಿರೆ ॥ ತದನುಜ ॥ ಯಿಪವ್ವೈರಿ ಪರಾಕ್ರಮದಿಂ ಸ್ವಭುಜಬಳೋದ್ಧತನೆನಿಪ್ಪ ಮಂಡಳಿಕಂ ಶ್ರೀತ್ರಿ (ತ್ರಿ) ಭುವನಮಲ್ಲಂ ವಿ-

೧೦ ತರಣವಿಭವ ಪುರಂದರನುಮೆನಿಸಿ ನೆಗರ್ದ್ದಂ ಧರೆಯೊಳ್ ॥ [ ೩ * ] ಶ್ರೀಗೆ ಹರಿಯೊಳ್ ವಿವಾಹೋದ್ಯೋಗಂ ಗೆಯ್ವನ್ತೆ ಚಕ್ರಿ ತನುಜೆಯ ಕೊಟ್ಟನುರಾ–

೧೧ ಗದೆ ಜಯಕೇಸಿಗೆ ತ್ರೈಭೋಗ್ಯಾಭ್ಯಂತರವೆನಿತ್ತು ಪಲಸಿಗೆನಾಡಂ ॥ [ ೪ * ] ಕರಿಘಟೆಯುಂ ತುರಗವ್ರಜವರವಸ್ತು ಸಮಸ್ತಕಾಂಚ-

೧೨ ನಾಭರಣಂಗಳ್ವೆರಸಿನ್ತು ಚಕ್ರಿ ನಚ್ಚಿನ ವರಕನ್ನೆಯನಿತ್ತು ಪರಸಿದಂ ಪದೆಪಿಂದಂ ॥ [ ೫ * ] ಕಾಲಂ ಕಚ್ಚಿರ್ದ ಸೀರಂ ಮೇಲೆ ಸಿಪತ್ತ್ಯುತ್ತಮಾಂಗದೊಳ್ ಧರಿ-

1 ೧೯೫೪-೫೮ರಲ್ಲಿ ನಾನು ಹುಬ್ಬಳ್ಳಿ-ಕಲಘಟಗಿಯಲ್ಲಿ ಜ್ಯುಡಿಸಿಯಲ್ ಮ್ಯಾಜಿಸ್ಟ್ರೇಟನಾಗಿದ್ದ ಸಮಯದಲ್ಲಿ ತೆಗೆದುಕೊಂಡ ಶಾಸನದ ಅಚ್ಚುಗಳಿಂದ

೧೩ ಯಿಸಿದಂ ಭೂಲಲನಾಧೀಶನೆನಲ್ ಮೇಲೆನಿಸಿದರೊಳರೆ ಕೊಂಕಣೋರ್ವ್ವೀಶ್ವರ ನಿಂ*] ಶ್ರೀಮನ್ಮಹಾಮಣ್ಡಳೇಶ್ವರಂ ಜಯಕೇಸಿದೇ-

೧೪ ವಂಗಂ ಪಿರಿಯರಸಿ ಮೈಳಲಮಹಾದೇವಿಯರಿಗಂ ಪುಟ್ಟಿದ ತನೂಭವರೆನ್ತಪ್ಪರೆನ್ದಡೆ ॥ ಕಾದಂಬವಂಶ ತಿಳಕಕ್ಕಾದಂಬ ಕುಳಸ್ಸ[1]ರೋ–

೧೫ ಜರಾರ್ಚಿತ ಮಿತ್ರರ್ಕ್ಕಾದಂಬವಂಶವರ್ದ್ಧ ನರಾದರ್ಪ್ಪೆರ್ಮ್ಮಾಡಿ ವಿಜಯದೇವನುಮೆಂಬರ್ ॥ [೭ *] ತದಗ್ರಜೆ ॥ ಶ್ರೀವನಿಯೆನಿಪ ಸುತೆಯಂ ಸಾವಿತ್ರಿ-

೧೬ ಯ ತೈಲನೃಪತನೂಜಂಗನ್ತಾಶಾವಿದಿತಕೀರ್ತ್ತಿಯಾ ಗಿರಲೀ ವಸುಮತಿ ಪೊಗಳೆ ಗಂಗಿ ದೇವಂ ಗಿತ್ತರ್ ॥ [೮ *] ತತ್ಪಾದ ಪದ್ಮೋಪಜೀವಿ ॥

೧೭ ಸ್ವಸ್ತಿ [।*] ಸಮಧಿಗತ ಪಂಚ ಮಹಾಶಬ್ದ ಮಹಾಪ್ರಚಣ್ಡದಣ್ಡನಾಯಕಂ। ವೈರಿ ಭಯದಾಯಕಂ। ಸಮರ ಸಾಗರತರಣ್ಡ। ರಿಪು-

೧೮ ಕಾಳದಣ್ಡ ಚತುರಂಗಬಳಸೂತ್ರಧಾರಿ ಮೊನೆಗೆ ಮೂರಾರಿ ವಿಜಯಾಂಗನಾಭುಜಂಗ। ಚತುರಂಗಸಿಂಗ। ಕೃತಗುಣಕೃತ್ಯ ಕ-

೧೯ ಲಿಯುಗ ವಿಕ್ರಮಾದಿತ್ಯ। ವೀರಲಕ್ಷ್ಮೀಗೃಹತೋರಣ। [2]ನಣ್ಣನ ಗನ್ಧವಾರಣ। [2]ನಸಮ-ಸಾಹಸವೈನತೇಯ। ಧುರದಂಕಜೇಯ

೨೦ ಬಾಹುಬಳ ಬಾವನ್ನವೀರ। ವಿಪ್ರಕೇದಾರ। ಪರಾರ್ತ್ಥಪರಸುರಾಮ। ಸುಭಟಂಕಭೀಮ। ವನ್ದಿ ಬೃಂದ ಚಿನ್ತಾಮಣಿ। ಶರಣಾಗತರ-

೨೧ ಕ್ಷಾಮಣಿ ಕೊಂಕಣ ಚಕ್ರವರ್ತ್ತಿ ಶ್ರೀಮಜ್ಜಯಕೇಸಿದೇವ ರಾಜ್ಯ ಲಕ್ಷ್ಮೀ ವಿಳಾಸಂ। ಸಕಳ ಲಕ್ಷ್ಮೀನಿವಾಸ। [2]ನಿತ್ಯಖಿಳ ನಾಮಾವಳೀವಿ-

೨೨ ರಾಜಿತರಪ್ಪ ಶ್ರೀಮನ್ಮಹಾಪ್ರಚಣ್ಡ ದಣ್ಡನಾಯಕಂ ಮಾದಿರಾಜಯ್ಯಂ ಮಾವಳಿನಾಡ ಬಳಿಯ ಬಾಡಂ ತಮ್ಮಿಯೂರುಂ ಪ-

೨೩ ನ್ನಿರ್ಪ್ಪಳ್ಳಿಯುಮನೇಕಪ್ರಭುಸಾಮ್ಯದಿಂ ದುಷ್ಟನಿಗ್ರಹ ಶಿಷ್ಟ ಪ್ರತಿಪಾಳನೆಯಿನಾಳ್ದು ಸುಖದಿನಿರೆ ॥ ಬಳಸಿದ ನನ್ದನಾವ-

೨೪ ವಳಿಗಳಿಂ ಪಲವುಂ ಕಮಳಾಕರಂಗಳಿಂ ತೊಳಗುವ ಶಾತಕುಂಭಕಳಶೋಜ್ವಳಮಪ್ಪ ಮರಾಳ-ಯಂಗಳಿಂ ಮಿಳಿರ್ವ ವೃಷೇಂದ್ರಸಿಂ-

೨೫ ಹವಿಹಗೇಂದ್ರ ಪತಾಕೆಗಳಿಂದೆ ನಾಡೆ ಕಂಣ್ಗೊಳಿಸಿ ಬಸನ್ತಮಂ ಮೆಱೆದು ತೋರ್ಪ್ಪುದು ತಾಂಬ್ರಪುರಂ ನಿರನ್ತರಂ ॥ [೯ *] ಆ ಪುರಕಧೀಶ-

೨೬ ನುಂ ಕಾಶ್ಯಪಗೋತ್ರಸರೋಜಾಕರಮಿತ್ರನಪ್ಪ ಶ್ರೀ ಮಾದಿರಾಜ ದಣ್ಡನಾಯಕನೆನ್ತಪ್ಪನೆನ್ದಡೆ॥ ಧರ್ಮ್ಮದ ಮೇರು ದಾನದ

೨೭ ತವರ್ಮ್ಮನೆ ಸತ್ಯದ ಬಿತ್ತು ಸೌಚದಿಂ ಪೆರ್ಮ್ಮೆಯನಾನ್ತ ಮಾನಸಿಕೆಗಾಲಯ ಪೊಳ್ಗುಣದುನ್ನ-ತಿಕೆಯಿಂ[3] ಧರ್ಮ್ಮಜನೆನ್ದು ಬಣ್ಣಿ-

೨೮ ಪುದು ಸಂತತ ಮಾಧವದಣ್ಡನಾಥನ [೦] ಕೂರ್ಮ್ಮೆಯೊಳಿನ್ತು ಸಜ್ಜನ ಸುಹೃಜ್ಜನ ಸೇವ್ಯನನೀ ಜಗಜ್ಜನಂ ॥ [೧೦ *] ಅನ್ತು ವಿರೋ-

---

1 ವೃತ್ತಕ್ಕಾಗಿ ದ್ವಿತ್ವ ಬಳಸಲಾಗಿದೆ

2 ದಂಡ ಅನವಶ್ಯಕ

3 ವೃತ್ತದ ಸಲುವಾಗಿ 'ಉನ್ನತಿಕ್ಕೆಯಿಂ' ಎಂದು ಓದಿರಿ

೨೯ ಧಿಗಳ್ಗೆ ಪರನಾರಿಗೆ ವಾರವಧೂಜನಕ್ಕೆ ಕಯ್ಯಾನ್ತ ನರಂಗೆ ಕೊಲ್ವ ಪೆರಪಿಂಗುವ ಕೂರಿಸುವೀವ ಬಲ್ಮೆಯಿಂದನ್ತಕನೆಂಬು-

೩೦ ದಾ ಪವನನನ್ದನನೆಂಬುದು ಕನ್ತುವೆಂಬುದಾ ಹಸ್ತು ಮಡಲ್ತು ಕಲ್ಪತರುವೆಂಬುದು ಮಾಧವ-ದಣ್ಡನಾಥನ[1] ॥ [೧೧ *] ಜನಕಂ ಚಂಗಚಮೂ-

೩೧ ಪ ರಾಮರಮಣೀ ವೈದೇಹಿಯೆನ್ತನ್ತೆ ಸಜ್ಜನೆ ತಾಯಾಚಲದೇವೆ ಸಚ್ಚರಿತದೊಳ್ ಸೌಭಾಗ್ಯ-ದೊಳ್ ಪೆಂಪಿನೊಳ್ವಿನುತಂ ಶ್ರೀ

೩೨ ಜಯಕೇಸಿ ಕೂರ್ಪ್ಪನೆನಿಪಣ್ಣಂ ನ್ನಾ[2]ರಸಿಂಗಂ ಮಗಂ ತನಗೆನ್ದನ್ದು ಕೃತಾರ್ತ್ಥನೆನ್ದುಮೆನಿ-ಸಿಬ್ದಿಂ ಮಾಧವಂ ಧಾತ್ರಿಯೊಳ್ ॥ [೧೨ *] ಶ್ರೀಗೆ

೩೩ ನೆಲೆಯೆನಿಸಿ ಸುಖದೊಂ [ದಾಗ]ರವನೆ .. ಮಾಡಿ...ಮುದದಿಂ ಪಾಗದ ಚಾಗಿಯ ಮಮ್ಮಂ ಭೋಗಪುರನ್ದರನುಮೆ-

೩೪ ನಿಸಿದಂ ಧಾರಿಣಿಯೊ[ಳ್] ॥ [೧೩ *] [ತತ್ಪಾದ ಪದ್ಮೋಪಜೀ]ವಿ [॥] ಮುನ್ನಿಂ [೦] [-∪∪] ನಿನ್ದೆ ಮಾಡೆ ನೆಗರ್ದ್ದೀ ವಿಶ್ವೇಶ್ವರಾಗಾರಮಂ ತನ್ನಿಂದಾತನ ಮಮ್ಮ

೩೫ ಬೊಪ್ಪಣ ಶಿಳಾಕ [ರ್ಮ್ಮಂ] [∪ – – ∪ – –] ನ್ನಿದ [೦] ಸ [ಮದನ್ತ]–ಪತ್ರ-[ಗತಿ] ಯಿಂ ನಾಟ್ಯಾದಿ ದಿಗ್ದೇವರಿಂದಿನ್ನಿಂತೊಪ್ಪೆ ಸುಪುಣ್ಯ ।

೩೬ ಪುಂಜಕಳಶಾಧ್ಯಾರೋ [ಪಣಂ] ಮಾ [ಡಿದಂ ॥] [೧೪*] [ಜನ]ಕಂ ಬೀರನುದಾರ ಚಾರು ಚರಿತಂ ಭೂಜಾತೆಯೆನ್ತನ್ತೆ ಮಾನಿನಿ ಮಾರ

೩೭ ವ್ವೆ ಪತಿಬ್ರತಾಗುಣದೊಳಂತೊಪ್ಪಿ [ರ್ದ್ದ] [– – ∪] ರ್ಮ್ಮಾನನ [ನೆಂ] ಬನ್ತಿರೆ ದಮ್ಮಣಂ ಮನುನಿಭಂ ಕೂರ್ಪ್ಪಣ್ಣನೆನ್ದನ್ದು ಮೇದಿನಿಯೊಳ್ ಸೇ

೩೮ ಣಿಗ ಬೊಪ್ಪನನ್ತೆ ಕೃತಕೃತ್ಯರ್ದ್ದನ್ಯ [ರೇಂ ಸನ್ತ] ತಂ ॥ [೧೫*] [ಗಾ] ಡಿಗೆ ಮೇಲೆನಲ್ಕೆ ಹರನಿರ್ದ್ದ ಗಿರೀಂದ್ರವಿದೆಂಬ ಚೆಲ್ವಿನಿಂ ಮಾಡಿಸಿ

೩೯ ದಂ ಶಿವಾಲಯಮನಾಯುತಿ [ಯಾಗಿರೆ] ಬೊಪ್ಪನ [ತ್ತಿರ್ಯಿಂ] ರೂಡಿಯನಾನ್ತು ನಿಂದೆಸೆವ ತಾಂಬ್ರಪುರಕ್ಕತಿ ಶೋಭೆಯಾ |

೪೦ ಗಿರಲ್ ನೋಡಿದ [ಗ್ಗಿರ್ಲ್ಲದರ್ತ್ಥ] ವರಲಿನ್ದುದಿನಾಧಿಪ [ರೆ] ನ್ದುವುಳ್ಳಿ [ನಂ] ॥ [೧೬*] [ಪ]ಡೆದ ಧನಂಗಳ ಮುದದಿಂದೆಡೆಯುಡುಗದೆ ದಾನಧರ್ಮ್ಮಪರಹಿತದೆ

೪೧ ಡೆಯೋಳ್ ಬಿಡದಿತ್ತು ಮಱುಭವಕ್ಕಂ ಮಡಗಿಟ್ಟಪನಿನ್ತು [ಪೋ]ಬನಪ್ಪಂ ಬೊಪ್ಪಂ ॥ [೧೭*] ಅನ್ತವರ ಗುರುಕುಳಂ ಮೂವರ ಕೋಣೆಯುಂ ಶ[ಕ್ತಿ] |

೪೨ ಪರ್ಷೆಯುಂ ಪರ್ವ್ವತಾವಳಿಯುಮೆನಿಸಿದ ಕುಂದುಂಗೊಳದ ಶ್ರೀ [ಸ್ವ]ಯಂಭುದೇವತಾಸ್ಥಾನ ದಾಚಾರ್ಯ್ಯರೆನ್ತಪ್ಪರೆನ್ದಡೆ ॥ ಸುರಭೂಜಂ ಜೆಡೆವೊತ್ತುದಂಬು

೪೩ ಧಿ ತಪೋವೇಶಕ್ಕೆಡಪ್ಪಾರ್ಯ್ಯು ಮಂದಿರಶೈಳಂ ಯತಿರೂಪಮಂ [ತಳೆದು]ದೆಂಬಂತತ್ತು ದಾರತ್ವದಿಂ ವರಗಂಭೀರತೆಯಿಂ ವಿನಿಶ್ಚಳತೆಯಿಂ ವಾಗೀಶ್ವರಸನ್ಮು

1 ಕ್ರಮಾಲಂಕಾರ
2 ದ್ವಿತ್ವ ಅನವಶ್ಯಕ

೪೪ ನೀಶ್ವರ ಚೂಡಾಮಣಿ ತಾನೆ ರಂಜಿಸಿದಪಂ ವಿಶ್ವಂಭರಾಚಕ್ರದೊಳ್ ॥ [೧೮*] ಶ್ರೀಮನ್ಮಹಾ ಪ್ರಚಣ್ಡ ದಣ್ಡನಾಯಕಂ ಮಾದಿರಾಜಯ್ಯಂಗಳ್ ಮಾವೆ

೪೫ ಳೆನಾಡ ಬಳಿಯ ಬಾಡಂ ತಮ್ಮಿಯೂರುಂ ಪನ್ನಿರ್ಪ್ಪಳಿಳಯುಮಂ ಹುಲಿಗೋಡು ಪನ್ನಿರ್ಪ್ಪ ಳ್ಳಿಯುಮಮಂ ಮಾವಳೆಪನ್ನಿರ್ಪ್ಪಳ್ಳಿಯುಮಮಂ ಕೋಟೆ ಕಿಱುವತ್ತಿ ನೆ-

೪೬ ಲ್ಕು [೦*] ದ ವಿನ್ತಿನಿತುಮನೇಕ ಪ್ರಭುಸಾಮ್ಯದಿಂದಾಳ್ದರ ಸುಗೆಯ್ಯುತ್ತಮಿರೆ ॥ ಸ್ವಸ್ತಿ ಸಕವರ್ಷಂ ೧೧೬೬ ನೆಯ ರಕ್ತಾಕ್ಷಿ ಸಂವತ್ಸರದ ಪುಷ್ಯದಮಾವಾಸ್ಯೆ

೪೭ ಸೋಮವಾರವುತ್ತರಾಯಣ ಸಂಕ್ರಮಣವ್ಯತೀಪಾತಮುಂ ಸಮನಿಸಿ ಬನ್ದ ಪುಣ್ಯತಿಥಿಯೊಳ್ ಮಗಂ ಶ್ರೀ ನಾರಸಿಂಗದೇವಂಗೆ ಪರೋಕ್ಷ ವಿನಯಾರ್ತ್ಥವಾ-

೪೮ ಗಿ ಶ್ರೀ ಚೌಡೇಶ್ವರ ದೇವರ ಅಂಗಭೋಗಕ್ಕಂ । ರಂಗಭೋಗಕ್ಕಂ । ಚೈತ್ರಕ್ಕಂ । ಪವಿತ್ರಕ್ಕಂ । ಆಹಾರದಾನಕ್ಕಂ । ಖಣ್ಡಸ್ಫುಟಿತ ಜೀರ್ಣ್ಣೋಧ್ಧಾ (ದ್ಧಾ) ರಕ್ಕಂ । ಪಡಿಸಲಿಸುವನ್ತಾಗಿ ಬಿಟ್ಟ

೪೯ ಧರ್ಮಭೂಮಿಯೆಂತೆಂದಡೆ । ಅಡಿವಳಗೆಱೆಯ ಬಡಗಣ ತುಂಬಿನ ಮೊದಲ ಮಡವಾಯಲ ಯ್ಯೂಱು ಮರದ ತೋಂಟಮುಮಂದಾವೆಯಗಟ್ಟಿನ

೫೦ ಹರಿಹಲು ಹಡವಳಗೆಯ್ಯ ಹತ್ತುಗೆಯಿಂ ಮೂಡಲು ಹಿರಿಯ ಗಳೆಯಲೊಂದು ಮತ್ತರ್ ಗರ್ದ್ದೆಯುಮಂ ಅದಱ ಬಳಿಯ ಮೇಳ್ವಣ್ಣು ದೊಂ-

೫೧ ಟನ ಕೆಱೆಯಿಂ ಮೇಗೆ ಹಡುವಣ ಭಾಗದಲು ಹಿರಿಯ ಗಳೆಯಲೆರಡು ಮತ್ತರ್ ಹಕ್ಕಲ್‌ಮಂ। ಸರ್ವ್ವಾಬಾಧಪರಿಹಾರಂ[1] ಸರ್ವ್ವನಮಸ್ಯವಾಗಿ

೫೨ ಶ್ರೀ ವಾಗೀಶ್ವರದೇವರಿಗೆ । ಧಾರಾಪೂರ್ವ್ವ [ಕಂ] ಮಾಡಿಕೊಟ್ಟರ್ ॥ ನಕರಸಮೂಹಮುಂ । ಹನ್ನವಣಿಗರ ಸಮೂಹಮುಂ । ಚೈತ್ರಕ್ಕಂ । ಪವಿತ್ರಕ್ಕಂ । ಶ್ರೀ ನಕರೇಶ್ವರದೇವರಿ-

೫೩ ಗೆ ಕೊಟ್ಟ ಪರಿಕೆಯುಂ ಶ್ರೀ ಚೌಡೇಶ್ವರದೇವರಿಗೆ ಕೊಟ್ಟರ್ ॥ ನಕರ ಸಮೂಹ ಸಟ್ಟುಗ ಭತ್ತಮಂ ಕೊಟ್ಟರ್ ॥ ಹನ್ನವಣಿಗರು ಹೇಱಿಂಗೆ ನೂಱೆಲೆಯುಮಂ ತಲೆ-

೫೪ ವೊಱೆಗೆಯ್ವತ್ತೆಲೆಯುಮಂ ಕೊಟ್ಟರ್ ॥ ತೇಲಿಗರಯ್ವತ್ತೊಕ್ಕಲುಂ । ಚೈತ್ರಕ್ಕೆಪಾಗಮಂ । ಪವಿತ್ರಕ್ಕಂ ಪಾಗಮಂ । ನನ್ದಾದೀವಿಗೆಗೆ ಸೊಂಟಿಗೆ ಯೆಣ್ಣೆಯುಮಂ ಕೊ-

೫೫ ಟ್ಟರ್ ॥ ಸೇಣಿಗರೊಕ್ಕಲೆಲ್ಲಂ ಚೈತ್ರಕ್ಕೆ ಪಾಗಮಂ । ಪವಿತ್ರಕ್ಕಂ ಪಾಗಮಂ । ಕೊಟ್ಟರ್ ॥ ಶ್ರೀ ಮಾದಿರಾಜ ದಣ್ಡನಾಯಕಂ ಮಾನ್ಯ ಮನ್ನಣೆಯೆನ್ನದೆ ಬಾಗಿಲ್ವಾ-

೫೬ ಗಮಂ ಕೊಟ್ಟರ್ ॥ ಜನಕಂ ಜಾತೋಜನನ್ಮಾತನ ಕುಲವಧು ಜಕೌವೆಗಂ[2] ಪುಟ್ಟಿದರ್ ಸದ್ವಿ ನಯಾಂಭೋರಾಸಿ ಕೇತಂ ಸಕಳಗುಣಗಣಾಳಂಕ್ರಿತ [೦] ಮುದ್ದನೆಂಬ-

೫೭ ರ್ತ್ರನಯತ್ರಾಮಾದರನ್ತಾಯವರ್ಗ್ಗಳೆ ಕಳಸಾರೋಪಣಂ ಮಾಡೆ ವಿದ್ವಜ್ಜನಕ್ಕಂ ಶ್ರೀ ಮಾದಿ ರಾಜಂಗತಿಮುದದೆ ಮನೋತ್ಸಾಹವನ್ತಾದುದಾಗಳ್ ॥ [೧೯*] ಅನ್ತುವರ್ಗ್ಗ

೫೮ ಕಾರುಣ್ಯಂಗೆಯ್ದು ಶ್ರೀ ಮಾದಿರಾಜ ದಣ್ಡನಾಯಕರ್ ದಾವೆಯಗೆಟ್ಟಿನ ಹರಿಯ ಶ್ರೀ ಚೌಡೇಶ್ವರದೇವರ ಗರ್ದ್ದೆಯ ಹತ್ತುಗೆಯಿಂ ಮೂಡಲು ಹಿರಿಯ

೫೯ ಗಳೆಯಲೊಂದು ಮತ್ತಲು ಗರ್ದ್ದೆಯುಮಂ । ಆ ದೇವರಿಗೆ ಬಿಟ್ಟ ಹಕ್ಕಲಿಂತೆಂಕಲು ಕಾಕುಳಿಯ ಪತ್ತುಗೆಯಿಂ ಹಿ [ರಿ] ಯ ಗಳೆಯಲೆರಡು ಮತ್ತಲು ಹಕ್ಕ-

---

1 'ಸರ್ವಬಾಧಾ ಪರಿಹಾರಂ' ಎಂದು ಓದಿರಿ

2 ವೃತ್ತದ ಸಲುವಾಗಿ 'ಜಕ್ಕೊವ್ವೆಗಂ' ಎಂದು ಓದಿರಿ

೬೦ ಲುಮಂ ದೇವರ ಪುರವರ್ಗ್ಗದೊಳಗೆ ಹದಿನಯ್ದು ಕಯ್ಯ ಮನೆಯುಂ ವಾಗೀಶ್ವರದೇವರು ಕೊಟ್ಟರ್ ॥ ನಕರ ಜಿನಾಲಯದ ಹೊಱಗೆ ಹಂನೊಂದು ಕಯ್ಯಲೆ

೬೧ ರಡು ಮನೆಯುಮಂ ದಣ್ಡನಾಯಕರಾಳ್ವನಾಡೊಳಗೆ ಗಯಿದ ಬಿಂನ್ನಾಣಿಯ ಕಯ್ಯಲು ದಸವಂದಮಂ ಯಿನ್ನಿನಿತುಮಮಂ ಸರ್ವ್ವಬಾಧ ಪರಿಹಾರವಾಗಿ[1] ಕೊಟ್ಟರ್ ॥

೬೨ ಇ (ಈ) ಧರ್ಮ್ಮಮಂ ಪ್ರತಿಪಾಳಿಸಿದವರ್ಗ್ಗಳು ಗಂಗಾಸಾಗರ ವಾರಣಾಸಿ ಪ್ರಯಾಗೆ ಕುರುಕ್ಷೇತ್ರಮೆಂಬಗ್ರ್ಯ ತೀರ್ತ್ಥಂಗಳೊಳ್ ಕೋಡುಂಕೋಳಗುಮಂ ಸುವರ್ಣ್ಣದಿಂ ಕಟ್ಟಿಸಿ

೬೩ ದುಭಯಮುಖಿಯಪ್ಪ ಸಾಸಿರ ಕವಿಲೆಯುಮಂ ಸಾಸಿರ್ವ್ವದ್ವೇ(ರ್ವ್ವೇ)ದ ಪಾರಗರಪ್ಪ ಬ್ರಾಹ್ಮಣರಿಗೆ ಕೊಟ್ಟ ಪುಣ್ಯದ ಪಳಮನೆಯ್ದುವರ್ ॥ ಈ ಧರ್ಮ್ಮಮಂ

೬೪ ಪ್ರತಿಪಾಳಿಸದವರ್ಗ್ಗಳ್ ॥ ಗಂಗಾಯಮುನೆಗಳೆರಡಱ ಸಂಗಮದೊಳಗಣ್ಯ ಪುಣ್ಯ ವರತೀರ್ತ್ಥ ಸ್ಥಾನಂಗಳೊಳಱ್ದ ತಪೋಧನರಂ ಗೋಬ್ರಾಹ್ಮಣರನಳಿದ

೬೫ ನಿನ್ನಿದನಳಿದ ॥ [೨೦†] ಸ್ವದತ್ತಂ(ತ್ತಾಂ) ಪರದತ್ತಂ(ತ್ತಾಂ) ವಾ ಯೋ ಹರೇತಿ ವಸುನ್ಧಿರಾ (ನ್ಧರಾಂ) [1†] ಷಷ್ಟಿರ್ವ್ವರ್ಷ ಸಹಶ್ರಾ(ಸ್ರಾ)ಣಿ ವಿಷ್ಠಾಯಾಂ ಜಾಯತೇ ಕ್ರಿ(ಕೃ) ಮಿಃ ॥ [೨೧‡] ಬಹುಭಿರ್ವ್ವಸುಧಾ ಭುಕ್ತಾ

೬೬ ರಾಜಭಿಸ್ಸಗರಾದಿಭಿಃ [1†] ಯಸ್ಯ ಯಸ್ಯ ತ(ಯ)ದಾ ಭೂಮಿ ತಸ್ಯ (ಸ್ತಸ್ಯ) ತಸ್ಯ ತದಾ ಫಳಂ ॥ [೨೨†]

---

1 ಸರ್ವಬಾಧಾ ಪರಿಹಾರವಾಗಿ' ಎಂದು ಓದಿರಿ

## ಸಾಹಸಿ

**ರಸಿಕ ರಂಗ**

ಬಾಂದಳವ ಬೆಳಗುವೆನೆಂದು ಬೀಗಿ
ಹೊರಟ ಬೆಳಕು ಬಳ್ಳಿಯ ಹೂ-ಹೊಗರೊಂದು
ಬುವಿಯ ಬಿರುಗಾಳಿ ಸೆಳೆತಕೆ ಸಿಲುಕಿ
ಕೆಳಕೆಳಕೆ ಇಳಿದು ಮಣ್‌ಕಣದ ಕೈಕುಲುಕಿ
ತೋಳ್ಸೆರೆಯ ಸೊಗದಿ ಇಡಿಮುಳುಗಿ ಮರಲುಂದಿದೆ.

ಅಪಾರ ಜಲರಾಶಿಯಲಿ ತನ್ನ ಚೆಲುನೆರಳನು ನೋಡಿ
ಹಿರಿಹೆಮ್ಮೆಯಲಿ ಬಿದಿರಿದೆರಕೆಯ ಸೊಮ್ಮಿನಲಿ
ದಣಿವೆಂಬುದಿರದೆ ಬೀಸುಗಾಲಲಿ ಹಾರುವ ಹಕ್ಕಿ
ಸತ್ತ ಹುಳಗಳ ಹೊತ್ತು ನಿಂತಿರುವ ದ್ವೀಪದ ಕರೆಗೆ ಮರುಳಾಗಿ
ಮತ್ತೆ ಮತ್ತೆ ತಿಂದು ತೇಗುತ ತಣಿಯದೆ ತೂಗುತ
ಕಾರಿದರು ಆಸೆಯಾರದೆ ಮೇಲೆ ತೂರದೆ
ಕೀಲಿಸಿದ ಕಾಲುಗಳ ಕೀಳದೆ ಕೊಳೆನಾರುತಿದೆ.

ಸರ್ಪದ ಹೆಡೆಯಡಿಯಲ್ಲಿ ಪವಡಿಸಿದ ಕಪ್ಪೆ
ಅರಿತರೂ ಅರೆಯದೊಲು ನಿಚ್ಚನಿರಾಳದಂತೆ
ಕೊಳಚೆ ತೀವಿದ ಕೊಳದಿ ತೆರೆಬಾಯ ತೆರೆದು
ಜೊತೆಮೈಯ ಬೆಸುಗೆಯಲವರಿಕೆ ಬೆಸಸುತಿರೆ
ಮಳೆಯಲ್ಲಿ ಛಳಿಯಲ್ಲಿ ವಟರುಗುಟ್ಟುತಿದೆ
ಸರ್ಪವೂ ಥಕ್ಕಾಗಿ ಬಿಸವೆಲ್ಲವನು ಕಕ್ಕುವಂತೆ !

ಲೆಕ್ಕವಿಲ್ಲದ ಆಣೆಭಾಷೆಗಳ ಹಾಕಿಕೊಂಡು
ಹಿಗ್ಗುಕಡಲಿನ ಈಜುಗಾರಿಕೆಯ ಡೋಲುಬಡಿದು
ಮರಮರಳಿ ಮುಗ್ಗರಿಸಿ ತಲೆಸಿಗಿಸಿ
ನೀರವಮಾಯೆಯ ಮರಳುಗಾಡಿನಲಿ
ತೀರದಾರದ ದಾಹದಲಿ ಬಸವಳಿದು
ಸಾಗಿಹನು ಒಂಟಿಯಾಗಿ ಪಂಟುಬಡಿಯುವ ಸಾಹಸಿ
ಮುರಿದೆಲ್ಲ ಆಣೆಗಳ ಮಾಲೆಯನು ಕೊರಳಲ್ಲಿ ಧರಿಸಿ.

# ವರದಾರ್ಯನ ಉತ್ಪ್ರೇಕ್ಷಾಮಂಜರೀ
## [ಪ್ರಸ್ತಾವನೆ, ಕನ್ನಡ ಭಾಷಾಂತರ ಮತ್ತು ಟಿಪ್ಪಣಿಗಳೊಂದಿಗೆ]

---

**ಎಂ. ಶಿವಕುಮಾರಸ್ವಾಮಿ**

### ಪ್ರಸ್ತಾವನೆ

ಸಂಸ್ಕೃತ ಅಲಂಕಾರ ಶಾಸ್ತ್ರದ ಚರಿತ್ರೆಯಲ್ಲಿ ಕ್ರಿ. ಶ. 9ನೇ ಶತಮಾನದವರೆಗಿನ ಕಾಲವು ಪ್ರಸ್ಥಾನಗಳ ಯುಗ. ಭಾಮಹ-ಉದ್ಭಟರ ಅಲಂಕಾರಪ್ರಸ್ಥಾನ, ದಂಡಿ-ವಾಮನರ ಮಾರ್ಗ ಅಥವಾ ರೀತಿಪ್ರಸ್ಥಾನ ಮತ್ತು ಆನಂದವರ್ಧನನ ಧ್ವನಿ ಪ್ರಸ್ಥಾನವ ಉದಯ ಮತ್ತು ವಿಕಾಸವನ್ನು ಕಂಡ ಕಾಲವದು. ಇವುಗಳ ಪ್ರವರ್ತಕರು ತಮ್ಮ ತಮ್ಮ ಕಾಲದಲ್ಲಿ ಪ್ರಚಲಿತವಿದ್ದ ಶಾಸ್ತ್ರ-ಸಾಹಿತ್ಯ-ಅನುಭವಗಳಿಂದ ಮುಪ್ಪುರಿಗೊಂಡ ಜ್ಞಾನದಿಂದ ಕಾವ್ಯದ ಸ್ವರೂಪ-ಸ್ವಾರಸ್ಯಗಳನ್ನು ವಿವೇಚಿಸಿ ಅದರ ಸೌಂದರ್ಯದ ಮೂಲಗಳನ್ನು ಗುರುತಿಸಿ ನಿರೂಪಿಸಿದರು. ಅಲಂಕಾರವೇ ಕಾವ್ಯದ ಪ್ರಧಾನ ತತ್ತ್ವವೆಂದು[1] ಅಲಂಕಾರಪ್ರಸ್ಥಾನದವರು, ರೀತಿಯೇ ಕಾವ್ಯದ ಜೀವಾಳವೆಂದು[2] ರೀತಿ ಪ್ರಸ್ಥಾನದವರು ಮತ್ತು ಧ್ವನಿಯೇ ಕಾವ್ಯದ ಆತ್ಮವೆಂದು[3] ಧ್ವನಿಪ್ರಸ್ಥಾನದವರು ಕಾವ್ಯದ ವಿವಿಧ ತತ್ತ್ವಗಳನ್ನು ವಿಶ್ಲೇಷಿಸಿದರು. ಅಲಂಕಾರ ಮುಂತಾದ ತತ್ತ್ವಗಳನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ಕಾಲಕ್ಕೆ ಬೆಳಕಿಗೆ ಬಂದಿದ್ದ ಇತರ ಕಾವ್ಯತತ್ತ್ವಗಳನ್ನು ಅದರ ಸುತ್ತಲೂ ಹೆಣೆಯುವ ಕಾರ್ಯವನ್ನು ಪ್ರಾಚೀನ ಆಲಂಕಾರಿಕರೆಲ್ಲರೂ ನಿರ್ವಹಿಸಿದರು. ಆದರೆ ಆನಂದವರ್ಧನನ ಕಾಲದವರೆಗೆ ಈ ಕಾವ್ಯಶಾಸ್ತ್ರದ ವಿವೇಚನೆಗೊಂದು ಸ್ಥಿರತೆ ಬಂದಿರಲಿಲ್ಲ. ಆನಂದವರ್ಧನನ 'ಧ್ವನ್ಯಾಲೋಕ' ವು ಧ್ವನಿಸಿದ್ಧಾಂತವನ್ನು ಮುಂದಿಟ್ಟು ಭಾರತೀಯ ಕಾವ್ಯ ಮೀಮಾಂಸೆಯ ಕ್ಷೇತ್ರದಲ್ಲಿ ಸ್ಥಿರತೆಯನ್ನು ತಂದುಕೊಟ್ಟಿತು. ಸಾಮಾನ್ಯವಾಗಿ ಹೇಳುವುದಾದರೆ ಧ್ವನಿಸಿದ್ಧಾಂತವು ಕಾವ್ಯವಿಮರ್ಶಕರ ಚಿಂತನೆಗೆ ಸುಭದ್ರವಾದ ರೂಪರೇಷೆಯನ್ನು ನೀಡಿ, ಎಲ್ಲಾ ಪ್ರಾಚೀನ ಪ್ರಸ್ಥಾನಗಳಲ್ಲಿನ ರಸ, ಅಲಂಕಾರ,

---

1 ರೂಪಕಾದಿರಲಂಕಾರಸ್ತಥಾನ್ಯೈರ್ಬಹುಧೋದಿತಃ ।
ನ ಕಾಂತಮಪಿ ನಿರ್ಭೂಷಂ ವಿಭಾತಿ ವನಿತಾಮುಖಮ್ ॥ (ಕಾವ್ಯಾಲಂಕಾರ, ಭಾಮಹ–I-13)

2 ರೀತಿರಾತ್ಮಾ ಕಾವ್ಯಸ್ಯ । (ಕಾವ್ಯಾ. ಸೂ. ವೃ.–ವಾಮನ, I-ii-6)

3 ಕಾವ್ಯಸ್ಯಾತ್ಮಾ ಧ್ವನಿರಿತಿ ಬುಧೈರ್ಯಃ ಸಮಾಮ್ನಾತಪೂರ್ವಃ...ಧ್ವನ್ಯಾಲೋಕ, I-1

ರೀತಿ, ಗುಣ ಮುಂತಾದ ಮುಖ್ಯ ತತ್ತ್ವಗಳಿಗೆ ಅಂತಿಮವೆನ್ನಬಹುದಾದ ಸ್ಥಾನ-ಮಾನ ನಿರ್ಣಯವನ್ನು ಮಾಡಿತು. ಆನಂದವರ್ಧನನ ನಂತರದ ಕಾಲವು ಧ್ವನಿಪ್ರಸ್ಥಾನದ ವಿದ್ವತ್ಪೂರ್ಣ ಪರಿಷ್ಕರಣದ ಯುಗ. ಈ ಕಾಲದಲ್ಲಿ ಸಾಮಾನ್ಯವಾಗಿ ನಾಲ್ಕು ವಿಧವಾದ ಕೃತಿಗಳು ಹೊರಬಿದ್ದವು. ಧ್ವನಿಸಿದ್ಧಾಂತವನ್ನು ವಿರೋಧಿಸಿದ ಕೃತಿಗಳು ಮೊದಲ ಗುಂಪಿಗೆ ಸೇರಿದವು. ಅವುಗಳಲ್ಲಿ ಕುಂತಕನ 'ವಕ್ರೋಕ್ತಿಜೀವಿತ' ಮತ್ತು ಮಹಿಮಭಟ್ಟನ 'ವ್ಯಕ್ತಿವಿವೇಕ'-ಮುಖ್ಯವಾದವು. ಅಲಂಕಾರ ಪ್ರಸ್ಥಾನಕ್ಕೆ ಸೇರಿದ ವಕ್ರೋಕ್ತಿತತ್ತ್ವದ ಪುನರುಜ್ಜೀವನ ಮತ್ತು ವಿಸ್ತಾರಗಳನ್ನು 'ವಕ್ರೋಕ್ತಿಜೀವಿತ' ದಲ್ಲಿ ಕಂಡರೆ, ಶಂಕುಕ ಮುಂತಾದ ಪ್ರಾಚೀನರು ಅನುಸರಿಸಿದ ಅನುಮಾನವಾದದ ಪುನರುತ್ಥಾನ ಮತ್ತು ವಿಕಾಸಗಳನ್ನು 'ವ್ಯಕ್ತಿವಿವೇಕ' ದಲ್ಲಿ ಕಾಣುತ್ತೇವೆ. ಇವುಗಳ ಪ್ರಭಾವವು ಮಮ್ಮಟ ಮುಂತಾದವರ ವಿದ್ವತ್ಪೂರ್ಣ ಧ್ವನಿಸಿದ್ಧಾಂತಮಂಡನದಿಂದ ಕುಂಠಿತವಾಯಿತು. ಮಮ್ಮಟನ 'ಕಾವ್ಯಪ್ರಕಾಶ', ವಿಶ್ವನಾಥನ 'ಸಾಹಿತ್ಯದರ್ಪಣ', ಜಗನ್ನಾಥ ಪಂಡಿತನ 'ರಸಗಂಗಾಧರ' ಮುಂತಾದ ಕೃತಿಗಳಲ್ಲಿ ಕಾವ್ಯಶಾಸ್ತ್ರದ ಎಲ್ಲ ತತ್ತ್ವಗಳ ಸುವ್ಯವಸ್ಥಿತ ವಿವೇಚನೆಯನ್ನು ಕಾಣುತ್ತೇವೆ. ಇವು ಎರಡನೆಯ ವಿಧದ ಕೃತಿಗಳು, ಅಲಂಕಾರಶಾಸ್ತ್ರದ ಪ್ರಕರಣಗ್ರಂಥಗಳು. ಮೂರನೆಯದಾಗಿ ಕೆಲವು ಕೃತಿಗಳು ಕೇವಲ ಯಾವುದಾದರೂ ಒಂದು ತತ್ತ್ವವನ್ನು, ವಿಶೇಷತಃ ಅಲಂಕಾರವನ್ನು ವಿಸ್ತರಿಸುವವು. ಇವುಗಳಲ್ಲಿ ಕೆಲವು ಕೇವಲ ಅರ್ಥಾಲಂಕಾರಗಳನ್ನೇ ನಿರೂಪಿಸುವ ಕೃತಿಗಳು. ಅಪ್ಪಯ್ಯ ದೀಕ್ಷಿತನ 'ಚಿತ್ರಮೀಮಾಂಸೆ' ಮತ್ತು 'ಕುವಲಯಾನಂದ' ಈ ವರ್ಗವನ್ನು ಪ್ರತಿನಿಧಿಸುತ್ತವೆ. ಇನ್ನು ಕೆಲವು ಕೇವಲ ಒಂದು ಅಲಂಕಾರವನ್ನು ತೆಗೆದುಕೊಂಡು ಅದರ ಪ್ರಭೇದ ವಿಸ್ತಾರವನ್ನು ತೋರಿಸಿ ತಮ್ಮವೇ ಆದ ಉದಾಹರಣೆಗಳಿಂದ ನಿರೂಪಿಸಿರುವ ವೈಶಿಷ್ಟ್ಯವನ್ನು ಮೈದಾಳಿದ ಕೃತಿಗಳು. ಈ ನಾಲ್ಕನೆಯ ಗುಂಪಿಗೆ ಸೇರಿದ ಕೃತಿಯಾದ ವರದಾರ್ಯನ 'ಉತ್ಪ್ರೇಕ್ಷಾಮಂಜರಿ'[1] ಇಲ್ಲಿ ಪ್ರಕಾಶಿತವಾಗುತ್ತಿದೆ.

'ಉತ್ಪ್ರೇಕ್ಷಾಮಂಜರಿ' ಯಲ್ಲಿ ವರದಾರ್ಯನು ತನ್ನ ಹೆಸರು ಮತ್ತು ವಂಶವನ್ನುಳಿದು ಬೇರಾವ ವಿಷಯವನ್ನೂ ತನ್ನ ಬಗ್ಗೆ ಹೇಳಿಲ್ಲ. ಅವನು ಆತ್ರೇಯ ವಂಶಕ್ಕೆ ಸೇರಿದವನು ಎಂದಿಷ್ಟೇ ನಮಗೆ ಉಪಸಂಹಾರ ಕಾರಿಕೆಯಿಂದ[2] ಗೊತ್ತಾಗುತ್ತದೆ. ಆದರೆ ಅವನ ಕಾಲವನ್ನು ನಿರ್ಣಯಿಸಲು ಕೆಲವು ಆಂತರಿಕ ಆಧಾರಗಳಿವೆ.

1 ಇದು ಮೈಸೂರಿನ 'ಓರಿಯೆಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್'ನ ನಂ. 2023ನೇ ತಾಳೆಗರಿ ಪ್ರತಿಯಿಂದ ಸಂಪಾದಿತವಾದುದು. ಆ ಸಂಸ್ಥೆಯ ಡೈರೆಕ್ಟರ್ ಮತ್ತು ಸಲಹೆಗಳನ್ನಿತ್ತು ಮಾರ್ಗದರ್ಶನ ಮಾಡಿದ ಹಿರಿಯರಾದ ಪ್ರೊ. ಕೆ. ಟಿ. ಪಾಂಡುರಂಗಿ, ಶ್ರೀ ಎನ್. ಟಿ. ಶ್ರೀನಿವಾಸ ಐಯ್ಯಂಗಾರ್ ಮತ್ತು ಶ್ರೀ ಕೆ. ಪಿ. ಶಂಕರ ಶಾಸ್ತ್ರಿಗಳಿಗೆ ಆದರ ಪೂರ್ವಕ ಕೃತಜ್ಞತೆಗಳು

2 ಕಾರಿಕೆ 21

ಅವನು ಅಪ್ಪಯ್ಯ ದೀಕ್ಷಿತನಿಗಿಂತ ನಂತರದವನೆಂದು ಅವುಗಳಿಂದ ಸಿದ್ಧವಾಗುತ್ತದೆ. ಮೊದಲನೆಯದಾಗಿ ಹೇತೂತ್ಪ್ರೇಕ್ಷೆ ಮತ್ತು ಫಲೋತ್ಪ್ರೇಕ್ಷೆಗಳಲ್ಲಿ ನಿಮಿತ್ತವು ಕ್ರಮವಾಗಿ ಸಿದ್ಧ ಮತ್ತು ಸಾಧನವಾಗಿದೆ ಎಂಬುದನ್ನು ತೋರಿಸಲು ಕುವಲಯಾನಂದ ದಿಂದಲೇ ಎರಡು ಉದಾಹರಣೆಗಳನ್ನು ತೆಗೆದುಕೊಂಡಿದ್ದಾನೆ.[1] ಚಂದ್ರಾಲೋಕದಲ್ಲಿ ಈ ಉದಾಹರಣೆಗಳು ಇಲ್ಲ. ಎರಡನೆಯದಾಗಿ, ಆಕ್ಷೇಪಾಲಂಕಾರ ಮತ್ತು ಅನುಗುಣಾಲಂಕಾರಗಳ ಲಕ್ಷಣಗಳನ್ನೂ ಕುವಲಯಾನಂದದಿಂದ ಉದಾಹರಿಸಲಾಗಿದೆ.[2] ಇವುಗಳಲ್ಲಿ ಅನುಗುಣಾಲಂಕಾರದ ಲಕ್ಷಣವು ಚಂದ್ರಾಲೋಕ ಮತ್ತು ಕುವಲಯಾನಂದ ಗಳಲ್ಲಿ ಒಂದೇ ರೀತಿಯಿದೆ.[3] ಆದರೆ ಇಲ್ಲಿ ಆಕ್ಷೇಪಾಲಂಕಾರದ ಲಕ್ಷಣವು ಕುವಲಯಾ ನಂದದ ಪಾಠವೆಂಬುದು ಸ್ಪಷ್ಟ ಚಂದ್ರಾಲೋಕದ ಪಾಠ 'ಆಕ್ಷೇಪಸ್ತು ಪ್ರಯುಕ್ತಸ್ಯ...' ಇತ್ಯಾದಿಯಾಗಿದೆ.[4] ಮೂರನೆಯದಾಗಿ, ಇದರಲ್ಲಿನ ಉತ್ಪ್ರೇಕ್ಷೆಯ ಲಕ್ಷಣವು ಕುವಲಯಾನಂದದಲ್ಲಿ ಉತ್ಪ್ರೇಕ್ಷಾಕಾರಿಕೆಗಳ ಕೆಳಗಿನ ವೃತ್ತಿಯ ಶಬ್ದಶಃ ಅನುಕರಣೆಯಾಗಿದೆ.[5] ಇವೆಲ್ಲ ಆಧಾರಗಳಿಂದ ವರದಾರ್ಯನು ಅಪ್ಪಯ್ಯದೀಕ್ಷಿತನ ಕಾಲಕ್ಕಿಂತ ಇತ್ತೀಚಿನವನೆಂದು ಸ್ಪಷ್ಟವಾಗುತ್ತದೆ. ಅಪ್ಪಯ್ಯದೀಕ್ಷಿತನ ಕಾಲ ಕ್ರಿ. ಶ. 17ನೇ ಶತಮಾನದ ಪೂರ್ವಭಾಗ.[6] ಆದ್ದರಿಂದ ವರದಾರ್ಯನ ಕಾಲ ಕ್ರಿ. ಶ. 17 ನೇ ಶತಮಾನದ ಉತ್ತರಭಾಗ ಅಥವಾ 18 ನೇ ಶತಮಾನದ ಆರಂಭವೆಂದು ಭಾವಿಸಬಹುದು.

'ಉತ್ಪ್ರೇಕ್ಷಾಮಂಜರಿ'ಯ ವಿಷಯ ಉತ್ಪ್ರೇಕ್ಷಾಲಂಕಾರದ ಸ್ವರೂಪ ಮತ್ತು ಭೇದಗಳ ನಿರೂಪಣೆಯ ಮೂಲಕ ಲಕ್ಷ್ಮಿಯ ಸ್ತುತಿ.[7] ಈ ನಿರೂಪಣೆಯಲ್ಲಿ ನಾವು ಕಾಣುವುದು ಪೂರ್ವಸೂರಿಗಳ ಚಿಂತನೆಯ ಫಲವನ್ನು. ಆದ್ದರಿಂದ ಇಲ್ಲಿ ಉತ್ಪ್ರೇಕ್ಷಾ ಲಂಕಾರದ ವಿಕಾಸವನ್ನು ಕುರಿತು ವಿಚಾರ ಮಾಡುವುದು ಸಮಂಜಸ. ಉತ್ಪ್ರೇಕ್ಷೆಯು ಪ್ರಾಚೀನಕಾಲದಿಂದಲೂ ಆದೃತವಾದ ಅಲಂಕಾರಗಳಲ್ಲೊಂದು.[8] ಭಾಮಹನಿಗಿಂತ ಹಿಂದಿನಿಂದಲೂ ಇದರ ಸ್ವರೂಪವು ಆಲಂಕಾರಿಕರ ವಿವೇಚನೆಗೆ ಒಳಪಟ್ಟಿತ್ತು ಎಂಬುದು ಅವನ 'ಕಾವ್ಯಾಲಂಕಾರ'ದಿಂದಲೇ ಗೊತ್ತಾಗುತ್ತದೆ :

---

1 12 ಮತ್ತು 13ನೇ ಕಾರಿಕೆಗಳಲ್ಲಿ ; ಕುವಲ. ಕಾ. 34, 35

2 45 ಮತ್ತು 46ನೇ ಉದಾಹರಣೆಗಳ ಕೆಳಗಿನ ವೃತ್ತಿಯನ್ನು ನೋಡಿರಿ

3 ಚಂದ್ರಾಲೋಕ, 5-106 ; ಕುವಲ. ಕಾ, 145

4 ಚಂದ್ರಾಲೋಕ, 5-72 ; ಕುವಲ. ಕಾ. 73

5 ಉತ್ಪ್ರೇಕ್ಷಾ, ಕಾ. 3 ; ಕುವಲ. ಪುಟ 32 (ನಿರ್ಣಯಸಾಗರ ಆವೃತ್ತಿ)

6 S. K. De : Sanskrit Poetics, pp. 222-223

7 ಉಪಸಂಹಾರಕಾರಿಕೆಗಳಲ್ಲಿ 19ನೆಯದನ್ನು ನೋಡಿರಿ

8 'ಶ್ಲೇಷಪ್ರಾಯಮುದೀಚ್ಯೇಷು ಪ್ರತೀಚ್ಯೇಷ್ವರ್ಥಮಾತ್ರಕಮ್।
ಉತ್ಪ್ರೇಕ್ಷಾ ದಾಕ್ಷಿಣಾತ್ಯೇಷು ಗೌಡೇಷ್ವಕ್ಷರಡಂಬರಮ್ ॥

—ಬಾಣ ; ಹರ್ಷಚರಿತ, ಪೀಠಿಕೆ ಶ್ಲೋಕ-7

ಯಥಾಸಂಖ್ಯಮಥೋತ್ಪ್ರೇಕ್ಷಾಮಲಂಕಾರದ್ವಯಂ ವಿದುಃ ।
ಸಂಖ್ಯಾನಮಿತಿ ಮೇಧಾವಿನೋತ್ಪ್ರೇಕ್ಷಾಭಿಹಿತಾ ಕ್ವಚಿತ್[1] ॥

ಉತ್ಪ್ರೇಕ್ಷೆಯ ಲಕ್ಷಣವು ಮೊಟ್ಟಮೊದಲಿಗೆ ನಮಗೆ ದೊರೆಯುವುದು ಭಾಮಹನ 'ಕಾವ್ಯಾಲಂಕಾರ'ದಲ್ಲಿ. ಅಲ್ಲಿಂದ ಜಗನ್ನಾಥ ಪಂಡಿತನ 'ರಸಗಂಗಾಧರ'ದ ವರೆಗಿನ ಎಲ್ಲಾ ಅಲಂಕಾರಗ್ರಂಥಗಳಲ್ಲಿ ಉಪಮಾ, ರೂಪಕ, ಅತಿಶಯೋಕ್ತಿ ಮುಂತಾದ ಅಲಂಕಾರಗಳಿಗೆ ಸರಿಸಮನಾದ ಪ್ರಾಮುಖ್ಯವನ್ನು ಪಡೆದಿದೆ. ಆದ್ದರಿಂದ ಎಲ್ಲಾ ಮುಖ್ಯ ಆಲಂಕಾರಿಕರ ಮತವನ್ನು ಗಮನದಲ್ಲಿಟ್ಟುಕೊಂಡು ಉತ್ಪ್ರೇಕ್ಷೆಯ ಸ್ವರೂಪ ಮತ್ತು ವಿಭಜನೆಗಳನ್ನು ವಿವೇಚಿಸಬೇಕು.

**ಉತ್ಪ್ರೇಕ್ಷೆಯ ಸ್ವರೂಪ**

ಉತ್ಪ್ರೇಕ್ಷಾಲಂಕಾರದ ಸ್ವರೂಪವನ್ನು ಅರಿಯಲು ಅದರ ಹೆಸರೇ ಮಾರ್ಗದರ್ಶಿಯಾಗಿದೆ. 'ಉತ್ಕಟಾ ಪ್ರಕೃಷ್ಟಸ್ಯ (ಉಪಮಾನಸ್ಯ) ಈಕ್ಷಾ (ಜ್ಞಾನಂ) ಉತ್ಪ್ರೇಕ್ಷಾ'[2] ಅಂದರೆ ಉಪಮಾನವನ್ನು ಪ್ರಧಾನವಾಗಿ ಕಲ್ಪಿಸುವುದು ಉತ್ಪ್ರೇಕ್ಷೆ (ಉತ್ + ಪ್ರ + ಈಕ್ಷಾ) ಎಂದರ್ಥ. ಉಪಮಾನವನ್ನು ಅಪ್ರಸ್ತುತ, ವಿಷಯಿನ್, ಅಪ್ರಕೃತ, ಮುಂತಾದ ಶಬ್ದಗಳಿಂದಲೂ ಕರೆಯುತ್ತಾರೆ. ಇದು ಪ್ರಸಿದ್ಧವಾದ, ಪ್ರಕೃಷ್ಟವಾದ ವಸ್ತು. ಇದಕ್ಕೆ ಯಾವುದನ್ನು ಚಮತ್ಕಾರಕ್ಕೋಸ್ಕರ ಹೋಲಿಸುತ್ತೇವೋ ಅದು ಉಪಮೇಯ, ಪ್ರಕೃತ, ಪ್ರಸ್ತುತ ಅಥವಾ ವಿಷಯ ಎಂದು ಮುಂತಾಗಿ ಕರೆಯುವ ವಸ್ತು. ಈ ವಿಷಯಿ–ವಿಷಯಗಳಲ್ಲಿ ವಿಷಯಿಯನ್ನು ಪ್ರಧಾನವಾಗಿ **ಭಾವಿಸುವುದು 'ಉತ್ಪ್ರೇಕ್ಷಾ' ಶಬ್ದದ ಅರ್ಥ. ಹೀಗೆ ವಿಷಯಿಯನ್ನು ಪ್ರಧಾನವಾಗಿ** ಭಾವಿಸುವಲ್ಲಿ, ವಿಷಯವನ್ನು ಚಮತ್ಕಾರಕ್ಕೋಸ್ಕರ ವಿಷಯಿಯೊಡನೆ ತಾದಾತ್ಮ್ಯ ಹೊಂದಿದಂತೆ ಭಾವಿಸುವುದು ಉತ್ಪ್ರೇಕ್ಷೆಯ ವೈಶಿಷ್ಟ್ಯ. ಈ ಸಂಬಂಧವಾದರೋ ನಿಶ್ಚಿತರೂಪದ್ದಲ್ಲ, ಆದರೆ ಕೇವಲ ಆಹಾರ್ಯವಾದುದು, ಸಂಭವನೀಯವಾದುದು. ಈ ಸಂಭವನೀಯವಾದ ತಾದಾತ್ಮ್ಯಕಲ್ಪನೆಯನ್ನು ಆಲಂಕಾರಿಕರು ತಮ್ಮ ಪರಿಭಾಷೆಯಲ್ಲಿ 'ಸಂಭಾವನೆ' (ಸಂಭಾವನಾ, ಸಂಭಾವನಮ್) ಎಂದು ಕರೆಯುತ್ತಾರೆ. ಈ ಸಂಭಾವನೆಗೆ ಪ್ರೇರಕವಾದುದು ವಿಷಯಿ–ವಿಷಯಗಳಲ್ಲಿರುವ ಕಿಂಚಿತ್ ಸಾದೃಶ್ಯ. ಸಾದೃಶ್ಯವು ವಾಚ್ಯವಾಗಿರಬಹುದು ಅಥವಾ ಗಮ್ಯವಾಗಿರಬಹುದು, ವಾಚ್ಯವಾದರೆ ಉಪಮೆ ; ಗಮ್ಯವಾಗಿದ್ದು ಆರೋಪ, ಸಂಭಾವನೆ

---

1 ಕಾವ್ಯಾಲಂಕಾರ, 2-88 ; ಈ ಶ್ಲೋಕದಲ್ಲಿ ಉತ್ತರಾರ್ಧದ 'ಸಂಖ್ಯಾನಮಿತಿ ಮೇಧಾವೀನೋತ್ಪ್ರೇಕ್ಷಾಭಿಹಿತಾ ಕ್ವಚಿತ್' ಎಂಬ ಪಾಠಾಂತರವನ್ನು ಗಣನೆಗೆ ತೆಗೆದುಕೊಂಡರೂ, ಉತ್ಪ್ರೇಕ್ಷಾಲಂಕಾರವು ಭಾಮಹನ ಕಾಲಕ್ಕಿಂತ ಪೂರ್ವದಲ್ಲಿಯೇ ಅಂಗೀಕೃತವಾಗಿತ್ತೆಂಬುದಕ್ಕೆ ಬಾಣನ ಆಧಾರವಿದೆ

2 ಕಾವ್ಯಪ್ರಕಾಶ, ಉದ್ಯೋತ

ಮುಂತಾದುವುಗಳಿಗೆ ಪ್ರೇರಕವಾದರೆ ರೂಪಕ, ಉತ್ಪ್ರೇಕ್ಷೆ ಮುಂತಾದ ಅಲಂಕಾರಗಳಾಗುತ್ತವೆ. ಈ ದೃಷ್ಟಿಯಿಂದ ನೋಡಿದರೆ, ಉಪಮೆಯಿಂದ ಉತ್ಪ್ರೇಕ್ಷೆಯು ಮೂರನೆಯ ಘಟ್ಟ. ಉಪಮೆಯಲ್ಲಿ ಒಂದು ವಸ್ತುವನ್ನು ಇನ್ನೊಂದು ಪ್ರಸಿದ್ಧ ವಸ್ತುವಿನೊಡನೆ ಹೋಲಿಸುತ್ತೇವೆ. ಭೇದದಲ್ಲಿ ಸಾದೃಶ್ಯಜ್ಞಾನವಿಲ್ಲಿ ಫಲ. ಇದು ಮೊದಲ ಘಟ್ಟ. ಸಾದೃಶ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಒಂದು (ಪ್ರಕೃತ) ವಸ್ತುವಿನ ಮೇಲೆ ಇನ್ನೊಂದು (ಅಪ್ರಕೃತ) ಪ್ರಸಿದ್ಧ ವಸ್ತುವಿನ ಭಾವವನ್ನು ಆರೋಪಮಾಡಿದರೆ ರೂಪಕ. ಇಲ್ಲಿ ಆರೋಪವಿಷಯ ಮತ್ತು ಆರೋಪ್ಯಮಾಣ (ವಿಷಯಿ) ಗಳಲ್ಲಿ ಭೇದವಿದ್ದರೂ ತಾದ್ರೂಪ್ಯಜ್ಞಾನ ಫಲ. ಇದು ಎರಡನೆಯ ಘಟ್ಟ. ಹಾಗೆಯೇ ಒಂದು (ಪ್ರಸ್ತುತ) ವಸ್ತುವನ್ನು ಇನ್ನೊಂದು (ಅಪ್ರಸ್ತುತ) ಪ್ರಸಿದ್ಧವಸ್ತುವಿನೊಡನೆ ಸಂಭವನೀಯ ತಾದಾತ್ಮ್ಯ ಹೊಂದಿದಂತೆ ಕಲ್ಪಿಸಿದರೆ ಉತ್ಪ್ರೇಕ್ಷೆ. ಇಲ್ಲಿ ಸಂಭಾವನೆಯು ಫಲ. ಇದು ಮೂರನೆಯ ಘಟ್ಟ. ಉದಾಹರಣೆಗೆ, 'ಮುಖಂ ಚಂದ್ರ ಇವ' ಇದು ಸಾದೃಶ್ಯದ ಘಟ್ಟ; 'ಮುಖಂ ಏವ ಚಂದ್ರಃ' (ಮುಖಚಂದ್ರಃ)– ಇದು ತಾದ್ರೂಪ್ಯದ ಘಟ್ಟ; 'ಮುಖಂ ಚಂದ್ರ ಇತಿ ಮನ್ಯೇ'– ಇದು ಸಂಭಾವನೆಯ ಘಟ್ಟ.

ಭಾಮಹ ಮತ್ತು ಉದ್ಭಟರ ವಿಚಾರಧಾರೆ ಹೀಗೆಯೇ ಇದೆ. ಅವರು ನೀಡಿರುವ ಉತ್ಪ್ರೇಕ್ಷೆಯ ಲಕ್ಷಣಗಳಲ್ಲಿ ಮುಖ್ಯವಾಗಿ ನಾಲ್ಕು ಅಂಶಗಳನ್ನು ಕಾಣುತ್ತೇವೆ: (1) ಉತ್ಪ್ರೇಕ್ಷೆಯಲ್ಲಿ ಸಾದೃಶ್ಯವು (ಸಾಮ್ಯವು) ವಿವಕ್ಷಿತವಲ್ಲ; (2) ಸಾದೃಶ್ಯದ ಛಾಯೆಯು ಅದರ ಮೇಲೆ ಸ್ವಲ್ಪ ಬಿದ್ದಿರುತ್ತದೆ; (3) ಪ್ರಸ್ತುತ ವಸ್ತುವಿನಲ್ಲಿ ಅದರದಲ್ಲದ ಗುಣಕ್ರಿಯೆಗಳನ್ನು ತೊಡಗಿಸಿ ಅದನ್ನು ಬಹುಮಟ್ಟಿಗೆ ಇನ್ನೊಂದರ ರೂಪದಲ್ಲಿ ಕಲ್ಪಿಸುವುದು; (4) ಈ ಕಲ್ಪನೆಯು 'ಅತಿಶಯ'ಕ್ಕಾಗಿ ಎಂಬುದು :

ಅವಿವಕ್ಷಿತಸಾಮಾನ್ಯಾ ಕಿಂಚಿಚ್ಚೋಪಮಯಾ ಸಹ ।
ಅತದ್ಗುಣಕ್ರಿಯಾಯೋಗಾದುತ್ಪ್ರೇಕ್ಷಾತಿಶಯಾನ್ವಿತಾ[1] ॥

ಸಾಮ್ಯರೂಪಾವಿವಕ್ಷಾಯಾಂ ವಾಚ್ಯೇವಾದಿಭಿಃ ಪದೈಃ ।
ಅತದ್ಗುಣಕ್ರಿಯಾಯೋಗಾದುತ್ಪ್ರೇಕ್ಷಾತಿಶಯಾನ್ವಿತಾ[2] ॥

ಈ ಲಕ್ಷಣಗಳಲ್ಲಿ 'ಅತಿಶಯಾನ್ವಿತಾ' (ಉತ್ಪ್ರೇಕ್ಷಾ) ಎಂಬುದು ಗಮನೀಯವಾದ ಶಬ್ದ. ಇದನ್ನು ಉದ್ಭಟನೇ ತನ್ನ ಮುಂದಿನ ಕಾರಿಕೆಯಲ್ಲಿ[3] 'ಲೋಕಾತಿಕ್ರಾಂತ-ವಿಷಯಾ......ಸಂಭಾವನೇಯಮುತ್ಪ್ರೇಕ್ಷಾ' ಎಂದು ವಿವರಿಸುತ್ತಾನೆ. ಲೋಕದಲ್ಲಿ

1 ಕಾವ್ಯಾಲಂಕಾರ (ಭಾಮಹ), 2-91
2 ಕಾವ್ಯಾಲಂಕಾರಸಾರಸಂಗ್ರಹ (ಉದ್ಭಟ), 3.3
3 ಅಲಂ. ಸಾ. ಸಂ. 3-4

ಅಸಂಭವವಾದ ವಸ್ತುವನ್ನು ಸಂಭವನೀಯವೆಂದು ಕವಿಯು ವರ್ಣಿಸುವುದರಿಂದ ಉತ್ಪ್ರೇಕ್ಷೆಯು ಲೋಕಾತಿಕ್ರಾಂತವಿಷಯವಾದ ಸಂಭಾವನೆ :

"ಇಯಂ ಚೋತ್ಪ್ರೇಕ್ಷಾ ಬಹಿರಸಂಭವತಃ ಪದಾರ್ಥಸ್ಯ ಸಂಬವದ್ರೂಪತಯೋ-ಪವರ್ಣನಾಲ್ಲೋಕಾತಿಕ್ರಾಂತವಿಷಯಾ ಸಂಭಾವನಾ."[1]

ಉದಾಹರಣೆಗೆ ಕೆಳಗಿನ ಶ್ಲೋಕವನ್ನು ತೆಗೆದುಕೊಳ್ಳೋಣ :

"ಮಧ್ಯಂದಿನಾರ್ಕಸಂತಪ್ತಃ ಸರಸೀಂ ಗಾಹತೇ ಗಜಃ ।
ಮನ್ಯೇ ಮಾರ್ತಾಂಡಗೃಹ್ಯಾಣಿ ಪದ್ಮಾನ್ಯುದ್ಧರ್ತುಮುತ್ಸುಕಃ ॥ "[2]

ಇಲ್ಲಿ ಪೂರ್ವಾರ್ಧದಲ್ಲಿ 'ಮಧ್ಯಾಹ್ನದ ಸೂರ್ಯನ ಬಿಸಿಲಿನಿಂದ ಬಳಲಿದ ಆನೆಯು ಸರೋವರದಲ್ಲಿ ಮಜ್ಜನ ಮಾಡುತ್ತದೆ' ಎಂದು ಲೋಕದಲ್ಲಿ ಸಾಮಾನ್ಯವಾಗಿ ಕಾಣುವ ಆನೆಯ ಸಹಜವರ್ತನೆಯನ್ನು ಹೇಳಲಾಗಿದೆ. ಇದರಲ್ಲಿ ಅತಿಶಯವಿಲ್ಲ, ಅಂದರೆ ಇದು ಲೋಕಾತಿಕ್ರಾಂತ ವಿಷಯವಲ್ಲ. ಆದರೆ ಕವಿಯು ಶ್ಲೋಕದ ಉತ್ತರಾರ್ಧದಲ್ಲಿ ಚಮತ್ಕಾರಕ್ಕೋಸ್ಕರ 'ರವಿಯ ಪಕ್ಷಕ್ಕೆ ಸೇರಿದ ಪದ್ಮಗಳನ್ನು ನಾಶಮಾಡುವ ಉತ್ಸುಕತೆಯಿಂದಲೋ ಏನೋ' ಎಂದು ಉತ್ಪ್ರೇಕ್ಷೆಮಾಡುತ್ತಾನೆ. ಇದರಿಂದ ಲೋಕದಲ್ಲಿ ಅಸಂಭವವೆನಿಸುವ ವಸ್ತುವನ್ನಿಲ್ಲಿ ಸಂಭವನೀಯವಾಗಿ ಕಲ್ಪಿಸಿದಂತಾಗಿದೆ. ಈ ಶ್ಲೋಕದಲ್ಲಿ ದಂಡಿಯು ಉತ್ಪ್ರೇಕ್ಷೆಯನ್ನು ಹೀಗೆ ತೋರಿಸುತ್ತಾನೆ : ಆನೆಯು ಸ್ನಾನ ಮಾಡಲೋ, ನೀರು ಕುಡಿಯಲೋ, ಕಮಲದ ದೇಟುಗಳನ್ನು ತಿನ್ನಲೋ ಸರೋವರದಲ್ಲಿ ಈಜುತ್ತದೆ. ಇದನ್ನು ಕವಿಯು 'ಸೇಡು ತೀರಿಸಿಕೊಳ್ಳುವುದಕ್ಕೋಸ್ಕರ' (ವೈರನಿಷ್ಕ್ರಯಾಯ) ಎಂದು ಉತ್ಪ್ರೇಕ್ಷೆ ಮಾಡಿದ್ದಾನೆ.[3]ಅಂದರೆ, ಸೂರ್ಯನ ಪಕ್ಷಕ್ಕೆ ಸೇರಿದ ಪದ್ಮಗಳ ನಾಶದಿಂದ ತನಗೆ ಸಂತಾಪವನ್ನುಂಟುಮಾಡಿದ ಸೂರ್ಯನಮೇಲೆ ಸೇಡುತೀರಿಸಿಕೊಂಡಂತಾಗುತ್ತದೆ ಎಂದು 'ಉತ್ಸುಕಃ'[4] ಪದದ ಭಾವಾರ್ಥ. ದಂಡಿಯ ಉತ್ಪ್ರೇಕ್ಷಾಲಕ್ಷಣವು ಭಾಮಹನದಕ್ಕಿಂತ ಹೆಚ್ಚುಸ್ಪಷ್ಟವಾಗಿದೆ:

ಅನ್ಯಥೈವ ಸ್ಥಿತಾ ವೃತ್ತಿಶ್ಚೇತನಸ್ಯೇತರಸ್ಯ ವಾ ।
ಅನ್ಯಥೋತ್ಪ್ರೇಕ್ಷ್ಯತೇ ಯತ್ರ ತಾಮುತ್ಪ್ರೇಕ್ಷಾಂ ವಿದುರ್ಯಥಾ ॥ [5]

ಲೋಕದಲ್ಲಿ ಒಂದು ರೀತಿಯಲ್ಲಿರುವ ಪ್ರಸ್ತುತವಸ್ತುವಿನ ಸ್ವರೂಪಧರ್ಮವನ್ನು ಇನ್ನೊಂದು ರೀತಿಯಲ್ಲಿರುವಂತೆ (ಅಂದರೆ, ಅಲೌಕಿಕ ರೂಪದಲ್ಲಿ) ಸಂಭಾವನೆ

---

1 ಪ್ರತೀಹಾರೇಂದುರಾಜ, ಅಲಂ. ಸಾ. ಸಂ. ದ ಲಘುವೃತ್ತಿ. ಪು. 47

2 ದಂಡಿ : ಕಾವ್ಯಾದರ್ಶ, 2-220

3 ದಂಡಿ : ಕಾವ್ಯಾದರ್ಶ, 2-221

4 ಇಲ್ಲಿ 'ಪ್ರತ್ಯನೀಕಾಲಂಕಾರ'ದೊಡನೆ ಸಂಕರವಿದೆ ಎಂದು ಹೇಳುತ್ತಾರೆ. ದಂಡಿ ಪ್ರತ್ಯನೀಕವನ್ನು ಅಲಂಕಾರಗಳಲ್ಲಿ ಪರಿಗಣಿಸಿಲ್ಲ. 'ಪ್ರತ್ಯನೀಕಂ ಬಲವತಃ ಶತ್ರೋಃ ಪಕ್ಷೇ ಪರಾಕ್ರಮಃ' ಎಂದು ಅದರ ಲಕ್ಷಣ (ಕುವಲಯಾನಂದ, ಕಾ. 119)

5 ಕಾವ್ಯಾದರ್ಶ, 2-219

ಮಾಡುವುದು (ಅನ್ಯಥೋತ್ಪ್ರೇಕ್ಷಣ ಮಾಡುವುದು) ಉತ್ಪ್ರೇಕ್ಷೆ ಎಂಬ ಅಭಿಪ್ರಾಯ ಇಲ್ಲಿ ಅಡಕವಾಗಿದೆ.

ಈ ಉತ್ಪ್ರೇಕ್ಷೆಯ ಸ್ವರೂಪವಾದ 'ಸಂಭಾವನೆ'ಯನ್ನು ವಾಮನನು 'ಅನ್ಯಥಾಧ್ಯವಸಾನ'ವೆಂದು ಕರೆಯುತ್ತಾನೆ :

"ಅತದ್ರೂಪಸ್ಯಾನ್ಯಥಾಧ್ಯವಸಾನಮತಿಶಯಾರ್ಥಮುತ್ಪ್ರೇಕ್ಷಾ । "[1]

ವಾಮನನ ಲಕ್ಷಣದಲ್ಲಿ ಮೇಲೆ ಹೇಳಿದ 'ಅತಿಶಯಾನ್ವಿತತ್ವ'ವು ಮತ್ತೆ ಮರುಕಳಿಸಿದೆ. ಇಲ್ಲಿ ಮುಖ್ಯವಾಗಿ 'ಅನ್ಯಥಾಧ್ಯವಸಾನ' ಎಂಬ ವಿಷಯವು ಗಮನಾರ್ಹ. ಇದರಲ್ಲಿ ಉತ್ಪ್ರೇಕ್ಷೆಯನ್ನು ಅತಿಶಯೋಕ್ತಿಯ ಜೊತೆಗೆ 'ಅಧ್ಯವಸಾಯ' ದ **ಕಕ್ಷೆಯಲ್ಲಿ ತೊಡಗಿಸುವ ಯತ್ನವಿದೆ. 'ಅಧ್ಯವಸಾನ' (ಅಧ್ಯವಸಾಯ)** ಎಂದರೆ 'ಪ್ರಸ್ತುತ ವಿಷಯವನ್ನು ಮರೆಮಾಡುವುದರ ಮೂಲಕ ಅಪ್ರಸ್ತುತ ವಿಷಯಿಯೊಡನೆ ಅದರ ತಾದಾತ್ಮ್ಯದ ಪ್ರತೀತಿ' ಎಂದು ಸಾಮಾನ್ಯವಾಗಿ ಅಂಗೀಕೃತವಾದ ಅರ್ಥ.

"ವಿಷಯನಿಗರಣೇನಾಭೇದಪ್ರತಿಪತ್ತಿರ್ವಿಷಯಿಣೋಽಧ್ಯವಸಾಯಃ."[2]

ವಾಮನನ ಅಭಿಪ್ರಾಯದಲ್ಲಿ ಉತ್ಪ್ರೇಕ್ಷೆಯು ಬರೀ ಅಧ್ಯವಸಾನವಲ್ಲ (ಅಂದರೆ ವಿಷಯಿಯು ವಿಷಯವನ್ನು ಪೂರ್ಣನಿಗರಣಮಾಡಿ ಅದರ ಸ್ಥಾನದಲ್ಲಿ ತಾನಿರುವುದು[3] ಎಂಬುದಲ್ಲ), ಆದರೆ 'ಅನ್ಯಥಾಧ್ಯವಸಾನ' (ಅಂದರೆ ವಿಷಯಿಯ ರೂಪದಲ್ಲಿಲ್ಲದ ವಿಷಯವನ್ನು ವಿಷಯಿಯ ರೂಪದಲ್ಲಿ ಕಲ್ಪಿಸುವುದು). ಬಹುಶಃ ವಾಮನನ ಈ ಪ್ರಯೋಗದಿಂದ ಪ್ರೇರಿತನಾಗಿ ರುಯ್ಯಕನು ಕೂಡ 'ಅಧ್ಯವಸಾಯೇ ವ್ಯಾಪಾರ-ಪ್ರಾಧಾನ್ಯೇ ಉತ್ಪ್ರೇಕ್ಷಾ'[4] ಎಂದು ಲಕ್ಷಣವನ್ನು ಹೇಳಿ, ಸಿದ್ಧ ಮತ್ತು ಸಾಧ್ಯವೆಂದು ಎರಡು ಬಗೆಯ ಅಧ್ಯವಸಾಯವನ್ನು ಪರಿಗಣಿಸಿ, ಅತಿಶಯೋಕ್ತಿ ಮತ್ತು ಉತ್ಪ್ರೇಕ್ಷೆಗಳಲ್ಲಿನ ವ್ಯತ್ಯಾಸವನ್ನು ತೋರಿಸುತ್ತಾನೆ.[5] ರುಯ್ಯಕನ ವಿವರಣೆಯ ಪ್ರಕಾರ ವಿಷಯಿಯ ಅಸತ್ಯರೂಪವಾದ ಪ್ರತೀತಿಯು ಸಾಧ್ಯ ಅಧ್ಯವಸಾಯ. ಉದಾಹರಣೆಗೆ, ಮುಖವನ್ನು ಮುಖತ್ವವಿಶಿಷ್ಟವಾಗಿ ತಿಳಿದಿದ್ದರೂ ಕವಿಯು ಚಮತ್ಕಾರಕ್ಕೋಸ್ಕರ 'ನೂನಂ ಚಂದ್ರಃ' ಎಂದು ಸಂಭಾವನೆ ಮಾಡಿದಾಗ, ಚಂದ್ರನು ಮುಖವಾಗಿ ಅಸತ್ಯ ರೂಪವಲ್ಲಿ (ತನ್ನದಲ್ಲದ ರೂಪದಲ್ಲಿ) ಕಂಡುಬರುತ್ತಾನೆ. ಚಂದ್ರನಲ್ಲಿರುವ ಧರ್ಮ

1 ಕಾವ್ಯಾಲಂಕಾರಸೂತ್ರವೃತ್ತಿ, 4. 3-9

2 ಅಲಂಕಾರಸರ್ವಸ್ವ (ರುಯ್ಯಕ), ಪುಟ. 82.

3 'ವಿಷಯಿವಾಚಕಪದೇನೈವ ವಿಷಯಪ್ರತಿಪಾದನಮಧ್ಯವಸಾನಮ್' ಇತಿ ಕೇಚಿತ್. ಕಾ. ಪ್ರಕಾಶ, ಬಾಲಬೋಧಿನೀ, ಪುಟ. 54

4 ಅಲಂಕಾರ - ಸರ್ವಸ್ವ, ಸೂತ್ರ 21, ಪುಟ. 82

5 ಅಲಂಕಾರ - ಸರ್ವಸ್ವ, ಪುಟ 82-83 ನೋಡಿರಿ

ವನ್ನು ಮುಖದಲ್ಲಿ ಭಾವಿಸಿ, ಈ ನಿಮಿತ್ತದಿಂದ 'ನೂನಂ ಚಂದ್ರಃ' ಎಂದು ಕಲ್ಪಿಸಿದರೆ, ಆಗ ಆ ಧರ್ಮವು ಚಂದ್ರನಲ್ಲಿ (ವಿಷಯಿಯಲ್ಲಿ) ಮಾತ್ರ ಸತ್ಯವಾಗಿ ಮತ್ತು ಮುಖದಲ್ಲಿ (ವಿಷಯದಲ್ಲಿ) ಅಸತ್ಯರೂಪದಲ್ಲಿ ಪ್ರತೀತಿಗೆ ಬರುವುದರಿಂದ, ಚಂದ್ರ ಮತ್ತು ಮುಖಗಳಲ್ಲಿ ಅಭೇದವು ಕಂಡರೂ ಧರ್ಮಸಂಬಂಧದ ಅಸತ್ಯತೆಯ ಕಾರಣದಿಂದ ಅದು ಸಾಧ್ಯಾವಸ್ಥೆಯಲ್ಲಿಯೇ (ವ್ಯಾಪಾರವಾಗಿಯೇ) ಉಳಿಯುತ್ತದೆ. ಆದರೆ 'ಸಿದ್ಧ ಅಧ್ಯವಸಾಯ'ವೆಂದರೆ ವಿಷಯಿಯು ವಸ್ತುತಃ ಅಸತ್ಯರೂಪದಲ್ಲಿ (ವಿಷಯವಾಗಿ) ಇದ್ದರೂ ಕವಿಯು ಸತ್ಯವಾಗಿ ವರ್ಣಿಸುತ್ತಾನೆ. ಏಕೆಂದರೆ, ಮೇಲೆ ಹೇಳಿದ ಧರ್ಮಸಂಬಂಧದ ಅಸತ್ಯತ್ವರೂಪವಾದ ನಿಮಿತ್ತವಿಲ್ಲಿ ಇಲ್ಲದಿರುವುದರಿಂದ. ಉದಾಹರಣೆಗೆ, ಮುಖವನ್ನು ಉದ್ದೇಶಿಸಿ 'ಚಂದ್ರೋऽಯಮ್' ಎಂದು ಹೇಳಿದಾಗ, ವಸ್ತುತಃ ಅಸತ್ಯರೂಪ (ಮುಖತ್ವರೂಪ)ದಲ್ಲಿರುವ ಚಂದ್ರನೆಂಬ ವಿಷಯಿಯು ಸತ್ಯರೂಪದಲ್ಲಿ ಸ್ಥಾಪಿತವಾಗುತ್ತದೆ. ಇಲ್ಲಿ ಸತ್ಯತ್ವವನ್ನು ನಿರಾಕರಿಸುವ ನಿಮಿತ್ತವಿಲ್ಲ. ಹೀಗೆ ಸಾಧ್ಯ ಅಧ್ಯವಸಾಯದಲ್ಲಿ ವಿಷಯವು 'ನಿಗೀರ್ಯಮಾಣ'ವಾದ್ದರಿಂದ (–ವ್ಯಾಪಾರ ಪ್ರಾಧಾನ್ಯ–) ಅದರ ಮತ್ತು ವಿಷಯಿಯ ಭೇದವು ತೊಡೆದುಹೋಗುವುದಿಲ್ಲ; ಸಿದ್ಧ ಅಧ್ಯವಸಾಯದಲ್ಲಿ ವಿಷಯವು ಸಂಪೂರ್ಣ 'ನಿಗರಣ'ವಾಗುವುದರಿಂದ ಅಭೇದವು ಪೂರ್ಣವಾಗುತ್ತದೆ. ಸಾಧ್ಯ ಅಧ್ಯವಸಾಯವು ಉತ್ಪ್ರೇಕ್ಷೆ; ಸಿದ್ಧ ಅಧ್ಯವಸಾಯವು ಅತಿಶಯೋಕ್ತಿ.

ಮೇಲಿನ ಮೀಮಾಂಸೆಯನ್ನು ಜಗನ್ನಾಥ ಪಂಡಿತನು ಸಯುಕ್ತಿಕವಾಗಿ ಪ್ರಶ್ನಿಸಿ, ಸಾಧ್ಯ ಅಧ್ಯವಸಾಯದ ಕಲ್ಪನೆಗೆ ಪ್ರಮಾಣವಿಲ್ಲ ಎನ್ನುತ್ತಾನೆ:

> "ಕಿಂ ಚ 'ನೂನಂ ಮುಖಂ ಚಂದ್ರಃ' ಇತ್ಯಾದೌ ಕುತ್ರ ಅಧ್ಯವಸಾಯಃ,
> ವಿಷಯಸ್ಯ ಜಾಗರೂಕತ್ವಾತ್. ನ ಚ ಸಿದ್ಧೇऽಧ್ಯವಸಾಯೇ ವಿಷಯಸ್ಯ
> ಜಠರವರ್ತಿತ್ವಂ ಸಾಧ್ಯೇ ತು ನಿಗೀರ್ಯಮಾಣತ್ವಾತ್ ಪೃಥಗುಪಲಬ್ಧಿರಿತಿ
> ವಾಚ್ಯಮ್, ಸಾಧ್ಯಾಧ್ಯವಸಾನೇ ಮಾನಾಭಾವಾತ್"[1].

ಇದು ಅಭಿಪ್ರಾಯಭೇದವೆಂದು ಗ್ರಹಿಸಬೇಕು. ಏಕೆಂದರೆ 'ಅಧ್ಯವಸಾಯ'ವನ್ನು ಕವಿಯ ಕಲ್ಪನೆಯ ವಿಷಯವೆಂದು ನಾವು ಭಾವಿಸುವುದಾದರೆ ಅದು 'ಸಾಧ್ಯ'ವಿರಬಹುದು, 'ಸಿದ್ಧ'ವಿರಬಹುದು. ವಿಶ್ವನಾಥನು ಅತಿಶಯೋಕ್ತಿಯ ಲಕ್ಷಣವನ್ನು 'ಸಿದ್ಧತ್ವೇऽಧ್ಯವಸಾಯಸ್ಯಾತಿಶಯೋಕ್ತಿರ್ನಿಗದ್ಯತೇ'[2] ಎಂದು ಹೇಳಿರುವುದನ್ನು ನೋಡಿದರೆ ಅವನ ಅಭಿಪ್ರಾಯದಲ್ಲಿ 'ಸಾಧ್ಯ ಅಧ್ಯವಸಾಯ'ವೊಂದುಂಟು, ಅದು ಉತ್ಪ್ರೇಕ್ಷೆಯ ವಿಷಯವೆಂದು ಆಕ್ಷೇಪದಿಂದ ಸಿದ್ಧವಾಗುವುದಿಲ್ಲವೆ? ಅಲ್ಲದೆ ವಿಷಯವು ಜಾಗರೂಕವಾಗಿರುವುದರಿಂದ 'ನೂನಂ ಮುಖಂ ಚಂದ್ರಃ' ಎಂಬಲ್ಲಿ

1 ರಸಗಂಗಾಧರ, ಪುಟ. 400

2 ಸಾಹಿತ್ಯದರ್ಪಣ, 10-456

'ಅಧ್ಯವಸಾಯ'ವಿಲ್ಲವೆಂದು ವಾದಿಸಿದರೆ, 'ಲಿಂಪತೀವ ತಮೋಽಂಗಾನಿ'[1] ಇತ್ಯಾದಿಗಳಲ್ಲಿ ವಿಷಯುವನ್ನು ಹೇಳದಿರುವಾಗ 'ಅಧ್ಯವಸಾಯ'ವಿರುವುದೆಂದು ಭಾವಿಸಿ ಉತ್ಪ್ರೇಕ್ಷೆಯುಲ್ಲವೆಂದು ಹೇಳಲು ಸಾಧ್ಯವೆ ?

ಉತ್ಪ್ರೇಕ್ಷೆಯಲ್ಲಿ ವಿಷಯುವು ಉಪಾತ್ತವಾಗಿರಲೇಬೇಕೇ ಬೇಡವೇ ಎಂಬುದರ ಬಗ್ಗೆ ಮತಭೇದವಿದೆ. ರುಯ್ಯಕನ ಅಭಿಪ್ರಾಯದ ಪ್ರಕಾರ ಉತ್ಪ್ರೇಕ್ಷೆಯಲ್ಲಿ ವಿಷಯುವು ಆಧಾರವಾದ್ದರಿಂದ ಅದನ್ನು ಹೇಳಿರಲೇಬೇಕು.

"ನ ಚ ವಿಷಯಸ್ಯ ಗಮ್ಯಮಾನತ್ವಂ ಯುಕ್ತಮ್. ತಸ್ಯೋತ್ಪ್ರೇಕ್ಷಿತಾಧಾರತ್ವೇನ ಪ್ರಸ್ತುತಸ್ಯ ಅಭಿಧಾತುಮುಚಿತತ್ವಾತ್."[2]

ಆದರೆ ವಿಶ್ವನಾಥನು ಇದನ್ನು ಒಪ್ಪುವುದಿಲ್ಲ, ಕೆಲವು ಕಡೆ ವಿಷಯುವನ್ನು ಹೇಳಿರದಿದ್ದರೂ ಉತ್ಪ್ರೇಕ್ಷೆಯಾಗಬಹುದೆಂದು ಅವನ ಅಭಿಪ್ರಾಯ :

"ಉಕ್ತ್ಯನುಕ್ತ್ಯೋः ಪ್ರಸ್ತುತಸ್ಯ ಪ್ರತ್ಯೇಕಂ ತಾಪಿ ದ್ವಿಧಾ।" (ತಾ ಉತ್ಪ್ರೇಕ್ಷಾಃ).[3] ಮಮ್ಮಟನ ಸೂಚನೆಯನ್ನಿಲ್ಲಿ ವಿಶ್ವನಾಥನು ಗ್ರಹಿಸಿದ್ದಾನೆ. ಮೇಲೆ ಉದಾಹರಿಸಿದ 'ಲಿಂಪತೀವ ತಮೋಽಂಗಾನಿ' ಎಂಬ ಶ್ಲೋಕದ ವಿಷಯದಲ್ಲಿ ಮಮ್ಮಟನು 'ಇತ್ಯಾದೌ ವ್ಯಾಪನಾದಿ ಲೇಪನಾದಿರೂಪತಯಾ ಸಂಭಾವಿತಮ್'[4] 'ವ್ಯಾಪನ' ಇಲ್ಲಿ ವಿಷಯ ; ಅದನ್ನು ಶ್ಲೋಕದಲ್ಲಿ ಹೇಳಿಲ್ಲ. ಮುಖವನ್ನು ಮನಸ್ಸಿನಲ್ಲಿಟ್ಟುಕೊಂಡು 'ನೂನಂ ಚಂದ್ರಃ' ಎಂದರೆ ಉತ್ಪ್ರೇಕ್ಷೆ, ಹಾಗೆಯೇ 'ಚಂದ್ರೋಽಯಮ್' ಎಂದರೆ ಅತಿಶಯೋಕ್ತಿ ಎಂದು ಭೇದವಂತೂ ಸ್ಪಷ್ಟ. ಆದರೆ ವಿಷಯವನ್ನು ಹೇಳದಿರುವ ಉತ್ಪ್ರೇಕ್ಷಾ ಉದಾಹರಣೆಗಳು ದೊರೆಯುವುದು ವಿರಳ.

'ಸಂಭಾವನೆ'ಯನ್ನು ಒಂದು ರೀತಿಯ 'ಅಧ್ಯವಸಾಯ'ವೆಂದು ಭಾವಿಸುವಂತೆ, ಒಂದು ರೀತಿಯ ಸಂಶಯವೆಂದೂ ಭಾವಿಸುವ ಒಂದು ಅಭಿಪ್ರಾಯವಿದೆ. 'ಸಂಭಾವನೆ'ಯು ಒಂದು ಪಕ್ಷದ ಕಡೆಗೆ ಹೆಚ್ಚಿನ ಒಲವಿರುವ ಸಂದೇಹ. ಸಾಮಾನ್ಯವಾಗಿ ನಾವು ಮೂರು ರೀತಿಯ ಭಾವನೆಗಳನ್ನು ಹೊಂದಿದ್ದೇವೆ. ಕೆಲವು ವಿಷಯುಗಳ ಬಗ್ಗೆ ನಮಗೆ ನಿಶ್ಚಯಭಾವ, ಮತ್ತೆ ಕೆಲವು ವಿಷಯುಗಳ ಬಗ್ಗೆ 'ಅಯಂ ಪುರುಷೋ ನ ವಾ' ಎಂಬ ರೀತಿಯ ಸಂಶಯ ; ಇನ್ನೂ ಕೆಲವು ವಿಷಯುಗಳ ಬಗ್ಗೆ ಸಂಶಯವಿದ್ದರೂ 'ಪ್ರಾಯೇಣಾಯಂ ಪುರುಷಃ' ಎನ್ನುವ ರೀತಿಯಲ್ಲಿ ಯಾವುದಾದರೂ ಒಂದು ಪಕ್ಷದ ಕಡೆಗೆ ಒಲವಿರುತ್ತದೆ ; ಉತ್ಪ್ರೇಕ್ಷೆಯಲ್ಲಿನ ಭಾವನೆ ಮೂರನೆಯ ತರಹದು :[5]

---

1 'ಮೃಚ್ಛಕಟಿಕ'ದ ಶ್ಲೋಕ ; ಅನೇಕ ಆಲಂಕಾರಿಕರು ಉದಾಹರಿಸಿದ್ದಾರೆ

2 ಅಲಂಕಾರಸರ್ವಸ್ವ, ಪುಟ. 100

3 ಸಾಹಿತ್ಯದರ್ಪಣ, 10-45a

4 ಕಾವ್ಯಪ್ರಕಾಶ. 10 ನೇ ಉಲ್ಲಾಸ. 417 ನೇ ಉದಾಹರಣೆಯ ಕೆಳಗೆ ನೋಡಿರಿ

5 ಉತ್ಪ್ರೇಕ್ಷೆಯಲ್ಲಿ ವಿಷಯಿಯ ಕಡೆಗೆ ಒಲವಿರುತ್ತದೆ ಎಂದರ್ಥ

"ಉತ್ಕಟೈಕಕೋಟಿಃ ಸಂಶಯಃ ಸಂಭಾವನಮ್. ಸಂಶಯೇ ಹಿ ಕೋಟಿದ್ವಯಂ (ಪಕ್ಷದ್ವಯಂ) ವರ್ತತೇ, ಯಥಾ 'ಅಯಂ ಪುರುಷೋ ನ ವಾ' – ಇತ್ಯತ್ರ ಏಕಾ ಕೋಟಿಃ ಪುರುಷಸ್ಯ ವಿಧಿಃ, ಅಪರಾ ಚ 'ನ ವಾ' ಇತಿ ಪುರುಷಸ್ಯ ನಿಷೇಧಃ. ಯಸ್ಮಿನ್ ಸಂಶಯೇ ಕೋಟಿದ್ವಯಮಧ್ಯೇ ಏಕಸ್ಯಾಃ ಕೋಟೇಃ ಉತ್ಕಟತ್ವಂ (ನಿಶ್ಚಿತಪ್ರಾಯತ್ವಮ್) ಸ ಏವ ಸಂಶಯಃ ಸಂಭಾವನಮಿತ್ಯುಚ್ಯತೇ."[1] ಎರಡೂ ಪಕ್ಷಗಳು ಸಮಪ್ರಧಾನವಾಗಿದ್ದರೆ ಸಂದೇಹಾಲಂಕಾರ; ಒಂದು ಪಕ್ಷವು (ವಿಷಯಿ) ಪ್ರಧಾನವಾಗಿದ್ದರೆ ಉತ್ಪ್ರೇಕ್ಷೆ. ಹಾಗೆಯೇ ಉತ್ಪ್ರೇಕ್ಷೆಯಲ್ಲಿ ಒಂದು ವಸ್ತುವನ್ನು ಬಹುಮಟ್ಟಿಗೆ ಇನ್ನೊಂದೆಂದು ಸಂಭಾವನೆ ಮಾಡುವುದು ಆಹಾರ್ಯ (ಬೇಕೆಂತಲೇ). ಒಂದನ್ನು ಬೇರೊಂದೆಂದು **ಭ್ರಾಂತಿಯಿಂದ ಭಾವಿಸಿದರೆ** ಭ್ರಾಂತಿಮಾನಲಂಕಾರ ವಾಗುತ್ತದೆ.

ಮಮ್ಮಟ ಮತ್ತು ಅವನ ನಂತರದ ಆಲಂಕಾರಿಕರು 'ಸಂಭಾವನೆ'ಯನ್ನು ತಮ್ಮ ಉತ್ಪ್ರೇಕ್ಷಾಲಕ್ಷಣಗಳಲ್ಲಿ ಮುಖ್ಯವಾಗಿ ಒತ್ತಿಹೇಳಿದ್ದಾರೆ. ಕೆಲವು ಪ್ರಸಿದ್ಧ ಲಕ್ಷಣಗಳನ್ನಿಲ್ಲಿ ಕೊಡುವುದರಿಂದ ಉತ್ಪ್ರೇಕ್ಷೆಯ ಸ್ವರೂಪದ ಎಲ್ಲ ಅಂಶಗಳು ಅವುಗಳಲ್ಲಿ ಹೇಗೆ ಸಮಾವೇಶಗೊಂಡಿವೆಯೆಂಬುದನ್ನು ಸ್ಪಷ್ಟಪಡಿಸಬಹುದು :

ಸಂಭಾವನಮಥೋತ್ಪ್ರೇಕ್ಷಾ ಪ್ರಕೃತಸ್ಯ ಸಮೇನ ಯತ್ ।[2]

ಭವೇತ್ಸಂಭಾವನೋತ್ಪ್ರೇಕ್ಷಾ ಪ್ರಕೃತಸ್ಯ ಪರಾತ್ಮನಾ ।[3]

ಯದನ್ಯಧರ್ಮಸಂಬಂಧಾದನ್ಯತ್ವೇನೋಪತರ್ಕಿತಮ್ ।
ಪ್ರಕೃತಂ ಹಿ ಭವೇತ್ ಪ್ರಾಜ್ಞಾಸ್ತಾಮುತ್ಪ್ರೇಕ್ಷಾಂ ಪ್ರಚಕ್ಷತೇ ॥[4]

ಸಂಭಾವನಾ ಸ್ಯಾದುತ್ಪ್ರೇಕ್ಷಾ ವಸ್ತುಹೇತುಫಲಾತ್ಮನಾ ।[5]

ಪದಾರ್ಥಸ್ಯ ರಮಣೀಯತದ್ವೃತ್ತಿ ತತ್ಸಮಾನಾಧಿಕರಣಾನ್ಯತರತದ್ಧರ್ಮ-
ಸಂಬಂಧನಿಮಿತ್ತಕಂ ತದ್ವತ್ತ್ವೇನ ವಾ ಸಂಭಾವನಮುತ್ಪ್ರೇಕ್ಷಾ ।[6]

ಈ ಲಕ್ಷಣಗಳಲ್ಲಿ ಮೇಲಿನ ವಿವೇಚನೆಯ ಸಾರವೆಲ್ಲ ಅಡಕವಾಗಿರುವುದರಿಂದ ಇಲ್ಲಿ ಒಂದೇ ಕಡೆ ಉದಾಹರಿಸಲ್ಪಟ್ಟಿವೆ. ಅವುಗಳಿಂದ ಉತ್ಪ್ರೇಕ್ಷೆಯ ಸ್ವರೂಪವು ಕೆಳಗಿನ ಅಂಶಗಳನ್ನು ಒಳಗೊಂಡಿದೆ ಎಂದು ಸ್ಪಷ್ಟವಾಗುತ್ತದೆ:

(1) 'ಸಂಭಾವನೆ'ಯೇ ಉತ್ಪ್ರೇಕ್ಷೆಯ ಸಾಮಾನ್ಯ ಲಕ್ಷಣ.

---

1 ಕಾವ್ಯಪ್ರಕಾಶ, ಬಾಲಬೋಧಿನೀ, ಪುಟ. 708
2 ಕಾವ್ಯಪ್ರಕಾಶ, 10-137
3 ಸಾಹಿತ್ಯದರ್ಪಣ, 10-40
4 ಪ್ರತಾಪರುದ್ರೀಯ, ಪುಟ. 383
5 ಕುವಲಯಾನಂದ, ಕಾರಿಕಾ 32
6 ರಸಗಂಗಾಧರ, ಪುಟ. 285

(2) ಈ ಸಂಭಾವನೆಯು ಮೂಲತಃ ಸಾದೃಶ್ಯವನ್ನು ಹೊಂದಿರುವ ವಸ್ತುಗಳಲ್ಲಿ ಒಂದನ್ನು ಇನ್ನೊಂದರೊಡನೆ ತಾದಾತ್ಮ್ಯಭಾವದಿಂದ ಕಲ್ಪಿಸುವುದೇ ಆಗಿದೆ.

(3) ಈ ತಾದಾತ್ಮ್ಯಕಲ್ಪನೆಯು 'ಆಹಾರ್ಯ'ವಾಗಿರಬೇಕು ; ಭ್ರಾಂತಿಯು ಅದಕ್ಕೆ ಮೂಲವಾಗಿರಬಾರದು.

(4) ವಿಷಯಿಯಲ್ಲಿ ಗುಣಕ್ರಿಯಾರೂಪವಾದ ಯಾವ ಧರ್ಮವಿದೆಯೋ ಅವರೊಡನೆ ವಿಷಯದ ಸಂಬಂಧವನ್ನು ನಿಮಿತ್ತವಾಗಿಟ್ಟುಕೊಂಡು ವಿಷಯವನ್ನು ವಿಷಯಿಯೊಡನೆ ತಾದಾತ್ಮ್ಯ ಹೊಂದಿದಂತೆ ಸಂಭಾವನೆ ಮಾಡುವುದು ಉತ್ಪ್ರೇಕ್ಷೆಯೆಂದು ನಿಷ್ಕರ್ಷೆ.

**ಉತ್ಪ್ರೇಕ್ಷೆಯ ವಿಭಜನೆ**

ಪ್ರಾಚೀನ ಆಲಂಕಾರಿಕರಲ್ಲಿ ಭಾಮಹನು ಉತ್ಪ್ರೇಕ್ಷೆಯ ಯಾವ ವಿಭಜನೆಯನ್ನೂ ತೋರಿಸಿಲ್ಲ. ಆದರೆ 'ಗುಣಕ್ರಿಯಾಯೋಗಾತ್'[1] ಎಂಬ ಮಾತಿನಲ್ಲಿ ಗುಣನಿಮಿತ್ತಕ ಉತ್ಪ್ರೇಕ್ಷೆ ಮತ್ತು ಕ್ರಿಯಾನಿಮಿತ್ತಕ ಉತ್ಪ್ರೇಕ್ಷೆ ಎಂದು ಪರಿಗಣಿಸಬಹುದಾದ ಸೂಚನೆಯನ್ನು ನೀಡಿದ್ದಾನೆ. ಮುಂದೆ ಉದ್ಭಟನು ಮುಂದೆ ನಿರೂಪಿಸಲಾಗುವ ನವೀನರ ವಿಭಜನೆಗೆ ಪ್ರೇರಕವಾದ ವಿಷಯಗಳನ್ನು ತನ್ನ ಉತ್ಪ್ರೇಕ್ಷಾ ಲಕ್ಷಣದಲ್ಲಿ ನಿರೂಪಿಸಿದ್ದಾನೆ.[2] ನಾಲ್ಕು ಉತ್ಪ್ರೇಕ್ಷೆಯ ಭೇದಗಳ ವಿವಕ್ಷೆಯಿದೆ ಅವರಲ್ಲಿ—(1) ಗುಣನಿಮಿತ್ತಕವಾದ ಪದಾರ್ಥದ ಭಾವಾಭಿಮಾನ ರೂಪವಾದ ಉತ್ಪ್ರೇಕ್ಷೆ; (2) ಗುಣನಿಮಿತ್ತಕವಾದ ಅಭಾವಾಭಿಮಾನ ರೂಪವಾದ ಉತ್ಪ್ರೇಕ್ಷೆ ; (3) ಕ್ರಿಯಾನಿಮಿತ್ತಕವಾದ ಭಾವಾಭಿಮಾನರೂಪವಾದ ಉತ್ಪ್ರೇಕ್ಷೆ; ಮತ್ತು (4) ಕ್ರಿಯಾನಿಮಿತ್ತಕವಾದ ಅಭಾವಾಭಿಮಾನರೂಪವಾದ ಉತ್ಪ್ರೇಕ್ಷೆ. ಇದಲ್ಲದೆ ಉದ್ಭಟನು ಅಲ್ಲಿಯೇ 'ವಾಚ್ಯೇವಾದಿಭಿರುಚ್ಯತೇ' ಎಂಬ ಮಾತಿನಲ್ಲಿ ಉತ್ಪ್ರೇಕ್ಷೆಯನ್ನು ವಾಚ್ಯ ಮತ್ತು ಗಮ್ಯವೆಂದು ಪರಿಗಣಿಸುವ ಸೂಚನೆಯನ್ನೂ ಕೊಟ್ಟಿದ್ದಾನೆ. ಅವನಿಗಿಂತ ಮೊದಲು ದಂಡಿಯು ಉತ್ಪ್ರೇಕ್ಷೆಯನ್ನು ಚೇತನಪದಾರ್ಥದ ವೃತ್ತಿಯ ಉತ್ಪ್ರೇಕ್ಷೆ ಮತ್ತು ಅಚೇತನಪದಾರ್ಥದ ವೃತ್ತಿಯ ಉತ್ಪ್ರೇಕ್ಷೆ ಎಂದು ಎರಡು ವಿಧವಾಗಿ ಪರಿಗಣಿಸಿದರೂ,[3] ಈ ಆಧಾರದ ವಿಭಜನೆಯನ್ನು ಮುಂದೆ ಯಾರೂ ಅನುಸರಿಸಿದಂತೆ ಕಂಡುಬರುವುದಿಲ್ಲ. ಮೇಲೆ ಹೇಳಿದ ಪ್ರಕಾರ ಉತ್ಪ್ರೇಕ್ಷೆಯ ವಿಭಜನೆಗೆ ಮೂರು ವಿಧವಾದ ಆಧಾರಗಳ ಸೂಚನೆಯನ್ನು ಪ್ರಾಚೀನರಲ್ಲಿ ಕಾಣುತ್ತೇವೆ: (1) ಉತ್ಪ್ರೇಕ್ಷಾವ್ಯಂಜಕಗಳಾದ ಇವ, ಮನ್ಯೇ, ಮುಂತಾದುವುಗಳ

---

1 ಕಾವ್ಯಾಲಂಕಾರ, 2-91

2 ಕಾವ್ಯಾಲಂಕಾರಸಾರಸಂಗ್ರಹ, 3. 3-4

3 ಕಾವ್ಯಾದರ್ಶ, 2-219

ಪ್ರಯೋಗ ಅಥವಾ ಅಪ್ರಯೋಗದ ಆಧಾರ (ವಾಚ್ಯ ಮತ್ತು ಗಮ್ಯ ಭೇದಕ್ಕೆ); (2) ಪದಾರ್ಥದ ಭಾವ ಅಥವಾ ಅಭಾವದ ಆಧಾರ; ಮತ್ತು (3) ನಿಮಿತ್ತವಾದ ಧರ್ಮದ ಗುಣ-ಕ್ರಿಯಾರೂಪವಾದ ಭೇದದ ಆಧಾರ.

ಈ ಮೂರು ಆಧಾರಗಳ ಜೊತೆಗೆ ಮತ್ತೊಂದು ಆಧಾರವನ್ನು ಮಮ್ಮಟನು ಸೂಚಿಸುತ್ತಾನೆ. ಅದು ಸ್ವರೂಪ–ಹೇತು–ಫಲಾತ್ಮಕವಾದ ಆಧಾರ. ಪದಾರ್ಥದ ಸ್ವರೂಪವನ್ನು ಉತ್ಪ್ರೇಕ್ಷಿಸಬಹುದು ಅಥವಾ ಅದನ್ನು ಹೇತು ಮತ್ತು ಫಲರೂಪವಾಗಿ ಉತ್ಪ್ರೇಕ್ಷಿಸಬಹುದು. ಇದು ನಾಲ್ಕನೆಯ ಆಧಾರ. ಮಮ್ಮಟನು ಕಂಠರವೇಣ ಹೇಳದಿದ್ದರೂ ಅವನು ಕೊಟ್ಟಿರುವ ಉದಾಹರಣೆಗಳಿಂದ ಈ ವಿಭಜನೆ ಸೂಚಿತವಾಗಿದೆ.[1] ಮುಂದೆ ಮೊಟ್ಟ ಮೊದಲಿಗೆ ರುಯ್ಯಕನು ವೈಯಾಕರಣರ ಚತುರ್ವಿಧ ಪದಾರ್ಥ ವಿಭಜನೆಯನ್ನು ಆಧಾರವಾಗಿಟ್ಟುಕೊಂಡು ಉತ್ಪ್ರೇಕ್ಷೆಯ ವಿಭಜನೆಯನ್ನು ಮಾಡಿದಂತೆ ಕಂಡುಬರುತ್ತದೆ. ವೈಯಾಕರಣರ ಪ್ರಕಾರ ಜಾತಿ, ಗುಣ, ಕ್ರಿಯಾ ಮತ್ತು ದ್ರವ್ಯ (ಸಂಜ್ಞಾ) ಎಂದು ಪದಾರ್ಥಗಳು ನಾಲ್ಕುವಿಧವಾಗಿವೆ. 'ಚತುಷ್ಟಯೀ ಶಬ್ದಾನಾಂ ಪ್ರವೃತ್ತಿರಿತಿ ಮಹಾಭಾಷ್ಯಕಾರಃ[2]'. ಉತ್ಪ್ರೇಕ್ಷಾವಿಭಜನೆಗೆ ಈ ಐದೂ ಆಧಾರಗಳನ್ನು ವಿಶ್ವನಾಥ-ವಿದ್ಯಾನಾಥರು ಉಪಯೋಗಿಸಿಕೊಂಡಿದ್ದಾರೆ.

ರುಯ್ಯಕ, ಮುಂತಾದವರು ಅನುಸರಿಸಿರುವ ವಿಭಜನೆಯ ಪ್ರಕ್ರಿಯೆಯನ್ನು ವಿವರಿಸುವ ಮೊದಲು ಪ್ರಾಸಂಗಿಕವಾಗಿ ಒಂದು ಮಾತು. ವೈಯಾಕರಣರ ಮೇಲ್ಕಂಡ ಪದಾರ್ಥವಿಭಜನೆಯನ್ನು ಆಧಾರವಾಗಿಟ್ಟುಕೊಂಡು ದಂಡಿಯು ಸ್ವಭಾವೋಕ್ತ್ಯಲಂಕಾರವನ್ನು ವಿಭಜನೆ ಮಾಡಿದ್ದಾನೆ. ನಮಗೆ ತಿಳಿದಿರುವ ಮಟ್ಟಿಗೆ ಯಾವುದೇ ಒಂದು ಅಲಂಕಾರದ ವಿಭಜನೆಗೆ ವೈಯಾಕರಣರ ಪದಾರ್ಥವಿಭಜನೆಯನ್ನು ಆಧಾರವಾಗಿಟ್ಟುಕೊಂಡಿರುವುದು ಇದೇ ಮೊದಲು. ಸ್ವಭಾವೋಕ್ತಿಯಲ್ಲಿ ಪದಾರ್ಥಗಳ ಸ್ವಭಾವದ ವರ್ಣನೆ ಇರುತ್ತದೆ; ಪದಾರ್ಥಗಳು ನಾಲ್ಕು ವಿಧವಾಗಿರುವುದರಿಂದ, ಈ ನಾಲ್ಕೂ ವಿಧವಾದ ಪದಾರ್ಥಗಳ ಸ್ವರೂಪ ವರ್ಣನೆಯನ್ನು ಸ್ವಭಾವೋಕ್ತಿಯೆಂದು ಹೇಳುವುದು ಸೂಕ್ತವೇ ಆಗಿದೆ:

> ನಾನಾವಸ್ಥಂ ಪದಾರ್ಥಾನಾಂ ರೂಪಂ ಸಾಕ್ಷಾದ್ವಿವೃಣ್ವತೀ ।
> ಸ್ವಭಾವೋಕ್ತಿಶ್ಚ ಜಾತಿಶ್ಚೇತ್ಯಾದ್ಯಾ ಸಾಲಂಕೃತಿರ್ಯಥಾ ॥
>
> * * *
>
> ಜಾತಿ-ಕ್ರಿಯಾ-ಗುಣ-ದ್ರವ್ಯಸ್ವಭಾವಾಖ್ಯಾನಮೀದೃಶಮ್॥[3]

ಈ ವಿಭಜನೆಯ ಕ್ರಮವನ್ನು ರುಯ್ಯಕನು ಉತ್ಪ್ರೇಕ್ಷೆಗೂ ವಿಸ್ತರಿಸಿದ್ದಾನೆ. ಸ್ವಭಾವೋಕ್ತಿಯಲ್ಲಿ ಪದಾರ್ಥಗಳ ನೈಜವಾದ ಸ್ವಭಾವವರ್ಣನೆಯಿದ್ದರೆ, ಉತ್ಪ್ರೇಕ್ಷೆಯಲ್ಲಿ

---

1 ಕಾವ್ಯಪ್ರಕಾಶ (ಬಾಲಬೋಧಿನೀ ಸಹಿತ), ಪುಟ. 707-711

2 ಕಾವ್ಯಪ್ರಕಾಶ (ಬಾಲಬೋಧಿನೀ ಸಹಿತ), ಪುಟ. 39

3 ಕಾವ್ಯಾದರ್ಶ, 2-8 ಮತ್ತು 13

ಪದಾರ್ಥಗಳ 'ಆಹಾರ್ಯ' ಸ್ವಭಾವವರ್ಣನೆ ಇರುತ್ತದೆ. ಆದ್ದರಿಂದ ಸಂಭಾವನೆಯು ಜಾತಿ-ಗುಣ-ಕ್ರಿಯಾ-ದ್ರವ್ಯಗಳ ಸ್ವರೂಪಾದಿಗಳ ರೂಪದಲ್ಲಿರುವುದರಲ್ಲಿ ಬಹುಶಃ ಔಚಿತ್ಯವಿದೆ. ಹಾಗಿದ್ದರೆ ಈ ವಿಭಜನೆಯು ಕ್ರಮವನ್ನು ಅನುಸರಿಸಬಹುದಾದ[1] ಮತ್ತೆ ಕೆಲವು ಅಲಂಕಾರಗಳ ವಿಭಜನೆಯಲ್ಲಿ ಅದನ್ನು ಏಕೆ ಅನುಸರಿಸಿಲ್ಲವೆಂಬುದು ಪರಿಶೀಲನಾರ್ಹ.

ಉತ್ಪ್ರೇಕ್ಷೆಯ ವಿಭಜನೆಯಲ್ಲಿ ವಿಶ್ವನಾಥ ಮತ್ತು ವಿದ್ಯಾನಾಥರು ರುಯ್ಯಕನನ್ನೇ ಸಾಮಾನ್ಯವಾಗಿ ಅನುಸರಿಸಿರುವುದರಿಂದ, ರುಯ್ಯಕನ ಪ್ರಕಾರ ವಿಭಜನೆಯನ್ನು ತೋರಿಸಿ'[2] ಇತರರ ವಿಭಜನೆಯಲ್ಲಿ ಎಲ್ಲೆಲ್ಲಿ ವ್ಯತ್ಯಾಸವಿದೆಯೋ ಅದನ್ನಷ್ಟು ಗುರುತಿಸುವುದು ಸೂಕ್ತ. ರುಯ್ಯಕನು ಮೊದಲು ಉತ್ಪ್ರೇಕ್ಷೆಯಲ್ಲಿ 'ವಾಚ್ಯಾ' ಮತ್ತು 'ಪ್ರತೀಯಮಾನಾ (ಗಮ್ಯಾ)' ಎಂದು ಎರಡು ಭೇದಗಳನ್ನು ಗುರುತಿಸುತ್ತಾನೆ. ಇವ, ಮುಂತಾದ ಉತ್ಪ್ರೇಕ್ಷಾವ್ಯಂಜಕಗಳನ್ನು ಪ್ರಯೋಗಿಸಿದಾಗ 'ವಾಚ್ಯಾ' ; ಅವುಗಳನ್ನು ಪ್ರಯೋಗಿಸದಾಗ 'ಪ್ರತೀಯಮಾನಾ'. ಮುಂದಿನ ವಿಭಜನೆಯನ್ನು ಕೆಳಗೆ ತೋರಿಸಿದೆ. ವಾಚ್ಯೋತ್ಪ್ರೇಕ್ಷೆಯ ಭೇದಗಳು :

**ವಾಚ್ಯೋತ್ಪ್ರೇಕ್ಷಾ**

- ಜಾತಿ
  - ಭಾವ
  - ಅಭಾವ
- ಕ್ರಿಯಾ
  - ಭಾವ
  - ಅಭಾವ
- ಗುಣ
  - ಭಾವ
  - ಅಭಾವ
- ದ್ರವ್ಯ
  - ಭಾವ
  - ಅಭಾವ

ಮೇಲಿನ ಎಂಟು ಭೇದಗಳು ಒಂದೊಂದೂ ನಿಮಿತ್ತಭೇದದಿಂದ ಎರಡು. ಉದಾಹರಣೆಗೆ :

**ಜಾತ್ಯುತ್ಪ್ರೇಕ್ಷಾ**

- ಜಾತಿಭಾವೋತ್ಪ್ರೇಕ್ಷಾ
  - ಗುಣನಿಮಿತ್ತ–
  - ಕ್ರಿಯಾನಿಮಿತ್ತ–
- ಜಾತ್ಯಭಾವೋತ್ಪ್ರೇಕ್ಷಾ
  - ಗುಣನಿಮಿತ್ತ–
  - ಕ್ರಿಯಾನಿಮಿತ್ತ–

---

1 ಉದಾಹರಣೆಗೆ. – ವಿರೋಧಾಲಂಕಾರದ ವಿಭಜನೆಯಲ್ಲಿ ಈ ಆಧಾರವನ್ನು ಮಮ್ಮಟನು ಇಟ್ಟುಕೊಂಡಿದ್ದಾನೆ. ಕಾವ್ಯಪ್ರಕಾಶ, 10-116-117 (ಪುಟ 663-4)

2 ಅಲಂಕಾರಸರ್ವಸ್ವ, ಪುಟ 84-89 ನೋಡಿರಿ

ಹೀಗೆ ಕ್ರಿಯೋತ್ಪ್ರೇಕ್ಷೆ, ಗುಣೋತ್ಪ್ರೇಕ್ಷೆ ಮತ್ತು ದ್ರವ್ಯೋತ್ಪ್ರೇಕ್ಷೆಯ ನಾಲ್ಕು–ನಾಲ್ಕು ಭೇದಗಳನ್ನೂ ಗಣಿಸಿದರೆ ಒಟ್ಟು ೧೬ ಆಗುತ್ತವೆ. ಉಪಾತ್ತ-ನಿಮಿತ್ತ (ನಿಮಿತ್ತವನ್ನು ಹೇಳಿರುವುದು) ಮತ್ತು ಅನುಪಾತ್ತನಿಮಿತ್ತ (ನಿಮಿತ್ತವನ್ನು ಹೇಳದಿರುವುದು) ಎಂದು ಎರಡೆರಡು ಭೇದಗಳು. ಅಂದರೆ ಒಟ್ಟು ೩೨ ಭೇದಗಳಾಗುತ್ತವೆ. ಆಮೇಲೆ ಒಂದೊಂದೂ ಹೇತು, ಸ್ವರೂಪ ಮತ್ತು ಫಲವೆಂದು ಮೂರು ವಿಧ. ಉದಾಹರಣೆಗೆ :

ಉಪಾತ್ತಗುಣನಿಮಿತ್ತಜಾತಿಭಾವೋತ್ಪ್ರೇಕ್ಷಾ

↓ ↓ ↓

ಉ. ಗು. ನಿ. ಜಾ. ಭಾ. ಹೇತೂತ್ಪ್ರೇಕ್ಷೆ—ಸ್ವರೂಪೋತ್ಪ್ರೇಕ್ಷೆ —ಫಲೋತ್ಪ್ರೇಕ್ಷೆ

ಹೀಗೆ ೩೨ನ್ನೂ ಮೂರು ಮೂರು ವಿಧವಾಗಿ ವಿಭಜಿಸಿದರೆ ಒಟ್ಟು ವಾಚ್ಯೋತ್ಪ್ರೇಕ್ಷೆಯ ಭೇದಗಳು ೯೬ ಆಗುತ್ತವೆ. ಇವುಗಳಲ್ಲಿ 'ದ್ರವ್ಯದ' ವಿಚಾರದಲ್ಲಿ[1] ಸ್ವರೂಪೋತ್ಪ್ರೇಕ್ಷೆ ಮಾತ್ರವಿರುವುದರಿಂದ, ಅದರ ಉಳಿದ ೧೬ ಭೇದಗಳನ್ನು ೯೬ರಲ್ಲಿ ಕಳೆಯಬೇಕು. ಅಂತಿಮವಾಗಿ ವಾಚ್ಯೋತ್ಪ್ರೇಕ್ಷೆಯ ಭೇದಗಳು ೮೦ ಮಾತ್ರ. ಇನ್ನು ಪ್ರತೀಯಮಾನೋತ್ಪ್ರೇಕ್ಷೆಯ ಭೇದಗಳು ಶಾಸ್ತ್ರೀಯವಾಗಿ ಇಷ್ಟೇ (೮೦) ಆದರೂ, ಅವುಗಳಲ್ಲಿ ನಿಮಿತ್ತವನ್ನು ಹೇಳದಿರುವ ಭೇದಗಳು ಅಸಂಭವವಾದ್ದರಿಂದ, ಈ ಭೇದಗಳು ೪೦ ಇರಬೇಕು. ಪ್ರತೀಯಮಾನ ಭೇದಗಳಲ್ಲಿ ಇವ, ಮುಂತಾದ ಉತ್ಪ್ರೇಕ್ಷಾವ್ಯಂಜಕಗಳ ಪ್ರಯೋಗವಂತೂ ಇರುವುದಿಲ್ಲ; ಇನ್ನು ನಿಮಿತ್ತವನ್ನೂ ಹೇಳದಿದ್ದರೆ ಉತ್ಪ್ರೇಕ್ಷೆಗೆ ಆಧಾರವೇ ಇಲ್ಲವಾಗುತ್ತದೆ.[2] ಮತ್ತೆ ಗಮ್ಯೋತ್ಪ್ರೇಕ್ಷೆಯಲ್ಲಿ ಪ್ರಾಯಶಃ ಸ್ವರೂಪೋತ್ಪ್ರೇಕ್ಷೆಯ ಭೇದಗಳೂ ಇರುವುದಿಲ್ಲ.[3] ಅಂದರೆ ೧೬ ಭೇದಗಳನ್ನು (ಜಾತಿ – ೪, ಕ್ರಿಯಾ – ೪, ಗುಣ – ೪, ದ್ರವ್ಯ – ೪) ಕಳೆದರೆ ಗಮ್ಯೋತ್ಪ್ರೇಕ್ಷೆಯಲ್ಲಿ ಅಂತಿಮವಾಗಿ ೨೪ ಭೇದಗಳಾಗುತ್ತವೆ. ಹೀಗೆ ಉತ್ಪ್ರೇಕ್ಷೆಯ ಒಟ್ಟು ಭೇದಗಳು (ವಾಚ್ಯ ೮೦ + ಗಮ್ಯ ೨೪) ಒಟ್ಟು ೧೦೪.

ವಿಶ್ವನಾಥನು ವಾಚ್ಯೋತ್ಪ್ರೇಕ್ಷೆಯಲ್ಲಿನ ಉಕ್ತನಿಮಿತ್ತ ಮತ್ತು ಅನುಕ್ತನಿಮಿತ್ತ ಭೇದಗಳನ್ನು ಸ್ವರೂಪೋತ್ಪ್ರೇಕ್ಷೆಯಲ್ಲಿ ಮಾತ್ರ ಅಂಗೀಕರಿಸುತ್ತಾನೆ. ಹೀಗೆ ಹೇತೂತ್ಪ್ರೇಕ್ಷೆಯ ೧೨ ಮತ್ತು ಫಲೋತ್ಪ್ರೇಕ್ಷೆಯ ೧೨, ಒಟ್ಟು ೨೪ ಅನುಕ್ತನಿಮಿತ್ತ

---

1 'ತತ್ರಾಪಿ ದ್ರವ್ಯಸ್ಯ ಪ್ರಾಯಃ ಸ್ವರೂಪೋತ್ಪ್ರೇಕ್ಷಣಮೇವ.' ಅಲಂ. ಸ., ಪುಟ 85

2 'ಇವಾದ್ಯನುಪಾದಾನೇ ನಿಮಿತ್ತಸ್ಯ ಚಾಕೀರ್ತನೇ ಉತ್ಪ್ರೇಕ್ಷಣಸ್ಯ ನಿಷ್ಪ್ರಮಾಣತ್ವಾತ್.' (ಪುಟ 86)

3 ದ್ರವ್ಯೋತ್ಪ್ರೇಕ್ಷೆಯಲ್ಲಿ 'ಸ್ವರೂಪಗಾ' ಮಾತ್ರ ಎಂದು 1ನೇ ಟಿಪ್ಪಣಿಯಲ್ಲಿ ಹೇಳಿದೆ 'ಪ್ರಾಯಶ್ಚ ಸ್ವರೂಪೋತ್ಪ್ರೇಕ್ಷಾತ್ರ ನ ಸಂಭವತಿ' ಎಂಬುದರಿಂದ ಗಮ್ಯೋತ್ಪ್ರೇಕ್ಷೆಯಲ್ಲಿ ದ್ರವ್ಯೋತ್ಪ್ರೇಕ್ಷೆಯೇ ಪ್ರಾಯಶಃ ಇಲ್ಲವೆಂದು ಕಂಡುಬರುವುದು

ಭೇದಗಳನ್ನು ಅಂಗೀಕರಿಸುವುದಿಲ್ಲವಾದ್ದರಿಂದ ವಾಚ್ಯೋತ್ಪ್ರೇಕ್ಷೆಯ ಒಟ್ಟು ಭೇದಗಳು ೫೬ ಮಾತ್ರ (ರುಯ್ಯಕನ ಪ್ರಕಾರ ೮೦).[1-2] ಇನ್ನು ಗಮ್ಯೋತ್ಪ್ರೇಕ್ಷೆಯಲ್ಲಿ ಗುಣ – ನಿಮಿತ್ತ – ಕ್ರಿಯಾನಿಮಿತ್ತಗಳ ದ್ವೈವಿಧ್ಯ, ಜಾತಿ, ಕ್ರಿಯಾ, ಗುಣ, ದ್ರವ್ಯ ರೂಪದಲ್ಲಿ ನಾಲ್ಕುವಿಧ, ಭಾವ – ಅಭಾವ ರೂಪದ ಆಧಾರದ ಮೇಲೆ ಮತ್ತೆ ಎರಡು ವಿಧ; ಹೀಗೆ ಒಟ್ಟು ೧೬ ಭೇದಗಳು ಶಾಸ್ತ್ರೀಯ ಪ್ರಕ್ರಿಯೆಯ ಪ್ರಕಾರ. ಇವುಗಳು ಹೇತು ಮತ್ತು ಫಲರೂಪದಲ್ಲಿ ಎರಡೆರಡಾದರೆ, ಒಟ್ಟು ೩೨ ಎಂದು ವಿಶ್ವನಾಥನ ಮತ.[3] ಪ್ರತೀಯಮಾನೋತ್ಪ್ರೇಕ್ಷೆಯಲ್ಲಿ ಸ್ವರೂಪವನ್ನವಲಂಬಿಸಿದ ಭೇದಗಳಿಲ್ಲ. ಅಂದಮೇಲೆ, ೩೨ ಭೇದಗಳು ಹೇಗಾಗುತ್ತವೆಯೆಂಬುದು ಚಿಂತ್ಯ. ಏಕೆಂದರೆ, ದ್ರವ್ಯೋತ್ಪ್ರೇಕ್ಷೆಯಲ್ಲಿ ಹೇತು ಮತ್ತು ಫಲರೂಪವನ್ನವಲಂಬಿಸಿದ ಭೇದಗಳಿಲ್ಲ[4]ವೆಂದು ಮೊದಲು ವಾಚ್ಯೋತ್ಪ್ರೇಕ್ಷೆಯ ವಿಭಜನೆಯಲ್ಲಿ ಹೇಳಿರುವುದರಿಂದ, ಅದರ ನಾಲ್ಕು ಭೇದಗಳನ್ನು ಬಿಟ್ಟು ಉಳಿದ ೧೨ ನ್ನು ಮಾತ್ರ ಎರಡೆರಡು ಭೇದಗಳಾಗಿ ಪರಿಗಣಿಸಬೇಕಲ್ಲವೆ? ಅಂದರೆ ಗಮ್ಯಭೇದಗಳು ೨೪ ಮಾತ್ರವಿರಬೇಕು ಎಂದು ಅಭಿಪ್ರಾಯ. ಹೀಗೆ, ಉತ್ಪ್ರೇಕ್ಷೆಯ ಭೇದಗಳು ೫೬ + ೨೪ = ೮೦ (ವಿಶ್ವನಾಥನ ಎಣಿಕೆಯ ಪ್ರಕಾರ ೮೮). ಇವು ಮತ್ತೆ ಉಕ್ತವಿಷಯ ಮತ್ತು ಅನುಕ್ತ ವಿಷಯದ ಆಧಾರದ ಮೇಲೆ ಒಂದೊಂದೂ ಎರಡೆರಡು.[5] ಅಂತಿಮವಾಗಿ ಉತ್ಪ್ರೇಕ್ಷೆ ೧೬೦ ಭೇದಗಳನ್ನೊಳಗೊಂಡಿದೆ (ವಿಶ್ವನಾಥನ ಎಣಿಕೆಯ ಪ್ರಕಾರ ೧೭೬).

ವಿದ್ಯಾನಾಥನು ಸಾಮಾನ್ಯವಾಗಿ ವಿಶ್ವನಾಥನಂತೆಯೇ ವಾಚ್ಯೋತ್ಪ್ರೇಕ್ಷೆಯ ೫೬ ಭೇದಗಳನ್ನು ತೋರಿಸುತ್ತಾನೆ. ಆದರೆ ಪ್ರಕ್ರಿಯೆ ಸ್ವಲ್ಪ ಬೇರೆ. ವಾಚ್ಯದ ಜಾತಿ - ಕ್ರಿಯಾ - ಗುಣ - ದ್ರವ್ಯಾತ್ಮಕವಾದ ಭೇದಗಳು, ಅವುಗಳ ಭಾವ - ಅಭಾವ ರೂಪ - ಮತ್ತು ಗುಣ - ಕ್ರಿಯಾ ನಿಮಿತ್ತ ಭೇದದ ಆಧಾರದ ಮೇಲೆ ೧೬ ಆಗುತ್ತವೆ ಎಂಬುದನ್ನು ತೋರಿಸಿ ; ಒಂದೊಂದನ್ನೂ ಮತ್ತೆ ಸ್ವರೂಪ - ಹೇತು - ಫಲಾತ್ಮಕವಾಗಿ ವಿಭಜಿಸಿ ೪೮ ಭೇದಗಳನ್ನು ಗಣಿಸುತ್ತಾನೆ. ಮತ್ತೆ ಕೇವಲ ಸ್ವರೂಪೋತ್ಪ್ರೇಕ್ಷೆಯಲ್ಲಿ ಅನುಪಾತ್ತ ನಿಮಿತ್ತಕವಾದ ೮ ಭೇದಗಳನ್ನು (ಜಾತಿ - ೨, ಕ್ರಿಯಾ ೨, ಗುಣ - ೨ ಮತ್ತು ದ್ರವ್ಯ - ೨) ಸೇರಿಸಿ ಒಟ್ಟು ೫೬ ಎಂದು ಸಾರುತ್ತಾನೆ. ವಿಶ್ವನಾಥನು ದ್ರವ್ಯೋತ್ಪ್ರೇಕ್ಷೆಯ ಹೇತು-ಫಲರೂಪವಾದ ೮ ಭೇದಗಳನ್ನು ಪರಿಗಣಿಸದೇ ೫೬ ಭೇದಗಳನ್ನು ತೋರಿಸಿದರೆ, ವಿದ್ಯಾನಾಥನು ದ್ರವ್ಯೋತ್ಪ್ರೇಕ್ಷೆಯ ಹೇತು - ಫಲಾತ್ಮಕ (೮) ಭೇದಗಳನ್ನು ಗಣಿಸಿಯೂ ಕೂಡ, ಅನುಕ್ತನಿಮಿತ್ತ ಸ್ವರೂಪೋತ್ಪ್ರೇಕ್ಷೆಯಲ್ಲಿ ಅನುಕ್ತನಿಮಿತ್ತವು ಗುಣವೋ ಕ್ರಿಯೆಯೋ ಎಂಬ ಭೇದವು ಅನಾವಶ್ಯಕವೆಂದು

---

1-2 ಸಾಹಿತ್ಯದರ್ಪಣ, ಪುಟ 31 (ಪಿ. ವಿ. ಕಾಣೆಯವರ ಆವೃತ್ತಿಯಲ್ಲಿ)

3 'ದ್ರವ್ಯಸ್ಯ ಸ್ವರೂಪೋತ್ಪ್ರೇಕ್ಷಣಮೇವ ಸಂಭವತಿ' – ಸಾಹಿತ್ಯದರ್ಪಣ. ಪುಟ 31

4 91ನೇ ಪುಟದಲ್ಲಿ 3ನೇ ಟಿಪ್ಪಣಿಯನ್ನು ನೋಡಿರಿ

ಬಗೆ [1] ಕೇವಲ ೮ ನ್ನು ಮಾತ್ರ (ವಿಶ್ವನಾಥನ ಪ್ರಕಾರ ೧೬) ಗಣನೆಗೆ ತೆಗೆದುಕೊಂಡು ೫೬ ಭೇದಗಳನ್ನು ಪರಿಗಣಿಸುತ್ತಾನೆ. ಗಮ್ಯೋತ್ಪ್ರೇಕ್ಷೆಯಲ್ಲಿ ಅನುಪಾತ್ತ ನಿಮಿತ್ತದ ಎಂಟು ಭೇದಗಳನ್ನು ಬಿಟ್ಟರೆ,[2] ವಾಚ್ಯೋತ್ಪ್ರೇಕ್ಷೆಯಂತೆ ೪೮ ಭೇದಗಳಾಗುತ್ತವೆ. ವಿದ್ಯಾನಾಥನ ಪ್ರಕಾರ ಉತ್ಪ್ರೇಕ್ಷೆಯ ಭೇದಗಳು ಒಟ್ಟು ೧೦೪. ಇವುಗಳಲ್ಲಿ ಕೇವಲ ೫೬ನ್ನು ಮಾತ್ರ ಚಾರುತ್ವಾತಿಶಯದ ಆಧಾರದ ಮೇಲೆ ಗಣನಾರ್ಹ ಉತ್ಪ್ರೇಕ್ಷಾಭೇದಗಳೆಂದು ಹೇಳುತ್ತಾನೆ. [3]

ಮೇಲಿನ ಉತ್ಪ್ರೇಕ್ಷಾವಿಭಜನೆಯ ಕ್ರಮವನ್ನು ನೀರಸವಾದ ಶಾಸ್ತ್ರೀಯ ಪ್ರಕ್ರಿಯೆಯೆಂದು ಮನಗಂಡ ಅಪ್ಪಯ್ಯದೀಕ್ಷಿತ ಮತ್ತು ಜಗನ್ನಾಥಪಂಡಿತರು ಇದನ್ನು ಅಂಗೀಕರಿಸುವುದಿಲ್ಲ. ಜಗನ್ನಾಥಪಂಡಿತನು ಮೇಲಿನ ಉತ್ಪ್ರೇಕ್ಷಾ. ವಿಭಜನೆಯ ಬಗ್ಗೆ ಬಹು ಮಾರ್ಮಿಕವಾದ ಮಾತನ್ನು ಹೇಳಿದ್ದಾನೆ.

> "ಜಾತ್ಯಾದಯೋ ಹಿ ಭೇದಾಃ ಪ್ರಾಚಾಮನುರೋಧಾದುದಾಹೃತಾಃ.
> ವಸ್ತುತಸ್ತು ನೈಷಾಂ ಚಮತ್ಕಾರೇ ವೈಲಕ್ಷಣ್ಯಮಸ್ತೀತ್ಯನುದಾಹಾ-
> ರ್ಯತ್ವೈವ. ಚಮತ್ಕಾರವೈಲಕ್ಷಣ್ಯಂ ಪುನರ್ಹೇತುಫಲಸ್ವರೂಪಾತ್ಮನಾಂ
> ತ್ರಯಾಣಾಂ ಪ್ರಕಾರಾಣಾಮೇವ."[4]

ಅಪ್ಪಯ್ಯದೀಕ್ಷಿತನು ವಸ್ತೂತ್ಪ್ರೇಕ್ಷಾ, ಹೇತೂತ್ಪ್ರೇಕ್ಷಾ ಮತ್ತು ಫಲೋತ್ಪ್ರೇಕ್ಷಾ ಎಂದು ಮೂರು ವಿಧವಾಗಿ ಮೊದಲು ತೋರಿಸಿ, ಅವುಗಳಲ್ಲಿ ವಸ್ತೂತ್ಪ್ರೇಕ್ಷೆ (ಸ್ವರೂಪೋತ್ಪ್ರೇಕ್ಷೆ)ಯನ್ನು ಉಕ್ತವಿಷಯಾ ಮತ್ತು ಅನುಕ್ತವಿಷಯಾ ಎಂದೂ, ಹೇತು – ಫಲೋತ್ಪ್ರೇಕ್ಷೆಗಳನ್ನು ಪ್ರತ್ಯೇಕವಾಗಿ ಸಿದ್ಧವಿಷಯಾ ಮತ್ತು ಅಸಿದ್ಧವಿಷಯಾ ಎಂದು ವಿಂಗಡಿಸಿ ಒಟ್ಟು ಆರು ಉತ್ಪ್ರೇಕ್ಷೆಯ ಭೇದಗಳನ್ನು ಗಣಿಸಿ ಉದಾಹರಣೆಗಳನ್ನು ಕೊಟ್ಟಿದ್ದಾನೆ.[5]

ಇನ್ನು ವರದಾರ್ಯನ 'ಉತ್ಪ್ರೇಕ್ಷಾಮಂಜರಿ'ಯ ಬಗ್ಗೆ ಕೆಲವು ವಿಷಯಗಳನ್ನು ಗಮನಿಸಬೇಕು. ಇದರಲ್ಲಿನ ಉತ್ಪ್ರೇಕ್ಷಾಲಕ್ಷಣವು ವಿದ್ಯಾನಾಥ ಮತ್ತು ಅಪ್ಪಯ್ಯದೀಕ್ಷಿತರ ಲಕ್ಷಣಗಳ ಶಬ್ದಶಃ ಅನುಕರಣೆಯಾಗಿದೆ. ವಿಭಜನೆಯಲ್ಲಿ

---

1 'ತತ್ರ ಸ್ವರೂಪೋತ್ಪ್ರೇಕ್ಷಾಯಾಮಪಿ ನಿಮಿತ್ತೋಪಾದಾನನಿಯಮಾತ್ ನಿಮಿತ್ತಸ್ಯ ಗಮ್ಯತ್ವೇ ಗುಣರೂಪತ್ವೇನ ಕ್ರಿಯಾರೂಪತ್ವೇನ ಚ ಚಾರುತ್ವವಿಶೇಷಾಭಾವಾದೇಕ ಏವ ಭೇದೋ ಗಣ್ಯತೇ' – ಪ್ರತಾಪರುದ್ರೀಯ, ಪುಟ 386

2 'ಪ್ರತೀಯಮಾನೋತ್ಪ್ರೇಕ್ಷಾಯಾಮಿವಾದನ್ಯುಪಾದಾನೇ ನಿಮಿತ್ತಸ್ಯಾನುಪಾದಾನೇ ಉತ್ಪ್ರೇಕ್ಷಾಯಾ ನಿರಾಲಂಬತ್ವಾತ್' – ಪುಟ 386

3 ಪ್ರಾಚಾಮಲಂಕಾರಪ್ರಬಂಧೇಷು ಷಣ್ಣವತಿಭೇದೋತ್ಪ್ರೇಕ್ಷೇತಿ ಗಣನಾಮಾತ್ರಂ, ಚಾರುತ್ವಾತಿಶಯಸ್ತು ಷಟ್‌ಪಂಚಾಶತ ಏವ ಭೇದಾನಾಮ್. ಪುಟ 384

4 ರಸಗಂಗಾಧರ, ಪುಟ 295

5 ಕುವಲಯಾನಂದ, ಪುಟ 31-33

ವಿದ್ಯಾನಾಥನು ತೋರಿಸಿದ ಪ್ರಕ್ರಿಯೆಯನ್ನೇ ಅವಲಂಬಿಸಿರುವುದಾಗಿ ಗ್ರಂಥಕಾರನೇ ಹೇಳಿಕೊಂಡಿದ್ದಾನೆ.[1] ಈ ಗ್ರಂಥದ ವೈಶಿಷ್ಟ್ಯವೆಂದರೆ ಮಂಗಲಶ್ಲೋಕದಿಂದ ಹಿಡಿದು ಎಲ್ಲಾ ಉದಾಹರಣೆ ಶ್ಲೋಕಗಳು ಲಕ್ಷ್ಮಿಯ ಸ್ತುತಿಗಳಾಗಿವೆ. ಗ್ರಂಥಕಾರನೇ ಇವುಗಳನ್ನು ರಚಿಸಿದ್ದಾನೆ. ಈ ಶ್ಲೋಕಗಳಲ್ಲಿ ಹೊರನೋಟಕ್ಕೆ ಪರಸ್ಪರವಾಗಿ ಸಂಬಂಧವಿಲ್ಲದಂತೆ ಕಂಡರೂ, ಎರಡು ರೀತಿಯಲ್ಲಿ ಇವುಗಳ ಏಕಸೂತ್ರತೆಯನ್ನು ಗುರುತಿಸಬಹುದು. ಮೊದಲನೆಯದಾಗಿ ವರದಾರ್ಯನ ಲಕ್ಷ್ಮೀವಿಷಯಕವಾದ ಭಕ್ತಿಯು ಇವುಗಳಲ್ಲಿ ವ್ಯಂಗ್ಯವಾಗಿದೆ. ಎರಡನೆಯದಾಗಿ ಈ ಶ್ಲೋಕಗಳಲ್ಲಿನ ವಸ್ತುಗಳನ್ನು ಸಾಮಾನ್ಯವಾಗಿ ಮೂರು ವಿಧದವುಗಳೆಂದು ಮನಗಾಣಬಹುದು. ಕೆಲವು ಶ್ಲೋಕಗಳು ಲಕ್ಷ್ಮಿ – ಲಕ್ಷ್ಮೀಪತಿಯರ ಶೃಂಗಾರ – ವಿನೋದವನ್ನು ಚಿತ್ರಿಸುತ್ತವೆ.[2] ರಮೆಯ ಸಂಗದಿಂದ ಪ್ರಭುವಿನ ಪುಲಕೋದ್ಭೇದ, ಕೇಲಿಕಾಲದಲ್ಲಿ ಲಕ್ಷ್ಮಿಯು ಪ್ರಭುವಿನ ಕಣ್ಣು ಮುಚ್ಚುವುದು, ಲಕ್ಷ್ಮಿಯ ಮೃದುಶೀತಲ ಸಂಗದಿಂದ ಪ್ರಭುವಿನ ವನಮಾಲೆಯು ಬಾಡದಿರುವುದು, ಇತ್ಯಾದಿ ರಮ್ಯವಿಷಯಗಳು ವರ್ಣಿತವಾಗಿವೆ. ಎರಡನೆಯದಾಗಿ ಹೆಚ್ಚಿನ ಶ್ಲೋಕಗಳು ಲಕ್ಷ್ಮಿಯ ಕೃಪೆ, ಭಕ್ತಾನುರಾಗ, ಕ್ಷಮೆ ಮುಂತಾದ ದಿವ್ಯಗುಣಗಳನ್ನು ಕೊಂಡಾಡುತ್ತವೆ.[3]

ಲಕ್ಷ್ಮಿಯ ಕೃಪೆಯು ಸರ್ವವ್ಯಾಪಿ, ಅವಳ ಕೀರ್ತಿಯಷ್ಟೇ ಅಪಾರ, ಆದರಿಂದಲೇ ಲೋಕದ ರಕ್ಷಣೆ; ಲಕ್ಷ್ಮಿಯು ಭಕ್ತರ ಅಜ್ಞಾನತಿಮಿರವನ್ನು ನಾಶಮಾಡುತ್ತಾಳೆ; ಪ್ರಭುವು ಶಿಕ್ಷಿಸುವವರನ್ನು ತಾಯಿಯಂತೆ ರಕ್ಷಿಸುತ್ತಾಳೆ; ಅವಳ ಕಟಾಕ್ಷದಿಂದ ಪ್ರಭುವಿನ ಕೋಪ ಶಾಂತವಾಗುತ್ತದೆ; ಭಕ್ತಾನುರಾಗ ಅವಳಲ್ಲಿ ಸುಸ್ಥಿರ; ಅವಳು ಸರ್ವದಾ ಸರ್ವವನ್ನೂ ಕೊಡುವವಳು, ಇತ್ಯಾದಿ ವಿಷಯಗಳು ಅವುಗಳಲ್ಲಿ ಬರುತ್ತವೆ. ಮತ್ತೆ ಕೆಲವು ಶ್ಲೋಕಗಳು ಲಕ್ಷ್ಮಿಯ ವರ್ಣನಾತೀತ ಸೌಂದರ್ಯವನ್ನು ವರ್ಣಿಸಲು ಪ್ರಯತ್ನಿಸುತ್ತವೆ.[4] ಲಕ್ಷ್ಮಿಯ ಮುಖದಲ್ಲಿನ ತೇಜಸ್ಸು, ಮಂದಹಾಸ; ಕಣ್ಣುಗಳ ಚಾತುರ್ಯ; ಮಿಂಚಿನಂತಹ ದೇಹಪ್ರಭೆ; ಪಾದಗಳ ಮಾರ್ದವ; ಸತ್ಯವಾಕ್, ಕ್ಷಮೆ ಮುಂತಾದ ಗುಣಗಳಿಂದ ರೂಪಿತವಾದ ಆತ್ಮಸೌಂದರ್ಯ; ತುಟಿಗಳ ಕಮನೀಯ ಕೆಂಪು, ಇತ್ಯಾದಿಗಳ ವರ್ಣನೆಯನ್ನು ಕಾಣುತ್ತೇವೆ. ಉದಾಹರಣೆಗಳಿಗಾಗಿಯೇ ರಚಿತವಾಗಿರುವುದರಿಂದ ಅನೇಕ ಶ್ಲೋಕಗಳು ಕ್ಲಿಷ್ಟವೆನಿಸುತ್ತವೆ. ಇವುಗಳ ಕಾವ್ಯಸೌಂದರ್ಯದ ಬಗ್ಗೆ ಸಹೃದಯರೇ ಪ್ರಮಾಣ.

---

1 ಕಾರಿಕಾ, 18

2 ಉದಾಹರಣೆಗೆ ನಂ. 1, 4, 7, 10, 12, 16, 30, 44

3 ಉದಾಹರಣೆಗೆ ನಂ. 2, 5, 6, 15, 18, 20, 24, 35, 45, ಇತ್ಯಾದಿ (56ರಲ್ಲಿ ಸುಮಾರು 22)

4 ಉದಾಹರಣೆಗೆ ನಂ. 3, 13, 17, 22, 25, 28, 36, 37, 38, 41

## ಉತ್ಪ್ರೇಕ್ಷಾಮಂಜರೀ (ಗ್ರಂಥ)

ರಮಾ ಸ್ತಂಬೇರಮಾದ್ರೀಶರಮಣೀರಮಣೀಮಣಿಃ ।
ರಮಣೀಯಗುಣಾರಾಮಸುಮಾ ರಚಯತಾನ್ಮುದಮ್ ೧

ಕರುಣೇವ ರಾಮಾನೇತುರ್ಗುಣೇಷ್ವಭ್ಯರ್ಹಿತೋಪಮಾ ।
ಅಲಂಕಾರೇಷ್ವಥೋತ್ಪ್ರೇಕ್ಷಾ ತದೇಷಾದ್ಯ ಪ್ರಕಾಶ್ಯತೇ ೨

ಯದನ್ಯಧರ್ಮಸಂಬಂಧನಿಮಿತ್ತಾದನ್ಯವಸ್ತುನಃ ।
ಸಂಭಾವನಂ ಸ್ಯಾತ್ತತ್ತ್ವೇನ ತಾಮುತ್ಪ್ರೇಕ್ಷಾಂ ವಿದುರ್ಬುಧಾಃ ೩

---

1 ಗಜಾದ್ರಿಯ ಒಡೆಯನ ಪ್ರಿಯಸ್ತ್ರೀರತ್ನಳಾದ, ಮನೋಹರಗುಣಗಳೆಂಬ ಉದ್ಯಾನ ಕುಸುಮಗಳನ್ನು ಪಡೆದ ಲಕ್ಷ್ಮಿಯು ಸಂತೋಷವನ್ನು ಉಂಟುಮಾಡಲಿ.

[ಸ್ತಂಬೇರಮಾದ್ರಿ–ಗಜಾದ್ರಿ, ಕಾಂಚೀಪುರ. ಅದರ ಒಡೆಯ ವರದರಾಜ. ಆ ಪ್ರಭುವಿನ ಪತ್ನಿ 'ಪೆರುದೇವಿ' (ಮಹಾಲಕ್ಷ್ಮಿ). ರಮಣೀಯಗುಣಾರಾಮಸುಮಾ–ರಮಣೀಯಾ ಗುಣಾಃ, ತ ಏವ ಉದ್ಯಾನಕುಸುಮಾನಿ ಯಸ್ಯಾಃ ಸಾ. ಮೊದಲಿನ ಶ್ಲೋಕಾರ್ಧದಲ್ಲಿ ಯಮಕವನ್ನೂ, ಉತ್ತರಾರ್ಧದಲ್ಲಿ ಅನುಪ್ರಾಸವನ್ನೂ ಕಾಣಬಹುದು.]

2 ರಮಾವಲ್ಲಭನ ಗುಣಗಳಲ್ಲಿ ಕರುಣೆಯಿದ್ದಂತೆ ಅಲಂಕಾರಗಳಲ್ಲಿ ಉಪಮೆಯು ಅಗ್ರಮಾನ್ಯವಾಗಿದೆ. ನಂತರ ಉತ್ಪ್ರೇಕ್ಷಾಲಂಕಾರ. ಅದನ್ನಿಲ್ಲಿ ಈಗ ವಿವರಿಸುತ್ತೇನೆ

['ರಮಾನೇತುಃ' ಎಂಬ ಶಬ್ದವು ಅರ್ಥವತ್ತಾಗಿದೆ. ವಿಷ್ಣುವಿನ ಕರುಣೆಯು ಲಕ್ಷ್ಮಿಯಿಂದ ಪ್ರೇರಿತವಾದುದು ಎಂಬ ಅಭಿಪ್ರಾಯ ಸ್ಫುರಿಸುತ್ತದೆ. ಉಪಮಾಲಂಕಾರವು ಅನನ್ವಯ, ಉಪಮೇಯೋಪಮಾ, ರೂಪಕ, ಉತ್ಪ್ರೇಕ್ಷಾ, ಅತಿಶಯೋಕ್ತಿ ಮುಂತಾದ ಅಲಂಕಾರಗಳಿಗೆ ಬೀಜರೂಪವಾಗಿದೆ. ಆದ್ದರಿಂದಲೇ ಅದಕ್ಕೆ ಅರ್ಥಾಲಂಕಾರಗಳಲ್ಲಿ ಅಗ್ರಸ್ಥಾನ. ನಂತರ ಉತ್ಪ್ರೇಕ್ಷಾಲಂಕಾರ. ಉಪಮೆ ಅದಕ್ಕೆ ಉಪಜೀವಕ, ಅದು ಉಪಜೀವ್ಯ. ಸಾದೃಶ್ಯ ಇಲ್ಲಿ ಆ ಉಪಜೀವಕವಾದ ಅಂಶ]

3 ಇನ್ನೊಂದು ವಸ್ತುವಿನ ಧರ್ಮದೊಡನೆ ಇರುವ ಸಂಬಂಧವನ್ನೇ ನಿಮಿತ್ತವಾಗಿಟ್ಟುಕೊಂಡು ಅದರೊಡನೆ ಪ್ರಸ್ತುತವೊಂದರ ತಾದಾತ್ಮ್ಯಸಂಭಾವನೆಯೇ ಉತ್ಪ್ರೇಕ್ಷೆಯೆಂದು ವಿದ್ವಾಂಸರು ಗಣಿಸುವರು

[ಪ್ರಸ್ತುತ ವಸ್ತುವನ್ನು 'ವಿಷಯ'ವೆಂದೂ, ಇನ್ನೊಂದನ್ನು, ಅಂದರೆ, ಅದಕ್ಕೆ ಸದೃಶವಾದುದನ್ನು 'ವಿಷಯಿ'ಯೆಂದೂ ಆಲಂಕಾರಿಕರ ಪರಿಭಾಷೆಯಲ್ಲಿ ಕರೆಯಲಾಗಿದೆ. 'ವಿಷಯ' ಮತ್ತು 'ವಿಷಯಿ'ಗಳ ತಾದಾತ್ಮ್ಯ ಕಲ್ಪನೆಯೇ ಉತ್ಪ್ರೇಕ್ಷೆಯ ರಮಣೀಯತೆ. ಎರಡು ವಸ್ತುಗಳ ತಾದಾತ್ಮ್ಯಸಂಭಾವನೆಗೆ ಆಧಾರಭೂತವಾದುದನ್ನು 'ನಿಮಿತ್ತ'ವೆಂದು ಕರೆಯುತ್ತಾರೆ. ಇದನ್ನೇ 'ಧರ್ಮಸಂಬಂಧನಿಮಿತ್ತಾತ್' ಎಂದು ಕಾರಿಕೆಯಲ್ಲಿ ಹೇಳಿದೆ. 'ವಿಷಯಿ' ಯಲ್ಲಿನ ಧರ್ಮದೊಡನೆ 'ವಿಷಯ'ದಲ್ಲಿರುವ ಧರ್ಮದ ಸಂಬಂಧವೇ ನಿಮಿತ್ತ. ಈ ಸಂಬಂಧ ಗುಣರೂಪವಾಗಿರಬಹುದು ಅಥವಾ ಕ್ರಿಯಾರೂಪವಾಗಿರಬಹುದು. ಅದು ಸಾದೃಶ್ಯಮೂಲಕವಾದುದೆಂದೂ ಗಮನಿಸಬೇಕು. ಉತ್ಪ್ರೇಕ್ಷೆಯ ಈ ಲಕ್ಷಣ ವಿದ್ಯಾನಾಥನು ನೀಡಿರುವ ಲಕ್ಷಣದಿಂದ ಪ್ರಭಾವಿತವಾಗಿದೆ. (ಪ್ರತಾಪರುದ್ರೀಯ ನೋಡಿರಿ). ಕುವಲಯಾನಂದದಲ್ಲಿ ಅಪ್ಪಯ್ಯದೀಕ್ಷಿತರ ಲಕ್ಷಣವೂ ಹಾಗೆಯೇ ಇದೆ: 'ಅನ್ಯಧರ್ಮಸಂಬಂಧನಿಮಿತ್ತೇನಾನ್ಯಸ್ಯಾನ್ಯತಾದಾತ್ಮ್ಯಸಂಭಾವನಮುತ್ಪ್ರೇಕ್ಷಾ' (ಕುವಲಯಾನಂದ, ನಿರ್ಣಯಸಾಗರ ಪ್ರೆಸ್, ಪುಟ. 32)

ವಾಚ್ಯಗಮ್ಯತ್ವಭೇದೇನ ಪ್ರಥಮಂ ಸಾ ದ್ವಿಧಾ ಮತಾ ।
ಮನ್ಯೇ ಶಂಕೇ ಧ್ರುವಂ ಪ್ರಾಯ ಇತ್ಯಾದೀನಾಂ ಪ್ರಯೋಗತಃ ೪

ವಾಚ್ಯೋತ್ಪ್ರೇಕ್ಷಾ ವ್ಯಂಜಕಾನಾಂ ಗಮ್ಯಾ ಸ್ಯಾದಪ್ರಯೋಗತಃ ।
ಗುಣಕ್ರಿಯಾನಿಮಿತ್ತತ್ವಭೇದಾತ್ತೇ ದ್ವಿವಿಧೇ ಪುನಃ ೫

ಜಾತಿಕ್ರಿಯಾಗುಣದ್ರವ್ಯತಾದಾತ್ಮ್ಯೈಃ ಪುನರೇವ ತಾಃ ।
ಚತುರ್ವಿಧಾಃ ಪುನಸ್ತೇಷಾಂ ಭಾವಾಭಾವವಿಭೇದತಃ । ೬

ದ್ವಿಧಾ ಭಿನ್ನಾಃ ಸ್ವರೂಪೇಣ ತಥಾ ಹೇತುಫಲಾತ್ಮನಾ ।
ಭಿನ್ನಾಃ ಸತ್ಯಸ್ತ್ರಿಧಾ ಭೇದಾನೇತಾಃ ಷಣ್ಣವತಿಂ ಗತಾಃ ೭

ನಿಮಿತ್ತಸ್ಯಾನುಪಾದಾನಾದಷ್ಟಾಭಿರಧಿಕಾಸ್ತಥ ।
ವಾಚ್ಯಸ್ವರೂಪೋತ್ಪ್ರೇಕ್ಷಾಸು ಚತುರ್ಭಿರಧಿಕಂ ಶತಮ್ ೮

ಪ್ರಾಪ್ನುವಂತ್ಯಂತತೋ ಭೇದಾನಿತಿ ವಿದ್ವದ್ಭಿರೀರಿತಮ್ ।
ಭೇದೋ ನಿಮಿತ್ತೋಪಾದಾನಾನುಪಾದಾನಪ್ರಕಲ್ಪಿತಃ ೯

ವಾಚ್ಯಸ್ವರೂಪೋತ್ಪ್ರೇಕ್ಷಾಯಾಮೇವಾನ್ಯತ್ರ ನ ವಿದ್ಯತೇ ।
ಉತ್ಪ್ರೇಕ್ಷಾ ಹಿ ನಿರಾಲಂಬಾ ಸ್ಯಾದ್ವ್ಯಂಜಕನಿಮಿತ್ತಯೋಃ ೧೦

ಅಪ್ರಯೋಗೇ ದ್ವಯೋಸ್ತಸ್ಮಾದ್ಗಮ್ಯಾಯಾಂ ನಾಸ್ತ್ಯಸೌ ಭಿದಾ । ೧೧
ಏವಂ ಹೇತುಫಲೋತ್ಪ್ರೇಕ್ಷಾದ್ವಿತಯೇ ಸಾಧ್ಯಸಾಧನೇ ೧೧

ಕ್ರಮಾತ್ಖಲು ನಿಮಿತ್ತೇ ತದಪ್ರಯೋಗಃ ಕಥಂ ಭವೇತ್ ।
ರಕ್ತೌ ತವಾಂಘ್ರೀ ಮೃದುಲೌ ಭುವಿ ವಿಕ್ಷೇಪಣಾದ್ಧ್ರುವಮ್ ೧೨

---

4-16 ಆ ಉತ್ಪ್ರೇಕ್ಷೆಯು ವಾಚ್ಯ-ಗಮ್ಯವೆಂದು ಎರಡು ಬಗೆ ; ಮನ್ಯೇ, ಶಂಕೇ, ಧ್ರುವಂ, ಪ್ರಾಯಃ ಮುಂತಾದ ಉತ್ಪ್ರೇಕ್ಷಾದ್ಯೋತಕಗಳನ್ನು ಪ್ರಯೋಗಿಸಿದಾಗ ವಾಚ್ಯ, ಅವುಗಳನ್ನು ಪ್ರಯೋಗಿಸದಿದ್ದಾಗ ಗಮ್ಯ. ಇವು ಒಂದೊಂದೂ, ಗುಣವು ನಿಮಿತ್ತವಾಗಿರುವುದು ಮತ್ತು ಕ್ರಿಯೆಯು ನಿಮಿತ್ತವಾಗಿರುವುದು ಎಂಬ ಭೇದದಿಂದ, ಎರಡು ಬಗೆ. ಅವು ಮತ್ತೆ ಒಂದೊಂದೂ ಜಾತಿ, ಕ್ರಿಯೆ, ಗುಣ ಮತ್ತು ದ್ರವ್ಯ ತಾದಾತ್ಮ್ಯರೂಪದಲ್ಲಿ ನಾಲ್ಕು ವಿಧ. ಮತ್ತೆ ಇವು (ಜಾತಿತಾದಾತ್ಮ್ಯ ಇತ್ಯಾದಿ) ಒಂದೊಂದೂ ಭಾವ–ಅಭಾವ ಭೇದದಿಂದ ಎರಡು ವಿಧವೂ ಮತ್ತು ಸ್ವರೂಪ, ಹೇತು ಮತ್ತು ಫಲರೂಪದಲ್ಲಿ ಮೂರು ವಿಧವೂ ಆಗಿವೆ. ಹೀಗೆ ಒಟ್ಟು ತೊಂಬತ್ತಾರು ಭೇದಗಳು ಉಂಟಾಗುತ್ತವೆ. ಜೊತೆಗೆ ನಿಮಿತ್ತವನ್ನು ಹೇಳದಿರುವ ವಾಚ್ಯಸ್ವರೂಪೋತ್ಪ್ರೇಕ್ಷೆಯಟು ಭೇದಗಳನ್ನೆ ಎಣ್ಣೊಳಗೊಂಡು ಅಂತಿಮವಾಗಿ ಒಂದು ನೂರಾ ನಾಲ್ಕು ಭೇದಗಳೆಂದು ವಿದ್ವಾಂಸರು ಗಣಿಸುತ್ತಾರೆ. ನಿಮಿತ್ತವನ್ನು ಹೇಳಿರುವುದು ಮತ್ತು ನಿಮಿತ್ತವನ್ನು ಹೇಳಿಲ್ಲದಿರುವುದು ಎಂಬ ಆಧಾರದ ಮೇಲೆ ಉಂಟಾಗುವ ಪ್ರಭೇದಗಳು ಕೇವಲ ವಾಚ್ಯಸ್ವರೂಪೋತ್ಪ್ರೇಕ್ಷೆಯಲ್ಲಿ ಮಾತ್ರ. ಬೇರೆಯ ಭೇದಗಳಲ್ಲಿ ಇಲ್ಲ. ಉತ್ಪ್ರೇಕ್ಷಾವ್ಯಂಜಕ ಮತ್ತು ನಿಮಿತ್ತಗಳೆರಡನ್ನೂ ಹೇಳದಿದ್ದರೆ ಉತ್ಪ್ರೇಕ್ಷೆಗೆ ಆಧಾರವೇ ಇಲ್ಲದಂತಾಗುತ್ತದೆ ; ಆದ್ದರಿಂದ ಗಮ್ಯೋತ್ಪ್ರೇಕ್ಷೆಯಲ್ಲಿ ಆ ಭೇದಗಳಿಲ್ಲ. ಹಾಗೆಯೇ ಹೇತೂತ್ಪ್ರೇಕ್ಷೆ ಮತ್ತು ಫಲೋತ್ಪ್ರೇಕ್ಷೆಗಳಲ್ಲಿ ನಿಮಿತ್ತವು ಕ್ರಮವಾಗಿ ಸಾಧ್ಯ ಮತ್ತು ಸಾಧನರೂಪವಾಗಿರುವುದರಿಂದ, ನಿಮಿತ್ತವನ್ನು ಹೇಳದಿರುವ ಪ್ರಶ್ನೆ ಹೇಗೆ ಉದ್ಭವಿಸುತ್ತದೆ ? 'ನಿನ್ನ ಮೃದು ಪಾದಗಳು ಭೂಮಿಯ ಮೇಲೆ ಇಡುವುದರಿಂದಲೇ ಕೆಂಪಾಗಿರಬೇಕು'.

ಇತ್ಯತ್ರ ರಕ್ತಿಮಾ ಸಾಧ್ಯಂ ನಿಮಿತ್ತಂ ಚ ಸ ಉಚ್ಯತೇ ।
ಪ್ರಾಯೋಽಬ್ಜಂ ತ್ವತ್ಪದೇನೈಕ್ಯಂ ಪ್ರಾಪ್ತುಂ ತೋಯೇ ತಪಸ್ಯತಿ ೧೩

ಇತ್ಯತ್ರ ತೋಯೇ ವಸತಿರ್ನಿಮಿತ್ತಂ ಸಾಧನಂ ಚ ಸಾ ।
ತನ್ನಿಮಿತ್ತಾನುಪಾದಾನೇ ಹ್ಯುತ್ಪ್ರೇಕ್ಷಾ ನೋಪಜಾಯತೇ ೧೪

---

ಇಲ್ಲಿ 'ಕೆಂಪಾಗಿರುವುದು' ಸಮರ್ಥಿಸಬೇಕಾಗಿರುವುದು ; ಅದೇ ನಿಮಿತ್ತವೆಂದು ಹೇಳುತ್ತಾರೆ. 'ಬಹುಶಃ ಕಮಲವು ನಿನ್ನ ಪಾದಗಳೊಡನೆ ಏಕಭಾವವನ್ನು ಪಡೆಯಲು ನೀರಿನಲ್ಲಿ ತಪಸ್ಸನ್ನಾಚರಿಸುತ್ತಿದೆ'–ಇಲ್ಲಿ 'ನೀರಿನಲ್ಲಿ ನೆಲೆಸಿರುವುದು' ಸಮರ್ಥಕವಾಗಿದೆ; ಅದೇ ನಿಮಿತ್ತ. ಹೀಗೆ ನಿಮಿತ್ತವನ್ನು ಹೇಳದಿದ್ದರೆ ಉತ್ಪ್ರೇಕ್ಷೆಯೇ ಉಂಟಾಗುವುದಿಲ್ಲ. ನಿಮಿತ್ತವನ್ನು ಹೇಳದಿದ್ದಾಗ ನಿಮಿತ್ತವು ಕ್ರಿಯೆಯೋ ಗುಣವೋ ಎಂಬ ಆಧಾರದ ಮೇಲೆ ಪ್ರಭೇದಗಳು ಇರಬಾರದು ; ಏಕೆಂದರೆ ಅವುಗಳಲ್ಲಿ ಚಮತ್ಕಾರವಿರುವುದಿಲ್ಲ. ಒಟ್ಟಿನಲ್ಲಿ ವಾಚ್ಯೋತ್ಪ್ರೇಕ್ಷೆಯ ಭೇದಗಳು ಐವತ್ತಾರು ಮತ್ತು ಗಮ್ಯೋತ್ಪ್ರೇಕ್ಷೆಯ ಭೇದಗಳು ನಲವತ್ತೆಂಟು ಮಾತ್ರವೆಂದು ಹೇಳಲಾಗಿದೆ.

[ಉತ್ಪ್ರೇಕ್ಷೆಯ ಒಟ್ಟು 104 ಪ್ರಭೇದಗಳನ್ನು ವಿಭಜಿಸಿ ತೋರಿಸಲಾಗಿದೆ. ಮೊದಲು ವಾಚ್ಯೋತ್ಪ್ರೇಕ್ಷೆ ಮತ್ತು ಗಮ್ಯೋತ್ಪ್ರೇಕ್ಷೆ, ಹೀಗೆ 2. ನಿಮಿತ್ತವು ಗುಣವಾಗಿರಬಹುದು ಅಥವಾ ಕ್ರಿಯೆಯಾಗಿರಬಹುದು. ಹೀಗೆ $2 \times 2 = 4$. ಈ ನಾಲ್ಕು ಒಂದೊಂದೂ ನಾಲ್ಕು ಬಗೆ, ಜಾತಿ, ಕ್ರಿಯೆ, ಗುಣ ಮತ್ತು ದ್ರವ್ಯ ರೂಪದಲ್ಲಿ ಉತ್ಪ್ರೇಕ್ಷೆ ಮಾಡಬಹುದಾದುದರಿಂದ. ಇದು ವೈಯಾಕರಣರ ಪದಾರ್ಥ ವಿಭಜನೆಯನ್ನು ಅನುಸರಿಸಿದೆ. ಹೀಗೆ $4 \times 4 = 16$. ಮತ್ತೆ ಈ ಜಾತಿ, ಕ್ರಿಯೆ, ಗುಣ ಮತ್ತು ದ್ರವ್ಯಗಳ ಸತ್ತಾ (ಭಾವ) ಅಥವಾ ಅಸತ್ತಾ (ಅಭಾವ) ರೂಪದ ಆಧಾರದ ಮೇಲೆ ಒಂದೊಂದೂ ಎರಡು ವಿಧ. ಹೀಗೆ $16 \times 2 = 32$. ಇವುಗಳ ಸ್ವರೂಪದ ಸಂಭಾವನೆ ಮಾಡಬಹುದು, ಇವುಗಳನ್ನು ಹೇತುವಾಗಿ ಸಂಭಾವನೆ ಮಾಡಬಹುದು, ಅಥವಾ ಫಲವಾಗಿ ಸಂಭಾವನೆ ಮಾಡಬಹುದು. ಹೀಗೆ $32 \times 3 = 96$–ಗುಣನಿಮಿತ್ತಜಾತಿಭಾವಸ್ವರೂಪೋತ್ಪ್ರೇಕ್ಷೆ, ಗುಣನಿಮಿತ್ತಜಾತ್ಯಭಾವಸ್ವರೂಪೋತ್ಪ್ರೇಕ್ಷೆ, ಕ್ರಿಯಾನಿಮಿತ್ತಜಾತಿಭಾವಸ್ವರೂಪೋತ್ಪ್ರೇಕ್ಷೆ, ಕ್ರಿಯಾನಿಮಿತ್ತಜಾತ್ಯಾಭಾವಸ್ವರೂಪೋತ್ಪ್ರೇಕ್ಷೆ ಇತ್ಯಾದಿ. ಇವುಗಳನ್ನು ವಾಚ್ಯ ಮತ್ತು ಗಮ್ಯ ಭೇದಗಳಾಗಿ ಬೇರೆ ಬೇರೆಯಾಗಿ ಗ್ರಹಿಸಬೇಕು. $(48 + 48)$ ಇವುಗಳ ಜೊತೆಗೆ ವಾಚ್ಯ ಸ್ವರೂಪೋತ್ಪ್ರೇಕ್ಷೆಯ ಜಾತಿ, ಕ್ರಿಯಾ, ಗುಣ, ದ್ರವ್ಯಗಳ ಭಾವ–ಅಭಾವ ರೂಪವಾದ ಭೇದಗಳಿಗೆ ನಿಮಿತ್ತವನ್ನು ಹೇಳದಿರುವ ಎಂಟು ಭೇದಗಳನ್ನು ಸೇರಿಸಿಕೊಳ್ಳಬೇಕು. ಹೀಗೆ ಒಟ್ಟು ೫೬ ವಾಚ್ಯ ಭೇದಗಳು ಮತ್ತು ೪೮ ಗಮ್ಯಭೇದಗಳು. ಅಂತಿಮವಾಗಿ ಉತ್ಪ್ರೇಕ್ಷೆಯ ಭೇದಗಳು ೧೦೪.

ಇಲ್ಲಿ ಕೆಲವು ಸಂಶಯಗಳನ್ನು ನಿವಾರಿಸಬೇಕು. ಮೊದಲನೆಯ ಸಂಶಯ – ನಿಮಿತ್ತವನ್ನು ಹೇಳದಿರುವ ಭೇದಗಳು ಗಮ್ಯೋತ್ಪ್ರೇಕ್ಷೆಯಲ್ಲಿ ಏಕೆ ಇಲ್ಲ ? ಇದಕ್ಕೆ ಉತ್ತರವನ್ನು 10-11 ಕಾರಿಕೆಗಳಲ್ಲಿ ಕಾಣಬಹುದು. ಉತ್ಪ್ರೇಕ್ಷೆಗೆ ಉತ್ಪ್ರೇಕ್ಷಾವ್ಯಂಜಕ ಅಥವಾ ನಿಮಿತ್ತ, ಇವುಗಳಲ್ಲಿ ಒಂದಾದರೂ ಆಧಾರವಾಗಿರಬೇಕು. ಗಮ್ಯೋತ್ಪ್ರೇಕ್ಷೆಯಲ್ಲಿ ಉತ್ಪ್ರೇಕ್ಷಾವ್ಯಂಜಕ ವಿರುವುದಿಲ್ಲ. (4-5ನೇ ಕಾರಿಕೆಗಳು). ನಿಮಿತ್ತವೂ ಅನುಪಾತ್ತವಾದರೆ ಉತ್ಪ್ರೇಕ್ಷೆಯು 'ನಿರಾಲಂಬ'ವಾಗುತ್ತದೆ. ಆದ್ದರಿಂದ ಅನುಪಾತ್ತನಿಮಿತ್ತಭೇದಗಳು ಗಮ್ಯೋತ್ಪ್ರೇಕ್ಷೆಯಲ್ಲಿ ಇರಲಾರವು. (ಪ್ರತಾಪರುದ್ರೀಯ, ಪುಟ 384ನ್ನೂ ನೋಡಿರಿ.)

ಅನುಪಾತ್ತನಿಮಿತ್ತತ್ವೇ ಕ್ರಿಯಾಗುಣನಿಮಿತ್ತಜಃ ।
ಭೇದಸ್ತತ್ರಾಪಿ ನೈವ ಸ್ಯಾಚ್ಚಾರುತಾ ನಾಸ್ತ್ಯತೋ ಯತಃ ೧೫

ವಾಚ್ಯೋತ್ಪ್ರೇಕ್ಷಾಸ್ತು ಕಾರ್ತ್ಸ್ನ್ಯೇನ ಷಟ್ಪಂಚಾಶತ್ಪ್ರಕೀರ್ತಿತಾಃ ।
ಅಷ್ಟಾಚತ್ವಾರಿಂಶದೇವ ಗಮ್ಯೋತ್ಪ್ರೇಕ್ಷಾಃ ಪ್ರಕೀರ್ತಿತಾಃ ೧೬

ಉತ್ಪ್ರೇಕ್ಷಾಸ್ವಿಹ ಸರ್ವಾಸು ಭೇದಮಾತ್ರಾವಲಂಬನೈಃ ।
ಚಾರುತಾಮಪರೀಕ್ಷ್ಯೈವ ಪ್ರಾಚೀನೈರ್ಗಣನಾ ಕೃತಾ ೧೭

ಇತ್ಯೇವಂ ಪ್ರಕ್ರಿಯಾ ಸರ್ವಾ ವಿದ್ಯಾನಾಥೇನ ದರ್ಶಿತಾ ।
ತಸ್ಯೈವ ಮತಮಾಲಂಬ್ಯ ಮಯೋತ್ಪ್ರೇಕ್ಷಾ ಪ್ರಕಾಶ್ಯತೇ ೧೮

---

ಗಮ್ಯೋತ್ಪ್ರೇಕ್ಷೆಯಲ್ಲಿ ಈ ಭೇದಗಳು ಇಲ್ಲದಿದ್ದರೆ ಹೋಗಲಿ, ವಾಚ್ಯೋತ್ಪ್ರೇಕ್ಷೆಯಲ್ಲಿಯೇ ಹೇತೂತ್ಪ್ರೇಕ್ಷೆ ಮತ್ತು ಫಲೋತ್ಪ್ರೇಕ್ಷೆಗಳಲ್ಲಿ ಅನುಪಾತ್ತನಿಮಿತ್ತಭೇದಗಳು ಇರಬಹುದಲ್ಲ? ಇದು ಎರಡನೆಯ ಪ್ರಶ್ನೆ. ಇದಕ್ಕೆ 11-14 ಕಾರಿಕೆಗಳಲ್ಲಿ ಸಮಾಧಾನವಿದೆ. ಹೇತೂತ್ಪ್ರೇಕ್ಷೆ ಮತ್ತು ಫಲೋತ್ಪ್ರೇಕ್ಷೆಗಳಲ್ಲಿ ನಿಮಿತ್ತವನ್ನು ಹೇಳಲೇಬೇಕು. ಹೇತೂತ್ಪ್ರೇಕ್ಷೆಯಲ್ಲಿ ನಿಮಿತ್ತವು ಸಮರ್ಥಿಸಬೇಕಾದುದು (ಸಾಧ್ಯ). ಉದಾಹರಣೆಗೆ – 'ರಕ್ತೌ ತವಾಂಘ್ರೀ ಮೃದುಲೌ ಭುವಿ ವಿಕ್ಷೇಪಣಾದ್ಧ್ರುವಮ್' – ಇಲ್ಲಿ – ಕೆಂಪಾಗಿರುವಿಕೆ'ಯು ಸಾಧ್ಯ. 'ಭುವಿ ವಿಕ್ಷೇಪಣಾತ್' ಎಂದು ಹೇತುವಲ್ಲದ ಹೇತುವನ್ನು ಕಲ್ಪಿಸಲಾಗಿದೆ. ಇದಕ್ಕೆ ಪಾದಗಳ ಸಹಜವಾದ ಕೆಂಪು ವರ್ಣವೇ ನಿಮಿತ್ತ. ಈ ನಿಮಿತ್ತವನ್ನು ಹೇಳದಿದ್ದರೆ ವಾಕ್ಯವು ಅಸಂಗತವಾಗುತ್ತದೆ. ಫಲೋತ್ಪ್ರೇಕ್ಷೆಯಲ್ಲಿ ನಿಮಿತ್ತವು ಸಾಧನವಾಗಿರುತ್ತದೆ. ಹೇಗೆಂದರೆ, 'ಪ್ರಾಯೋಽಬ್ಜಂ ತ್ವತ್ಪದೇನೈಕ್ಯಂ ಪ್ರಾಪ್ತುಂ ತೋಯೇ ತಪಸ್ಯತಿ' – ಇಲ್ಲಿ 'ನೀರಿನಲ್ಲಿರುವುದು' ಫಲ ಪ್ರಾಪ್ತಿಗೆ ಸಾಧನ. ಅದೇ ಫಲವಲ್ಲದ ಫಲವನ್ನು ಉತ್ಪ್ರೇಕ್ಷಿಸಲು ನಿಮಿತ್ತ. ಈ ನಿಮಿತ್ತ ವನ್ನು ಹೇಳದಿದ್ದರೆ ವಾಕ್ಯವು ಇಲ್ಲಿ ಕೂಡ ಅಸಂಗತವಾಗುತ್ತದೆ. ಆದ್ದರಿಂದ ವಾಚ್ಯ ಹೇತೂತ್ಪ್ರೇಕ್ಷೆ ಮತ್ತು ವಾಚ್ಯ ಫಲೋತ್ಪ್ರೇಕ್ಷೆಗಳಲ್ಲಿ ನಿಮಿತ್ತವನ್ನು ಹೇಳಲೇಬೇಕು. (ಸಾಹಿತ್ಯ-ದರ್ಪಣ, 10-44, ವೃತ್ತಿಯನ್ನೂ ನೋಡಿರಿ)

[ಇನ್ನೊಂದು ಆಕ್ಷೇಪವನ್ನಿಲ್ಲಿ ಎತ್ತಬಹುದು. ನಿಮಿತ್ತವನ್ನು ಹೇಳದಿದ್ದಾಗ, ಹಾಗೆ ಹೇಳದಿರುವ ನಿಮಿತ್ತವು ಗುಣವೋ ಅಥವಾ ಕ್ರಿಯೆಯೋ ಎಂಬ ಆಧಾರದ ಮೇಲೆ ಭೇದಗಳು ಇರಬೇಕಲ್ಲ? ಈ ಪ್ರಶ್ನೆಗೆ ಉತ್ತರವನ್ನು 15ನೇ ಕಾರಿಕೆಯಲ್ಲಿ ಕಾಣಬಹುದು. ಚಮತ್ಕಾರ ವಿಲ್ಲವೆಂಬ ಕಾರಣದಿಂದ ಆ ಭೇದಗಳು ಗ್ರಾಹ್ಯವಲ್ಲವೆಂದು ಹೇಳಲಾಗಿದೆ. ಆದ್ದರಿಂದ ಉತ್ಪ್ರೇಕ್ಷೆಯ ಭೇದಗಳು 104 ಮಾತ್ರ.]

17 ಈ ಎಲ್ಲಾ ಉತ್ಪ್ರೇಕ್ಷೆಯ ಪ್ರಭೇದಗಳಲ್ಲಿ ಕೇವಲ ಭೇದವನ್ನು ಆಶ್ರಯಿಸಿ ಚಮತ್ಕಾರವನ್ನು ಪರೀಕ್ಷಿಸದೆ ಅವುಗಳನ್ನು ಪ್ರಾಚೀನರು ಪರಿಗಣಿಸಿದರು

[ರುಯ್ಯಕ ಮತ್ತು ವಿಶ್ವನಾಥರ ವಿಭಜನೆಯ ಕ್ರಮವನ್ನು ನೋಡಿರಿ. ಪ್ರಸ್ತಾವನೆಯಲ್ಲಿ.]

18 ಮೇಲೆ ನಿರೂಪಿಸಿದ ವಿಭಜನೆಯನ್ನು ವಿದ್ಯಾನಾಥನು ತೋರಿಸಿದ್ದಾನೆ. ಅವನ ಮತವನ್ನೇ ಆಶ್ರಯಿಸಿ ನಾನಿಲ್ಲಿ ಉತ್ಪ್ರೇಕ್ಷೆಯನ್ನು ವಿಶದೀಕರಿಸುತ್ತೇನೆ

[ಪ್ರತಾಪರುದ್ರಯಶೋಭೂಷಣ. ಬಾಂಬೆ ಸಂಸ್ಕೃತ ಸೀರೀಸ್. ಪುಟ 383-6 ನೋಡಿರಿ ಪ್ರಸ್ತಾವನೆಯನ್ನೂ ನೋಡಿರಿ.]

ಉದಾಹರಣಾನಿ —

ಉಪಾತ್ತಗುಣನಿಮಿತ್ತಜಾತಿಭಾವಸ್ವರೂಪೋತ್ಪ್ರೇಕ್ಷಾ — (೧)

ಜಯತಿ ಶ್ರೀರ್ವಿಭೋರಂಗೇ ಯದಂಗಾಸಂಗತಃ ಸದಾ ।
ವಿಭಾಂತಿ ಪುಲಕೋದ್ಭೇದಾ ರಸಸ್ಯಾದೇರಿವಾಂಕುರಾಃ ॥೧॥

'ಆಸಂಗತ' ಇತಿ ಗುಣರೂಪಂ ನಿಮಿತ್ತಮುಪಾತ್ತಮ್. 'ಅಂಕುರಾ' ಇತಿ ಜಾತಿಃ.

ಉಪಾತ್ತಗುಣನಿಮಿತ್ತಜಾತ್ಯಭಾವಸ್ವರೂಪೋತ್ಪ್ರೇಕ್ಷಾ — (೨)

ಯತ್ಕೃಪಾಕಲಿತೈಶ್ವರ್ಯಯಶಶ್ಚಂದ್ರಸಿತಂ ನಭಃ ।
ವರ್ಷಾಸ್ವಪ್ಯನವೀನಾಭ್ರಮಿವ ಸಾ ಶ್ರೀರ್ಮುದೇಽಸ್ತು ನಃ ॥೨॥

ಅತ್ರ 'ಸಿತಂ' ಇತಿ ನಿಮಿತ್ತಂ, 'ಅನವೀನಾಭ್ರಮ್' ಇತಿ ಜಾತೇರಭಾವಃ. ಅತ್ರ ನವೀನಾಭ್ರವಿಶಿಷ್ಟಸ್ಯ ನಭಸಸ್ತದವಿಶಿಷ್ಟನಭಸ್ತಾದಾತ್ಮ್ಯಂ ಸಂಭಾವ್ಯತೇ, ನವೀನಾಭ್ರಾವೃತತ್ವೇಽಪಿ ಸಿತತ್ವಾತ್. ಸಿತತ್ವಂ ತು ಅವಾರ್ಷಿಕೇ ನಭಸಿ ಸ್ವತಃ ಸಿದ್ಧಮೇವ, ಶುಭ್ರಮೇಘಾವೃತತ್ವಾತ್. ವಾರ್ಷಿಕೇ ನಭಸಿ ಸಿತತ್ವಾಸಂಬಂಧೇಽಪಿ ಸಂಬಂಧೋಕ್ತೇರತಿಶಯೋಕ್ತಿಭೇದಃ. ತೇನ ಸಿತತ್ವಂ ಸಿದ್ಧವತ್ಕೃತ್ಯ ನಿಮಿತ್ತೀಕೃತಮ್.

---

ಉದಾಹರಣೆಗಳು—

ಗುಣವು ನಿಮಿತ್ತವಾಗಿರುವ ಜಾತಿಭಾವ ಸ್ವರೂಪೋತ್ಪ್ರೇಕ್ಷೆ—(1)

ಯಾರ ಆಲಿಂಗನದಿಂದ ಪರಮಾತ್ಮನ ದೇಹದಲ್ಲಿ ಶೃಂಗಾರ ರಸದ ಮೊಳಕೆಗಳೇನೋ ಎಂಬಂತೆ ರೋಮಾಂಚದ ಸೂಚಕಗಳು ಸದಾ ಮೂಡಿವೆಯೋ ಆ ಲಕ್ಷ್ಮಿಗೆ ಜಯವಾಗಲಿ (1)

'ಆಲಿಂಗನದಿಂದ' ಎಂದು ಗುಣರೂಪವಾದ ನಿಮಿತ್ತವನ್ನು ಇಲ್ಲಿ ಹೇಳಲಾಗಿದೆ. ಮೊಳಕೆಗಳು ಎಂಬುದು ಜಾತಿ.

[ಆಸಂಗತಃ—ಇದು ಸಂಬಂಧವಿಶೇಷವಾದ್ದರಿಂದ ಗುಣ. ಇದನ್ನು ನಿಮಿತ್ತವಾಗಿಟ್ಟುಕೊಂಡು ಪ್ರಭುವಿನ ಪುಲಕೋದ್ಭೇದಗಳನ್ನು (ವಿಷಯ) ಶೃಂಗಾರರಸದ (ಆದೇಃ ರಸಸ್ಯ) ಮೊಳಕೆಗಳ (ವಿಷಯಿ) ಸ್ವರೂಪದೊಡನೆ ತಾದಾತ್ಮ್ಯವನ್ನು ಕಲ್ಪಿಸಿ ಉತ್ಪ್ರೇಕ್ಷಿಸಲಾಗಿದೆ. 'ಅಂಕುರತ್ವ'ವಿಲ್ಲಿ ಜಾತಿ: ಅದರ ಭಾವ ಸ್ವರೂಪದ ಉತ್ಪ್ರೇಕ್ಷೆಯಿದೆ. 'ಇವ' ಶಬ್ದವು ಉತ್ಪ್ರೇಕ್ಷಾವ್ಯಂಜಕ. ಅದನ್ನಿಲ್ಲಿ ಪ್ರಯೋಗಿಸಿರುವುದರಿಂದ ಇದೊಂದು ವಾಚ್ಯಭೇದ.]

ಗುಣವನ್ನು ನಿಮಿತ್ತವಾಗಿ ಹೇಳಿರುವ ಜಾತಿಯ ಅಭಾವ ಸ್ವರೂಪೋತ್ಪ್ರೇಕ್ಷೆ—(2)

ಯಾರ ಕರುಣೆಯಿಂದ ಫಲಿತವಾದ ಸಂಪತ್ತಿನ ಕೀರ್ತಿಚಂದ್ರನಿಂದ ಆಕಾಶವು ಮಳೆಗಾಲದಲ್ಲಿಯೂ ಹೊಸಮೋಡವಿಲ್ಲದುದೋ ಎಂಬಂತೆ ಶುಭ್ರವಾಗಿರುವುದೋ ಆ ಲಕ್ಷ್ಮಿಯು ನಮಗೆ ಆನಂದ ನೀಡಲಿ. (2)

ಇಲ್ಲಿ 'ಸಿತತ್ವ' (ಶುಭ್ರತೆ)ವು ನಿಮಿತ್ತ. ಹೊಸಮೋಡವಿಲ್ಲದಿರುವುದು ಜಾತಿಯ ಅಭಾವ. ಇಲ್ಲಿ ಹೊಸಮೋಡವು ಆವರಿಸಿರುವ ಆಕಾಶವನ್ನು ಹೊಸ ಮೋಡವಿಲ್ಲದ ಆಕಾಶದೊಡನೆ ತಾದಾತ್ಮ್ಯವನ್ನು ಕಲ್ಪಿಸಲಾಗಿದೆ, ಏಕೆಂದರೆ ಹೊಸಮೋಡವಿದ್ದರೂ (ಕೀರ್ತಿಚಂದ್ರನಿಂದ) ಬಿಳಿಯದಾಗಿರುವುದರಿಂದ ಮಳೆಗಾಲವಲ್ಲದ ಕಾಲದಲ್ಲಿನ ಆಕಾಶದ ಶುಭ್ರತೆಯು ಸ್ವಾಭಾವಿಕ

ಉಪಾತ್ತ ಕ್ರಿಯಾನಿಮಿತ್ತ-ಜಾತಿಭಾವಸ್ವರೂಪೋತ್ಪ್ರೇಕ್ಷಾ – (೩)

ಶುಭ್ರಿತಾನ್ಯಾನತಸುರೀಶಿರೋರತ್ನಾನಿ ಯತ್ಪದೋಃ ।
ನಖೈರ್ಮಂಜೀರಹಂಸ್ಯೋರ್ವಾಪತ್ಯಾನಿ ಶ್ರೀರ್ಮುದೇಽಸ್ತು ನಃ ॥೩॥

ಶುಭ್ರಾಣಿ ಕೃತಾನಿ ಶುಭ್ರಿತಾನಿ. ಶುಭ್ರೀಕರಣಂ ನಿಮಿತ್ತಮ್. ಹಂಸ್ಯೋರಪತ್ಯಾನೀತಿ ಜಾತಿಃ.

ಉಪಾತ್ತ ಕ್ರಿಯಾನಿಮಿತ್ತ-ಜಾತ್ಯಭಾವಸ್ವರೂಪೋತ್ಪ್ರೇಕ್ಷಾ—(೪)

ತ್ವಯಾಕ್ಷಿಣ್ಣಿ ಪಿಹಿತೇಽವಾಮೇ ನೇತುರ್ನಾಭೀಸರೋಜಗಾತ್ ।
ಕೇಲಿಕಾಲೇ ಹ್ರಿಯಾಂಬ ದ್ಯೌರ್ವ್ಯರ್ಕೇವ ಸ್ಯಾತ್ತಮೋವೃತಾ ॥೪॥

ಅತ್ರ ತಮೋವೃತಿರ್ನಿಮಿತ್ತಮ್. ವ್ಯರ್ಕೇತಿ ಜಾತ್ಯಭಾವಃ. ಅತ್ರ ಭಗವತಃ ಅವಾಮಂ ಚಕ್ಷುಃ ಸೂರ್ಯಃ. ತತ್ಪಿಧಾನೇನ ನಾಭೀಕಮಲಸ್ಯ ನಿಮೀಲನಮಿತಿ ವಸ್ತು ಧ್ವನ್ಯತ ಇತಿ ಅತಿಶಯೋಕ್ತ್ಯಲಂಕಾರೇಣ ವಸ್ತುಧ್ವನಿಃ. ಅತಿಶಯೋಕ್ತ್ಯುತ್ಪ್ರೇಕ್ಷಯೋಃ ಸಂಕರಃ.

---

ವಾದುದು : ಬಿಳಿಯ ಮೋಡವು ಅದನ್ನು ಆವರಿಸಿರುವುದರಿಂದ ಹಾಗೆ. ಮಳೆಗಾಲದ ಆಕಾಶಕ್ಕೂ ಶುಭ್ರತೆಗೂ ಸಂಬಂಧವಿಲ್ಲದಿದ್ದರೂ ಸಂಬಂಧವನ್ನಿಲ್ಲಿ ಹೇಳಿರುವುದರಿಂದ ಇದು ಅತಿಶಯೋಕ್ತಿಯ ಪ್ರಭೇದವಾಗುತ್ತದೆ. ಆದ್ದರಿಂದ ಶುಭ್ರತೆಯನ್ನು ಇರುವಂತೆಯೇ (ಸಿದ್ಧಮ್) ಗ್ರಹಿಸಿ ನಿಮಿತ್ತವಾಗಿ ನೀಡಲಾಗಿದೆ.

[ವೃತ್ತಿಯಲ್ಲಿ ಹೇಳಿರುವ ಅತಿಶಯೋಕ್ತಿ ಪ್ರಭೇದಕ್ಕೆ 'ಸಂಬಂಧಾತಿಶಯೋಕ್ತಿ' ಎಂದು ಹೆಸರು. 'ಸಂಬಂಧಾತಿಶಯೋಕ್ತಿಃ ಸ್ಯಾದಯೋಗೇ ಯೋಗಕಲ್ಪನಮ್' (ಕುವಲಯಾನಂದ ಕಾರಿಕಾ, 39). ಹಾಗೆ ಮಳೆಗಾಲದ ಆಕಾಶಕ್ಕೂ ಶುಭ್ರತೆಗೂ ಸಂಬಂಧವಿಲ್ಲದಿದ್ದರೂ ಸಂಬಂಧವನ್ನು ಕಲ್ಪಿಸಿಕೊಂಡರೆ ಅತಿಶಯೋಕ್ತಿಯೆ. ಹೀಗೆ ಕಾಲ್ಪನಿಕ ಧರ್ಮ (ಶುಭ್ರತ್ವ)ವು ಉತ್ಪ್ರೇಕ್ಷೆಗೆ ನಿಮಿತ್ತವಾಗುವುದು ಸಾಧ್ಯವಿಲ್ಲ. ಆದ್ದರಿಂದಲೇ ಇಲ್ಲಿ ಶುಭ್ರತ್ವವನ್ನು ಸಿದ್ಧವತ್ (ನಿಜವಾಗಿಯೂ ಇದೆ, ಕಾಲ್ಪನಿಕವಲ್ಲ) ಎಂದು ಗ್ರಹಿಸಿ ನಿಮಿತ್ತವನ್ನಾಗಿ ನೀಡಲಾಗಿದೆ.]

ಕ್ರಿಯೆಯನ್ನು ನಿಮಿತ್ತವಾಗಿ ಹೇಳಿರುವ ಜಾತಿಭಾವಸ್ವರೂಪೋತ್ಪ್ರೇಕ್ಷೆ—(3)

ಯಾರ ಪಾದಗಳ ಉಗುರುಗಳಿಂದ ನಮಿಸುವ ದೇವತೆಗಳ ಚೂಡಾರತ್ನಗಳು ನೂಪುರಗಳೆಂಬ ಹಂಸಿಯರ ಮರಿಗಳೋ ಎಂಬಂತೆ ಶುಭ್ರಗೊಳಿಸಲ್ಪಟ್ಟಿವೆಯೋ ಆ ಲಕ್ಷ್ಮಿಯು ನಮಗೆ ಆನಂದ ನೀಡಲಿ. (3)

'ಶುಭ್ರಿತಾನಿ' ಎಂದರೆ ಶುಭ್ರವಾಗಿ ಮಾಡಲ್ಪಡುವುವು ಎಂದರ್ಥ. ಶುಭ್ರಗೊಳಿಸುವುದು (ಕ್ರಿಯೆ) ನಿಮಿತ್ತ. ಹಂಸಿಯರ ಮರಿಗಳು ಎಂಬುದು ಜಾತಿ.

ಕ್ರಿಯೆಯನ್ನು ನಿಮಿತ್ತವಾಗಿ ಹೇಳಿರುವ ಜಾತಿಯ ಅಭಾವಸ್ವರೂಪೋತ್ಪ್ರೇಕ್ಷೆ—(4)

ತಾಯಿ, ಸರಸಕಾಲದಲ್ಲಿ ನಾಭಿಕಮಲದಲ್ಲಿರುವವನ (ಬ್ರಹ್ಮನ) ದೆಸೆಯಿಂದ ಉಂಟಾದ ನಾಚಿಕೆಯಿಂದ ನೀನು ಪ್ರಭುವಿನ ಬಲಗಣ್ಣನ್ನು ಮುಚ್ಚಿದಾಗ ಆಕಾಶವು ಸೂರ್ಯನಿಲ್ಲವೇನೋ ಎಂಬಂತೆ ಕತ್ತಲೆಯಿಂದ ವ್ಯಾಪಿಸಲ್ಪಟ್ಟಿತು. (4)

ಅನುಪಾತ್ತನಿಮಿತ್ತಜಾತಿಭಾವಸ್ವರೂಪೋತ್ಪ್ರೇಕ್ಷಾ—(೫)

ಕೃಪಾಸಂಸೂಚಿಕಾ (?) ಸರ್ವೇಷ್ವಾಸ್ಯೇ ತವ ವಿಕಾಸಿತಾ ।
ಭಾತಿ ಕ್ರಾಂತಾ ಸ್ವರಾದ್ಯಾ ತ್ವತ್ಕೃಪಾಕೀರ್ತಿರಿವೇಂದಿರೇ ॥೫॥

ಸರ್ವರಕ್ಷಣರೂಪಂ ನಿಮಿತ್ತಮನುಪಾತ್ತಮ್. ಕೀರ್ತೇಸ್ತಜ್ಜನಿತತ್ವಾತ್, ರಕ್ಷಣಂ ನಿಮಿತ್ತಮ್

ಅನುಪಾತ್ತನಿಮಿತ್ತಜಾತ್ಯಭಾವಸ್ವರೂಪೋತ್ಪ್ರೇಕ್ಷಾ—(೬)

ಮುಖಬಾಹೂರುಪಾದಂ ತೇ ನೇತುರ್ನರಹರೇಃ ಪುರಾ ।
ಯಯಾ ರುಷಾ ಪ್ರಜಾಹೀನಮಿವಾಸೀತ್ತ್ವಾಮುಪಾಕರೋಃ ॥೬॥

ಅತ್ರ ನಿಮಿತ್ತಮನುಪಾತ್ತಮ್. 'ಪ್ರಜಾಹೀನ'ಮಿತಿ ಜಾತ್ಯಭಾವಃ. ಪುರಾ ನೃಸಿಂಹಾವತಾರೇ ದೈತ್ಯಾಪರಾಧನಿಮಿತ್ತಕಃ ಕ್ರೋಧರ್ಲಕ್ಷ್ಮೀಸಾಂನಿಧ್ಯಾತ್ಪರಿಹೃತ ಇತಿ ಪೌರಾಣಿಕಾಃ.

---

ಇಲ್ಲಿ ಕತ್ತಲೆ ವ್ಯಾಪಿಸುವುದು (ಕ್ರಿಯೆ) ನಿಮಿತ್ತ. ಸೂರ್ಯನಿಲ್ಲದಿರುವುದು ಎಂದರೆ ಜಾತಿಯ ಅಭಾವ. ಇಲ್ಲಿ ಭಗವಂತನ ಬಲಗಣ್ಣು ಸೂರ್ಯ, ಅದನ್ನು ಮುಚ್ಚುವುದರಿಂದ ನಾಭೀಕಮಲವು ಮುಚ್ಚಿಕೊಳ್ಳುವುದು ಎಂಬ ವಸ್ತುವು ಧ್ವನಿತವಾಗುವುದರಿಂದ ಅತಿಶಯೋಕ್ತಿ ಅಲಂಕಾರದಿಂದ ವಸ್ತುಧ್ವನಿಯಿದೆ. ಅತಿಶಯೋಕ್ತಿ-ಉತ್ಪ್ರೇಕ್ಷೆಗಳ ಸಂಕರವಿದೆ.

[ಇಲ್ಲಿ ಪ್ರಭುವಿನ ಬಲಗಣ್ಣನ್ನು ಮುಚ್ಚುವುದಕ್ಕೂ ತಮಸ್ಸು ಆವರಿಸುವುದಕ್ಕೂ ಸಂಬಂಧ ವಿಲ್ಲದಿದ್ದರೂ ಸಂಬಂಧವನ್ನು ಹೇಳಿರುವುದರಿಂದ 'ಸಂಬಂಧಾತಿಶಯೋಕ್ತಿ' (ಕುವಲಯಾ ನಂದಕಾರಿಕಾ, 39)]

ನಿಮಿತ್ತವನ್ನು ಹೇಳದಿರುವ ಜಾತಿಭಾವಸ್ವರೂಪೋತ್ಪ್ರೇಕ್ಷೆ—(5)

ಎಲ್ಲರಲ್ಲಿಯೂ ಕೃಪೆಯನ್ನು ಸೂಚಿಸುವ (?) ನಿನ್ನ ಮುಖದಲ್ಲಿನ ವಿಕಾಸವು (ಮಂದ ಹಾಸವು) ನಿನ್ನ ಮೊದಲ ಕೃಪಾಕೀರ್ತಿಯೇನೋ ಎಂಬಂತೆ ಸ್ವರ್ಗವನ್ನು ಆಕ್ರಮಿಸಿ ಬೆಳಗುತ್ತಿದೆ. (5)

ಸರ್ವರಕ್ಷಣರೂಪವಾದ ನಿಮಿತ್ತವನ್ನು ಹೇಳಿಲ್ಲ. ಕೀರ್ತಿಯು ಅದರಿಂದ ಉಂಟಾಗು ವುದರಿಂದ, ರಕ್ಷಣೆಯು ನಿಮಿತ್ತ.

ನಿಮಿತ್ತವನ್ನು ಹೇಳದಿರುವ ಜಾತಿಯ ಅಭಾವಸ್ವರೂಪೋತ್ಪ್ರೇಕ್ಷೆ—(6)

ಹಿಂದೆ ನಿನ್ನ ಒಡೆಯ ನರಸಿಂಹನ ಯಾವ ಕ್ರೋಧದಿಂದ ಮುಖ, ತೋಳು, ತೊಡೆ ಮತ್ತು ಪಾದಗಳು ಪ್ರಜಾರಹಿತವೇನೋ ಎಂಬಂತೆ ಆಗಿತ್ತೋ ಅದನ್ನು ನೀನು ಶಾಂತ ಗೊಳಿಸಿದೆ. (6)

ಇಲ್ಲಿ ನಿಮಿತ್ತವನ್ನು ಹೇಳಿಲ್ಲ. 'ಪ್ರಜಾರಹಿತ' ಎಂಬುದು ಜಾತಿಯ ಅಭಾವ. ಹಿಂದೆ ನರಸಿಂಹಾವತಾರದಲ್ಲಿ ದಾನವರ ಅಪರಾಧನಿಮಿತ್ತವಾದ ಕೋಪವು ಲಕ್ಷ್ಮಿಯು ಜೊತೆ ಗಿದ್ದುದರಿಂದ ಶಾಂತವಾಯಿತು ಎಂದು ಪೌರಾಣಿಕರು ಹೇಳುತ್ತಾರೆ

[ಮುಖಬಾಹೂರುಪಾದಂ — (ದ್ವಂದ್ವಸಮಾಸ)–ಪ್ರಜಾಹೀನಮಿವಾಸೀತ್ — ಪುರುಷ ಸೂಕ್ತದಲ್ಲಿ ಹೇಳಿರುವಂತೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು

ಗುಣನಿಮಿತ್ತಜಾತಿಭಾವಹೇತೂತ್ಪ್ರೇಕ್ಷಾ—(೭)

ಶೀತಲಾ ಸುರಭಿರ್ಮೃದ್ವೀ ವಾಸಪದ್ಮಾದಿವಾಂಬ ತೇ ।
ತನುರಸ್ಯಾಃ ಸದಾಸಂಗಾದ್ವನಮಾಲಾ ವಿಭೋರ್ನವಾ ॥೭॥

ಶೈತಲ್ಯಾದಿಗುಣೋ ನಿಮಿತ್ತಮ್. 'ವಾಸಪದ್ಮಾದಿ'ತಿ ಜಾತೇರ್ಹೇತುತ್ವಮ್. ಏತದೇವ ಗಮ್ಯೋತ್ಪ್ರೇಕ್ಷಾಯಾಂ ಗುಣನಿಮಿತ್ತಗುಣೋತ್ಪ್ರೇಕ್ಷಾಯಾಶ್ಚೋದಾಹರಣಮ್. ನವತ್ವಂ ಗುಣಃ, ಸಂಗ ಇತಿ ಚ ಗುಣಃ. ಸಜಾತೀಯಯೋಃ ಸಂಸೃಷ್ಟಿಃ.

ಗುಣನಿಮಿತ್ತಜಾತ್ಯಭಾವಹೇತೂತ್ಪ್ರೇಕ್ಷಾ—(೮)

ಅದೃಕ್ಶ್ರುತೇವ ಮದಾತ್ತೂಷ್ಣೀಕತ್ವಂ ಯಯಾ ಶ್ರುತೇ ।
ದೃಷ್ಟೇಽಪಿ ಯತ್ರ ದ್ಯೂತಾದಿ ಧಿಕ್ತಾಂ ಸಂಪದಮಿಂದಿರೇ ॥೮॥

ಅತ್ರ ತೂಷ್ಣೀಕತ್ವಂ ನಿಮಿತ್ತಮ್. 'ಅದೃಕ್ಶ್ರುತೇಃ' ಚಕ್ಷುಃಶ್ರೋತ್ರಾಭಾವಾದಿತಿ ಜಾತ್ಯಭಾವಃ.

---

[ವರ್ಣಗಳು ಕ್ರಮವಾಗಿ ಪರಮಾತ್ಮನ ಮುಖ, ತೋಳು, ತೊಡೆ ಮತ್ತು ಪಾದಗಳಿಂದ ಜನ್ಮ ತಾಳಿದವು. ಈ ನಾಲ್ಕು ವರ್ಣಗಳು ಪರಮಾತ್ಮನ ಸಂತತಿ. 'ಬ್ರಾಹ್ಮಣೋಽಸ್ಯ ಮುಖಮಾಸೀದ್ಬಾಹೂ ರಾಜನ್ಯಃ ಕೃತಃ । ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥' (ಋ. 10-90-12)]

ಗುಣವು ನಿಮಿತ್ತವಾಗಿರುವ ಜಾತಿಭಾವಹೇತೂತ್ಪ್ರೇಕ್ಷೆ—(7)

ತಾಯಿ, ನಿನ್ನ ಶರೀರವು ವಾಸಸ್ಥಾನವಾದ ಕಮಲದಿಂದಲೋ ಏನೋ ತಂಪಾಗಿದೆ, ಸುವಾಸಿತವಾಗಿದೆ, ಮೃದುವಾಗಿದೆ. ಅದರ ಸಂಪರ್ಕದಿಂದ ಪ್ರಭುವಿನ ವನಮಾಲೆಯು ಬಾಡದಂತಿದೆ. (8)

ತಂಪು ಮುಂತಾದ ಗುಣಗಳು ನಿಮಿತ್ತ. ವಾಸಪದ್ಮದಿಂದ ಎಂದು ಜಾತಿಯನ್ನು ಹೇತುವಾಗಿ ಉತ್ಪ್ರೇಕ್ಷಿಸಲಾಗಿದೆ. ಇದೇ ಗಮ್ಯೋತ್ಪ್ರೇಕ್ಷೆಯಲ್ಲಿ ಗುಣ–ಹೇತೂತ್ಪ್ರೇಕ್ಷೆಯ ಉದಾಹರಣೆಯಾಗಿದೆ. ಇಲ್ಲಿ (ಉತ್ತರಾರ್ಧದಲ್ಲಿ) ನವತ್ವವು ಗುಣ: ಸಂಗವೂ ಗುಣ. ಸಜಾತೀಯ ಅಲಂಕಾರಗಳ ಸಂಸೃಷ್ಟಿಯಿದೆ.

[ಉತ್ತರಾರ್ಧದಲ್ಲಿ ನವತ್ವಗುಣವು ನಿಮಿತ್ತವಾಗಿದೆ. 'ಅಸ್ಯಾಃ ಆಸಂಗಾತ್' ಎಂದು ಗುಣವು ಹೇತುವಾಗಿ ಉತ್ಪ್ರೇಕ್ಷಿತವಾಗಿದೆ. ಉತ್ಪ್ರೇಕ್ಷಾವ್ಯಂಜಕವು ಯಾವುದೂ ಇಲ್ಲದಿರುವುದರಿಂದ ಇದು ಗಮ್ಯೋತ್ಪ್ರೇಕ್ಷೆ].

ಗುಣವು ನಿಮಿತ್ತವಾಗಿರುವ ಜಾತಿಯ ಅಭಾವಹೇತೂತ್ಪ್ರೇಕ್ಷೆ—(8)

ಇಂದಿರೆ, ಯಾವುದರಿಂದ ಮದವೇರಿ ಕೇಳಿದರೂ ನೋಡಿದರೂ ಕಿವಿಕಣ್ಣುಗಳಿಲ್ಲವೇನೋ ಎಂಬಂತೆ ಮೌನಧಾರಣೆಯೋ. ಯಾವುದರಿಂದ ದ್ಯೂತಾದಿ ವ್ಯಸನಗಳೋ ಆ ಸಂಪತ್ತಿಗೆ ಧಿಕ್ಕಾರ. (8)

ಇಲ್ಲಿ ಮೌನವಾಗಿರುವುದು (ಗುಣ) ನಿಮಿತ್ತ. ಕಣ್ಣು-ಕಿವಿಗಳಿಲ್ಲದಿರುವುದು ಜಾತಿಯ ಅಭಾವ

ಕ್ರಿಯಾನಿಮಿತ್ತಜಾತಿಭಾವಹೇತೂತ್ಪ್ರೇಕ್ಷಾ—(೯)

ತ್ವತ್ಸೇವಾ ಸಂಪದೋ ಮೂಲಂ ಧತ್ಸೇ ಯದ್ಯಂಬ ಸಂಪದಮ್ ।
ಸ್ವವಶೇನೇವ ಸಂಮೋದಮಾಪ್ನುಯಾಮಮರದ್ರುಣಾ ॥ ೯ ॥

ಅತ್ರ ಸಂಮೋದಾವಾಪ್ತಿರ್ನಿಮಿತ್ತಮ್. 'ಅಮರದ್ರುಣೇ'ತಿ ಜಾತೇರ್ಹೇತುತ್ವಮ್, ಅಮರದ್ರೂಣಾಂ ಬಹುತ್ವಾತ್.

ಕ್ರಿಯಾನಿಮಿತ್ತಜಾತ್ಯಭಾವಹೇತೂತ್ಪ್ರೇಕ್ಷಾ—(೧೦)

ದೇವದಕ್ಷಿಣದೃಕ್ ಕ್ಲೃಪ್ತಾನಕ್ತಂಕಾಲಾದಿವಾನಿಶಮ್ ।
ವಿಕಾಸಿ ತ್ವತ್ಕರಸ್ಥಾಬ್ಜಂ ತ್ವದಾಸ್ಯಸದೃಶಂ ರಮೇ ॥ ೧೦ ॥

ವಿಕಸನಕ್ರಿಯಾ ನಿಮಿತ್ತಮ್. 'ಅನಕ್ತಂಕಾಲಾತ್' ನಿಶಾಕಾಲಾಭಾವಾದಿತಿ ಜಾತ್ಯಭಾವಃ. ಪ್ರತೀಪೋತ್ಪ್ರೇಕ್ಷಯೋಃ ಸಂಕರಃ.

ಗುಣನಿಮಿತ್ತಜಾತಿಭಾವಫಲೋತ್ಪ್ರೇಕ್ಷಾ—(೧೧)

ತ್ವದಂಗಾಯೇವ ಮೃದುಲಾ ವನಮಾಲಾ ವಿಭೋರಸಿ ।
ಸ್ಪರ್ಶೇಽಪಿ ತಸ್ಯಾಃ ಕಿಂ ಬ್ರೂಮಸ್ತ್ವಾಂಗಮ್ಲಾನಿರಿಂದಿರೇ ॥ ೧೦ ॥

ಮಾರ್ದವಂ ನಿಮಿತ್ತಮ್, 'ತ್ವದಂಗಾಯೇ'ತಿ ಜಾತೇಃ ಫಲತ್ವಮ್.

ಅತ್ರ (ಮಾಲಾ–?) ಮ್ಲಾನಿನಿಷ್ಠಂ ಫಲತ್ವಮಂಗೇ ಉಪಚರ್ಯತೇ.

---

ಕ್ರಿಯೆಯು ನಿಮಿತ್ತವಾಗಿರುವ ಜಾತಿಭಾವಹೇತೂತ್ಪ್ರೇಕ್ಷೆ – (9)

ನಿನ್ನ ಸೇವೆಯು ಸಂಪತ್ತಿಗೆ ಮೂಲ. ತಾಯಿ, ನೀನು ಸಂಪತ್ತನ್ನು ಕರುಣಿಸುವೆಯಾದರೆ ಸ್ವಾಧೀನವಾದ ಸುರತರುವಿನಿಂದಲೋ ಏನೋ ಎಂಬಂತೆ ಆನಂದಿಸುತ್ತೇನೆ. (9)

ಇಲ್ಲಿ ಆನಂದಪ್ರಾಪ್ತಿಯು ನಿಮಿತ್ತ. ಸುರತರುವೆಂಬುದು ಜಾತಿ ; ಅದನ್ನು ಹೇತುವಾಗಿ ಕಲ್ಪಿಸಲಾಗಿದೆ. (ಸುರತರು ಜಾತಿ). ಏಕೆಂದರೆ ಸುರತರುಗಳು ಅನೇಕವಾದ್ದರಿಂದ.

ಕ್ರಿಯೆಯು ನಿಮಿತ್ತವಾಗಿರುವ ಜಾತಿಯ ಅಭಾವಹೇತೂತ್ಪ್ರೇಕ್ಷೆ – (10)

ಲಕ್ಷ್ಮಿ, ಪ್ರಭುವಿನ ಬಲಗಣ್ಣಿನಿಂದ ನಿರ್ಮಿತವಾದ ರಾತ್ರಿಯ ಕಾಲದ ಅಭಾವದಿಂದಲೋ ಏನೋ ನಿನ್ನ ಕೈಯಲ್ಲಿನ ಸದಾ ಅರಳಿದ ಕಮಲವು ನಿನ್ನ ಮುಖವನ್ನು ಹೋಲುತ್ತದೆ. (10)

ಅರಳುವುದು ಎಂಬ ಕ್ರಿಯೆಯಿಲ್ಲಿ ನಿಮಿತ್ತ. ರಾತ್ರಿಯಲ್ಲದ ಕಾಲದಿಂದ ಎಂದರೆ ರಾತ್ರಿಯ ಅಭಾವದಿಂದ ಎಂದರ್ಥ ; ಇದು ಜಾತಿಯ ಅಭಾವ. ಇಲ್ಲಿ ಪ್ರತೀಪ-ಉತ್ಪ್ರೇಕ್ಷೆಗಳ ಸಂಕರವಿದೆ.

[ವಿಕಾಸಿ ತ್ವತ್ಕರಸ್ಥಾಬ್ಜಂ ತ್ವದಾಸ್ಯಸದೃಶಮ್ – ಪ್ರಸಿದ್ಧ ಉಪಮಾನವು ಉಪಮೇಯವಾಗಿದೆ. 'ಪ್ರತೀಪಮುಪಮಾನಸ್ಯೋಪಮೇಯತ್ವಪ್ರಕಲ್ಪನಮ್. (ಕು. ಕಾ. 12).]

ಗುಣವು ನಿಮಿತ್ತವಾಗಿರುವ ಜಾತಿಭಾವಫಲೋತ್ಪ್ರೇಕ್ಷೆ – (11)

ನಿನ್ನ ದೇಹಕ್ಕೋಸ್ಕರವೋ ಏನೋ ಪ್ರಭುವಿನ ಎದೆಯಲ್ಲಿ ವನಮಾಲೆಯು ಮೃದುವಾಗಿದೆ. ಇಂದಿರೆ, ಅದರ ಸ್ಪರ್ಶದಿಂದಲೂ ಕೂಡ ನಿನ್ನ ದೇಹದ ಕಂದುವಿಕೆಯನ್ನು ಏನೆಂದು ಹೇಳಲಿ? (11)

ಮದುತ್ವ (ಗುಣ)ವು ಇಲ್ಲಿ ನಿಮಿತ್ತ. ನಿನ್ನ ದೇಹಕ್ಕಾಗಿಯೋ ಏನೋ ಎಂದು ಜಾತಿರೂಪವಾದ ಫಲವು ಹೇಳಲ್ಪಟ್ಟಿದೆ. ಇಲ್ಲಿ ಮಾಲೆಯ (?) ಕಂದುವಿಕೆಗೆ ಸಂಬಂಧಿಸಿದ ಫಲವನ್ನು ದೇಹಕ್ಕೆ ಆರೋಪಿಸಲಾಗಿದೆ

ಗುಣನಿಮಿತ್ತಜಾತ್ಯಭಾವಫಲೋತ್ಪ್ರೇಕ್ಷಾ—(೧೨)

ಕಾಲಭ್ರುಸದೃಶಃ ಕಾಂತಸ್ತವಾಂಬ ಗ್ಲಾನಿಶಂಕಯಾ ।
ನೂನಂ ನಿಃಸೂರ್ಯಮಸ್ಯತ್ವಂ ಪ್ರಾಣೇಭ್ಯೋऽಪಿ ಪ್ರಿಯಾ ಯತಃ ॥ ೧೨ ॥

ಸಾದೃಶ್ಯಂ ನಿಮಿತ್ತಮ್. 'ನಿಃಸೂರ್ಯಂ' ಸೂರ್ಯಾಭಾವಾಯೇತಿ ಜಾತ್ಯಭಾವಃ.

ಕ್ರಿಯಾನಿಮಿತ್ತಜಾತಿಭಾವಫಲೋತ್ಪ್ರೇಕ್ಷಾ—(೧೩)

ಪ್ರಾಯಸ್ತ್ವನ್ಮುಖಶೋಭಾಯೈ ನಿರಾಲಂಬೋ ನಭೋಽಂಗಣೇ ।
ಪ್ರತಿನಕ್ತಂ ಜಗನ್ಮಾತಃ ತಪಶ್ಚರತಿ ಚಂದ್ರಮಾಃ ॥ ೧೩ ॥

ತಪಶ್ಚರಣಕ್ರಿಯಾ ನಿಮಿತ್ತಮ್. ಶೋಭಾ ಜಾತಿಃ.

ಕ್ರಿಯಾನಿಮಿತ್ತಜಾತ್ಯಭಾವಫಲೋತ್ಪ್ರೇಕ್ಷಾ—(೧೪)

ಅಭಾವಾಯೇವ ತಮಸಾಂ ತವಾಂಬ ಸ್ಮಿತಚಂದ್ರಿಕಾ ।
ಬಹಿರ್ವ್ಯಾಪ್ನೋತಿ ಜನತಾಚೇತಃಕುಹರವರ್ತಿನಾಮ್ । ॥ ೧೪ ॥

ಬಹಿರ್ವ್ಯಾಪ್ತಿರ್ನಿಮಿತ್ತಮ್. 'ತಮಸಾಮಭಾವಾಯೇ'ತಿ ಜಾತ್ಯಭಾವಃ.

ಉಪಾತ್ತಗುಣನಿಮಿತ್ತಕ್ರಿಯಾಸ್ವರೂಪೋತ್ಪ್ರೇಕ್ಷಾ— (೧೫)

ಮಂಜುಮಂಜೀರಸಿಂಜಂ ತ್ವತ್ಪದೋಯುಗ್ಮಮನುಸ್ಮೃತಮ್ ।
ಕಿಮುಚ್ಚೈಸ್ತರ್ಜಯತ್ಯಂತರ್ಧ್ವಾಂತೋತ್ಸಾರಣ. ತತ್ಪರಮ್ ॥ ೧೫ ॥

ಅತ್ರ ತರ್ಜನಕ್ರಿಯಾಸ್ವರೂಪೋತ್ಪ್ರೇಕ್ಷಾಯಾಃ ಸಿಂಜಃ ಶಬ್ದೋ ನಿಮಿತ್ತಮ್.

---

ಗುಣವು ನಿಮಿತ್ತವಾಗಿರುವ ಜಾತಿಯ ಅಭಾವಫಲೋತ್ಪ್ರೇಕ್ಷೆ – (12)

ತಾಯಿ, ನೀನು ಕಂದಿಹೋಗುವೆ ಎಂಬ ಚಿಂತೆಯಿಂದ, ಅವನಿಗೆ ನೀನು ಪ್ರಾಣಕ್ಕಿಂತಲೂ ಪ್ರಿಯಳಾದುದರಿಂದ, ನಿನ್ನ ಪ್ರಿಯತಮನು ಸೂರ್ಯನಿಲ್ಲದಂತೆ ಮಾಡಲೋ ಏನೊ ಕಪ್ಪು ಮೋಡದಂತಿರುವನು. (12)

ಸಾದೃಶ್ಯ (ಗುಣ)ವು ನಿಮಿತ್ತ. 'ನಿಃಸೂರ್ಯಂ' ಎಂದರೆ ಸೂರ್ಯಾಭಾವಕ್ಕಾಗಿ ಎಂಬುದು ಜಾತಿಯ ಅಭಾವ. (ನಿರ್ಗತಃ ಸೂರ್ಯಃ ಯಥಾ ಭವಿತುಮರ್ಹತಿ ತಥಾ)

ಕ್ರಿಯೆಯು ನಿಮಿತ್ತವಾಗಿರುವ ಜಾತಿಭಾವಫಲೋತ್ಪ್ರೇಕ್ಷೆ – (13)

ಜಗನ್ಮಾತೆ, ಪ್ರತಿರಾತ್ರಿಯೂ ಯಾವ ಆಧಾರವೂ ಇಲ್ಲದೆ ಆಕಾಶದಲ್ಲಿ ಚಂದ್ರನು ಪ್ರಾಯಶಃ ನಿನ್ನ ಮುಖದ ಸೌಂದರ್ಯಕ್ಕಾಗಿಯೇ ತಪಸ್ಸನ್ನಾಚರಿಸುತ್ತಿದ್ದಾನೆ. (13)

ತಪಸ್ಸನ್ನಾಚರಿಸುವ ಕ್ರಿಯೆಯು ನಿಮಿತ್ತ. ಶೋಭೆಯು ಜಾತಿ.

ಕ್ರಿಯೆಯು ನಿಮಿತ್ತವಾಗಿರುವ ಜಾತಿಯ ಅಭಾವಫಲೋತ್ಪ್ರೇಕ್ಷೆ – (14)

ತಾಯಿ, ನಿನ್ನ ಮಂದಹಾಸವೆಂಬ ಬೆಳದಿಂಗಳು ಜನರ ಹೃದಯಗುಹೆಗಳಲ್ಲಿರುವ ಅಂಧಕಾರಗಳ ವಿನಾಶಕ್ಕಾಗಿಯೋ ಏನೋ ಹೊರಗೆ ವ್ಯಾಪಿಸಿದೆ. (14).

ಹೊರಗೆ ವ್ಯಾಪಿಸಿರುವುದು ನಿಮಿತ್ತ. ಅಂಧಕಾರಗಳ ಅಭಾವವೆಂದರೆ ಜಾತಿಯ ಅಭಾವ.

ಗುಣವನ್ನು ನಿಮಿತ್ತವಾಗಿ ಹೇಳಿರುವ ಕ್ರಿಯಾಸ್ವರೂಪೋತ್ಪ್ರೇಕ್ಷೆ – (15)

ಇಂಪಾದ ನೂಪುರನಾದವುಳ್ಳ ಸ್ಮರಿಸಲಾದ ನಿನ್ನ ಪಾದಯುಗಲವು ಆಂತರಿಕ ಅಂಧಕಾರವನ್ನು ಪರಿಹರಿಸುವುದರಲ್ಲಿ ನಿರತವಾಗಿ ಜೋರಾಗಿ ದೂಷಿಸುತ್ತಿದೆಯೇನೋ! (15)

ಇಲ್ಲಿ ದೂಷಣಕ್ರಿಯೆಯ ಸ್ವರೂಪೋತ್ಪ್ರೇಕ್ಷೆಯಲ್ಲಿ ಸಿಂಜಾರವವು ನಿಮಿತ್ತವಾಗಿದೆ.

ಉಪಾತ್ತಗುಣನಿಮಿತ್ತಕ್ರಿಯಾಭಾವಸ್ವರೂಪೋತ್ಪ್ರೇಕ್ಷಾ (೧೬)

ಯದಾ ಯದಾ ಸ್ಮಿತರುಚಿಃಸ್ಪರ್ಶಸ್ತವ ಹರೇಸ್ತನೌ
ದ್ಯುತಿಂ ತದಾ ತದಾತ್ಮೀಯಾಮಸ್ಪೃಶಂತೀವ ಭಾತ್ಯಸೌ ॥ ೧೬ ॥

ಅತ್ರ ಸ್ಪರ್ಶೋ ಗುಣಃ : 'ಅಸ್ಪೃಶಂತೀ'ತಿ ಸ್ಪರ್ಶನಕ್ರಿಯಾಭಾವಃ.

ಉಪಾತ್ತಕ್ರಿಯಾನಿಮಿತ್ತಕ್ರಿಯಾಸ್ವರೂಪೋತ್ಪ್ರೇಕ್ಷಾ (೧೭)

ಧವಲೀಕೃತಮಂಬ ತ್ವತ್ಪದೋಯುಗ್ಮಂ ನಖಶ್ರಿಯಾ ।
ದಧಾನಮಿವ ಭಾತ್ಯಂತರ್ಪ್ರಸಾದಾದ್ಯಂ ಗುಣಂ ಮುನೇಃ ॥ ೧೭ ]

ಧಾರಣಕ್ರಿಯೋತ್ಪ್ರೇಕ್ಷಾಯಾ ಧವಲೀಕರಣಂ ನಿಮಿತ್ತಮ್.

ಉಪಾತ್ತಕ್ರಿಯಾನಿಮಿತ್ತಕ್ರಿಯಾಭಾವಸ್ವರೂಪೋತ್ಪ್ರೇಕ್ಷಾ (೧೮)

ಯತ್ರೈಷೋ ನಿಗ್ರಹೋ ನೇತುಸ್ತತ್ರಾನುಗ್ರಹಕಾರಿಣೀಮ್ ।
ಮನ್ಯೇ ಮಾತರಕುರ್ವಾಣಾಂ ವಚೋಽಸ್ಯ ತ್ವಾಂ ಸತೀಮಪಿ ॥ ೧೮ ॥

ಅನುಗ್ರಹಕರಣಂ ನಿಮಿತ್ತಮ್. 'ಅಕುರ್ವಾಣಾಮ್'ಇತಿ ಕ್ರಿಯಾಯಾ ಅಭಾವಃ.

ಅನುಪಾತ್ತನಿಮಿತ್ತಕ್ರಿಯಾಸ್ವರೂಪೋತ್ಪ್ರೇಕ್ಷಾ (೧೯)

ಮುಮುಕ್ಷಾವ್ರತನಿಷ್ಣಾತಂ ನಿಯಮಾರ್ಥಂ ನಿಜೈಃ ಕರೈಃ ।
ಮನ್ಯೇಽಭಿಷಿಂಚತೋ ಮಾತಃ ಕಟಾಕ್ಷಾಸನ್ವಹಂ ತವ ॥ ೧೯ ॥

ಅತ್ರಾಭಿಷೇಚನಕ್ರಿಯೋತ್ಪ್ರೇಕ್ಷಾಯಾ ನಿಮಿತ್ತಮನುಪಾತ್ತಮ್.

---

ಗುಣವು ನಿಮಿತ್ತವಾಗಿರುವ ಕ್ರಿಯೆಯ ಅಭಾವಸ್ವರೂಪೋತ್ಪ್ರೇಕ್ಷೆ – (16)

ಯಾವ ಯಾವಾಗ ನಿನ್ನ ಮಂದಹಾಸದ ಪ್ರಕಾಶವು ಹರಿಯ ದೇಹದ ಮೇಲೆ ಬೀಳುವುದೋ ಆಗಾಗ ಆ ದೇಹವು ತನ್ನ ಸ್ವಂತ ಕಾಂತಿಯನ್ನು ತಳೆಯುವುದಿಲ್ಲವೇನೋ ಎಂಬಂತೆ ಬೆಳಗುವುದು. (16)

ಇಲ್ಲಿ ಸ್ಪರ್ಶವು ಗುಣ. ತಳೆಯದಿರುವುದು ಎಂಬುದು ಕ್ರಿಯೆಯ ಅಭಾವ. ಕ್ರಿಯೆಯು ನಿಮಿತ್ತವಾಗಿರುವ ಕ್ರಿಯಾಸ್ವರೂಪೋತ್ಪ್ರೇಕ್ಷೆ –(17)

ತಾಯಿ, ಉಗುರಿನ ಕಾಂತಿಯಿಂದ ಬಿಳಿಯದಾದ ನಿನ್ನ ಪದಯುಗಲವು ಒಳಗೆ ನೆಲೆಸಿರುವ ಪರಿಣಾಮವಾಗಿ ಮುನಿಯ ಸತ್ವಗುಣವನ್ನು ಧರಿಸಿರುವುದೋ ಏನೋ ಎಂಬಂತೆ ಬೆಳಗುತ್ತಿದೆ.

ಧಾರಣಕ್ರಿಯೆಯ ಸ್ವರೂಪೋತ್ಪ್ರೇಕ್ಷೆಯಲ್ಲಿ ಧವಲೀಕರಣವೆಂಬ (ಕ್ರಿಯೆಯು) ನಿಮಿತ್ತವಾಗಿದೆ.

[ಆದ್ಯಂ ಗುಣಂ (ದ್ವಿ.ವಿ.)–ಮೂರು ಗುಣಗಳಲ್ಲಿ ಮೊದಲನೆಯದು ಸತ್ತ್ವಗುಣ.] ಕ್ರಿಯೆಯು ನಿಮಿತ್ತವಾಗಿರುವ ಕ್ರಿಯೆಯ ಅಭಾವಸ್ವರೂಪೋತ್ಪ್ರೇಕ್ಷೆ –(18)

ಯಾರನ್ನು ಪ್ರಭುವು ಶಿಕ್ಷೆಗೊಳಪಡಿಸುವನೋ ಅವರಿಗೆ ಕರುಣೆ ತೋರುವ ನಿನ್ನನ್ನು, ಓ ತಾಯಿ, ಪ್ರಭುವಿಗೆ ಅನುಗುಣಸತಿಯಾದರೂ. ಅವನ ಮಾತನ್ನು ನಡೆಸದಿರುವಳೇನೋ ಎಂದು ಭಾವಿಸುವೆ. (18)

ಕರುಣೆತೋರುವ (ಕ್ರಿಯೆಯು) ನಿಮಿತ್ತ. 'ಅಕುರ್ವಾಣಾಂ' ಎಂಬುದು ಕ್ರಿಯೆಯ ಅಭಾವ.

ನಿಮಿತ್ತವನ್ನು ಹೇಳದಿರುವ ಕ್ರಿಯಾಸ್ವರೂಪೋತ್ಪ್ರೇಕ್ಷೆ –(19)

ತಾಯಿ, ಸದಾ ನಿನ್ನ ಕಟಾಕ್ಷಗಳು ತಮ್ಮ ಕಿರಣಗಳಿಂದ ಮೋಕ್ಷಕಾಂಕ್ಷೆಯ ವ್ರತದಲ್ಲಿ ಪರಿಣತನನ್ನು ನಿಯಮಾಚರಣೆಗೋಸ್ಕರ ಸ್ನಾನಮಾಡಿಸುತ್ತಿವೆಯೇನೋ ಎಂದು ಭಾವಿಸುವೆ. (19)

ಅನುಪಾತ್ತನಿಮಿತ್ತಕ್ರಿಯಾಭಾವಸ್ವರೂಪೋತ್ಪ್ರೇಕ್ಷಾ (೨೦)

ಸಾಗಸ್ಸ್ವಪ್ಯಂಬ ದಯಯಾ ದೇವಂ ಯದಿ ನಿರೀಕ್ಷಸೇ ।
ಕದಾಪಿ ದಂಡಧರತಾಂ ಸೋಽಸ್ಪೃಶನ್ನಿವ ದೃಶ್ಯತೇ ॥ ೨೦ ॥

ಅತ್ರ ನಿಮಿತ್ತಮನುಪಾತ್ತಮ್. ಅಸ್ಪೃಶನ್ನಿತಿ ಸ್ಪರ್ಶನಕ್ರಿಯಾಯಾ ಅಭಾವಃ.

ಗುಣನಿಮಿತ್ತಕ್ರಿಯಾಹೇತೂತ್ಪ್ರೇಕ್ಷಾ (೨೧)

ನಾಥನಾಭೀಸರೋಜಸ್ಥವಿಧಿವಕ್ತ್ರವಿಲಾಸಿನೀ
ಶುದ್ಧವರ್ಣಾಂಬ ಕಿಂ ತೇಽಂಘ್ರಿನಖದ್ಯುತಿನಿಷೇವಣಾತ್ ॥ ೨೧ ॥

ಶುದ್ಧವರ್ಣೇತಿ ನಿಮಿತ್ತಮ್. ನಿಷೇವಣಕ್ರಿಯಾಯಾ ಹೇತುತ್ವಮ್.

ಗುಣನಿಮಿತ್ತಕ್ರಿಯಾಭಾವಹೇತೂತ್ಪ್ರೇಕ್ಷಾ (೨೨)

ವಿಷ್ಣುವಕ್ಷಃಸ್ಥಲಾವಾಸರಸಿಕಾಯಾಃ ಸದೇಂದಿರೇ ।
ಭುವ್ಯವಿಕ್ಷೇಪಣಾನ್ನೂನಂ ಚರಣೌ ಮೃದುಲೌ ತವ ॥ ೨೨ ॥

ಮೃದುಲತ್ವಂ ನಿಮಿತ್ತಮ್. ಅವಿಕ್ಷೇಪಣಾದಿತಿ ಕ್ರಿಯಾಯಾ ಅಭಾವಃ.

---

ಇಲ್ಲಿ ಅಭಿಷೇಚನ ಕ್ರಿಯೆಯ ಸ್ವರೂಪೋತ್ಪ್ರೇಕ್ಷೆಯು ನಿಮಿತ್ತವನ್ನು ಹೇಳಿಲ್ಲ.

ನಿಮಿತ್ತವನ್ನು ಹೇಳದಿರುವ ಕ್ರಿಯೆಯ ಅಭಾವಸ್ವರೂಪೋತ್ಪ್ರೇಕ್ಷೆ –(20)

ಮಾತೆ, ತಪ್ಪುಮಾಡಿದವರಲ್ಲಿಯೂ ದಯೆಯಿಂದ ನೀನು ದೇವನೆಡೆಗೆ ಕಟಾಕ್ಷ ಬೀರಿದಾಗ ಅವನು ಯಾವಾಗಲೂ ಶಿಕ್ಷಾದಂಡವನ್ನು ಮುಟ್ಟುವುದೇ ಇಲ್ಲವೇನೋ ಎಂಬಂತೆ ಭಾಸವಾಗುತ್ತದೆ. (20)

ಇಲ್ಲಿ ನಿಮಿತ್ತವನ್ನು ಹೇಳಿಲ್ಲ. ಮುಟ್ಟದಿರುವುದು ಎಂಬುದು ಸ್ಪರ್ಶನಕ್ರಿಯೆಯ ಅಭಾವ.

[ಇಲ್ಲಿ ಬಹುಶಃ ಪ್ರಭುವಿನ ಅನುರಾಗಾತಿಶಯ ನಿಮಿತ್ತವಾಗಿರಬಹುದು]

ಗುಣವು ನಿಮಿತ್ತವಾಗಿರುವ ಕ್ರಿಯಾಹೇತೂತ್ಪ್ರೇಕ್ಷೆ –(21)

ಓ ತಾಯಿ, ಪ್ರಭುವಿನ ನಾಭೀಕಮಲದಲ್ಲಿರುವ ಬ್ರಹ್ಮನ ಮುಖದಲ್ಲಿ ಲಾಸ್ಯವಾಡುವವಳು (ಸರಸ್ವತಿಯು) ನಿನ್ನ ಪಾದಗಳ ಉಗುರುಗಳ ಕಾಂತಿಯ ಪಾನದಿಂದಲೋ ಏನೋ ಶುದ್ಧ ವರ್ಣಳಾಗಿರುವಳು. (21)

ಶುದ್ಧವರ್ಣವು ನಿಮಿತ್ತ. ಪಾನಮಾಡುವುದು ಇಲ್ಲಿ ಹೇತುವಾಗಿದೆ.

[ಶುದ್ಧವರ್ಣಾ – ಬಿಳಿಯ ಬಣ್ಣವುಳ್ಳವಳು ಅಥವಾ ದೋಷರಹಿತವಾದ ಅಕ್ಷರವುಳ್ಳವಳು ಎಂದು ಎರಡು ಅರ್ಥಗಳನ್ನು ಗ್ರಹಿಸಬೇಕು.]

ಗುಣವು ನಿಮಿತ್ತವಾಗಿರುವ ಕ್ರಿಯೆಯ ಅಭಾವಹೇತೂತ್ಪ್ರೇಕ್ಷೆ –(22)

ಇಂದಿರೆ, ಸದಾ ವಿಷ್ಣುವಿನ ಹೃದಯ ಸ್ಥಾನದಲ್ಲಿ ನೆಲೆಸಿರುವ ರಸಿಕಳಾದ ನಿನ್ನ ಪಾದಗಳು ಭೂಮಿಯ ಮೇಲೆ ಹೆಜ್ಜೆಯಿಡದಿರುವುದರಿಂದಲೋ ಏನೋ ಮೃದುವಾಗಿವೆ. (22)

ಮೃದುವಾಗಿರುವುದು (ಗುಣ) ನಿಮಿತ್ತ. ಹೆಜ್ಜೆಯಿಡದಿರುವುದರಿಂದ ಎಂಬುದು ಕ್ರಿಯೆಯ ಅಭಾವ.

ಕ್ರಿಯಾನಿಮಿತ್ತಕ್ರಿಯಾಹೇತೂತ್ಪ್ರೇಕ್ಷಾ (೨೩)

ವಂದನಾಯ ಮುಹುರ್ಯಾತಃ ಪ್ರಾಪ್ತಾ ಪರ್ವತಪುತ್ರಿಕಾ ।
ತ್ವತ್ಕಟಾಕ್ಷಪ್ರಸರಣಾತ್ ಕಿಮು ನೈಲ್ಯಮುಪಾಶ್ರಿತಾ ॥ ೨೩ ॥

ಉಪಾಶ್ರಯಣಕ್ರಿಯಾ ನಿಮಿತ್ತಮ್, ಪ್ರಸರಣಕ್ರಿಯಾ ಹೇತುಃ.

ಕ್ರಿಯಾನಿಮಿತ್ತಕ್ರಿಯಾಭಾವಹೇತೂತ್ಪ್ರೇಕ್ಷಾ (೨೪)

ತ್ವದ್ದಾಸದುರಿತಾನ್ಯಂಬ ಕೃತ್ಯಸ್ಯಾಕರಣಾತ್ಕಿಮು ।
ನಿಗೃಹ್ಣಾಸಿ ಹಿ ತತ್ಕೃತ್ಯಂ ನಾತ್ಮಕರ್ತೄ (?) ನಿಪಾತನಮ್ ॥ ೨೪ ॥

ನಿಗ್ರಹಕರಣಂ ನಿಮಿತ್ತಮ್. ಅಕರಣಾದಿತಿ ಕರಣಾಭಾವಸ್ಯ ಹೇತುತ್ವಮ್. ಲೋಕೇ ತಾವತ್ಕೃತ್ಯಸ್ಯಾಕರಣಾದಕೃತ್ಯಸ್ಯ ಕರಣಾದ್ವಾ ಭಗವನ್ನಿಗ್ರಹಃ. ದುರಿತಾನಾಂ ಕೃತ್ಯಸ್ಯಾಕರಣಾನ್ನಿಗ್ರಹೋ ಜಾತ ಹ್ಯಸ್ಮಾತ್ಕಾರಣಾದಾತ್ಮಕರ್ತ್ರೂಣಾಂ, ಸ್ವಕರ್ತ್ರೂಣಾಮಿತ್ಯರ್ಥಃ, ನಿಪಾತನಂ ನಿರಯಪಾತನರೂಪಂ ತೇಷಾಂ ದುರಿತಾನಾಂ ಕೃತ್ಯಂ ನಾಸ್ತಿ, ಅತಸ್ತೇಷಾಂ ವಿನಾಶೋ ಯುಕ್ತಃ. ಲಕ್ಷ್ಮೀಃ ಸ್ವದಾಸಾನಾಂ ಸತ್ಯಪಿ ದುರಿತೇ ತತ್ಫಲಂ ಪರಿವೃತ್ಯ ಸ್ವಪದಂ ದದಾತೀತಿ ಭಾವಃ

ಗುಣನಿಮಿತ್ತ ಕ್ರಿಯಾಫಲೋತ್ಪ್ರೇಕ್ಷಾ (೨೫)

ತವ ಕಾಂತಸ್ತನೂಕಾಲಃ ಸ್ಫುಟೀಕರ್ತುಮಿವೋಚ್ಚಕೈಃ ।
ವಕ್ಷಃಸ್ಥಲೀವಿಲಾಸಿನ್ಯಾ ತಟಿತ್ತ್ವಾಲ್ಯಂ ತವೇಂದಿರೇ ॥ ೨೫ ॥

ಕಾಲತಾ ನಿಮಿತ್ತಮ್. ಸ್ಫುಟೀಕರಣಂ ಫಲಮ್.

---

ಕ್ರಿಯೆಯು ನಿಮಿತ್ತವಾಗಿರುವ ಕ್ರಿಯಾಹೇತೂತ್ಪ್ರೇಕ್ಷೆ–(23)

ತಾಯಿ, ಆಗಿಂದಾಗ್ಗೆ ನಮಸ್ಕರಿಸಲು ಬರುವ ಪರ್ವತಪುತ್ರಿ (ಪಾರ್ವತಿ) ಯು ನಿನ್ನ ಕಟಾಕ್ಷ ಬೀಳುವುದರಿಂದಲೋ ಏನೋ ನೀಲವರ್ಣವನ್ನು ಪಡೆಯುವಳು. (23)

ನೀಲವರ್ಣವನ್ನು ಪಡೆದಿರುವುದು (ಕ್ರಿಯೆ) ನಿಮಿತ್ತ. (ಕಟಾಕ್ಷ) ಪ್ರಸರಣ ಕ್ರಿಯೆಯು ಇಲ್ಲಿ ಹೇತು.

ಕ್ರಿಯೆಯು ನಿಮಿತ್ತವಾಗಿರುವ ಕ್ರಿಯೆಯ ಅಭಾವಹೇತೂತ್ಪ್ರೇಕ್ಷೆ– (24)

ಮಾತೆ, ನಿನ್ನ ಭಕ್ತರ ಪಾಪಗಳನ್ನು ಅವು ಮಾಡಬೇಕಾದುದನ್ನು ಮಾಡಲಿಲ್ಲವೆಂದೋ ಏನೋ ನಾಶಮಾಡುವೆ, ಏಕೆಂದರೆ ತಮ್ಮನ್ನು ಆಚರಿಸಿದವರ ಪತನವೆಂಬ ಕರ್ತವ್ಯವನ್ನು ಮಾಡಿಲ್ಲವಲ್ಲ. (24)

ನಾಶಮಾಡುವುದು (ಕ್ರಿಯೆ) ನಿಮಿತ್ತ. ಮಾಡದಿರುವುದು ಎಂಬುದು ಕ್ರಿಯೆಯ ಅಭಾವ. ಲೋಕದಲ್ಲಿ ಕರ್ತವ್ಯವನ್ನು ಮಾಡದಿರುವ ಮತ್ತು ಕರ್ತವ್ಯವಲ್ಲದುದನ್ನು ಮಾಡುವ ಕಾರಣದಿಂದ ಭಗವಂತನು ಶಿಕ್ಷಿಸುತ್ತಾನೆ. ಪಾಪಗಳು ತಮ್ಮ ಕರ್ತವ್ಯವನ್ನು ಮಾಡದಿರುವುದರಿಂದ – ಶಿಕ್ಷೆಯಾಗಿದೆ. ಹಿ – ಎಂದರೆ ಯಾವ ಕಾರಣದಿಂದ ಎಂದರ್ಥ. ಆತ್ಮಕರ್ತ್ರೂಣಾಂ ಎಂದರೆ ತಮ್ಮನ್ನು ಆಚರಿಸುವವರ ಎಂದರ್ಥ. ನಿಪಾತನ ಎಂದರೆ ನರಕಕ್ಕೆ ತಳ್ಳುವ ತಮ್ಮ ಕರ್ತವ್ಯವನ್ನು ಪಾಪಗಳು ಮಾಡಿಲ್ಲ. ಆದ್ದರಿಂದಲೇ ಅವುಗಳ ವಿನಾಶ ಯೋಗ್ಯವಾಗಿದೆ. ಲಕ್ಷ್ಮಿಯು ತನ್ನ ಭಕ್ತರಿಗೆ ಪಾಪವಿದ್ದರೂ ಅದರ ಪರಿಣಾಮ ವನ್ನು ನಿವಾರಿಸಿ ತನ್ನ ಸಂನಿಧಿಯನ್ನು ದಯಪಾಲಿಸುತ್ತಾಳೆ ಎಂದು ತಾತ್ಪರ್ಯ.

ಗುಣವು ನಿಮಿತ್ತವಾಗಿರುವ ಕ್ರಿಯಾಫಲೋತ್ಪ್ರೇಕ್ಷೆ – (25)

ಗುಣನಿಮಿತ್ತಕ್ರಿಯಾಭಾವಫಲೋತ್ಪ್ರೇಕ್ಷಾ (೨೬)

ದಯಿತೇ ತವ ವಾಲ್ಲಭ್ಯಂ ದಂಡ್ಯಸ್ಯಾದಂಡನಾಯ ಕಿಮ್ ।
ಉಪಾಯೈರುಚಿತೈರ್ಯತ್ತದ್ವಿಸ್ಮಾರ್ಯಾಗೋಽಂಬ ಪಾಸಿ ನಃ ॥ ೨೬ ॥

ವಾಲ್ಲಭ್ಯಂ ನಿಮಿತ್ತಮ್. ಅದಂಡನಾಯೇತಿ ಕ್ರಿಯಾಯಾ ಅಭಾವಃ.

ಕ್ರಿಯಾನಿಮಿತ್ತಕ್ರಿಯಾಫಲೋತ್ಪ್ರೇಕ್ಷಾ (೨೭)

ಮಹಿಮ್ನೋಽಂತಸ್ಯ ತೇಽಜ್ಞಾನಾತ್ಪ್ರಾಪ್ತಂ ಬದರಿಕಾಶ್ರಮೇ ।
ಅಪನೇತುಮಸಾರ್ವಜ್ಞ್ಯಂ ತಪಸ್ಯತ್ಯಂಬ ಕಿಂ ವಿಭುಃ ॥ ೨೭ ॥

ತಪಶ್ಚರಣಂ ನಿಮಿತ್ತಮ್. ಅಪನಯನಂ ಫಲಮ್.

ಕ್ರಿಯಾನಿಮಿತ್ತಕ್ರಿಯಾಭಾವಫಲೋತ್ಪ್ರೇಕ್ಷಾ (೨೮)

ಮುಖೇನ ಸದೃಶೋ ಮಾತರ್ವಿಧೋರನವಲೋಕನಮ್ ।
ಪಿಧಾನಸ್ಯ ಗೃಹದ್ವಾರಃ ಫಲಂ ಕಿಮುದಯೇಽಸ್ಯ ತೇ ॥ ೨೮ ॥

ಪಿಧಾನಕ್ರಿಯಾ ನಿಮಿತ್ತಮ್. ಅವಲೋಕನಕ್ರಿಯಾಭಾವಃ ಫಲಮ್.

---

ಇಂದಿರೆ ,ನಿನ್ನ ಪ್ರಿಯತಮನು ಅತ್ಯಂತ ಕಪ್ಪುದೇಹದವನು ಎಂದು ಅತ್ಯಂತವಾಗಿ ಶುಭ್ರಗೊಳಿಸಲೋ ಏನೋ ಅವನ ಹೃದಯಸ್ಥಾನದ ವಿಲಾಸಿನಿಯಾದ ನೀನು ಮಿಂಚಿನಂತಿರುವೆ. (25)

ಕಪ್ಪಾಗಿರುವುದು (ಗುಣ) ನಿಮಿತ್ತ. ಶುಭ್ರಗೊಳಿಸುವುದು (ಕ್ರಿಯೆ) ಇಲ್ಲಿ ಫಲ.

ಗುಣವು ನಿಮಿತ್ತವಾಗಿರುವ ಕ್ರಿಯೆಯ ಅಭಾವಫಲೋತ್ಪ್ರೇಕ್ಷೆ– (26)

ಪ್ರಿಯಪ್ರಭುವಿನಲ್ಲಿ ನಿನ್ನ ಪ್ರೇಮವು ಶಿಕ್ಷಾರ್ಹರನ್ನು ಶಿಕ್ಷಿಸದಂತಿರಿಸಲೋ ಏನು ? ಆಯಾಯ ಉಚಿತೋಪಾಯಗಳಿಂದ ಆಯಾಯ ಪಾಪವನ್ನು ಮರೆಯಿಸಿ ನಮ್ಮನ್ನು ಕಾಪಾಡುವೆ. (26)

ವಾಲ್ಲಭ್ಯ (ಗುಣ)ವು ನಿಮಿತ್ತ. ದಂಡಿಸದಂತಿರಿಸಲೋ ಎಂಬುದು ಕ್ರಿಯೆಯ ಅಭಾವ.

ಕ್ರಿಯೆಯು ನಿಮಿತ್ತವಾಗಿರುವ ಕ್ರಿಯಾಫಲೋತ್ಪ್ರೇಕ್ಷೆ– (27)

ನಿನ್ನ ಮಹಿಮೆಯ ಪಾರವನ್ನು ತಿಳಿಯದೆ ಪ್ರಭುವು ಅದರಿಂದಾದ ಸರ್ವಜ್ಞತ್ವಹಾನಿಯನ್ನು ಪರಿಹರಿಸಿಕೊಳ್ಳಲೋ ಏನೋ ಬದರಿಕಾಶ್ರಮದಲ್ಲಿ ತಪಸ್ಸನ್ನಾಚರಿಸುತ್ತಿದ್ದಾನೆ. (27)

ತಪವನ್ನಾಚರಿಸುವುದು ನಿಮಿತ್ತ. ಪರಿಹರಿಸಿಕೊಳ್ಳುವ ಕ್ರಿಯೆಯು ಫಲ.

["ದೇವಿ ತ್ವನ್ಮಹಿಮಾವಧಿರ್ನ ಹರಿಣಾ ನಾಪಿ ತ್ವಯಾ ಜ್ಞಾಯತೇ
ಯದ್ಯಪ್ಯೇವಮಥಾಪಿ ನೈವ ಯುವಯೋಃ ಸರ್ವಜ್ಞತಾ ಹೀಯತೇ ।
ಯನ್ನಾಸ್ತ್ಯೇವ ತದಜ್ಞತಾಮನುಗುಣೋ ಸರ್ವಜ್ಞತಾಯಾ ವಿದುಃ
ವ್ಯೋಮಾಂಭೋಜಮಿದಂತಯಾ ಕಿಲ ವಿದನ್ ಭ್ರಾಂತೋಽಯಮಿತ್ಯುಚ್ಯತೇ ॥"
—ಶ್ರೀವತ್ಸಾಂಕರ 'ಶ್ರೀಸ್ತವ'

"ಯಸ್ಯಾಸ್ತೇ ಮಹಿಮಾನಮಾತ್ಮನ ಇವ ತ್ವದ್ವಲ್ಲಭೋಽಪಿ ಪ್ರಭುಃ
ನಾಲಂ ಮಾತುಮಿಯತ್ತಯಾ ನಿರವಧಿಂ ನಿತ್ಯಾನುಕೂಲಂ ಸ್ವತಃ ।
ತಾಂ ತ್ವಾಂ ದಾಸ ಇತಿ ಪ್ರಪನ್ನ ಇತಿ ಸ್ತೋಷ್ಯಾಮ್ಯಹಂ ನಿರ್ಭರಃ
ಲೋಕೈಕೇಶ್ವರಿ ಲೋಕನಾಥದಯಿತೇ ದಾಂತೇ ದಯಾಂ ತೇ ವಿದನ್ ॥"
—ಯಾಮುನಾಚಾರ್ಯರ 'ಚತುಃಶ್ಲೋಕೀ']

ಕ್ರಿಯೆಯು ನಿಮಿತ್ತವಾಗಿರುವ ಕ್ರಿಯೆಯ ಅಭಾವಫಲೋತ್ಪ್ರೇಕ್ಷೆ– (28)

ಉಪಾತ್ತಗುಣನಿಮಿತ್ತಗುಣಸ್ವರೂಪೋತ್ಪ್ರೇಕ್ಷಾ— (೨೯)

ರಂಜಿತೋಽಂಬ ತ್ವಯಾ ವಕ್ಷಸ್ಯಾಸ್ಯೇ ಶುಭ್ರಸ್ಮಿತಶ್ರಿಯಾ ।
ಭಾತಿ ಭಕ್ತೇಷು ಭಗವಾನ್ಪ್ರಸಾದ ಇವ ಮೂರ್ತಿಮಾನ್ ॥೨೯॥

ಶುಭ್ರತ್ವಂ ನಿಮಿತ್ತಮ್. ಪ್ರಸಾದೋ ಗುಣಃ.

ಉಪಾತ್ತಗುಣನಿಮಿತ್ತಗುಣಾಭಾವಸ್ವರೂಪೋತ್ಪ್ರೇಕ್ಷಾ—(೩೦)

ಕಂಸಾದಿಷು ರುಷಾ ರಕ್ತಃ ಸ್ವವಕ್ತ್ರೇ ಭಾವವಿತ್ತ್ವವ ।
ದಿತ್ಸನ್ನಿಷ್ಟಂ ಬಹಿರ್ಮಾತರ್ನಿಷ್ಪ್ರಸಾದಃ ಪ್ರಭುರ್ಧ್ರುವಮ್ ॥೩೦॥

ರಕ್ತ ಇತಿ ನಿಮಿತ್ತಮ್. ನಿಷ್ಪ್ರಸಾದ ಇತಿ ಗುಣಾಭಾವಃ.

ಉಪಾತ್ತಕ್ರಿಯಾನಿಮಿತ್ತಗುಣಸ್ವರೂಪೋತ್ಪ್ರೇಕ್ಷಾ— (೩೧)

ಸಾಗಸ್ಯಪಿ ಚ ಪೌಲಸ್ತ್ಯೇ ಸುತವಾತ್ಸಲ್ಯವತ್ಯಪಿ ।
ನಿಷ್ಠುರಾಣ್ಯುದ್ಗಿರಂತ್ಯಾಸೀಶ್ಚರಿಷ್ಣುರಿವ ರುಟ್ ಕಥಮ್ ॥೩೧॥

ಉದ್ಗಿರಣಂ ನಿಮಿತ್ತಮ್. ರುಡಿತಿ ಗುಣಃ.

---

ಮಾತೆ, ಚಂದ್ರನು ಉದಯಿಸಿದಾಗ ನಿನ್ನ ಮುಖಕ್ಕೆ ಸದೃಶನಾದ ಅವನನ್ನು ನೋಡದಿರುವುದೇ ಗೃಹದ್ವಾರವನ್ನು ಮುಚ್ಚುವುದರ ಫಲವೇನು ?

ಇಲ್ಲಿ ಮುಚ್ಚುವ ಕ್ರಿಯೆಯು ನಿಮಿತ್ತ. ಅನವಲೋಕನವು (ಕ್ರಿಯೆಯ ಅಭಾವವು) ಫಲವಾಗಿದೆ.

[ಸದೃಶಃ – ಸದೃಕ್ ಶಬ್ದದ ಷಷ್ಠೀ ಏಕವಚನ. 'ವಿಧೋಃ' ಎಂಬುದಕ್ಕೆ ವಿಶೇಷಣ. ಗೃಹದ್ವಾರಃ – 'ದ್ವಾರ್' ಶಬ್ದದ ಷಷ್ಠೀ ಏಕವಚನ ರೂಪ 'ದ್ವಾರಃ'. 'ತಸ್ಯ ಪಿಧಾನಸ್ಯ ಫಲಂ ಕಿಮ್' ಇತ್ಯಾದಿ]

ಗುಣವನ್ನು ನಿಮಿತ್ತವಾಗಿ ಹೇಳಿರುವ ಗುಣಸ್ವರೂಪೋತ್ಪ್ರೇಕ್ಷೆ – (29)

ತಾಯಿ, ನಿನ್ನ ಶುಭ್ರ ಮಂದಹಾಸದ ಸಿರಿಯಿಂದ ಹೃದಯ ಮತ್ತು ಮುಖಗಳು ಬೆಳಗಿಸಲ್ಪಟ್ಟ ಪರಮಾತ್ಮನು ಭಕ್ತರಲ್ಲಿ ಮೂರ್ತಿವೆತ್ತ ಪ್ರಸಾದವೇನೋ ಎಂಬಂತೆ ಕಂಗೊಳಿಸುವನು. (29)

ಇಲ್ಲಿ ಶುಭ್ರತ್ವ (ಗುಣ) ನಿಮಿತ್ತ. ಪ್ರಸಾದವು ಗುಣ.

ಗುಣವನ್ನು ನಿಮಿತ್ತವಾಗಿ ಹೇಳಿರುವ ಗುಣದ ಅಭಾವಸ್ವರೂಪೋತ್ಪ್ರೇಕ್ಷೆ – (30)

ಮಾತೆ, ಕಂಸಾದಿಗಳ ಬಗ್ಗೆ ಕೋಪದಿಂದ ಕೆಂಪಾದ ಮುಖವುಳ್ಳವನಾದ ಪ್ರಭುವು ನಿನ್ನ ಪ್ರೇಮವನ್ನರಿತು ನಿನ್ನ ಇಷ್ಟವನ್ನು ನೆರವೇರಿಸುವವನಾದರೂ ಹೊರಗೆ ಪ್ರಸಾದರಹಿತನಾಗಿರುವುದು ನಿಶ್ಚಿತ! (30)

ಕೆಂಪಾಗಿರುವುದು (ಗುಣ) ನಿಮಿತ್ತ. ಪ್ರಸಾದರಹಿತ ಎಂಬುದು ಗುಣದ ಅಭಾವ.

ಕ್ರಿಯೆಯನ್ನು ನಿಮಿತ್ತವಾಗಿ ಹೇಳಿರುವ ಗುಣಸ್ವರೂಪೋತ್ಪ್ರೇಕ್ಷೆ – (31)

ಪಾಪಯುಕ್ತನಾದ ರಾವಣನಲ್ಲಿ ಪುತ್ರವಾತ್ಸಲ್ಯವುಳ್ಳವಳಾದರೂ ಹೇಗೆ ಕಟುವಾಕ್ಯಗಳನ್ನಾಡುತ್ತಾ ಚರಿಸುವ ರೋಷದಂತೆ ಇದ್ದೆ ! (31)

ಉಪಾತ್ತಕ್ರಿಯಾನಿಮಿತ್ತಗುಣಾಭಾವಸ್ವರೂಪೋತ್ಪ್ರೇಕ್ಷಾ—(೩೨)

ಯತಃ ಶ್ರುತಾಂಹಸಾಂ ಮಾತಃ ಸಾಧ್ವಸಂ ತನುಷೇ ಮಹತ್ ।
ಸರೋಜಸದನೇ ನೂನಂ ನಿಷ್ಕಾರುಣ್ಯಾಸಿ ತತ್ತ್ವತಃ ॥೩೨॥

ಸಾಧ್ವಸಕರಣಂ ನಿಮಿತ್ತಮ್. ನಿಷ್ಕಾರುಣ್ಯೇತಿ ಗುಣಾಭಾವಃ.

ಅನುಪಾತ್ತನಿಮಿತ್ತಗುಣಸ್ವರೂಪೋತ್ಪ್ರೇಕ್ಷಾ—(೩೩)

ಅಬ್ಧೇಸ್ತ್ವಯ್ಯವತೀರ್ಣಾಯಾಮಿಂದ್ರ ಇಂದ್ರಃ ಪುರಾಽಭವತ್ ।
ಅಶಾಂತರ್ಷಿಕೃತೇ ಕೃಚ್ಛ್ರೇ ಪ್ರಮೋದ ಇವ ಸಂಚರನ್ ॥೩೩॥

ನಿಮಿತ್ತಮನುಪಾತ್ತಮ್. ಪ್ರಮೋದೋ ಗುಣಃ.

ಅನುಪಾತ್ತನಿಮಿತ್ತಗುಣಾಭಾವಸ್ವರೂಪೋತ್ಪ್ರೇಕ್ಷಾ—(೩೪)

ಪದ್ಮೇ ಭವತ್ಕೃಪಾಲೋಕಪ್ರಾಪ್ತಸಂಪತ್ಸುಧಾಪ್ಲುತಃ ।
ಭಾತಿ ಕಾರ್ಪಣ್ಯಕಾಲಾಹಿಃ ಕ್ಷ್ವೇಲನೈಲ್ಯೋಜ್ಝಿತಃ ಕಿಲ ॥೩೪॥

ನಿಮಿತ್ತಮನುಪಾತ್ತಮ್. ನೈಲ್ಯೋಜ್ಝಿತಃ ಇತಿ ಗುಣಾಭಾವಃ.

---

ಹೊಮ್ಮಿಸುವುದು (ಕ್ರಿಯೆ) ನಿಮಿತ್ತ. ರೋಷವೆಂಬುದು ಗುಣ.

ಕ್ರಿಯೆಯನ್ನು ನಿಮಿತ್ತವಾಗಿ ಹೇಳಿರುವ ಗುಣದ ಅಭಾವಸ್ವರೂಪೋತ್ಪ್ರೇಕ್ಷೆ– (32)

ಮಾತೆ, ಶಿಷ್ಟರ ಪಾಪಗಳಿಗೆ ಅತ್ಯಂತ ಭಯವನ್ನುಂಟುಮಾಡುವೆಯಾದ್ದರಿಂದ, ಪದ್ಮಮುಖಿ, ನೀನು ತಾತ್ವಿಕವಾಗಿ ನಿಷ್ಕರುಣೆಯೇ ದಿಟ ! (32)

ಭಯವನ್ನುಂಟುಮಾಡುವುದು (ಕ್ರಿಯೆ) ನಿಮಿತ್ತ. ನಿಷ್ಕಾರುಣ್ಯವು ಗುಣದ ಅಭಾವ.

ನಿಮಿತ್ತವನ್ನು ಹೇಳದಿರುವ ಗುಣಸ್ವರೂಪೋತ್ಪ್ರೇಕ್ಷೆ– (33)

ದುರ್ವಾಸಮುನಿಯು ತಂದೊಡ್ಡಿದ ಕಷ್ಟದಲ್ಲಿ, ನೀನು ಸಮುದ್ರದಿಂದ ಅವತರಿಸಿದಾಗ ಇಂದ್ರನು ಆನಂದವೇ ತಾನೆಂಬಂತೆ ಸಂಚರಿಸಿ ಪರಮೈಶ್ವರ್ಯವಂತನಾದನು. (33)

ನಿಮಿತ್ತವನ್ನಿಲ್ಲಿ ಹೇಳಿಲ್ಲ. ಪ್ರಮೋದವು ಗುಣ.

[ಅಂಶಾಂತರ್ಷಿ – ಅಶಾಂತ + ಋಷಿ – ದುರ್ವಾಸಮುನಿ. ತಾನು ನೀಡಿದ ಹಾರವನ್ನು ಇಂದ್ರನು ಆನೆಗೆ ತೊಡಿಸಿದಾಗ ಆನೆ ತುಳಿದುಹಾಕಿದುದನ್ನು ಕಂಡು ಅಪಮಾನವಾಯಿತೆಂದು ಕುಪಿತನಾದ ದುರ್ವಾಸನು ಇಂದ್ರನ ರಾಜ್ಯಲಕ್ಷ್ಮಿಯು ಸಮುದ್ರದ ಪಾಲಾಗಲಿ ಎಂದು ಶಪಿಸಿದುದೇ ಆ ಕೃಚ್ಛ್ರ. 'ನೀಲಕಂಠ ವಿಜಯ ಚಂಪೂ'. ಪ್ರಥಮ ಸ್ತಬಕವನ್ನು ನೋಡಿರಿ].

ನಿಮಿತ್ತವನ್ನು ಹೇಳದಿರುವ ಗುಣಾಭಾವಹೇತೂತ್ಪ್ರೇಕ್ಷೆ– (34)

ಪದ್ಮೆ, ನಿನ್ನ ಕರುಣೆಯ ಬೆಳಕಿನಿಂದ ಒದಗಿದ ಸಂಪತ್ತೆಂಬ ಅಮೃತದಲ್ಲಿ ಮಿಂದು ಬಡತನವೆಂಬ ಕಾಲಸರ್ಪವು ವಿಷದ ಕಪ್ಪುವರ್ಣದಿಂದ ಬಿಡುಗಡೆಯಾದ ಹಾಗೆ ಬೆಳಗುತ್ತಿದೆ. (34)

ನಿಮಿತ್ತವನ್ನು ಹೇಳಿಲ್ಲ. ಕಪ್ಪುವರ್ಣದಿಂದ ಬಿಡುಗಡೆ ಎಂಬುದು ಗುಣಾಭಾವ.

ಗುಣನಿಮಿತ್ತಗುಣಹೇತೂತ್ಪ್ರೇಕ್ಷಾ—(೩೫)

ಕೌಸ್ತುಭದ್ಯುತಿಸಂಪರ್ಕಾದಿವ ಭಕ್ತಾನುರಾಗಿತಾ ।
ವಿಷ್ಣುವಕ್ಷೋನಿವಾಸಿನ್ಯಾಸ್ತವಾಂಬ ಹೃದಿ ಸುಸ್ಥಿರಾ ॥೩೫॥

ಸುಸ್ಥಿರತ್ವಂ ನಿಮಿತ್ತಮ್. ಸಂಪರ್ಕಾದಿತಿ ಗುಣಃ.

ಗುಣನಿಮಿತ್ತಗುಣಾಭಾವಹೇತೂತ್ಪ್ರೇಕ್ಷಾ — (೩೬)

ರಾಕಾಸ್ವೇವ ನ ಭೀಶ್ಚಂದ್ರೇ ನಾಬ್ಜೇಽಹ್ನೀತಿ ರಮೇ ತಯೋಃ ।
ಪ್ರಭಯೋಸ್ತ್ವನ್ಮುಖಾಸಂಗಃ ಸತತಂ ನಿರ್ಭಯಾದಿವ ॥೩೬॥

ಮುಖಾಸಂಗೋ ನಿಮಿತ್ತಮ್. ನಿರ್ಭಯಾದಿತಿ ಗುಣಾಭಾವಃ.

ಕ್ರಿಯಾನಿಮಿತ್ತಗುಣಹೇತೂತ್ಪ್ರೇಕ್ಷಾ — (೩೭)

ಸದಾ ಸಂನಿಹಿತಾತ್ಕಾಂತಾಕ್ಕಾಲಮೇಘಾದ್ಭಯಾದಿವ ।
ಸ್ಮಿತಹಂಸ್ಯಾರ್ಬಹಿರ್ಮಂದಂ ನಿರ್ಗಮಶ್ರೀಸ್ತ್ವಾನನಾತ್ ॥೩೭॥

ಮಂದಂ ನಿರ್ಗಮ ಇತಿ ನಿಮಿತ್ತಮ್. ಭಯಾದಿತಿ ಗುಣಃ.

ಕ್ರಿಯಾನಿಮಿತ್ತಗುಣಾಭಾವಹೇತೂತ್ಪ್ರೇಕ್ಷಾ — (೩೮)

ತ್ವದೀಯ ಚಕ್ಷುಶ್ಚಾತುರ್ಯದರ್ಶನೇ ಹ್ಯಸಹಿಷ್ಣುತಾ ।
ಹೇತುರ್ನೀಲಸರೋಜಸ್ಯ ನೂನಂ ನಿತ್ಯನಿಮೀಲನೇ ॥ ೩೮ ॥

ನಿಮೀಲನಕ್ರಿಯಾ ನಿಮಿತ್ತಮ್. ಅಸಹಿಷ್ಣುತೇತಿ ಗುಣಾಭಾವಸ್ಯ ಹೇತುತ್ವಮ್.

---

ಗುಣವು ನಿಮಿತ್ತವಾಗಿರುವ ಗುಣಹೇತೂತ್ಪ್ರೇಕ್ಷೆ–(35)

ತಾಯಿ, ವಿಷ್ಣುವಿನ ಹೃದಯದಲ್ಲಿ ವಾಸಿಸುವವಳಾದ ನಿನ್ನ ಭಕ್ತಾನುರಾಗವು ಕೌಸ್ತುಭ ಮಣಿಯ ಕಾಂತಿಯ ಸಂಪರ್ಕದಿಂದಲೋ ಏನೋ ನಿನ್ನ ಹೃದಯದಲ್ಲಿ ಸ್ಥಿರವಾಗಿದೆ. (35) ಇಲ್ಲಿ ಸುಸ್ಥಿರತ್ವ (ಗುಣವು) ನಿಮಿತ್ತ. ಸಂಪರ್ಕದಿಂದ ಎಂಬುದು ಗುಣ.

[ಅನುರಾಗ—ಕೆಂಪು, ಪ್ರೀತಿ. ಕೌಸ್ತುಭದ ಕಾಂತಿ ಕೆಂಪು]

ಗುಣವು ನಿಮಿತ್ತವಾಗಿರುವ ಗುಣದ ಅಭಾವಹೇತೂತ್ಪ್ರೇಕ್ಷೆ—(36)

ಹುಣ್ಣಿಮೆಯ ರಾತ್ರಿಗಳಲ್ಲಿ ಮಾತ್ರ ಚಂದ್ರನಿಗೆ ಮತ್ತು ಹಗಲಿನಲ್ಲಿ ಮಾತ್ರ ಕಮಲಕ್ಕೆ ಭಯವಿಲ್ಲ. ಆದ್ದರಿಂದ, ರಮೆ, ಆ ಎರಡರ ಕಾಂತಿಗಳು ನಿನ್ನ ಮುಖದ ಸಂಪರ್ಕ ಪಡೆದಿರುವುದು ಸತತ ನಿರ್ಭಯದ ಕಾರಣದಿಂದಲೋ ಏನೋ. (36)

ಮುಖದೊಡನೆ ಸಂಪರ್ಕವು (ಗುಣ) ನಿಮಿತ್ತ. ನಿರ್ಭಯದ ಕಾರಣದಿಂದಲೋ ಎಂಬುದು ಗುಣದ ಅಭಾವ.

ಕ್ರಿಯೆಯು ನಿಮಿತ್ತವಾಗಿರುವ ಗುಣಹೇತೂತ್ಪ್ರೇಕ್ಷೆ—(37)

ಯಾವಾಗಲೂ ಹತ್ತಿರವಿರುವ ನಿನ್ನ ಪ್ರಿಯನೆಂಬ ಕಪ್ಪುಮೇಘದ ಭಯದಿಂದಲೋ ಏನೋ ನಿನ್ನ ಮುಖದಿಂದ ಮಂದಹಾಸವೆಂಬ ಹಂಸವು ನಿಧಾನವಾಗಿ ಹೊರಗೆ ಸುಳಿಯುತ್ತಿದೆ. (37)

ಮಂದನಿರ್ಗಮವು (ಕ್ರಿಯೆ) ನಿಮಿತ್ತ. ಭಯದಿಂದ ಎಂಬುದು ಗುಣ.

ಕ್ರಿಯೆಯು ನಿಮಿತ್ತವಾಗಿರುವ ಗುಣದ ಅಭಾವಹೇತೂತ್ಪ್ರೇಕ್ಷೆ—(38)

ನೀಲಕಮಲವು ಯಾವಾಗಲೂ ತನ್ನ ದಲಗಳನ್ನು ಮುಚ್ಚಿಕೊಂಡಿರುವುದಕ್ಕೆ ಬಹುಶಃ ನಿನ್ನ ಕಣ್ಣುಗಳ ಸೌಂದರ್ಯವನ್ನು ಕಂಡು ಅಸಹನೆಯೇ ಕಾರಣ. (38)

ನಿಮೀಲನಕ್ರಿಯೆಯು ನಿಮಿತ್ತ. ಅಸಹನೆ ಎಂದು ಗುಣದ ಅಭಾವವು ಹೇತುವಾಗಿದೆ.

ಗುಣನಿಮಿತ್ತಗುಣಫಲೋತ್ಪ್ರೇಕ್ಷಾ — (೩೯)

ವಿಭುಹಸ್ತಾಬ್ಜತೌಲ್ಯಾರ್ಥಮಿವಾಬ್ಜಸ್ತ್ಯಾಂಬ ತೇ ಕರೇ ।
ಸಂಗಸ್ತಸ್ಯೇಶನೇತ್ರಾಭ್ಯಾಂ ನಿದ್ರಾಬೋಧಶ್ಚ ಯತ್ತದಾ ॥೩೯॥

ಅತ್ರ ಕಮಲಸ್ಯ ಭಗವತ್ಕರಸ್ಥಶಂಖೇನ ಸಾದೃಶ್ಯಂ ಫಲಮ್. ಕಮಲಾಕರಾಸಂಗೋ ನಿಮಿತ್ತಮ್. ಸಾದೃಶ್ಯಂ ಪುನರ್ಭಗವತೋ ದೇವ್ಯಾಶ್ಚ ಕರಸ್ಥಿತತ್ವಾದ್ವಲಗ್ನೂಪಾಭ್ಯಾಂ ಸೂರ್ಯಚಂದ್ರಾಭ್ಯಾಂ ಪಾರ್ಶ್ವಭೇದೇನ ವಿಕಸನನಿಮೀಲನಯೌಗಪದ್ಯಸಂಭವಾಚ್ಚೋಪಪದ್ಯತೇ. ನನು ಸಾದೃಶ್ಯಸ್ಯೈವ ಪರಮಾರ್ಥತಃ ಫಲತ್ವಮುಪವರ್ಣಿತಮ್, ತಥಾ ಸತಿ ಅಫಲಸ್ಯ ಫಲತ್ವೇನ ಭಾವನಾ ಫಲೋತ್ಪ್ರೇಕ್ಷೇತಿ ನಿಯಮಭಂಗ ಇತಿ ಚೇನ್ನ. ಕಮಲಾಕ್ರಿಡೋಪಕರಣತ್ವಸ್ಯೈವ ಫಲತ್ವಾತ್. ಸಾದೃಶ್ಯಂತು ಸಂಗತಿವಿಶೇಷಾಪಾದನೇನ ಕವಿನಾ ನಿಬದ್ಧಮಿತ್ಯನವದ್ಯಮ್.

---

[ಚಾತುರ್ಯಮ್—ಚತುರಸ್ಯ ಭಾವಃ ; ಚತುರ ಎಂದರೆ ಸುಂದರ, ಮನೋಹರ, ಎಂದರ್ಥ ಇಲ್ಲಿ. 'ನ ಪುನರೇತಿ ಗತಂ ಚತುರಂ ವಯಃ' (ರಘುವಂಶ, 9-47) ನೋಡಿರಿ]

ಗುಣವು ನಿಮಿತ್ತವಾಗಿರುವ ಗುಣಫಲೋತ್ಪ್ರೇಕ್ಷೆ—(39)

ಪ್ರಭುವಿನ ಹಸ್ತದಲ್ಲಿರುವ ಶಂಖದೊಡನೆ ಸಾದೃಶ್ಯ ಪಡೆಯುವುದಕ್ಕೋಸ್ಕರವೋ ಏನೋ ಕಮಲವು ನಿನ್ನ ಹಸ್ತದ ಸಂಪರ್ಕವನ್ನು ಹೊಂದಿದೆ, ಏಕೆಂದರೆ ಅದಕ್ಕೆ ಪ್ರಭುವಿನ ಕಣ್ಣುಗಳಿಂದ ನಿಮೀಲನ-ಉನ್ಮೀಲನಗಳು ಸಂಭವಿಸುತ್ತವೆ. (39)

ಇಲ್ಲಿ ಕಮಲಕ್ಕೆ ಭಗವಂತನ ಕೈಯಲ್ಲಿರುವ ಶಂಖದೊಡನೆ ಸಾದೃಶ್ಯ (ಗುಣ)ವೇ ಫಲ. ಲಕ್ಷ್ಮಿಯ ಹಸ್ತಸಂಪರ್ಕವು ನಿಮಿತ್ತ. ಸಾದೃಶ್ಯವಾದರೋ ಭಗವಂತ ಮತ್ತು ದೇವಿಯರ ಹಸ್ತಗಳಲ್ಲಿರುವಿಕೆಯಿಂದಲೂ, ಕಣ್ಣುಗಳ ರೂಪದಲ್ಲಿರುವ ಸೂರ್ಯ-ಚಂದ್ರರಿಂದ ಅರ್ಧ ಅರಳುವುದು ಮತ್ತು ಅರ್ಧ ಮುಚ್ಚಿಕೊಂಡಿರುವುದು, ಇವುಗಳ ಸಮಕಾಲಿಕತ್ವದಿಂದಲೂ ಉಂಟಾಗುತ್ತದೆ. ಆದರೆ ಸಾದೃಶ್ಯವನ್ನೇ ಅಂತಿಮವಾಗಿ ಫಲವನ್ನಾಗಿ ವರ್ಣಿಸಲಾಗಿದೆ ಎಂದರೆ 'ಫಲವಲ್ಲದುದು ಫಲವೆಂದು ಭಾವಿಸುವುದೇ ಫಲೋತ್ಪ್ರೇಕ್ಷೆ' ಎಂಬ ನಿಯಮವನ್ನು ಮುರಿದ ಹಾಗಾಯಿತಲ್ಲ ಎಂದು ಕೇಳಿದರೆ, ಅದಕ್ಕೆ ಉತ್ತರ, 'ಇಲ್ಲ' ಎಂದು, ಏಕೆಂದರೆ, ಲಕ್ಷ್ಮಿಗೆ ಆಟದ ಉಪಕರಣವಾಗಿರುವುದೇ ಫಲವಾದ್ದರಿಂದ ಸಾದೃಶ್ಯವನ್ನಾದರೋ, ವಿಶೇಷವಾದ ಸಂಬಂಧವನ್ನು ನೀಡಿ, ಕವಿಯು ಕಲ್ಪಿಸಿರುವುದರಿಂದ ದೋಷವಿಲ್ಲ.

['ಅಬ್ಜ' ಶಬ್ದವು ಎರಡು ಸಾರಿ ಬಂದಿವೆ. ಮೊದಲ 'ಅಬ್ಜ' ಶಬ್ದಕ್ಕೆ ಶಂಖವೆಂದೂ, ಎರಡನೆಯದಕ್ಕೆ ಕಮಲವೆಂದೂ ಅರ್ಥಮಾಡಿಕೊಳ್ಳಬೇಕು. 'ಅಬ್ಜೌ ಶಂಖ ಶಶಾಂಕೌ ಚ' (ಅಮರ. 2399)]

ಗುಣನಿಮಿತ್ತಗುಣಾಭಾವಫಲೋತ್ಪ್ರೇಕ್ಷಾ — (೪೦)

ನೇತುರ್ನಿತ್ಯಾನುಷಕ್ತಾಯಾಮುರಸ್ಯಾಂಬ ತ್ವಯೀಂದಿರೇ ।
ಸಪತ್ನ್ಯಾಂ ಕಿಮವೈರಾಯ ಕ್ಷಮಾಽಶ್ರಾಂತಾನುಷಂಗಿಣೀ ॥೪೦॥

ಅಶ್ರಾಂತಾನುಷಂಗೋ ನಿಮಿತ್ತಮ್. ಅವೈರಾಯೇತಿ ಗುಣಾಭಾವಃ. ಕ್ಷಮಾ ಭೂಮಿಃ ಕ್ಷಾಂತಿಶ್ಚ. ಭೂದೇವ್ಯಾ ರಮಾಶ್ರಯಣೇನ ಪತಿವಾಲ್ಲಭ್ಯಮಿತ್ಯರ್ಥಃ. ಇಯಂ ರಮಾ ಸಂತತಕ್ಷಾಂತಿವಿಶಿಷ್ಟೇತಿ ಶ್ಲೇಷಸಂಕೀರ್ಣಾ.

ಕ್ರಿಯಾನಿಮಿತ್ತಗುಣಫಲೋತ್ಪ್ರೇಕ್ಷಾ — (೪೧)

ಯುವತ್ವಸತ್ಯವಾಕ್ ಕ್ಷಾಂತಿಮುಖಾಃ ಪದ್ಮೇಽಖಿಲಾ ಗುಣಾಃ ।
ಸಹವಾಸಸುಖಾಯೇವ ನಿತ್ಯಾವತರಣಾಸ್ತ್ವಯಿ ॥೪೧॥

ಅತ್ರಾವತರಣಕ್ರಿಯಾ ನಿಮಿತ್ತಮ್. ಸುಖಾಯೇತಿ ಗುಣಃ.

ಕ್ರಿಯಾನಿಮಿತ್ತಗುಣಾಭಾವಫಲೋತ್ಪ್ರೇಕ್ಷಾ—(೪೨)

ಪ್ರಸ್ಥಾನೇ ಪರಿತಸ್ತೇಽಕ್ಷ್ಣೋ ಮಾತಃ ಸಿತಾಕೃತೇರ್ಮುಖೇ ।
ದರ್ಶನಂ ದ್ವಿಜಯುಗ್ಮಸ್ಯ ನಿರ್ವಿಘ್ನಮಿವ ಶೈಶವೇ ॥ ೪೨ ॥

ದರ್ಶನಕ್ರಿಯಾ ನಿಮಿತ್ತಮ್. ನಿರ್ವಿಘ್ನಂ ವಿಘ್ನಾಭಾವಾಯೇತಿ ಫಲಮ್. ದ್ವಿಜ ಯುಗ್ಮಂ ವಿಪ್ರಯುಗ್ಮಂ ದಂತಯುಗ್ಮಂ ಚ. ಲೋಕೇ ಹಿ ಶಿಶೂನಾಂ ಪ್ರಾಯೇಣ

---

ಗುಣವು ನಿಮಿತ್ತವಾಗಿರುವ ಗುಣದ ಅಭಾವಫಲೋತ್ಪ್ರೇಕ್ಷೆ—(40)

ಇಂದಿರೆ, ಪ್ರಭುವಿನ ಹೃದಯಸ್ಥಾನದಲ್ಲಿ ಸದಾ ನೀನು ನೆಲೆಸಿರಲು ಭೂದೇವಿಯು ದ್ವೇಷ ನಿವಾರಣೆಗೋಸ್ಕರವೋ ಏನೋ ಸಪತ್ನಿಯಲ್ಲಿ (ನಿನ್ನಲ್ಲಿ) ಎಡಬಿಡದೆ ಸಂಪರ್ಕಹೊಂದಿರುವಳು. (40)

ಎಡೆಬಿಡದೆ ಸಂಪರ್ಕ ಹೊಂದಿರುವುದು (ಗುಣ) ನಿಮಿತ್ತ. ದ್ವೇಷನಿವಾರಣೆಗೋಸ್ಕರ ಎಂಬುದು ಗುಣದ ಅಭಾವ. 'ಕ್ಷಮಾ' ಎಂದರೆ ಭೂಮಿ ಮತ್ತು ಕ್ಷಮಾಗುಣ. ಭೂದೇವಿಗೆ ಶ್ರೀದೇವಿಯ ಆಶ್ರಯದಿಂದಲೇ ಪತಿಯ ಪ್ರೇಮವು ದೊರೆಯುವುದು ಎಂದರ್ಥ. ಈ ಲಕ್ಷ್ಮಿಯು ಸದಾ ಕ್ಷಮಾಗುಣವಿಶಿಷ್ಟಳೆಂದು ಶ್ಲೇಷಾರ್ಥದಿಂದೊಡಗೂಡಿದೆ (ಈ ಉತ್ಪ್ರೇಕ್ಷೆ).

ಕ್ರಿಯೆಯು ನಿಮಿತ್ತವಾಗಿರುವ ಗುಣಫಲೋತ್ಪ್ರೇಕ್ಷೆ—(41)

ಪದ್ಮೆ, ಯೌವನ, ಸತ್ಯನುಡಿ, ಕ್ಷಮೆ ಮುಂತಾದ ಸಕಲ ಗುಣಗಳು ಸಹವಾಸದ ಸುಖಕ್ಕೋಸ್ಕರವೋ ಏನೋ ನಿನ್ನಲ್ಲಿ ಅವತರಿಸಿವೆ. (41)

ಇಲ್ಲಿ ಅವತರಣಕ್ರಿಯೆಯು ನಿಮಿತ್ತ. ಸುಖಕ್ಕೋಸ್ಕರ ಎಂಬುದು ಗುಣ.

ಕ್ರಿಯೆಯು ನಿಮಿತ್ತವಾಗಿರುವ ಗುಣದ ಅಭಾವಫಲೋತ್ಪ್ರೇಕ್ಷೆ–(42)

ಮಾತೆ, ನಿನ್ನ ಮುಖದಲ್ಲಿ ಶುಭ್ರವರ್ಣದ ಕಣ್ಣಿನ ಸುತ್ತೆಲ್ಲಾ ಪಯಣದಲ್ಲಿ (ಬೆಳವಣಿಗೆಯಲ್ಲಿ) ಬಾಲ್ಯದಲ್ಲಿಯಂತೆ ದ್ವಿಜಯುಗ್ಮದ ದರ್ಶನವು ವಿಘ್ನನಿವಾರಣೆಗಾಗಿಯೋ ಏನೋ. (42)

ಪ್ರಥಮಂ ದ್ವಯೋರ್ದಂತಯೋರ್ಯುಗಪದುತ್ಪತ್ತಿಃ. ಪ್ರಯಾಣಸಮಯೇ ವಿಪ್ರಯುಗ್ಮದರ್ಶನಂ ಚೇನ್ನಿರ್ವಿಘ್ನಂ ಶುಭದಂ ಚ ಭವತಿ ಪ್ರಯಾಣಮಿತಿ ಶಾಸ್ತ್ರಪ್ರಸಿದ್ಧಮ್. ನೇತ್ರೇ ಅತಿವಿಶಾಲೇ ಇತ್ಯರ್ಥಃ.

ಉಪಾತ್ತಗುಣನಿಮಿತ್ತದ್ರವ್ಯಸ್ವರೂಪೋತ್ಪ್ರೇಕ್ಷಾ—(೪೩)

ಕಾಂತಾಸ್ಯಂ ತ್ವತ್ಕೃಪಾಸಿಕ್ತಾಃ ಸೌಧೇ ಸ್ವರ್ಗಸ್ಪೃಶಿ ಸ್ಥಿತಾಃ ।
ಪಶ್ಯಂತಿ ಪರಭಾಗಂ ಶ್ರೀರಿಂದೋರಿವ ಸುನಿರ್ಮಲಮ್ ॥ ೪೩ ॥

ನೈರ್ಮಲ್ಯಮಿತಿ ನಿಮಿತ್ತಮ್. ಇಂದೋಃ ಪರಭಾಗಸ್ಯ ದ್ರವ್ಯತ್ವಮ್.

ಉಪಾತ್ತಗುಣನಿಮಿತ್ತದ್ರವ್ಯಾಭಾವಸ್ವರೂಪೋತ್ಪ್ರೇಕ್ಷಾ—(೪೪)

ದುಗ್ಧಾಬ್ಧೇರ್ಮಾತರುತ್ಥಾಯ ಸ್ಮಿತಪೂರ್ವಂ ವಿಭೋರುರಃ ।
ಪಶ್ಯಂತ್ಯಾಂ ತ್ವಯಿ ವಸ್ತುಂ ತತ್ಕಿಂ ವಿಲಕ್ಷ್ಮ ಕ್ಷಣಂ ಸಿತಮ್ ॥ ೪೪ ॥

ಸಿತತ್ವಂ ನಿಮಿತ್ತಮ್. ವಿಲಕ್ಷ್ಮೇತಿ ದ್ರವ್ಯಾಭಾವಃ. ಪ್ರಕೃತಶ್ರೀವತ್ಸಾಭಿಧಾಯಿತ್ವಾಲ್ಲಕ್ಷ್ಮಶಬ್ದಸ್ಯ ದ್ರವ್ಯವಾಚಿತ್ವಮ್. ಕ್ಷಣಪದೇನ ದೇವ್ಯಾಶ್ಚಕ್ಷುಷಿ ನೈರ್ಮಲ್ಯರೂಪಂ ವಸ್ತು ಧ್ವನ್ಯತ ಇತಿ ವಸ್ತುನಾ ವಸ್ತುಧ್ವನಿಃ.

---

ದರ್ಶನ ಕ್ರಿಯೆಯು ನಿಮಿತ್ತ. ನಿರ್ವಿಘ್ನ ಎಂದರೆ ವಿಘ್ನದ ಅಭಾವಕ್ಕೋಸ್ಕರ ಎಂದು; ಇದು ಫಲ. 'ದ್ವಿಜಯುಗ್ಮಂ' ಎಂದರೆ ಜೋಡಿಬ್ರಾಹ್ಮಣರು ಮತ್ತು ಜೊತೆ ಹಲ್ಲುಗಳು ಎಂದರ್ಥ. ಲೋಕದಲ್ಲಿ ಬಹುಶಃ ಶಿಶುಗಳಿಗೆ ಮೊದಲು ಎರಡು ಹಲ್ಲುಗಳು ಜೊತೆಗೆ ಹುಟ್ಟುವುದು ಕಂಡುಬರುತ್ತದೆ. ಪ್ರಯಾಣ ಕಾಲದಲ್ಲಿ ಬ್ರಾಹ್ಮಣ ಜೋಡಿಯ ದರ್ಶನವು ವಿಘ್ನರಹಿತವೂ ಶುಭವನ್ನು ತರುವುದೂ ಆಗುವುದೆಂದು ಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ. ನೇತ್ರಗಳು ಅತಿ ವಿಶಾಲವಾಗಿವೆ ಎಂದರ್ಥ.

ಗುಣವು ನಿಮಿತ್ತವಾಗಿರುವ ದ್ರವ್ಯಸ್ವರೂಪೋತ್ಪ್ರೇಕ್ಷೆ – (43)

ನಿನ್ನ ಕೃಪೆಯಲ್ಲಿ ಮಿಂದವರು ಗಗನಚುಂಬಿಯಾದ ಭವನದಲ್ಲಿ ನಿಂತು ತಮ್ಮ ಪ್ರಿಯತಮೆಯ ಮುಖವನ್ನು ಸುನಿರ್ಮಲವಾದ ಚಂದ್ರನ ಶ್ರೇಷ್ಠಭಾಗವೇನೋ ಎಂಬಂತೆ ಕಾಣುವರು. (43)

ನೈರ್ಮಲ್ಯವೆಂಬುದು (ಗುಣ) ನಿಮಿತ್ತ. ಚಂದ್ರನ ಶ್ರೇಷ್ಠಭಾಗವು ದ್ರವ್ಯ.

ಗುಣವನ್ನು ನಿಮಿತ್ತವಾಗಿ ಹೇಳಿರುವ ದ್ರವ್ಯದ ಅಭಾವಸ್ವರೂಪೋತ್ಪ್ರೇಕ್ಷೆ – (44)

ತಾಯಿ, ನೀನು ಹಾಲ್ಗಡಲಿನಿಂದ ಹೊರಹೊಮ್ಮಿ ಮಂದಹಾಸಪೂರ್ವಕವಾಗಿ ಪ್ರಭುವಿನ ಹೃದಯಸ್ಥಾನವನ್ನು ವಾಸಿಸುವ ಉದ್ದೇಶದಿಂದ ನೋಡುತ್ತಿರಲು ಅದು ಒಂದು ಕ್ಷಣ ಶ್ರೀವತ್ಸಚಿಹ್ನೆಯಿಲ್ಲದುದೋ ಎಂಬಂತೆ ಧವಲಿತವಾಯಿತು. (44)

ಸಿತತ್ವವು (ಗುಣ) ನಿಮಿತ್ತ. ವಿಲಕ್ಷ್ಮ ಎಂಬುದು ದ್ರವ್ಯದ ಅಭಾವ. ಈ ಸಂದರ್ಭದಲ್ಲಿ ಶ್ರೀವತ್ಸವೆಂಬ ಹೆಸರಿನಿಂದ ಕರೆಯಲ್ಪಡುವುದರಿಂದ ಲಕ್ಷ್ಮಶಬ್ದವು ದ್ರವ್ಯವನ್ನು ಹೇಳುತ್ತದೆ. 'ಕ್ಷಣ' ಪದದಿಂದ ದೇವಿಯ ಕಣ್ಣುಗಳಲ್ಲಿ ಶುಭ್ರತೆ ಇದೆ ಎಂಬ ವಸ್ತು ಧ್ವನಿತವಾಗುತ್ತದೆಯಾದ್ದರಿಂದ ವಸ್ತುವಿನಿಂದ ವಸ್ತುಧ್ವನಿ.

ಉಪಾತ್ತಕ್ರಿಯಾನಿಮಿತ್ತದ್ರವ್ಯಸ್ವರೂಪೋತ್ಪ್ರೇಕ್ಷಾ— (೪೫)

ಮೃದುಶ್ಚಿಂತಾಮಣಿರ್ನೂನಂ ತ್ವತ್ಪದೋರ್ಯುಗಲಂ ರಮೇ ।
ಸರ್ವಸ್ಯ ಸರ್ವದಂ ಯದ್ವಾ ನಾರ್ಹತ್ಯೇತಾಂ ಸ ವೈಖರೀಮ್ ॥ ೪೫ ॥

ಸರ್ವದತ್ವಂ ನಿಮಿತ್ತಮ್. ಚಿಂತಾಮಣಿರಿತಿ ದ್ರವ್ಯವಾಚೀ. ಪ್ರಥಮಂ ಸರ್ವದತ್ವಂ ನಿಮಿತ್ತೀಕೃತ್ಯ ಲಕ್ಷ್ಮ್ಯಾಃ ಪಾದಯುಗಲೇ ಮಾರ್ದವವಿಶಿಷ್ಟಚಿಂತಾಮಣಿತ್ವಾರೋಪಣಾದುತ್ಪ್ರೇಕ್ಷಾ. ರಮಾಯಾಃ (?) ಪಾದಯುಗಲೇ ಆಬ್ರಹ್ಮಕೀಟಂ ಪುರುಷಾರ್ಥಚತುಷ್ಟಯಪ್ರದಾತೃತ್ವಂ, ತತ್ರ ತದಭಾವಂ ಚ ವಿಚಾರ್ಯ ಯದ್ವೇತ್ಯಾದಿನಾ ಚಿಂತಾಮಣಿತ್ವನಿಷೇಧಾದಾಕ್ಷೇಪಃ ಇತ್ಯನಯೋಃ ಸಾಂಕರ್ಯಮ್. 'ಆಕ್ಷೇಪಃ ಸ್ವಯಮುಕ್ತಸ್ಯ ಪ್ರತಿಷೇಧೋ ವಿಚಾರಣಾತ್' ಇತಿ ಲಕ್ಷಣಾತ್.

ಉಪಾತ್ತಕ್ರಿಯಾನಿಮಿತ್ತದ್ರವ್ಯಾಭಾವಸ್ವರೂಪೋತ್ಪ್ರೇಕ್ಷಾ— (೪೬)

x x x x x x x x ತರಂಗಾನಿವ ಯಾಮುನಾನ್ ।
x x ಹರಿರ್ಭೃಶಂ ನೈಲ್ಯಧೃತೇರ್ನೂನಂ ವಿಕೌಸ್ತುಭಃ ॥ ೪೬ ॥

ನೈಲ್ಯಧಾರಣಂ ನಿಮಿತ್ತಮ್. ವಿಕೌಸ್ತುಭ ಇತಿ ದ್ರವ್ಯಾಭಾವಃ. ಅನುಗುಣಸಾಂಕರ್ಯಂ ಕಟಾಕ್ಷಸಾಂನಿಧ್ಯಾನ್ನೈಲ್ಯಾತಿಶಯವರ್ಣನಾತ್, 'ಪ್ರಾಕ್‌ಸಿದ್ಧಸ್ವಗುಣೋತ್ಕರ್ಷೋಽನುಗುಣಃ ಪರಸಂನಿಧೇಃ' ಇತಿ ಲಕ್ಷಣಾತ್.

---

ಕ್ರಿಯೆಯನ್ನು ನಿಮಿತ್ತವಾಗಿ ಹೇಳಿರುವ ದ್ರವ್ಯಸ್ವರೂಪೋತ್ಪ್ರೇಕ್ಷೆ – (45)

ರಮೆ, ಎಲ್ಲರಿಗೂ ಎಲ್ಲವನ್ನೂ ನೀಡುವ ನಿನ್ನ ಪದಯುಗ್ಮವು ನಿಜವಾಗಿಯೂ ಮೃದುವಾದ ಚಿಂತಾಮಣಿಯಾಗಿರಲೇಬೇಕು. ಇಲ್ಲವಾದರೆ ಅದು (ಚಿಂತಾಮಣಿಯು) ಈ ಹೆಸರಿನಿಂದ ಕರೆಸಿಕೊಳ್ಳಲು ಯೋಗ್ಯವಲ್ಲ. (45)

ಎಲ್ಲವನ್ನೂ ನೀಡುವುದು (ಕ್ರಿಯೆ) ನಿಮಿತ್ತ. ಮೊದಲು ಎಲ್ಲವನ್ನೂ ನೀಡುವುದನ್ನೇ ನಿಮಿತ್ತವಾಗಿಟ್ಟುಕೊಂಡು ಲಕ್ಷ್ಮಿಯ ಪಾದದ್ವಯದಲ್ಲಿ ಮೃದುತ್ವದಿಂದ ಕೂಡಿದ ಚಿಂತಾಮಣಿತ್ವವನ್ನು ಆರೋಪಮಾಡಿರುವುದರಿಂದ ಉತ್ಪ್ರೇಕ್ಷೆ. ಮತ್ತೆ ಲಕ್ಷ್ಮಿಯ (?) ಪಾದಯುಗ್ಮದಲ್ಲಿ ಬ್ರಹ್ಮನಿಂದ ಕ್ರಿಮಿಯವರೆಗೆ ಎಲ್ಲರಿಗೂ ನಾಲ್ಕು ಪುರುಷಾರ್ಥಗಳನ್ನು ನೀಡುವ ಶಕ್ತಿಯನ್ನೂ ಮತ್ತು ಇನ್ನೊಂದರಲ್ಲಿ (ಚಿಂತಾಮಣಿಯಲ್ಲಿ) ಅಂತಹ ಶಕ್ತಿಯ ಅಭಾವವನ್ನೂ ಪರಿಗಣಿಸಿ 'ಯದ್ವಾ' ಇತ್ಯಾದಿ ವಾಕ್ಯದಿಂದ ಚಿಂತಾಮಣಿತ್ವದ ನಿಷೇಧವಿರುವುದರಿಂದ ಆಕ್ಷೇಪಾಲಂಕಾರ. ಹೀಗೆ ಇವೆರಡರ ಸಂಕರವಿದೆ. 'ಆಕ್ಷೇಪಃ ಸ್ವಯಮುಕ್ತಸ್ಯ ಪ್ರತಿಷೇಧೋ ವಿಚಾರಣಾತ್' ಎಂಬುದು ಆಕ್ಷೇಪದ ಲಕ್ಷಣವಾಗಿದೆ. (ಕುವ. ಕಾ. 73)

ಕ್ರಿಯೆಯನ್ನು ನಿಮಿತ್ತವಾಗಿ ಹೇಳಿರುವ ದ್ರವ್ಯದ ಅಭಾವಸ್ವರೂಪೋತ್ಪ್ರೇಕ್ಷೆ – (46)

(ಪ್ರತಿಯಲ್ಲಿ ಈ ಭಾಗವನ್ನು ಹುಳ ತಿಂದಿರುವುದರಿಂದ ಕೇವಲ ಉತ್ತರಾರ್ಧದ ಅರ್ಥ ನೀಡಿದೆ). (ಲಕ್ಷ್ಮಿಯ ಕಟಾಕ್ಷಗಳ ಸ್ಪರ್ಶದಿಂದ) ಹರಿಯು ನೀಲವರ್ಣವನ್ನು ಧರಿಸಿರುವುದರಿಂದ ಕೌಸ್ತುಭವಿಲ್ಲದಂತೆಯೋ ಏನೋ ಆಗಿರುವನು. (46)

ಅನುಪಾತ್ತನಿಮಿತ್ತದ್ರವ್ಯಸ್ವರೂಪೋತ್ಪ್ರೇಕ್ಷಾ—(೪೭)

ತ್ವತ್ಕೃಪಾಲೇಶವಿಷಯ x x x x x x x x x x ।
x x x x x x ಚರಃ ಪುರಂದರ ಇವೇಂದಿರೇ ॥ ೪೭ ॥

ಅತ್ರ ಪರಮೈಶ್ವರ್ಯಾದಿ–ನಿಮಿತ್ತಮನುಪಾತ್ತಮ್. ಪುರಂದರ ಇತಿ ದ್ರವ್ಯವಾಚೀ.

ಅನುಪಾತ್ತನಿಮಿತ್ತದ್ರವ್ಯಾಭಾವಸ್ವರೂಪೋತ್ಪ್ರೇಕ್ಷಾ—(೪೮)

ಜಿಷ್ಣೋರ್ದುಷ್ಕರ್ಮಣೋऽಮಾರ್ತಃ ಪರಾಙ್ಮುಖ್ಯಾಂ ಪುರಾ ತ್ವಯಿ ।
ಸುಧರ್ಮಾ ಸ ಇವ x x ಶಂಕೇ ನಿರ್ಧಿಷಣಾ ಸಭಾ ॥ ೪೮ ॥

ಅತ್ರ ನಿರ್ಧಿಷಣಾ ಬೃಹಸ್ಪತಿರಹಿತೇತಿ ದ್ರವ್ಯಾಭಾವಃ. ನಿಮಿತ್ತಮನುಪಾತ್ತಮ್. ಸತ್ಯಪಿ ಗುರೌ ಐಶ್ವರ್ಯಹಾನೇಃ ಸುಧರ್ಮಾಯಾಃ ತದ್ರಾಹಿತ್ಯಮುತ್ಪ್ರೇಕ್ಷಿತಮ್. ಸ ಇವ ಜಿಷ್ಣುರಿವ ಇತ್ಯುಪಮಾ ಚ. ನಿರ್ಧಿಷಣತ್ವಂ ಬುದ್ಧಿರಾಹಿತ್ಯಂ, ಸಾ ಚ ಶ್ಲೇಷೋಜ್ಜೀವಿತಾ.

---

ನೀಲವರ್ಣವನ್ನು ಧರಿಸುವುದು (ಕ್ರಿಯೆ) ನಿಮಿತ್ತ. 'ವಿಕೌಸ್ತುಭಃ' (ಕೌಸ್ತುಭವಿಲ್ಲದಿರುವುದು) ದ್ರವ್ಯದ ಅಭಾವ. ಕಟಾಕ್ಷದ ಸಾಮೀಪ್ಯದಿಂದ ನೀಲವರ್ಣದ ಅತಿಶಯವನ್ನು ವರ್ಣಿಸಿರುವುದರಿಂದ, ಇಲ್ಲಿ ಅನುಗುಣಾಲಂಕಾರದೊಡನೆ ಸಂಕರವೂ ಇದೆ. 'ಪ್ರಾಕ್‌ಸಿದ್ಧಸ್ವಗುಣೋತ್ಕರ್ಷೋऽನುಗುಣಃ ಪರಸಂನಿಧೇಃ' ಇದು ಅನುಗುಣದ ಲಕ್ಷಣ. (ಕುವ. ಕಾ. 145).

ನಿಮಿತ್ತವನ್ನು ಹೇಳದಿರುವ ದ್ರವ್ಯಸ್ವರೂಪೋತ್ಪ್ರೇಕ್ಷೆ–(47)

(ಪ್ರತಿಯಲ್ಲಿ ಹುಳು ತಿಂದುಹಾಕಿರುವುದರಿಂದ ಇಡೀ ಶ್ಲೋಕದ ಅರ್ಥವನ್ನು ಊಹಿಸಲು ಸಾಧ್ಯವಿಲ್ಲದುದಕ್ಕೆ ವಿಷಾದಿಸುತ್ತೇನೆ. ವೃತ್ತಿಯ ಭಾಷಾಂತರವನ್ನು ಮಾತ್ರ ಕೆಳಗೆ ಕೊಟ್ಟಿದ್ದೇನೆ).

ಇಲ್ಲಿ ಪರಮೈಶ್ವರ್ಯ ಮುಂತಾದ ನಿಮಿತ್ತವನ್ನು ಹೇಳಿಲ್ಲ. 'ಪುರಂದರ' ಎಂಬುದು ದ್ರವ್ಯವನ್ನು ಹೇಳುತ್ತದೆ.

ನಿಮಿತ್ತವನ್ನು ಹೇಳದಿರುವ ದ್ರವ್ಯದ ಅಭಾವಸ್ವರೂಪೋತ್ಪ್ರೇಕ್ಷೆ– (48)

ಮಾತೆ, ಹಿಂದೆ ದುಷ್ಕರ್ಮಿಯಾದ ಇಂದ್ರನಿಂದ ನೀನು ವಿಮುಖಳಾಗಿದ್ದಾಗ, ದೇವಸಭೆಯು ಅವನಂತೆಯೇ ಧಿಷಣ ಇಲ್ಲದುದೋ (ಬೃಹಸ್ಪತಿ-ಗುರು. ಬುದ್ಧಿ) ಎಂಬಂತೆ ಆಯಿತು. (48)

ಇಲ್ಲಿ 'ನಿರ್ಧಿಷಣಾ' ಎಂದರೆ ಬೃಹಸ್ಪತಿಯಿಲ್ಲದುದು ಎಂದರ್ಥ; ಇದು ದ್ರವ್ಯದ ಅಭಾವ. ನಿಮಿತ್ತವನ್ನು ಹೇಳಿಲ್ಲ. ಗುರುವಿದ್ದರೂ ಐಶ್ವರ್ಯವು ನಾಶವಾಗಿರುವುದರಿಂದ ದೇವಸಭೆಯಲ್ಲಿ ಅವನಿಲ್ಲವೆಂಬಂತೆ ಉತ್ಪ್ರೇಕ್ಷಿಸಲಾಗಿದೆ. ಅವನ ಹಾಗೆ ಅಂದರೆ ಇಂದ್ರನ ಹಾಗೆ ಎಂದು ಉಪಮೆಯಿದೆ. 'ನಿರ್ಧಿಷಣತ್ವಂ' ಎಂದರೆ ಬುದ್ಧಿಯಿಲ್ಲದಿರುವುದು ಎಂದು ಕೂಡ ಅರ್ಥ. ಅದು (ಉಪಮೆಯು) ಶ್ಲೇಷದಿಂದ ಜೀವಪಡೆದಿದೆ.

['ಧಿಷಣ – ಎಂದರೆ ಬೃಹಸ್ಪತಿ 'ಬೃಹಸ್ಪತಿಃ ಸುರಾಚಾರ್ಯೋ ಗೀರ್ಪತಿರ್ಧಿಷಣೋ ಗುರುಃ' (ಅಮರ. 192). 'ಧಿಷಣಾ' – ಎಂದರೆ ಬುದ್ಧಿ. 'ಬುದ್ಧಿರ್ಮನೀಷಾ ಧಿಷಣಾ'

ಗುಣನಿಮಿತ್ತದ್ರವ್ಯಹೇತೂತ್ಪ್ರೇಕ್ಷಾ—(೪೯)

ಸ್ವಾಕ್ರೀಡಸ್ಥೇನ ಮಂದಾರೇಣೇವಾನಂದೋ ಯಯೇಂದಿರೇ ।
ನಿರ್ವೇಲಶ್ಚಾಥ ಸಾ ನಿತ್ಯಂ ಕಾರ್ಯಾ ಮಯಿ ದಯಾ ತ್ವಯಾ ॥ ೪೯ ॥

ಆನಂದೋ ನಿಮಿತ್ತಮ್. ಮಂದಾರೇಣೇತಿ ದ್ರವ್ಯಸ್ಯ ಹೇತುತ್ವಮ್. ನಿರ್ವೇಲಾನಂದೋ ಮುಕ್ತಿಃ.

ಗುಣನಿಮಿತ್ತದ್ರವ್ಯಾಭಾವಹೇತೂತ್ಪ್ರೇಕ್ಷಾ—(೫೦)

ತ್ವದಾಜ್ಞಯಾ ಜಗದ್ಗೋಪ್ತುರಭಾವಾದಿವ ವೇಧಸಃ ।
ಯತ್ಸಾಧ್ವಸಂ ಕ್ಷಯ(?)ಪ್ರಾಪ್ತೇಸ್ತಸ್ಮಾದ್ರಕ್ಷ ರಮೇ ಸತಃ ॥ ೫೦ ॥

ಸಾಧ್ವಸಂ ನಿಮಿತ್ತಮ್. ವೇಧಸೋಽಭಾವಾದಿತಿ ದ್ರವ್ಯಾಭಾವಃ. ಪ್ರಲಯಕಾಲಭಯಸದೃಶಂ ಭಯಮಿತ್ಯರ್ಥಃ.

ಕ್ರಿಯಾನಿಮಿತ್ತದ್ರವ್ಯಹೇತೂತ್ಪ್ರೇಕ್ಷಾ—(೫೧)

ತ್ವತ್ತಸ್ತವಾಧರೇ ಪ್ರಾಯಃ ಕಾಂತರಾಗವಿಜೃಂಭಣಮ್ ।
ಯಥೋಡುಪುಷ್ಪಸಾಂನಿಧ್ಯಾತ್ಪದ್ಮೇ?ಽಂಬ ಸ್ಫಟಿಕೋಪಲೇ ॥ ೫೧ ॥

ರಾಗವಿಜೃಂಭಣಮ್ ನಿಮಿತ್ತಮ್. ತ್ವತ್ತ ಇತಿ ಪದೇನ ದ್ರವ್ಯಹೇತುತೋಕ್ತಾ. ತ್ವತ್ತ ಇತ್ಯಸ್ಯ ಪ್ರಸ್ತುತಪದಾಭಿಧಾನಾದ್ದ್ರವ್ಯವಾಚಿತ್ವಮ್. ಅಧರೇ ಕಾಂತ-

---

(ಅಮರ, 278). 'ಸುಧರ್ಮಾ' ಎಂದರೆ ದೇವಸಭೆ. 'ಸ್ಯಾತ್ಸುಧರ್ಮಾ ದೇವಸಭಾ' (ಅಮರ, 96). 'ಸ ಇವ ಸುಧರ್ಮಾ ನಿರ್ಧಿಷಣಾ' – ಇದು ಉಪಮೆ. ಇಲ್ಲಿ 'ನಿರ್ಧಿಷಣಾ' ಎಂಬುದು ಸಾಧಾರಣಧರ್ಮ. ಅದು ಶ್ಲೇಷಮೂಲಕವಾಗಿ ಸಿದ್ಧವಾಗುತ್ತದೆ].

ಗುಣವು ನಿಮಿತ್ತವಾಗಿರುವ ದ್ರವ್ಯಹೇತೂತ್ಪ್ರೇಕ್ಷೆ – (49)

ಯಾವುದರಿಂದ ಸ್ವಂತ ಉದ್ಯಾನದಲ್ಲಿನ ಮಂದಾರದಿಂದಲೋ ಏನೋ ಎಂಬಂತೆ ನಿರವಧಿಕ ಆನಂದವುಂಟಾಗುವುದೋ ಆ ದಯೆಯನ್ನು, ಓ ಇಂದಿರೆ, ನೀನು ನನ್ನ ಮೇಲೆ ಸದಾ ತೋರಬೇಕು. (49)

ಆನಂದವು (ಗುಣ) ನಿಮಿತ್ತ. ಮಂದಾರದಿಂದಲೋ ಏನೋ ಎಂದು ದ್ರವ್ಯವನ್ನು ಕಾರಣವಾಗಿ ಉತ್ಪ್ರೇಕ್ಷಿಸಲಾಗಿದೆ. ನಿರವಧಿಕ ಆನಂದವೆಂದರೆ ಮೋಕ್ಷ.

['ಆಕ್ರೀಡ' ಎಂದರೆ ಉದ್ಯಾನ. 'ಪುಮಾನಾಕ್ರೀಡ ಉದ್ಯಾನಂ ರಾಜ್ಞಃ ಸಾಧಾರಣಂ ವನಮ್' (ಅಮರ, 654). ಆಕ್ರೀಡಃ – ಪುಲ್ಲಿಂಗ, ಉದ್ಯಾನಂ – ನಪುಂಸಕಲಿಂಗ.]

ಗುಣವು ನಿಮಿತ್ತವಾಗಿರುವ ದ್ರವ್ಯದ ಅಭಾವಹೇತೂತ್ಪ್ರೇಕ್ಷೆ – (50)

ನಿನ್ನ ಆಜ್ಞೆಯಿಂದ ಜಗತ್ತನ್ನು ರಕ್ಷಿಸುವ ಬ್ರಹ್ಮನ ಅಭಾವದಿಂದಲೋ ಏನೋ ಎಂಬಂತೆ ಯಾವುದರಿಂದ ನಾಶ (?) ವೃದ್ಧಿಯ ಭಯವಿದೆಯೋ ಅದರಿಂದ...ರಕ್ಷಿಸು. (50)

ಭಯವು (ಗುಣ) ನಿಮಿತ್ತ. ಬ್ರಹ್ಮನ ಅಭಾವದಿಂದಲೋ ಏನೋ ಎಂಬುದು ದ್ರವ್ಯದ ಅಭಾವ. ಪ್ರಲಯಕಾಲದ ಭಯದಂತಿರುವ ಭಯವೆಂದರ್ಥ.

ಕ್ರಿಯೆಯು ನಿಮಿತ್ತವಾಗಿರುವ ದ್ರವ್ಯಹೇತೂತ್ಪ್ರೇಕ್ಷೆ – (51)

ಓ ತಾಯಿ ಲಕ್ಷ್ಮಿ, ಸ್ಫಟಿಕ ಶಿಲೆಯಲ್ಲಿ ಚೀನೀಗುಲಾಬಿಯ (ಜಪಾಪುಷ್ಪ) ಸಾಮೀಪ್ಯದಿಂದ ಹೇಗೋ ಹಾಗೆ ನಿನ್ನ ಕೆಳದುಟಿಯಲ್ಲಿ ನಿನ್ನಿಂದಲೇ ಬಹುಶಃ ಮನೋಹರ ಕೆಂಪು ಕಂಗೊಳಿಸುತ್ತದೆ. (51)

ರಾಗೋ ಮನೋಹರರಕ್ತಿಮಾ. ಅನ್ಯತ್ರ ಕಾಂತೇ ದಯಿತೇ ರಾಗಃ ಅನುರಾಗಃ. ಉಡುಪುಷ್ಪಂ ಜಪಾಕುಸುಮಮ್.

ಕ್ರಿಯಾನಿಮಿತ್ತದ್ರವ್ಯಾಭಾವಹೇತೂತ್ಪ್ರೇಕ್ಷಾ—(೫೨)

ಅಘಿನಾಂ ನಿರಯೋತ್ತಾರಸ್ತ x x x x x x x x ।
ಶ್ರೀರಕಾಲಾದಿವಾಭೂತ್ತ್ವಾತ್ಕಿಮು ಸಾಕ್ಷಾದ್ವಿಲೋಕನ್ಯೈಃ ॥ ೫೨ ॥

ಉತ್ತಾರಣಕ್ರಿಯಾ ನಿಮಿತ್ತಮ್. ಅಕಾಲಾತ್ ಯಮಾಭಾವಾದಿತಿ ದ್ರವ್ಯಾಭಾವಃ. ಪುರಾ ಯುಧಿಷ್ಠಿರದರ್ಶನಾನ್ನಾರಕಿಣೋ ನರಕಾದುತ್ತೀರ್ಣಾ ಇತಿ ಪೌರಾಣಿಕಾಃ. ಕಾವ್ಯಾರ್ಥಾಪತ್ತಿಶ್ಚ.

ಗುಣನಿಮಿತ್ತದ್ರವ್ಯಫಲೋತ್ಪ್ರೇಕ್ಷಾ– (53)

ಭುವ್ಯಪ್ಯಮಂದಮಂದಾರಾಯೇವಾಂಬ ತ್ವದ್ರಿರಕ್ಷಿಷಾ ।
ತ್ವಯಾದೃತಾ ಯಚ್ಛ್ರೀಮಂತಃ ಪ್ರಯಾಂತ್ಯತಿವದಾನ್ಯತಾಮ್ ॥53॥

ರಿರಕ್ಷಿಷಾ ನಿಮಿತ್ತಮ್. ಮಂದಾರಾಯೇತಿ ದ್ರವ್ಯಸ್ಯ ಫಲತ್ವಮ್. ವಾಕ್ಯಾರ್ಥಹೇತುಕಕಾವ್ಯಲಿಂಗೇನ ಸಂಕೀರ್ಯತೇ.

---

ಕೆಂಪುವರ್ಣ ಕಂಗೊಳಿಸುವುದು ನಿಮಿತ್ತ. 'ತ್ವತ್ತಃ' (ನಿನ್ನಿಂದಲೇ) ಎಂಬ ಪದದಿಂದ ದ್ರವ್ಯವು ಹೇತುವಾಗಿ ಉತ್ಪ್ರೇಕ್ಷಿತವಾಗಿದೆ. ತ್ವತ್ತಃ – ಇದು ಪ್ರಕೃತದಲ್ಲಿ ಲಕ್ಷ್ಮಿಯ ಅರ್ಥ ನೀಡುವುದರಿಂದ ದ್ರವ್ಯವಾಚಕವಾಗಿದೆ. ಕೆಳದುಟಿಯಲ್ಲಿ 'ಕಾಂತರಾಗ' ಎಂದರೆ ಮನೋಹರವಾದ ಕೆಂಪು ಎಂದರ್ಥ. ಇನ್ನೊಂದೆಡೆ, ಕಾಂತನಲ್ಲಿ ಅನುರಾಗ ಎಂದರ್ಥ. ಉಡುಪುಷ್ಪ (ಔಡ್ರಪುಷ್ಪ, ಔಂಡ್ರಪುಷ್ಪ) ಎಂದರೆ ಜಪಾಕುಸುಮ.

ಕ್ರಿಯೆಯು ನಿಮಿತ್ತವಾಗಿರುವ ದ್ರವ್ಯದ ಅಭಾವಹೇತೂತ್ಪ್ರೇಕ್ಷೆ – (52)

ಲಕ್ಷ್ಮಿ, (ನಿನ್ನ ಸ್ಮರಣೆಯು ?) ಯಮನಿಲ್ಲವೇನೋ ಎಂಬಂತೆ ಪಾಪಿಗಳನ್ನು ನರಕದಿಂದ ಮೇಲೆತ್ತುವುದು, ನೀನು ಸಾಕ್ಷಾತ್ ನೋಡಿದರಿನ್ನೇನು ! (52)

ಇಲ್ಲಿ ಮೇಲೆತ್ತುವ ಕ್ರಿಯೆಯು ನಿಮಿತ್ತ. ಅಕಾಲತ್ – ಅಂದರೆ ಯಮನ ಅಭಾವ ಎಂದು, ದ್ರವ್ಯದ ಅಭಾವ. ಹಿಂದೆ ಯುಧಿಷ್ಠಿರನ ದರ್ಶನದಿಂದ ನರಕಲ್ಲಿದ್ದವರು ನರಕದಿಂದ ಮೇಲೆ ಬಂದರು ಎಂದು ಪೌರಾಣಿಕರು ಹೇಳುತ್ತಾರೆ. ಕಾವ್ಯಾರ್ಥಾಪತ್ತಿ – ಅಲಂಕಾರವೂ ಇದೆ. (ಕೈಮುತ್ಯಕನ್ಯಾಯದಿಂದ ವಿಷಯವನ್ನು ಹೇಳಿದೆ.)

ಗುಣವು ನಿಮಿತ್ತವಾಗಿರುವ ದ್ರವ್ಯಫಲೋತ್ಪ್ರೇಕ್ಷೆ – (53)

ತಾಯಿ, ನಿನ್ನ ರಕ್ಷಣೇಚ್ಛೆಯು ಭುವಿಯಲ್ಲಿ ಕೂಡ ಸಮೃದ್ಧ ಮಂದಾರವೃಕ್ಷವಾಗಲೀ ಎನೋ ಎಂಬಂತಿದೆ. ಏಕೆಂದರೆ ನಿನ್ನಿಂದ ಸತ್ಕೃತರಾದ ಸಿರಿವಂತರು ದಾನಶೂರರಾಗಿರುವರು. (53)

ರಕ್ಷಿಸುವ ಇಚ್ಛೆಯು ನಿಮಿತ್ತ. ಮಂದಾರವಾಗಿರಲು ಎಂಬುದು ದ್ರವ್ಯರೂಪದಲ್ಲಿರುವ ಫಲ. ವಾಕ್ಯಾರ್ಥವನ್ನು ಹೇತುವಾಗಿ ಪಡೆದ ಕಾವ್ಯಲಿಂಗಾಲಂಕಾರದೊಡನೆ ಸಂಕರವಿದೆ.

ಗುಣನಿಮಿತ್ತದ್ರವ್ಯಾಭಾವಫಲೋತ್ಪ್ರೇಕ್ಷಾ– (54)

ಉನ್ನತ್ಯಾತ್ಮಸದೃಙ್ಮೇರೋರಭಾವಾಯೇವ ಯಃ ಪರಃ ।
ಕರ್ಣಾದೇರ್ದಾನಸಂರಂಭೋ ತ್ವತ್ಕೃಪಾಲೇಶತೋಽಂಬ ಸಃ ॥54॥

ಸಂರಂಭೋ ನಿಮಿತ್ತಮ್. ಮೇರೋರಭಾವಾಯೇತಿ ದ್ರವ್ಯಾಭಾವಃ.

ಕ್ರಿಯಾನಿಮಿತ್ತದ್ರವ್ಯಫಲೋತ್ಪ್ರೇಕ್ಷಾ– (55)

ಯಮುನಾನಿಯುತಾಯೇವ ನಾಥನರ್ಮೋಪಯೋಗಿನೇ ।
ಪರಿತಃ ಪ್ರಸರಂತ್ಯಂಬ ತ್ವತ್ಕಟಾಕ್ಷಾಃ ಕೃಪಾರ್ದ್ರಿತಾಃ ॥55॥

ಪ್ರಸರಣಕ್ರಿಯಾ ನಿಮಿತ್ತಮ್. ಯಮುನಾನಿಯುತಾಯೇತಿದ್ರವ್ಯಸ್ಯ ಫಲತ್ವಮ್.

ಕ್ರಿಯಾನಿಮಿತ್ತದ್ರವ್ಯಾಭಾವಫಲೋತ್ಪ್ರೇಕ್ಷಾ– (56)

ನಿಃಸತ್ಯಮಿವ ನಿಃಸರ್ವಮಿವಾಬ್ಧೇರ್ಯಸ್ಯ ಜೃಂಭಣಮ್ ।
ಶ್ರೀಸ್ತೇನ ಗರಲೇನೈನಃ ಸಮಂ ಸಂಹೃತ್ಯ ಪಾಹಿ ನಃ ॥55॥

---

['ಅಮಂದ' ಎಂದರೆ ಇಲ್ಲಿ ಸಮೃದ್ಧ ಎಂದರ್ಥ. 'ವದಾನ್ಯ' ಎಂದರೆ ದಾನಶೂರ. 'ಸ್ಯುರ್ವದಾನ್ಯ - ಸ್ಥೂಲಲಕ್ಷ್ಯ - ದಾನಶೌಂಡಾ ಬಹುಪ್ರದೇ' (ಅಮರ. 2036) ಈ ಶ್ಲೋಕದಲ್ಲಿ ಲಕ್ಷ್ಮಿಯ ರಕ್ಷಣೇಚ್ಛೆಯು ಭುವಿಯಲ್ಲಿ ಮಂದಾರವೃಕ್ಷವಾಗಿದೆ ಎಂಬುದು ಸಮರ್ಥಿಸಬೇಕಾದುದು. ಲಕ್ಷ್ಮೀಕಟಾಕ್ಷಕ್ಕೆ ಪಾತ್ರರಾದವರು ದಾನಶೂರರಾಗಿರುವುದರಿಂದ– ಎಂದು ಬಿಂಬಿಸುವ ವಾಕ್ಯವು ಸಮರ್ಥಕಹೇತುವಾಗಿ ಬಂದಿದೆ. ಇದು ವಾಕ್ಯಾರ್ಥಹೇತುಕ ಕಾವ್ಯಲಿಂಗ. 'ಸಮರ್ಥನೀಯಸ್ಯಾರ್ಥಸ್ಯ ಕಾವ್ಯಲಿಂಗಂ ಸಮರ್ಥನಂ' ಇದು ಕಾವ್ಯಲಿಂಗದ ಲಕ್ಷಣ. (ಕುವ. ಕಾ. 121)].

ಗುಣವು ನಿಮಿತ್ತವಾಗಿರುವ ದ್ರವ್ಯದ ಅಭಾವಫಲೋತ್ಪ್ರೇಕ್ಷೆ – (54)

ಮಾತೆ, ನಿನ್ನ ಕರುಣೆಯ ಲೇಶದಿಂದ ಕರ್ಣ ಮುಂತಾದವರ ದಾನಮಾಡುವ ಮಿಗಿಲಾದ ಉತ್ಸಾಹವು, ಉನ್ನತಿಯಲ್ಲಿ ನಿನಗೆ ಪ್ರತಿಸ್ಪರ್ಧಿಯಾದ ಮೇರುಪರ್ವತದ ಅಭಾವಕ್ಕೋಸ್ಕರವೋ ಏನೋ ! (54).

'ಸಂರಂಭ'ವು (ಉತ್ಸಾಹವು) ನಿಮಿತ್ತ. ಮೇರುವಿನ ಅಭಾವಕ್ಕಾಗಿ ಎಂಬುದು ದ್ರವ್ಯದ ಅಭಾವ.

ಕ್ರಿಯೆಯು ನಿಮಿತ್ತವಾಗಿರುವ ದ್ರವ್ಯಫಲೋತ್ಪ್ರೇಕ್ಷೆ – (55)

ತಾಯಿ, ಕೃಪೆಯಿಂದ ಆರ್ದ್ರವಾದ ನಿನ್ನ ಕಟಾಕ್ಷಗಳು ಪ್ರಭುವಿನ ವಿನೋದಕ್ಕಾಗಿ ಯಮುನೆಯರ ಶತಸಹಸ್ರವನ್ನುಂಟುಮಾಡಲೋ ಏನೋ ಸುತ್ತಲೂ ಪ್ರಸರಿಸುತ್ತಿವೆ. (55)

[ಯಮುನಾನಿಯುತಾಯ – ಯಮುನಾನಾಂ ನಿಯುತಂ. ತಸ್ಮೈ. 'ನಿಯುತಂ' ಎಂದರೆ ಶತಸಹಸ್ರ (ಲಕ್ಷ) (ಅಮರ. 2942). ನಾಥನರ್ಮೋಪಯೋಗಿನೇ – ಇದು 'ಯಮುನಾನಿಯುತಾಯ' ಎಂಬುದಕ್ಕೆ ವಿಶೇಷಣ. ಇಲ್ಲಿ 'ನರ್ಮನ್' ಎಂದರೆ 'ವಿನೋದ, ಕ್ರೀಡೆ' ಎಂದರ್ಥ. 'ದ್ರವಕೇಲಿಪರೀಹಾಸಾಃ ಕ್ರೀಡಾ ಲೀಲಾ ಚ ನರ್ಮ ಚ'. (ಅಮರ. 426)].

ಕ್ರಿಯೆಯು ನಿಮಿತ್ತವಾಗಿರುವ ದ್ರವ್ಯದ ಅಭಾವಫಲೋತ್ಪ್ರೇಕ್ಷೆ – (56)

ಲಕ್ಷ್ಮಿ, ಸತ್ಯಲೋಕವಿಲ್ಲದಂತೆ ಸರ್ವವನ್ನೂ ಇಲ್ಲವಾಗಿಸುವಂತೆ ಮಾಡಲೋ ಏನೋ ಎಂಬಂತೆ ಸಮುದ್ರದಿಂದ ಯಾವ ವಿಷದ ವಿಸ್ತರಣೆಯಾಯಿತೋ ಆ ವಿಷದ ಜೊತೆಯಲ್ಲಿಯೇ ಪಾಪವನ್ನು ಸಂಹರಿಸಿ ನಮ್ಮನ್ನು ಕಾಪಾಡು. (56)

ಜೃಂಭಣಮ್ ನಿಮಿತ್ತಮ್. ನಿಃಸತ್ಯಮಿವ ಸತ್ಯಲೋಕಾಭಾವಾಯೇತಿ ದ್ರವ್ಯಾಭಾವಃ. ವಿಷಃ ಸಕಲಲೋಕದಾಹಕೇನ ಗರಲೇನ ಸದೃಶಮಿತ್ಯರ್ಥಃ.

ಷಡ್ಭಿಃ ಪಂಚಾಶತಾ ಚೇತ್ಥಂ ಪದ್ಯೈಃ ಪದ್ಮಾಲಯಾ ಸ್ತುತಾ ।
ಶ್ರೇಯಸೇ ಭೂಯಸೇ ಭೂಯಾತ್ಪ್ರಪನ್ನಾನಾಂ ಪರಾ ಗತಿಃ ॥ 19 ॥

ಗಮ್ಯೋತ್ಪ್ರೇಕ್ಷಾಪ್ರಭೇದಾ ಯೇ ಚತ್ವಾರಿಂಶತ್ತಥಾಷ್ಟ ಚ ।
ಸ್ಯುರುದಾಹರಣಾನ್ಯೇಷಾಮುನ್ನೇಯಾನ್ಯೇವ ಪೂರ್ವವತ್ ॥ 20 ॥

ಕೃತಿರಾತ್ರೇಯವಂಶೀಯವರದಾರ್ಯವಿನಿರ್ಮಿತಾ ।
ಉತ್ಪ್ರೇಕ್ಷಾಮಂಜರೀ ಸೇಯಂ ಸತಾಂ ಕರ್ಣಾವತಂಸತು ॥ 21 ॥

॥ಉತ್ಪ್ರೇಕ್ಷಾಮಂಜರೀ ಸಂಪೂರ್ಣಾ ॥

---

ಜೃಂಭಣವು ನಿಮಿತ್ತ. 'ನಿಃಸತ್ಯಮಿವ' ಎಂದರೆ ಸತ್ಯಲೋಕದ ಅಭಾವಕ್ಕಾಗಿ, ಇದು ದ್ರವ್ಯದ ಅಭಾವ. ಪಾಪವು ಸರ್ವಲೋಕವನ್ನು ದಹಿಸುವ ವಿಷಕ್ಕೆ ಸದೃಶವಾದುದು ಎಂದರ್ಥ.

19 ಹೀಗೆ ಐವತ್ತಾರು ಪದ್ಯಗಳಿಂದ ಲಕ್ಷ್ಮಿಯು ಸ್ತುತಿಸಲ್ಪಟ್ಟಿರುವಳು. ಭಕ್ತರ ಪರಮಾಶ್ರಯ-ರೂಪಳಾದ ಅವಳು ಹೆಚ್ಚಿನ ಶ್ರೇಯಸ್ಸನ್ನು ನೀಡಲಿ.

20 ಗಮ್ಯೋತ್ಪ್ರೇಕ್ಷೆಯ ಭೇದಗಳು ನಲವತ್ತೆಂಟು. ಅವುಗಳ ಉದಾಹರಣೆಗಳನ್ನು ಮೇಲೆ ಹೇಳಿದ ಹಾಗೆ ಕಲ್ಪಿಸಿಕೊಳ್ಳಬೇಕು.

[ಮೇಲಿನ ಉದಾಹರಣೆಗಳಲ್ಲಿ ಉತ್ಪ್ರೇಕ್ಷಾವ್ಯಂಜಕಗಳಾದ ಪ್ರಾಯಃ, ಶಂಕೇ. ಧ್ರುವಂ, ಇವ ಮುಂತಾದುವುಗಳನ್ನು ಬಿಟ್ಟರೆ ಅವೇ ಗಮ್ಯೋತ್ಪ್ರೇಕ್ಷೆಯ ಉದಾಹರಣೆಗಳಾಗುತ್ತವೆ-ಎಂಬುದು ಗ್ರಂಥಕಾರನ ಭಾವ. ಅನುಪಾತ್ತನಿಮಿತ್ತದ ಎಂಟು ಭೇದಗಳು ಮಾತ್ರ ಇಲ್ಲಿ ಬರುವುದಿಲ್ಲ. (ಗ್ರಂಥಾರಂಭದಲ್ಲಿ, 5, 10, 11, ಈ ಕಾರಿಕೆಗಳನ್ನು ನೋಡಿರಿ.)].

21 ಆತ್ರೇಯವಂಶದ ವರದಾರ್ಯನಿಂದ ರಚಿತವಾದ ಈ ಕೃತಿ, ಉತ್ರೇಕ್ಷಾಮಂಜರಿಯು, ಶಿಷ್ಟರ ಕರ್ಣಗಳಿಗೆ ಆಭರಣವಾಗಿರಲಿ.

[ಕರ್ಣಾವತಂಸತು – ಕರ್ಣಾವತಂಸ ಇವ ಆಚರತು. ಉತ್ಪ್ರೇಕ್ಷಾಮಂಜರೀ ಇಲ್ಲಿ ಉಪಮೇಯ. ಇದು ಧರ್ಮವಾಚಕಲುಪ್ತೋಪಮಾಭೇದ. ಆಚಾರೇ ಕ್ವಿಪ್ ಪ್ರತ್ಯಯವನ್ನು ಸೇರಿಸಿರುವುದರಿಂದ ಇದು ಕ್ವಿಪ್‌ಗಾ].

॥ ಉತ್ಪ್ರೇಕ್ಷಾಮಂಜರಿಯು ಮುಗಿಯಿತು ॥

# ನನ್ನ ಅಥೆನಾಗಳು

ಶಶಿಧರ ಕುಲಕರ್ಣಿ

ಏಜಾಕ್ಸನಿಗೆ ಸಿಕ್ಕ
ಕುರಿಗಳ ಹಾಗೆ ಕತ್ತರಿಸಿಬಿಡಲೇ
ಅಥವ
ಮುದಿಯನ ಕುಟ್ಟಣಿಯಲ್ಲಿ
ಕುಟ್ಟಿ ಮಾಡಿದ ಪಲ್ಪ್‌ನಲ್ಲಿ
ನನ್ನ ಅದೆಷ್ಟೂ ಅಥೆನಾಗಳ ಪ್ರತಿಮಮಾಡಿ
ಊರ ಚೌಕಗಳಲ್ಲಿ ನಿಲಿಸಿ
'ಯಾರನ್ನು ಶ್ರದ್ಧೆಯಿಂದ ಭಜಿಸುವೆಯೋ
ಅವರಲ್ಲಿ ಭಕ್ತಿ ಮೂಡುವಂತೆ ಮಾಡುತ್ತೇನೆ' ಎಂದು
ಕೊಟೇಷನ್ ಬರೆದು ನಕ್ಕುಬಿಡಲೇ
ಅನಿಸುತ್ತದೆ—
ಈ ಭ್ರೂಣ ಗರ್ಭದಲ್ಲಿಯೇ ಗೋರಿಕೊಂಡಾಗ
ಅವರೆಲ್ಲರೂ ಬದುಕಿಬಿಡುತ್ತಾರೆ
ಬಿಂಬಗಳ ಹಾಗೆ, ಜಂತುಗಳ ಹಾಗೆ,
ಶ್ರೀ-ಗಂಧದ ಮರಗಳ ಹಾಗೆ.
ನಾನು
ಬೇಲಿಗೆ ಕಳ್ಳಿಯಾಗಿಯೇ ಉಳಿದುಬಿಡುತ್ತೇನೆ.

# ಕರ್ನಾಟಕದ ಆದಿವಾಸಿಗಳು

ಎಸ್. ಪಿ. ಶಂಕರನಾರಾಯಣರಾವ್

## 1. ಕರ್ನಾಟಕದ ಆದಿವಾಸಿಗಳೆಂದರೆ ಯಾರು ?

ನಾಗರಿಕ ಸಮಾಜವು ವ್ಯಾಪ್ತವಾಗುತ್ತಾ ಹೋದಹಾಗೆ ಆಯಾ ಪ್ರದೇಶಗಳಲ್ಲಿ ಮೊದಲಿನಿಂದ ವಾಸವಾಗಿದ್ದ ಜನರು ಅದರ ಪ್ರಭಾವಕ್ಕೆ ಒಳಗಾಗುತ್ತಾರೆ. ಆಗ ಅವರು ತಮ್ಮ ಜೀವನ ಕ್ರಮಗಳಲ್ಲಿ ಕೆಲವೊಂದು ಹೊಂದಾಣಿಕೆಗಳನ್ನು ಮಾಡಿಕೊಂಡು ನಾಗರಿಕ ಸಮಾಜದ ಒಂದು ಅಂಗವಾಗಿ ಬಾಳಬೇಕಾಗಿ ಬರುತ್ತದೆ; ಇಲ್ಲವೇ ನಾಗರಿಕ ಸಮಾಜದಿಂದ ದೂರ ಹೋಗಿ ಬಾಳಬೇಕಾಗಿ ಬರುತ್ತವೆ. ಇದು ಜಗತ್ತಿನಲ್ಲೆಲ್ಲಾ ನಡೆದು ಬಂದ ಕ್ರಮ. ಇದರಲ್ಲಿ ಭಾರತದ ವೈಶಿಷ್ಟ್ಯತೆಯೆಂದರೆ ಒಂದು ಗುಂಪು ತನ್ನ ಪೂರ್ವ ಜೀವನ ಕ್ರಮಗಳನ್ನು, ನಂಬಿಕೆಗಳನ್ನು, ಸಮಾಜ ವ್ಯವಸ್ಥೆಯನ್ನು ಉಳಿಸಿಕೊಂಡು ಹಿಂದೂ ಸಮಾಜದ ಒಂದು ಅಂಗವಾಗಲು ಸಾಧ್ಯ. ಹೀಗಾಗಿ ಆದಿವಾಸಿಗಳ ಗುಂಪುಗಳು ಬೇರೆ ಬೇರೆ ಮಟ್ಟದಲ್ಲಿ ಪ್ರಾದೇಶಿಕ ಹಿಂದೂ ಸಮಾಜದೊಂದಿಗೆ ಹೊಂದಾಣಿಕೆಯಾಗಿವೆ. ಇದನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕದ ಆದಿವಾಸಿಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಬಹುದು.

ಅ. ಹೆಚ್ಚು ಕಡಿಮೆ ಹಿಂದೂ ಸಮಾಜದ ಅಂಗಗಳೇ ಎಂದು ಪರಿಗಣಿತರಾಗಿರುವ ಆದಿವಾಸಿಗಳು. ಬಯಲು ಸೀಮೆಯ ಬೇಡರು, ಕುರುಬರು ಇದಕ್ಕೆ ನಿದರ್ಶನ.

ಆ. ನಾಗರಿಕ ಸಮಾಜದ ಪ್ರಭಾವಕ್ಕೆ ಒಳಗಾಗಲು ಬಯಸದೇ ಅಥವಾ ತಾವು ನೆಲೆಸಿದ್ದ ಅರಣ್ಯಗಳಿಗೆ, ಬೆಟ್ಟ ಸೀಮೆಗಳಿಗೆ ನಾಗರಿಕ ಸಮಾಜದ ಪ್ರಭಾವ ಮುಟ್ಟದೇ ಈಚಿನವರೆಗೆ ಅದರ ಪ್ರಭಾವದಿಂದ ಬಹುಮಟ್ಟಿಗೆ ಹೊರಗೆ ಉಳಿದಿದ್ದ ಆದಿವಾಸಿಗಳು, ಸೋಲಿಗರು, ಇರುಳಿಗರು, ಕುಡಿಯರು, ಜೇನು ಕುರುಬರು, ಕಾಡು ಕುರುಬರು ಇತ್ಯಾದಿ ಗುಂಪುಗಳು ಈ ವರ್ಗದವರು. ಇವರೆಲ್ಲಾ ಕರ್ನಾಟಕದ ಪಶ್ಚಿಮ ಭಾಗದ ಮತ್ತು ಆಗ್ನೇಯ ಭಾಗದ ಅರಣ್ಯಗಳಲ್ಲಿ ಇರುವವರು.

ಇ. ತೋಡರು, ಬಡಗರು, ಕೋಟರು ಕನ್ನಡವನ್ನು ಮಾತೃಭಾಷೆಯಾಗುಳ್ಳ ನೀಲಗಿರಿಯ ಆದಿವಾಸಿಗಳು, ತೋಡರು ನೀಲಗಿರಿಯ ಮೂಲನಿವಾಸಿಗಳು; ಅದರ ಒಡೆಯರಾಗಿದ್ದವರು. ಬಡಗರು ಅವರ ಹೆಸರೇ ಹೇಳುವಂತೆ

ನೀಲಗಿರಿಯ ಉತ್ತರದ ಮೈಸೂರು ಪ್ರಾಂತದಿಂದ ಅಲ್ಲಿಗೆ ಹೋಗಿ ನೆಲೆಸಿದವರು. ಕೋಟರು ಇವೆರಡು ಗುಂಪುಗಳಿಗೆ ಸೇವೆ ನೀಡುವ ಸಣ್ಣ ಗುಂಪು.

ಈ. ಲಂಬಾಣಿಗಳು, ಹಕ್ಕಿಪಿಕ್ಕಿಗಳು ಮುಂತಾದವರು ತಮ್ಮ ಮೂಲ ಸಮಾಜಗಳಿಂದ ಬೇರ್ಪಟ್ಟು ಇಲ್ಲಿ ನೆಲೆಸಿರುವವರು. ಗೋವೆಗೆ ಪೋರ್ಚುಗೀಸರ ಗುಲಾಮರಾಗಿ ಬಂದು, ತಪ್ಪಿಸಿಕೊಂಡು ಕಾರವಾರ ಜಿಲ್ಲೆಯ ಹಳಿಯಾಳ, ಯಲ್ಲಾಪುರದ ಅರಣ್ಯಗಳಲ್ಲಿ ನೆಲೆಸಿರುವ ನೀಗ್ರೋ ಬುಡಕಟ್ಟಿನ ಸಿದ್ದಿಗಳೂ ಇಂತಹವರೇ.

## 2. ಮೂಲವನ್ನು ಕುರಿತು ಐತಿಹ್ಯಗಳು

ಕೆಲವು ಆದಿವಾಸಿಗಳಲ್ಲಿ ತಮ್ಮ ಮೂಲವನ್ನು ಕುರಿತು ಐತಿಹ್ಯಗಳಿವೆ. ಸೋಲಿಗರು ಮಾದೇಶ್ವರನ ಭಕ್ತ ಬ್ರಹ್ಮಚಾರಿ ಕಾರಯ್ಯನ ಸಂತತಿಯವರಂತೆ ; ಬಿಳಿಗಿರಿರಂಗ ಅವರ ಭಾವನಂತೆ. ದೇವಿಯು ಜೇನುಗಳನ್ನು ಕೀಳಲೆಂದು ತನ್ನ ಬೆವರಿನಿಂದ ಸೃಷ್ಟಿಸಿದ ಕುಲ ಇರುಳಿಗರದ್ದು, ಮಂಜೇಶ್ವರ ಬಾರಕೂರುಗಳಲ್ಲಿ ರಾಜಮನೆತನವಾಗಿದ್ದು ಯುದ್ಧದಲ್ಲಿ ಸೋತು ಅಡಿಯಾಳಾದವರಂತೆ ಕೊರಗರು. ಸೀತಾದೇವಿಯಲ್ಲಿ ಅಪನಡತೆ ತೋರಿ ಶಾಪಕ್ಕೆ ಗುರಿಯಾಗಿ ಅಲೆಮಾರಿ ಹಕ್ಕಿ ಬೇಟೆಗಾರರಾದವರು ಹಕ್ಕಿಪಿಕ್ಕಿಗಳು.

## 3. ಅ. ಭಾಷೆಗಳು

ಕೊಡಗಿನ ಯರವರು ತಮ್ಮದೇ ಆದ ಯರವ ಭಾಷೆಯನ್ನು ಮಾತನಾಡುವರು. ಉಳಿದವರು ಪ್ರಾದೇಶಿಕ ಭಾಷೆಗಳಾದ ತುಳು, ಕನ್ನಡಗಳನ್ನು ಆಡುತ್ತಾರೆ. ಲಂಬಾಣಿಗಳು ರಾಜಾಸ್ಥಾನಿಯನ್ನೂ, ಹಕ್ಕಿಪಿಕ್ಕಿಗಳು ಗುಜರಾತಿಯನ್ನೂ ಮಾತೃಭಾಷೆಗಳೆಂದು ಪರಿಗಣಿಸಿದ್ದಾರೆ.

### ಆ. ಧಾರ್ಮಿಕ ಜೀವನ

ಇವರಲ್ಲಿ ಬಹುಪಾಲು ಭೂತಾರಾಧಕರು. ವರ್ಷಕ್ಕೊಮ್ಮೆ ಹಿರಿಯರ ಪೂಜೆ ಸಲ್ಲುತ್ತದೆ. ಸುತ್ತುಮುತ್ತಿನ ಹಿಂದೂ ದೇವತೆಗಳೂ ಇವರಿಂದ ಪೂಜಿತರು. ಸೋಲಿಗರಿಗೆ ಮಹದೇಶ್ವರ ಬೆಟ್ಟದ ಸುತ್ತಿನ ಶಿಖರಗಳು ಪವಿತ್ರ ಕ್ಷೇತ್ರಗಳು. ಕಂಬದ ಬೊಲಿ, ಮಜ್ಜನ ಬೊಲಿ, ನಾಗಪ್ಪನ ಬೊಲಿ–ಹೀಗೆ ಆ ಶಿಖರಗಳ ಹೆಸರು. ಕೊರಗರ ಪುಲಿಯರ ಹಬ್ಬದಲ್ಲಿ ಕನ್ಯೆಯೇ ಪೂಜೆ, ಪ್ರಾರ್ಥನೆ ಸಲ್ಲಿಸಬೇಕು. ನೀಚ–ಅವರ ಮುಖ್ಯ ಭೂತ.

### ಇ. ದೈಹಿಕ ಲಕ್ಷಣಗಳು

ಸಿದ್ದಿಗಳು ನೀಗ್ರೋ ಬುಡಕಟ್ಟಿನ ಲಕ್ಷಣಗಳುಳ್ಳವರು. ಸೋಲಿಗರು ದುಂಡು ತಲೆ, ದುಂಡು ಮೂಗುಳ್ಳ ಸರಾಸರಿ 5′3″ ಎತ್ತರದವರು. ಇರುಳಿಗರು ಸಾದುಗಪ್ಪು. ಬಾಕಿಯಂತೆ ಸುತ್ತಿನ ಜನರ ದೈಹಿಕ ಲಕ್ಷಣಗಳುಳ್ಳವರು.

## 4. ನೆಲೆಗಳು

ಜೇನು ಕುರುಬರು ತಮ್ಮ ಗ್ರಾಮವನ್ನು ಹಾಡಿ ಎನ್ನುವರು. ಸೋಲಿಗರಲ್ಲಿ ನಾಲ್ಕಾರು ಕುಟುಂಬಗಳು ಒಂದೆಡೆಯಿಂದ ಒಂದೆಡೆಗೆ ಹೋಗಿ ನೆಲೆಸಿದರೆ ಅದು ಪೋಡು; ಶಾಶ್ವತವಾದ ನೆಲೆಯಾದರೆ ಅದು ಹಾಡಿ. ಲಂಬಾಣಿಗಳ ಗ್ರಾಮ ತಾಂಡ.

ಮಲೆಸೋಲಿಗರು ಎರಡು ಬಂಡೆಗಳ ನಡುವೆಗೆ ತಡಿಕೆಯ ಗೋಡೆ ಹಾಕಿ, ಎಲೆ ಹುಲ್ಲುಗಳ ಛಾವಣಿ ಬಾಗಿಲುಮಾಡಿ ಮನೆ ಕಟ್ಟುವರು. ಜೇನು ಕುರುಬರು ಬಿದಿರಿನಿಂದ ಅರ್ಧಗೋಳಾಕೃತಿಯ ಛಾವಣಿ ಹೆಣೆದು ಅದನ್ನು ಮುಚ್ಚಿ ಮನೆ ನಿರ್ಮಿಸುತ್ತಾರೆ. ಅಲೆಮಾರಿಗಳಾದ ಹಕ್ಕಿಪಿಕ್ಕಿಗಳು ಕಂಬ ನೆಟ್ಟು ಡೇರೆ ಹಾಕುತ್ತಾರೆ.

ಕಾಡು ಕುರುಬರಲ್ಲಿ ಮದುವೆಯಾಗದ ಯುವಕರಿಗೆ ಊರನಡುವೆ ಪ್ರತ್ಯೇಕ ವಾದ **'ಪುಂಡುಗಾರ ಚಾವಡಿ'** ಅಥವಾ ಅಂಬಲಗಳಿರುತ್ತವೆ. ಸೋಲಿಗರಲ್ಲಿ ಪ್ರೇಮ ಜೀವನಕ್ಕೆ ಕಾಡೇ ಸರಿ ಎಂದು ನಂಬಿಕೆ.

## 5. ಆರ್ಥಿಕ ಜೀವನ

ಬಹುಪಾಲು ಆದಿವಾಸಿಗಳಿಗೆ ಆರಣ್ಯವೇ ಜೀವನಾಧಾರ. ಬೇಟೆ, ಮೀನು ಗಾರಿಕೆ, ಗಡ್ಡೆಗೆಣಸುಗಳು ಮತ್ತು ಹಣ್ಣುಗಳ ಸಂಗ್ರಹ, ಕಾಡು ಸೊಪ್ಪುಗಳನ್ನು ಕೂಡಿಸುವುದು ಇವೇ ಆಹಾರ ಒದಗಿಸಿಕೊಳ್ಳುವ ಮುಖ್ಯ ವಿಧಾನಗಳು. ಜೇನು ತುಪ್ಪ, ಅಳಲೆಕಾಯಿ, ಸೀಗೆಕಾಯಿ–ಮೊದಲಾದುವುಗಳನ್ನು ಕೂಡಿಸಿ ವಿಕ್ರಯಿಸು ವುದು ಸೋಲಿಗರ, ಇರುಳಿಗರ ಮುಖ್ಯ ವೃತ್ತಿಗಳು.

ಈಚೀಚಿನ ತನಕ ಅವರು ಕುಮ್ರಿ ವ್ಯವಸಾಯ ಮಾಡುತ್ತಿದ್ದರು. ಒಂದು ಪ್ರದೇಶವನ್ನು ಆಯ್ದು ಅದರಲ್ಲಿ ಬೆಳೆದಿರುವ ಮರಗಳನ್ನೂ, ಪೊದೆಗಳನ್ನೂ ಕಡಿದು ಬೆಂಕಿಯಿಕ್ಕಿ, ನೆಲದ ಮೇಲೆ ಹರಡುವ ಬೂದಿಯಲ್ಲಿ ಮಳೆಗಾಲದಲ್ಲಿ ಬೀಜ ಬಿತ್ತಿ ಬೆಳೆ ತೆಗೆಯುವುದೇ ಕುಮ್ರಿ. ಈಗ ಸರಕಾರ ಇದನ್ನು ನಿಷೇಧಿಸಿದೆ. ಹಸಲರು, ಕೊರಗರು ಅಡಿಕೆ ತೋಟ, ಕಾಫಿ ತೋಟಗಳಲ್ಲಿ ಕೂಲಿ ಮಾಡುತ್ತಾರೆ. ಎಮ್ಮೆ ಸಾಕಣೆಕೆ ತೋಡರ ಮುಖ್ಯವೃತ್ತಿ. ಬುಟ್ಟಿ ಹೆಣೆಯುವುದು ಬೆಟ್ಟ ಕುರುಬರಿಗೆ, ಕೊರಗರಿಗೆ ಉಪಕಸುಬಾಗಿದೆ.

ಅರಣ್ಯ ಇಲಾಖೆಯಲ್ಲಿ ಕಾಡು ಕಡಿಯುವುದು, ಕಾವಲು ಕಾಯುವುದು, ಖೆಡ್ಡಾಗಳಲ್ಲಿ ಆನೆ ಅಟ್ಟುವುದು ಮೊದಲಾದ ನೌಕರಿಗಳಿಗೆ ಸೋಲಿಗರು ಕುರುಬರು ಬಹಳ ಸಂಖ್ಯೆಯಲ್ಲಿ ಸೇರಿದ್ದಾರೆ. ಕೊರಗರು ನಗರಗಳಲ್ಲಿ ಭಂಗಿಗಳಾಗಿಯೂ ದುಡಿಯುತ್ತಾರೆ.

ಇವರಿಗೆ ನಿಷಿದ್ಧ ಪಾಪ ಮಾಂಸ ಅಪರೂಪ; ದನವನ್ನು ಮಾತ್ರ ಬಹುಜನ ತಿನ್ನುವುದಿಲ್ಲ. ಸೋಲಿಗರು ಹೊರತು ಉಳಿದವರು ಹೆಂಡ ಕುಡಿಯುವರು. ಕೆಲವರು ಕಾಡಿನಲ್ಲಿ ರಹಸ್ಯವಾಗಿ ಭಂಗಿಸೊಪ್ಪು ಬೆಳೆಸುತ್ತಾರೆಂದು ಹೇಳಲಾಗಿದೆ.

### 6. ಉಡುಪು, ಅಲಂಕಾರ

ಕಿವಿಗೆ, ಮೂಗಿಗೆ, ಕೊರಳಿಗೆ, ಕೈಗ, ಕಾಲ್ಗಳಿಗೆ, ಹೆರಳಿಗೆ ಬೆಳ್ಳಿಯ ಮತ್ತು ಕೊಂಬಿನ ಒಡವೆಗಳನ್ನಿಟ್ಟು, ಕನ್ನಡಿ-ಕವಡೆಗಳಿಂದ ಸಿಂಗರಿಸಿದ ಕೆಂಪುಲಂಗ, ದಾವಣಿ ಲಂಬಾಣಿ ಹೆಂಗಸಿನ ಅಲಂಕಾರ. ಜೇನು ಕುರುಬ, ಸೋಲಿಗರಲ್ಲಿ ಹೆಂಗಸರು ನಾಲ್ಕೈದು ಮೊಳದ ವಸ್ತ್ರವನ್ನು ಎದೆಯ ಮೇಲಿನಿಂದ ಸುತ್ತಿ ಬಲ ಭುಜದ ಮೇಲೆ ಗಂಟಿಕ್ಕುವರು. ಮೂಗುಬೊಟ್ಟು, ಜೂರು ಪಾರು ಆಕೆಯ ಒಡವೆಗಳು. ಹಕ್ಕಿಪಿಕ್ಕಿಗಳು ಮಣಿಸರಗಳ ಹೊರೆಯನ್ನೇ ಕೊರಳಲ್ಲಿ ಧರಿಸಿರುತ್ತಾರೆ. ಕೊರಗರಲ್ಲಿ ಕಿವಿಗೆ ಸೀಸದ ಓಲೆ, ಕೈಗೆ ಕಬ್ಬಿಣದ ಬಳೆ ಬಳಕೆಯಲ್ಲಿದ್ದುವು. ಈಗ ಸೀಸದ ಓಲೆ ಅಪರೂಪ.

ಗಂಡಸರು ಸಾಧಾರಣವಾಗಿ ಲಂಗೋಟಿ ಇಲ್ಲವೇ ದಟ್ಟಿ ಪಂಚೆಯುಟ್ಟು ದುಪಟಿ ಹೊದೆಯುವುದು ಕ್ರಮ. ತಲೆಗೆ ಅಡಿಕೆ ಹಾಳೆಯಲ್ಲಿ ಮಾಡಿದ ಕೊಂಬರ ಎಂಬ ಟೋಪಿ ಇಟ್ಟುಕೊಳ್ಳುವುದು ಹಸಲರು, ಕೊರಗರಲ್ಲಿ ಬಳಕೆ. ಬೇಕೆಂದಾಗ ಅದು ಹೆಂಡ ಕುಡಿಯುವ ಮೊಗೆಯೂ ಆಗುವುದಂತೆ. ತಲೆ ಬಾಚುವುದು, ಸ್ನಾನ, ಹಲ್ಲುಜ್ಜುವುದು – ಇವೆಲ್ಲಾ ಯಾವಾಗಲಾದರೂ ಒಮ್ಮೆ. ಹಲ್ಲಿಗೆ ಕಪ್ಪು ತಿಕ್ಕಿಸಿ ಕೊಳ್ಳುವುದು ಈಗೀಗ ಮರೆಯಾಗುತ್ತಿದೆ. ಹಚ್ಚೆ ಹುಯ್ಯಿಸಿಕೊಳ್ಳುವುದು ಇಂದಿಗೂ ಜನಪ್ರಿಯ.

### 7. ಹುಟ್ಟು, ಮದುವೆ, ಸಾವು

ಮಕ್ಕಳು ದೇವರ ವರದ ಫಲವೆಂದು ಇವರೆಲ್ಲರ ನಂಬಿಕೆ. ಚೊಚ್ಚಲು ಬಸುರಿಗೆ ಬಸುರಿ ಒಸಗೆಯೆಂಬ ಶಾಸ್ತ್ರ ಮಾಡುವುದು ಬಳಕೆ. ಚೊಚ್ಚಲು ಹೆರಿಗೆ ತೌರುಮನೆಯಲ್ಲಿ ಆಗಬೇಕು. ಗಂಡು ಮಕ್ಕಳಿಗೆ ಅಜ್ಜನ ಹೆಸರನ್ನೂ, ಹೆಣ್ಣು ಮಕ್ಕಳಿಗೆ ಅಜ್ಜಿಯ ಹೆಸರನ್ನೂ ಇಡುವುದು ವಾಡಿಕೆ. ಕೊರಗರಲ್ಲಿ ಮಕ್ಕಳಿಗೆ ಐತ (ಆದಿತ್ಯ), ಸೋಮ, ತುಕ್ರ (ಶುಕ್ರ) ಹೀಗೆ ವಾರಗಳ ಹೆಸರನ್ನಿಡುವರು.

ಸೋಲಿಗರಲ್ಲಿ ಗಂಡು-ಹೆಣ್ಣು ಕಾಡಿಗೆ ಓಡಿಹೋಗಿ ಎರಡು ಮೂರು ದಿನ ಇದ್ದು ಹಿಂತಿರುಗಿ ಔತಣ ನೀಡಿದರೆ ಮದುವೆ ಆಯಿತು. ಕೊರಗರಲ್ಲಿ ತಾಳಿ ಕಟ್ಟುವ ಪದ್ಧತಿ ಇಲ್ಲ. ತೋಡರಲ್ಲಿ ಅಣ್ಣತಮ್ಮಂದಿರಲ್ಲಿ ಒಬ್ಬನನ್ನು ಮದುವೆ ಯಾದರೆ ಆಕೆ ಆ ಅಣ್ಣ ತಮ್ಮಂದಿರಿಗೆಲ್ಲಾ ಹೆಂಡತಿಯಾಗುವಳು. ಪುರುಸುತ್‌ಪಿಮಿ ಎಂಬ ಶಾಸ್ತ್ರ ಮಾಡಿದವನು ಆಕೆಗೆ ಆದ ಮಕ್ಕಳಿಗೆಲ್ಲಾ ತಂದೆ ಎಂದು ಪರಿಗಣಿತ ನಾಗುವನು.

ಅಂತ್ಯ ಸಂಸ್ಕಾರಗಳು ವೈವಿಧ್ಯಪೂರ್ಣ. ಸೋಲಿಗರಲ್ಲಿ ಕಲ್ಲುಸೇವೆ ಎಂಬ ಬಂಡೆಗಳಿಂದ ಸಮಾಧಿ ಮಾಡುವ ಬಳಕೆ ಇದ್ದಿತಂತೆ. ಗರ್ಭಿಣಿಯರು, ಕುಷ್ಠ ಅಥವಾ ತೊನ್ನು ಆದವರು – ಇವರನ್ನು ಹೊರತು ಉಳಿದವರನ್ನು ಹೂಳುವರು. ಹೂಳಿದ ಅಥವಾ ಸುಟ್ಟ ಜಾಗದಲ್ಲಿ ಒಂಟಿ ಕಲ್ಲು ನೆಡುವುದು ವಾಡಿಕೆ. ಕೊರಗರಲ್ಲಿ ತಲೆ, ಹೊಟ್ಟೆ, ಕಾಲು – ಮೂರು ಭಾಗಗಳನ್ನೂ ಸೂಚಿಸಲು ಮೂರು ಕಲ್ಲುಗಳನ್ನು ನೆಡುವರು.

## 8. ಸಮಾಜ ರಚನೆ

ಸೋಲಿಗರ ಸಮಾಜ ರಚನೆಯಿಂದ ಕರ್ನಾಟಕದ ಆದಿವಾಸಿಗಳ ಸಮಾಜ ವ್ಯವಸ್ಥೆಯ ಪರಿಚಯ ಪಡೆಯಬಹುದು. ಇವರಲ್ಲಿ ಉರಳಿ, ಪೊಡು, ದೇವ ಎಂಬ ಮೂರು ಬಹಿರ್ವಿವಾಹ ನಿಷಿದ್ಧ ಗುಂಪುಗಳಿವೆ. ಈ ಒಂದೊಂದು ಗುಂಪಿನಲ್ಲಿಯೂ ಅಂತರ್ವಿವಾಹ ನಿಷಿದ್ಧ ಕುಲ ಅಥವಾ ಬಳಿಗಳಿವೆ. ಬೆಳ್ಳಿ, ಬಂಗಾರ, ತೆನೆ, ಹೊಂಗೆ– ಹೀಗೆ ಕುಲದೇವತಾ ಲಾಂಛನಗಳಿರುತ್ತವೆ ಈ ಬಳಿಗಳಿಗೆ. ಬೆಳ್ಳಿ ಕುಲದವರು ಬೆಳ್ಳಿಯನ್ನು ಮುಟ್ಟರು ; ಹೊಂಗೆಯುವರು ಹೊಂಗೆಯನ್ನು ಮುಟ್ಟರು – ಹೀಗೆ.

ಒಂದೊಂದು ಪೊಡು ಅಥವಾ ಹಾಡಿಗೂ ಒಬ್ಬೊಬ್ಬ ಯಜಮಾನ. ಈ ಊರು ಯಜಮಾನನಿಗೆ ಕೋಲುಕಾರ, ಚಿಕ್ಕ ಯಜಮಾನ ಸಹಾಯಕರು. ಹತ್ತಾರು ಹಾಡಿಗಳ ಮೇಲೆ ಒಬ್ಬ ಗಡಿ ಯಜಮಾನ. ಇವನಿಗೆ ಮೇಲೆ ದೇಶ ಸೆಟ್ಟರು, ದೊಡ್ಡ ಸೆಟ್ಟರು. ಇವರುಗಳು ಸೋಲಿಗರಲ್ಲ ; ಸೋಲಿಗರ ಪವಿತ್ರ ವಸ್ತುಗಳನ್ನಿಟ್ಟು ಕೊಂಡಿರುವ ಇತರ ಜಾತಿಗಳವರು ; ಇದು ವಂಶಪರಂಪರೆಯಿಂದ ಬರುತ್ತದೆ. ಯಜಮಾನ, ಗಡಿ ಯಜಮಾನ ಚುನಾಯಿತರು.

ಇತರ ಆದಿವಾಸಿಗಳಲ್ಲಿ ಸೆಟ್ಟರು, ಗಡಿ ಯಜಮಾನ ಈ ಅಧಿಕಾರಿಗಳಿಲ್ಲ. ಜೇನು ಕುರುಬರು ಯಜಮಾನನನ್ನು ಮೊದಲಿ ಎನ್ನುವರು ; ಹಸಲರಲ್ಲಿ ಜಾತಿಕೂಟಕ್ಕೆ ಕಟ್ಟೆಮನೆ ಎಂದೂ, ಯಜಮಾನನನ್ನು ಹೆಗ್ಗಡೆ ಅಥವಾ ಗೌಡ ಎಂದೂ ಕರೆಯು ವರು.

ಸಾಧಾರಣವಾಗಿ ಗಂಡು ಸಂತಾನದಿಂದಲೇ ಕುಲನಿರ್ಧಾರವಾಗುವುದು. ಹಸಲ ರಲ್ಲಿ ಕೆಲವರು ಮಾತ್ರ ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುವರು.

## 9. ಸಂಗೀತ, ಕಲೆ

ಕರ್ನಾಟಕದ ಆದಿವಾಸಿಗಳು ಸಂಗೀತ, ನೃತ್ಯ ಕಲೆಗಳಿಗೆ ಹೆಸರಾದವರಲ್ಲ. ನೇಯ್ಗೆ ಮೊದಲಾದ ಕಸುಬುಗಳೂ ಅವರಲ್ಲಿಲ್ಲ. ತಮ್ಮ ಮೂಲವನ್ನು ಕುರಿತು, ಕುಲನಾಯಕರುಗಳ ಸಾಹಸವನ್ನು ಕುರಿತು ಆಡುಮಾತಿನ, ಹಾಡಿನ ಸಾಹಿತ್ಯವಿದೆ. ತಮ್ಮ ಅವಶ್ಯಕತೆಗಳಿಗೆಂದು ಕೊಳಲು, ಡೋಲು, ಚಂಡೆಗಳ ವಾದ್ಯಗೋಷ್ಠಿಗಳಿವೆ.

## 10. ಇಂದು-ಮುಂದು

ಅರಣ್ಯವನ್ನೇ ನಂಬಿದ್ದ ಆದಿವಾಸಿಗಳ ಜೀವನ ಕ್ರಮ ಏರು ಪೇರಾಗಿದೆ. ಅರಣ್ಯಗಳು ಕುಗ್ಗಿವೆ; ಕಾನೂನುಗಳು ಕುಮ್ರಿ ವ್ಯವಸಾಯವನ್ನು ತಡೆದಿವೆ. ನಿಂತಲ್ಲಿಯೇ ನೆಲೆಸಿ ಕೃಷಿ ಜೀವನಕ್ಕೆ ಹೊಂದಿಕೊಳ್ಳುವುದು ಕಷ್ಟ ಸಾಧ್ಯವಾಗಿದೆ.

ಆದರೆ ಕ್ರಮೇಣ ತೋಟಗಾರಿಕೆ, ವ್ಯವಸಾಯ, ಕುಶಲ ಕಸುಬುಗಳು, ಆಧುನಿಕ ವಿದ್ಯಾಭ್ಯಾಸ–ಪ್ರಸಾರವಾಗುತ್ತಿವೆ. ಬೆಟ್ಟ ಕುರುಬರು, ಹಕ್ಕಿಪಿಕ್ಕಿಗಳು, ಸೋಲಿಗರು, ಲಂಬಾಣಿಗಳು ಕೃಷಿ ಜೀವನಕ್ಕೆ ಹೊಂದಿಕೊಳ್ಳುತ್ತಿದ್ದಾರೆ. ಇತರರು ಅದೇ ಹಾದಿ ಹಿಡಿಯುತ್ತಿದ್ದಾರೆ. ಈ ಹೊಂದಾಣಿಕೆ ಸಂಪೂರ್ಣವಾಗುವಾಗ್ಯೆ ಕರ್ನಾಟಕದ ಆದಿವಾಸಿಗಳು ಕರ್ನಾಟಕದ ಪ್ರಭಾವಶಾಲಿ ಹಿಂದೂ ಸಮಾಜದಲ್ಲಿ ಜಾತಿ ಗುಂಪು ಗಳಾಗಿ ಬಿಟ್ಟಿರುತ್ತಾರೆ; ಆದಿವಾಸಿಗಳಾಗಿರುವುದಿಲ್ಲ.

### ಆಧಾರಗಳು


BOOKS

1. Mitra A — Census of India–1961, Vol. I India. Part V A (i) Special Tables for Scheduled Castes and Tribes.
2. Balasubramanyam K — Census of India 1961 Vol. XI Mysore, Part V A, Special tables for S. C. and S. T.
3. Balasubramanyam K — Part V B. (In Mauscript)
4. Iyengar M V — Census of India 1931, Vol. XXI – Mysore, Part I, Report.
5. H. V. Nanjundayyar & L K A Iyer — The Mysore Tribes and Castes Articles Vol. II, III and IV.
6. A. Aiyappan — The tribes of South and South West India. (The Adivaris G.O.I. Publication)
7. S. K. Chatterji — Tribal languages, (Ibid)
8. P. K. Misra — Economic Development among Jenu Kurubas, (Man in India- March 1970).

# ಚಕ್ರ

ಎಚ್. ಎಚ್. ಗಂಗಾಧರಾಚಾರ್

ಸತ್ತರೆ ಹುಟ್ಟುವ ಭರವಸೆಯಿಲ್ಲದ್ದರಿಂದ
ಮಾನವ ಜೀವಿತ ಕಾಲ ಅತ್ಯಮೂಲ್ಯವೆಂದು
ಕ್ಷಣಕ್ಷಣಕ್ಕೂ ಬೆಲೆಕಟ್ಟಿ ಬದುಕಬೇಕೆನಿಸುತ್ತೆ.
ಇಲ್ಲಿ-ಕಂಡು, ಕೇಳಿ, ಅನುಭವಿಸಿದ್ದು,
ಕಾಲಾಂತರದಲ್ಲಿ ಎಷ್ಟೋ ಮರೆತದ್ದು
ಎಲ್ಲ ಸೇರಿ ಬದುಕಿಗೊಂದು ಆಕಾರ
ಬಂದರೂ ಬರಬಹುದು!
ಪುರಾತನ ಭೂಮಿಯಲ್ಲಿ
ಹೂಡಿದ ಬಲೆಯಲ್ಲಿ
ನಳಪಾಕ, ಭೀಮಪಾಕಗಳಂತೆ
ನನ್ನದೂ ಒಂದು ಪಾಕ.

ಸತ್ತರೈತನ ಬದಲಿ ಮತ್ತೊಬ್ಬ ರೈತ
ಈ ಹೊಲ ಉತ್ತು, ಬೀಜ ಬಿತ್ತಿ
ಬೆಳೆ ಬೆಳೆಯುತ್ತಾನೆ.

ಯಾರ ಗೆಳೆತನ–ಹಗೆತನಗಳನ್ನೂ ಲೆಕ್ಕಿಸದೆ,
ಯಾರ ಶೋಧನೆ, ಸಾಧನೆಗಳ ಅವಶ್ಯಕತೆಯೂ ಇಲ್ಲದೆ.
ನಿರಂತರ ತಿರುಗುವ ಈ ಬ್ರೇಕಿಲ್ಲದ ಚಕ್ರದಡಿಯಲ್ಲಿ
ಹುಟ್ಟಿ, ಬದುಕಿ, ಸತ್ತವರ ಸಂಖ್ಯೆಗೆ ಲೆಕ್ಕವಿಲ್ಲ.

ವಿಧವೆ-ವಿಧುರರಿಗೆಲ್ಲ ಹೊಸ ಸಂಬಂಧಗಳು ಕುದುರಿ
ಸತ್ತವರ ನೆನಪೇ ಇಲ್ಲದಂತೆ ಸಾಗಿರುವ
ಈ ಜೀವನ ಕ್ರಮದಲ್ಲಿ
ಹುಟ್ಟಿದ್ದು, ಬದುಕಿದ್ದು, ಸಾಯುವುದು
ಎಲ್ಲಾ ಕನಸೆ?

ಅಲ್ಪಾಯು-ಶತಾಯುಷಿಗಳು
ಸಾವಿನಲ್ಲಿ ಸರಿಸಮರಾಗಿ,
ಬದುಕಿನ ಬೆಲೆ ಬದುಕಿದ್ದ ದಿನಕ್ಕಷ್ಟೇ ಸೀಮಿತವೆನಿಸಿ
ತಿರುಗುವ ಚಕ್ರದ ಹಲ್ಲುಗಳಷ್ಟೇ
ನನ್ನ ಕಣ್ಣು ತುಂಬುತ್ತವೆ.

# ಜೀವರಾಶಿಯಲ್ಲಿ ಸಂಘಟನೆ

**ಡಿ. ಶೇಷಗಿರಿರಾವ್**

ವಿಶ್ವದಲ್ಲಿ ನಿಜವಾದ ಏಕಾಂತವಾಸ ಸಾಧ್ಯವಿಲ್ಲದ್ದು ; ಇರಲು ಜಾಗ, ಪೋಷಣೆಗೆ ಆಹಾರ, ಸಂತಾನೋತ್ಪತ್ತಿಗೆ ಅವಕಾಶ. ಈ ಪೂರೈಕೆಗಳಿಗೆ ಬೇರೆ ಜೀವಿಗಳ ಸಂಪರ್ಕ ಅನಿವಾರ್ಯ. ನನ್ನ ಪಾಡಿಗೆ ನಾನು ಇನ್ನೊಂದು ಜೀವಿಯ ಗೋಜಿಗೆ ಹೋಗದೆ ಇರುವೆನೆಂಬ ನಿರ್ಲಿಪ್ತ ಮನೋಭಾವನೆ ಸಲ್ಲದು, ಏಕೆಂದರೆ ಜೀವರಾಶಿಯಲ್ಲಿ ಅನ್ಯೋನ್ಯಾಶ್ರಯವೇ ಅಲ್ಲದೆ ಸಂಖ್ಯಾಬಲದ ಒತ್ತಡವೂ ಇರುವುದು. "ಮಾಡು ಅಥವ ಮಡಿ"–ಇದು ಪ್ರಕೃತಿ ನಿಯಮವೂ ಹೌದು. ಸನಿಹದ ತನ್ನ ಬಗೆಯ ಜೀವಿಗಳೊಡನೆ ಪ್ರಾಥಮಿಕ ಅವಶ್ಯಕತೆಗಳಿಗಾಗಿ ತಿಕ್ಕಾಟ, ಅನ್ಯಜೀವಿಗಳ ಆಕ್ರಮಣ ಎದುರಿಸುವುದು ಅಥವ ಪರಜೀವಿಗಳ ಮೇಲೆ ಎರುಗುವುದು ಇದು ಕಠೋರ ನೈಸರ್ಗಿಕ ಸತ್ಯ.

ಸಸ್ಯ ವರ್ಗದಲ್ಲಿ ಇದು ಬಹುಶಃ ಎದ್ದು ಕಾಣದಿರಬಹುದು. ಆದರೆ ಪ್ರಾಣಿ ಪ್ರಪಂಚದಲ್ಲಿ ಸಂಘರ್ಷಣೆಯು ಮಟ್ಟವನ್ನು ಮುಟ್ಟಿದೆ. 'ಅರಣ್ಯ ನಿಯಮ' (law of the jungle) ಮತ್ತು 'ಹಲ್ಲಿಗೆ ಹಲ್ಲು' (tooth for tooth)- ಈ ಮಾತುಗಳು ಪ್ರಾಣಿಪ್ರಪಂಚಕ್ಕೂ ಅನ್ವಯಿತ. ಜೀವಿಗಳಲ್ಲಿ 'ಸಹವಾಸ' (association)ದ ಶಾಖೋಪಶಾಖೆಗಳಲ್ಲಿ ಒಂದೆರಡರ ಬಗ್ಗೆ ಸೂಕ್ಷ್ಮವಾಗಿ ವಿವೇಚಿಸುವುದೇ ಈ ಪುಟ್ಟ ಲೇಖನದ ಮುಖ್ಯ ಉದ್ದೇಶ.

**'ಸಹವಾಸ'ದ ಪ್ರಾಕಾರಗಳು**

ಜೀವರಾಶಿಯ ವೈವಿಧ್ಯತೆ, ಸಂಖ್ಯಾ ನಿಬಿಡತೆ, ಇವನ್ನು ಗಮನಿಸಿದಾಗ ಅವುಗಳಲ್ಲಿ ಸಹವಾಸ ಗೋಜಾದ ಪಿಂಜಿ ಎಂಬಂತೆ ಭಾಸವಾಗುತ್ತದೆ. ಆದರೂ ವೈಜ್ಞಾನಿಕವಾಗಿ ಅಂದರೆ, ತತ್ವಾಧಾರದ ಮೇಲೆ ಈ ಗೊಂದಲಮಯ ಸಹವಾಸ ಎಂಬುದರ ವರ್ಗೀಕರಣ ಸಾಧ್ಯ. ವಿಶ್ವಾದ್ಯಂತ ಜೀವರಾಶಿಯೆಲ್ಲಾ ಒಂದೇ, ಯಾವ ಮೂಲೆಯಲ್ಲಿ ಯಾವೊಂದಕ್ಕೆ ಏನಾದರೂ ಮಿಕ್ಕೆಲ್ಲದರ ಮೇಲೂ ಪರಿಣಾಮವುಂಟು (ಇದರಲ್ಲಿ ಸತ್ಯವಿಲ್ಲದೇ ಇಲ್ಲ) ಎಂಬ ಉದಾತ್ತ ಸಿದ್ಧಾಂತವನ್ನು ಸಧ್ಯಕ್ಕೆ ಬದಿಗಿಟ್ಟು ನೋಡಲಾಗಿ, ಒಂದು 'ಸನ್ನಿವೇಶ' (ಇದರ ವಿಸ್ತೀರ್ಣ, ವ್ಯಾಪ್ತಿ ಇಷ್ಟೇ ಎಂದು ನಿಖರವಾಗಿ ಹೇಳಲಾಗುವುದಿಲ್ಲ) ದೊಳಗಿನ ಜೀವಿಗಳನ್ನು, ಪರಸ್ಪರ ಸಂಬಂಧದ ಆಧಾರದ ಮೇಲೆ ಹೀಗೆ ವಿಂಗಡಿಸಬಹುದು:

ಅ. ನೇರ ಸಂಬಂಧವಿಲ್ಲದವು; ಉದಾ; ನದಿಯ ಮೀನು ಮತ್ತು ಬೇಲಿಯ ಚಿಟ್ಟೆ.

ಆ. ಅನಿಶ್ಚಿತ ಅಥವ ಆಕಸ್ಮಿಕವಾದ ಕ್ಷಣಿಕ ಸಂಬಂಧ; ಉದಾ : ಹಾರಾಡುತ್ತಿರುವ ಹಕ್ಕಿ ಮರದಮೇಲೆ ಒಂದು ನಿಮಿಷ ಕೂಡುವುದು.

ಇ. **ಸಹಜೀವತ್ವ**-ಅಥವ **ಕೂಡುಜೀವತ್ವ**-(Symbiosis) : ಎರಡು 'ಜಾತಿ' ಜೀವಿಗಳು ಕೂಡಿಕೊಂಡು, ಆ ಸಮಯದಲ್ಲಿ 'ಶಾರೀರಿಕ ವಿನಿಮಯ'(physiological exchange) ಅಂದರೆ, ಪೋಷಣಾಂಶಗಳ ವರ್ಗಾವಣೆ ಆಗುವಿಕೆ. ಆ ಎರಡರಲ್ಲಿ ಸಣ್ಣದು ಅಥವ ಗ್ರಾಹಕ ಜೀವಿಯನ್ನೂ 'ಸಹಜೀವಿ' ಅಥವ 'ಕೂಡುಜೀವಿ' (Symbiont )ಎಂದೂ (ಬೇರೆ ವಿಶೇಷ ಹೆಸರುಗಳೂ ಉಂಟು) ಮತ್ತು ದೊಡ್ಡದು ಅಥವ ಕೊಡುವ ಜೀವಿ 'ಆತಿಥೇಯ' (host) ಎಂದೂ ಹೇಳುವುದುಂಟು. ಇದರಲ್ಲಿ ಮೂರು ಉಪ ಶಾಖೆಗಳನ್ನು ಗುರುತಿಸಬಹುದು, ಯಾವುವೆಂದರೆ:

(i) **ಪರಸ್ಪರಾವಲಂಬಿತ್ವ** (Mutualism): ಎರಡು ಬಗೆ ಜೀವಿಗಳು ಪರಸ್ಪರ ಅನುಕೂಲಕ್ಕಾಗಿ ಒಟ್ಟಿಗೆ ಬಾಳುವುದು; ಉದಾ: ಗೆದ್ದಲು ಮತ್ತು ಅದರ ಕರುಳುನಿವಾಸಿ ಕಶಾಂಗಧಾರಿ ಏಕಾಣು ಪ್ರಾಣಿ (Flagellate). ದಾರು (–ಮರ) ಭಕ್ಷಕ ಗೆದ್ದಲು ಸೆಲ್ಯುಲೋಸ್ (Cellulose) ಒದಗಿಸಲಾಗಿ ಕಶಾಂಗಧಾರಿ ಅದನ್ನು ಅರಗಿಸಲು ಬೇಕಾದ ಕಿಣ್ವ (enzyme) ಉತ್ಪತ್ತಿ ಮಾಡುತ್ತದೆ.

(ii) **ಆಶ್ರಿತ ಜೀವತ್ವ** (Commensalisam) : ದೊಡ್ಡ ಜೀವಿಯೊಂದಿಗೆ ಸಣ್ಣದು ಸೇರಿಕೊಂಡು, ಅದಕ್ಕೆ ತೊಂದರೆ ಮಾಡದೆ ತನ್ನ ಆಹಾರವನ್ನು ಸಂಪಾದಿಸಿಕೊಳ್ಳುವುದು. ಆಶ್ರಿತ ಜೀವಿಗೆ 'Commensal' (ಕಮೆನ್ಸಲ್) ಎನ್ನುವುದುಂಟು. ಉದಾ : ಸಮುದ್ರ ಹೂವು (Sea–anemone) ಎಂಬ ಪ್ರಾಣಿಯ ಗ್ರಹಣಾಂಗಗಳ ನಡುವೆ ವಾಸಿಸುತ್ತಾ, ಅದು ಮೀನು ನುಂಗಿದಕೂಡಲೇ ಅದರ ತೆರದ ಬಾಯಿಯೊಳಗೆ ನುಗ್ಗಿ ಊಟ ಗಿಟ್ಟಿಸಿಕೊಳ್ಳುವ ಆಶ್ರಿತ ಮೀನು, ಸೀ-ಅರ್ಚಿನ್ (Sea–urchin) ಎಂಬ ಕಡಲುವಾಸಿ ಪ್ರಾಣಿಯ ಬೆನ್ನು ಕುಳಿಯ ಖಾಯಂ ನಿವಾಸಿ ಏಡಿ, ಮೊಸಳೆಯ ತೆರೆದ ಬಾಯಿಯೊಳಕ್ಕೆ ನುಗ್ಗಿ ಹಲ್ಲುಸರದಿಯೊಳಗಿನ ತುಣುಕುಗಳನ್ನು ದಕ್ಕಿಸಿಕೊಳ್ಳುವ ಹಕ್ಕಿ-ಇವು ಉದಾಹರಣೆಗಳು.

(iii) **ಪರೋಪಜೀವಿತ್ವ** ಅಥವ **ಪರಾವಲಂಬಿತ್ವ** ( Parasitism ): ಎರಡು ಬಗೆ ಜೀವಿಗಳ ಈ ಸಂಬಂಧದಲ್ಲಿ ಅತಿಥೇಯನಿಂದ ಬಲಾತ್ಕಾರವಾಗಿ 'ಪರೋಪಜೀವಿ' ಅಥವ 'ಪರಾವಲಂಬಿ' ( Parasite ) ಆಹಾರ ಹರಣ ಮಾಡುವುದರಿಂದ ಆತಿಥೇಯನ ಸ್ವಾಸ್ಥ್ಯಕ್ಕೆ ಧಕ್ಕೆಯುಂಟಾಗುವುದು; ಇದು ಬಲವಂತದ ಸಂಬಂಧ, ಆತಿಥೇಯನಿಗೆ ಕಷ್ಟನಷ್ಟ. ಉದಾ : ಮನುಷ್ಯನನ್ನೂ ಪೀಡಿಸುವ ಮಲೇರಿಯಾ ಅಣುಜೀವಿ, ದುಂಡುಕ್ರಿಮಿ, ಚಪ್ಪಟೆಕ್ರಿಮಿ, ಹೇನು, ಚಿಗಟ, ತಗಣೆ, ಇತ್ಯಾದಿ.

ಈ. **ಹಿಂಸ್ರಪ್ರವೃತ್ತಿ** (Predatorism) : ಎರಡು ಬಗೆ ಜೀವಿಗಳ ಈ ಸಂಬಂಧದಲ್ಲಿ ಕ್ರೂರ ಪ್ರವೃತ್ತಿಯು 'ಭಕ್ಷಕಜೀವಿ' (Predator) 'ಆಹಾರ ಜೀವಿ' ಅಥವ 'ಬಲಿಜೀವಿ' (prey) ಯನ್ನು 'ಒಂದೇ ಏಟಿಗೆ' ಮುಗಿಸಿ ಭಕ್ಷಿಸುವುದು. ಉದಾ : ಮಾಂಸಾಹಾರಿ ಕಾಡುಮೃಗಗಳಿಂದ ಸಸ್ಯಾಹಾರಿಗಳ ಬೇಟೆ, ಬಕಪಕ್ಷಿ ಮೀನು ಭಕ್ಷಿಸುವುದು, ಹಾವು, ಕಪ್ಪೆ ಇಲಿ ನುಂಗುವುದು, ಇತ್ಯಾದಿ.

ಇವೇ ಸಹಜೀವನದ ಮುಖ್ಯ ಮಜಲುಗಳು. ಅನಿಶ್ಚಿತ ಸಂಪರ್ಕ, ಪರಾಸ್ಪರ ವಲಂಬಿತ್ವ, ಆಶ್ರಿತ ಜೀವತ್ವ, ಪರಾವಲಂಬಿತ್ವ,- ಇವು ಅನುಕ್ರಮವಾಗಿ, ಒಂದ ರಿಂದೊಂದಕ್ಕೆ ಸಾಗುವ ಮೆಟ್ಟಲುಗಳಂತಿರುವುದನ್ನು ಗಮನಿಸಬಹುದು. ಅಕಸ್ಮಾತ್ತಾಗಿ ಒಂದೇ ಸ್ಥಳದಲ್ಲಿ ವಾಸಿಸಬೇಕಾಗಿ ಬಂದ ಜೀವಿಗಳು ಅನ್ಯೋನ್ಯವಾಗಿ ಪ್ರಾರಂಭಿಸಿ, ಚಿಕ್ಕದು ದೊಡ್ಡದರ ಆಶ್ರಯ ಪಡೆದು ಮುಂದೆ ಅದರ ಬೆನ್ನೇರಿ, ಉಪಜೀವಿಯಾಗಿರ ಬಹುದೆಂಬ ವಾದ ಸಮಂಜಸವಾದರೂ ಹೀಗೆಯೇ ಬೆಳೆಯಿತೆಂದು ಹೇಳಲು ಸಾಕ್ಷ್ಯಾ ಧಾರಗಳಿಲ್ಲ. ಹಿಂಸ್ರಪ್ರವೃತ್ತಿಯೂ ಆಕಸ್ಮಿಕ ಸಂಪರ್ಕದಿಂದಲೇ ಉಗಮವಾಗಿರಬಹು ದಾದರೂ ಬೇರೆ ಹಾದಿಯಲ್ಲಿ ಸಾಗಿರಬೇಕು.

ಪರಾವಲಂಬಿತ್ವ ಕುರಿತು ಒಂದು ಮಾತು. ಜೀವಕೋಟಿಯಲ್ಲಿ (ಅದರಲ್ಲೂ ಪ್ರಾಣಿ ಪ್ರಪಂಚದಲ್ಲಿ) ಇದು ಎಷ್ಟು ಸರ್ವಸಾಮಾನ್ಯವೆಂದರೆ ತನಗಿಂತ ಸಣ್ಣ ಜೀವಿಗೆ ತನ್ನೊಳಗೆ ಜಾಗವಿರಬಹುದಾದ ಯಾವ ಜೀವಿಯೂ ಈ ಅನಿಷ್ಟವನ್ನು ತಪ್ಪಿಸಿ ಕೊಳ್ಳಲಾರದು ಎಂದು ಹೇಳುವುದುಂಟು. ಆಂಗ್ಲ ಕವಿ ಈ ಬಗ್ಗೆ ಹೀಗೆ ಹೇಳಿ ದ್ದಾನೆ:

"ದೊಡ್ಡ ಚಿಗಟಗಳ ಮೇಲೆ ಸಣ್ಣ ಚಿಗಟಗಳ ಸವಾರಿ
ಸಣ್ಣ ಚಿಗಟಗಳ ಮೇಲೆ ಇನ್ನೂ ಪುಟ್ಟ ಚಿಗಟಗಳು
ಈ ರೀತಿ ಅನಂತ ಪರಂಪರೆ..............

ಈ ಪರಂಪರೆಗೆ ಮನುಷ್ಯಪ್ರಾಣಿ ಅಪವಾದವೇನಲ್ಲವೆಂಬುದು ಮುಂದೆ ಪ್ರಾಸಂಗಿಕ ವಾಗಿ ವೇದ್ಯವಾಗುತ್ತದೆ.

**ಸಂಘರ್ಷಣೆ ಏಕೆ ?**

ಯಾವ ಜೀವಿಯೇ ಆಗಲಿ, ಅದರಲ್ಲೂ ಪ್ರಾಣಿವರ್ಗಕ್ಕೆ ಸೇರಿದ್ದು, ತನ್ನ ಸ್ವಾಸ್ಥ್ಯಕ್ಕೆ ಧಕ್ಕೆ ತರುವ ಪರಿಸ್ಥಿತಿಯನ್ನು ಪ್ರತಿಭಟನೆ ಇಲ್ಲದೆ ಒಪ್ಪಿಕೊಳ್ಳು ವುದಿಲ್ಲ; ಆ ಪರಿಸ್ಥಿತಿಯನ್ನು ಸಕ್ರಿಯವಾಗಿ ಎದುರಿಸುವ ಅಥವ ಅದರಿಂದ ದೂರ ಓಡಿಹೋಗುವ ಮೂಲಕ ಸಂರಕ್ಷಿಸಿಕೊಳ್ಳುವ ಪ್ರಯತ್ನಮಾಡಿ, ಸಾಧ್ಯವಾಗದಿದ್ದರೆ ಮಾತ್ರ ಸೋತುಹೋಗುವುದು. ಪ್ರಾಣಿ ಎಷ್ಟೇ ಸಣ್ಣದಿರಲಿ, ಮೃದುರಚನೆಯ ದಿರಲಿ, ಸಂರಕ್ಷಣಾ ಸಾಧನಗಳಿಲ್ಲದ್ದಿರಲಿ, ಗೋಪಿನ ಕಥೆಯಲ್ಲಿನ ಪುಣ್ಯಕೋಟಿಯಂತೆ

ಇಚ್ಛಾಪ್ರವೃತ್ತಿಯಿಂದ ಆಕ್ರಮಣಕಾರ ಪಶುವಿಗೆ ಅರ್ಪಿಸಿಕೊಳ್ಳುವುದಿಲ್ಲ, ಏಕೆಂದರೆ ಸ್ವಸಂರಕ್ಷಣೆ ಪ್ರಾಣಿವರ್ಗದ ಹುಟ್ಟುಗುಣ. ಪ್ರಾಣಕ್ಕೆ ಸಂಚಕಾರ ಒದಗಿದಾಗ ಕ್ರಿಮಿಯೂ ಎದುರುಬೀಳುತ್ತೆ ಎಂಬ ಆಂಗ್ಲ ಭಾಷೆಯ ನಾಣ್ಣುಡಿಯೇ ಇದೆ. ಅಂತೂ ಆಕ್ರಮಣಕಾರಿಪ್ರಾಣಿ (ಪರೋಪಜೀವಿ, ಭಕ್ಷಕಜೀವಿ) ಗೂ, ಆಕ್ರಮಣ ಕ್ಕೊಳಗಾದ ಪ್ರಾಣಿ (ಆತಿಥೇಯಜೀವಿ, ಬಲಿಜೀವಿ) ಗೂ ಹೆಣಗಾಟ ಅಥವಾ ಹೋರಾಟ ಅನಿವಾರ್ಯ. ಈ ದ್ವಂದ್ವ ಯುದ್ಧಕ್ಕೆ ಒಂದೇ ರೀತಿಯ ಶಸ್ತ್ರಾಸ್ತ್ರ ಗಳಾಗಲಿ, ನಿಯಮಗಳಾಗಲಿ ಇರಬೇಕಾಗಿಲ್ಲ ; ಕಾದಾಡುವ ಜೀವಿಗಳ ಸ್ಥಾನಮಾನ, ಗಾತ್ರ, ರೂಪ, ರಚನೆ ಮುಂತಾದ ಅಂಶಗಳಿಗೆ ಅನುಗುಣವಾಗಿರುವುವು, ಆಕ್ರಮಣ ಮತ್ತು ರಕ್ಷಣಾ ಸಾಧನಗಳು.

**ಆಕ್ರಮಣ, ರಕ್ಷಣಾ ಸಾಧನಗಳು**

ರಾಮರಾವಣರ ಕಾಳಗದಲ್ಲಿ ಅಸ್ತ್ರ, ಪ್ರತ್ಯಸ್ತ್ರಗಳ ಸುರಿಮಳೆಯೇ ಆಯಿ ತಂತೆ ; ಒಬ್ಬಾತ ತೂರಿದ ಅಸ್ತ್ರವನ್ನು ನಿಷ್ಕ್ರಿಯಗೊಳಿಸಲು ಎದುರಾಳಿ ಪ್ರತ್ಯಸ್ತ್ರ ಬಿಡುವುದು, ಹೀಗೆ ವಾಯುಮಂಡಲವೆಲ್ಲಾ ಭಗ್ನ ಅಸ್ತ್ರಗಳಿಂದ ತುಂಬಿಹೋದವು. ಈ ಲೇಖನದ ವಸ್ತುವಾದ 'ಕೈಕೈ ಮಿಲಾವಣೆ' ಎಂದು ವರ್ಣರಂಜಿತವಾಗಿ ಕರೆಯ ಬಹುದಾದ ಮೇಲೆ ಬೀಳುವ – ಬಲಿ ಜೀವಿಗಳ ದ್ವಂದ ಕಾಳಗದಲ್ಲಿಯೂ ಅಸ್ತ್ರ ಪ್ರತ್ಯಸ್ತ್ರಗಳ ಪ್ರಯೋಗ ಕಾಣಬಹುದು. ಆಕ್ರಮಣಕಾರಿ ಜೀವಿ ತನ್ನ ಸ್ಥಾನಮಾನ, ಗಾತ್ರ, ರೂಪಗಳಿಗೆ ತಕ್ಕ ಆಕ್ರಮಣ ಸಾಧನಗಳನ್ನು ಪ್ರಯೋಗಿಸಲಾಗಿ, ಅವುಗಳ ಹರಿತ ಅಥವ ತೀಕ್ಷ್ಣತೆಯಿಂದ ಪಾರಾಗಲು ಯೋಗ್ಯ ರಕ್ಷಣಾ ಸಾಧನಗಳು ಬಲಿ ಜೀವಿಯ ಬತ್ತಳಿಕೆಯಲ್ಲಿರಬೇಕಾದ್ದು ಸಹಜ. (ಭೌತ ವಿಜ್ಞಾನದಲ್ಲಿ ಹೇಳುವಂತೆ "ಕ್ರಿಯೆ ಮತ್ತು ಪ್ರತಿಕ್ರಿಯೆ ಸಮ ಮತ್ತು ಅಭಿಮುಖ") ಈ ಸಂದರ್ಭದಲ್ಲಿ ಇದು ಹೇಗೆಂದು ಕೊಂಚ ನೋಡೋಣ.

ಸಿಂಹ, ಹುಲಿ, ಚಿರತೆ ಮುಂತಾದ ಹಿಂಸ್ರ ಪ್ರಾಣಿಗಳು ಹರಿತ ಉಗುರು, ಮೊನಚು ಹಲ್ಲುಗಳಿಂದ ಬಲಿಪ್ರಾಣಿ (ಎಮ್ಮೆ, ಹಸು, ಹುಲ್ಲೆ) ಯ ಮೇಲೆ ಎರಗಿ ದಾಗ ಅದು ಚೂಪು ಕೊಂಬು, ಗಡಸು ಗೊರಸು, ನಾಗಾಲೋಟ ಮುಂತಾದ ಸಾಧನ ಗಳಿಂದ ತನ್ನ ರಕ್ಷಣೆಗೆ ಪ್ರಯತ್ನಿಸುತ್ತದೆ. ಕ್ರೂರ ಮಾಂಸಾಹಾರಿ ಪಶುವಿಗೆ ಆಹಾರ ಪ್ರಾಣಿಯ ಅಗತ್ಯ ಎಷ್ಟು ಪ್ರಕೃತಿ ಸಮ್ಮತವೋ, ಆ ಆಹಾರ ಪ್ರಾಣಿ ಬದುಕಿರ ಬೇಕೆಂದು ಹಾತೊರೆಯುವುದೂ ಅಷ್ಟೇ ಪ್ರಕೃತಿ ಸಮ್ಮತ. ಇದು "ಬದುಕಿಗೆ ಹೋರಾಟ" (Struggle for existence) ಎಂಬ ಪ್ರಕೃತಿ ನಿಯಮದ ಒಂದು ರೂಪ, ಜೀವರಾಶಿಗೆಲ್ಲಾ ರಕ್ತಗತವಾಗಿ ಬಂದಿರುವ ಹುಟ್ಟುಗುಣ.

ಪ್ರತ್ಯಸ್ತ್ರ ಅಸ್ತ್ರಕ್ಕೆ ಸಾಟಿಯಾಗಿರಬೇಕು ; ಇದು ಸ್ವತಸ್ಸಿದ್ಧವಾದರೂ ಇಲ್ಲಿ ಒತ್ತಿ ಹೇಳಬೇಕಾದ್ದು. ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೇ, ಉಗುರಿನಲ್ಲಿ ಹೋಗು

ವುದಕ್ಕೆ ಕೊಡಲಿಯೇ, ನೊಣಕ್ಕೆ ಚಮ್ಮಟಿ ಏಟೇ, ಎಂಬ ಸಾಮತಿಗಳೇ ಇದಕ್ಕೆ ಸಾಕ್ಷಿ. ಒಟ್ಟಿನಲ್ಲಿ ಅಸ್ತ್ರ, ಪ್ರತ್ಯಸ್ತ್ರಗಳು ಪರಸ್ಪರ ಪ್ರತೀಕಾರಕವಾಗಿರಬೇಕು; ಎರಡನೆಯದಾಗಿ ಹಲ್ಲು, ಉಗುರು, ಕೊಂಬು, ಗೊರಸು–ಇವುಗಳಂತೆ ಸ್ಫುಟವಾಗಿ ಗೋಚರಿಸುವಂಥವಾಗಿರಬೇಕಾಗಿಲ್ಲ. ಅಂತಿಮ ವಿಶ್ಲೇಷಣೆಯಲ್ಲಿ ಎಲ್ಲಾ ಜೀವಿಗಳನ್ನೂ ರಸಾಯನಿಕ, ಜೀವರಸಾಯನಿಕಘಟಕ ಮತ್ತು ಪ್ರಕ್ರಿಯೆ–ಪ್ರತಿಕ್ರಿಯೆಗಳಾಗಿ ಹೇಗೆ ಇಳಿಸಬಹುದೋ, ಅಂತೆಯೇ ಈ ಅಸ್ತ್ರ, ಪ್ರತ್ಯಸ್ತ್ರಗಳು ಸೂಕ್ಷ್ಮರೂಪದ ರಸಾಯನಿಕ ಸ್ವಭಾವವುಳ್ಳವಾಗಿರುವುದೂ ಸಾಧ್ಯ. ಇದನ್ನು ಕೊಂಚ ವಿಶದವಾಗಿ ವಿವೇಚಿಸೋಣ.

**ಮಾನವ ಕಂಟಕ ರೋಗಾಣುಗಳು**

ಸೃಷ್ಟಿಯ ಮಕುಟದಂತಿರುವ ಮನುಷ್ಯನಿಗೆ ಅಣುರೇಣು ಜೀವಿಗಳಿಂದ ಭಾರಿ ಆಘಾತ ಆಗಬಲ್ಲದೆಂಬುದು ಪ್ರಕೃತಿಯ ವಿಡಂಬನೆಯಂತಿದೆ! ಏಕಾಣು ಸಸ್ಯವರ್ಗ ಅಥವಾ ಬ್ಯಾಕ್ಟೀರಿಯಾ (Bacteia), ಶಿಲೀಂಧ್ರಗಳು (Fungi), ವಿಷಕಣಗಳು ಅಥವ ವೈರಸ್ಸುಗಳು (Vireses) ಏಕಾಣು ಪ್ರಾಣಿವರ್ಗ (Protozoa) ಇವು ಮುಖ್ಯ ಅಣುಜೀವಿ (ಅಥವ ಜೀವಾಣು) ಗುಂಪುಗಳು. ಈ ನಿಕೃಷ್ಟ ಜೀವಿಗಳು ಮಾನವನಿಗೆ ಬಳುವಳಿಯಾಗಿ ಕೊಟ್ಟಿರುವ ಮುಖ್ಯ ಸೋಂಕು ರೋಗಗಳನ್ನು ಪಟ್ಟಿಮಾಡಿ ನೋಡೋಣ:

**1 ಬ್ಯಾಕ್ಟೀರಿಯಾ ಕಾರಣವಾದ ಸೋಂಕುಗಳು**

ಶ್ವಾಸಕೋಶದ ಉರಿಯೂತ (Pneumonia)
ಗಲಗ್ರಂಥಿಯ ,, (Tonsillitis)
ಮಿದುಳಿನ ,, (Meningitis)
ಗಳ ಚರ್ಮರೋಗ (Diputhexia)
ಕೆಂಜ್ವರ (Scarlet fever)
ಕ್ಷಯ
ಕುಷ್ಠರೋಗ
ವಾಂತಿ ಭೇದಿ ರೋಗ (Cholera)
ಪ್ಲೇಗ್
ನಾಯಿಕೆಮ್ಮು
ಧನುರ್ವಾಯು (Tetanus)
ವಿಷಮಶೀತಜ್ವರ (Typhoid)
'ಗಾನೋರಿಯಾ' ಮೇಹರೋಗ (Gouorrhoea)
'ಸಿಫಿಲಿಸ್' ಮೇಹರೋಗ (Syphilis) ಇತ್ಯಾದಿ

2. **ವೈರಸ್ಸುಗಳಿಂದ ಉಂಟಾಗತಕ್ಕವು ;**

ಪೀತಜ್ವರ (yellow fever)
ನಾಯಿಹುಚ್ಚು (Rabies)
ಮಕ್ಕಳ 'ಪೋಲಿಯೋ' (Poliomyelitis)
ಕಾಮಾಲೆ (Jaundice)
ಇನ್‌ಫ್ಲ್ಯುಯೆಂಜ
ಸಿಡುಬು (Small Pox)
ಗದ್ದಕಟ್ಟು (Mumps)
ಸರ್ಪರೋಗ (Herpes)
ದಡಾರ (Measles)
ಶೀತಾಳೆ ಸಿಡುಬು (Chicken pox)
ಕ್ಯಾಸನೂರು ಅರಣ್ಯರೋಗ (Kyasanur Forest Disease)
ಇತ್ಯಾದಿ

3. **ಶಿಲೀಂಧ್ರಗಳ ಕೊಡುಗೆ :**

ಹುಳುಕಡ್ಡಿ (Ringworm)
ಬಾಯಿಹುಣ್ಣು (Thrush)
ಕಿವಿಯುೂತ (Otomycosis)
ಕ್ಷೌರದ ಕಜ್ಜಿ (Barber's iteh)
ಮುಂತಾದುವು.

4. **ಏಕಾಣು ಪ್ರಾಣಿಗಳಿಂದ :**

ಮಲೇರಿಯಾ
ಆಮಶಂಕೆ
ಕಾಲಾ ಅಸಾರ್ (Kala azar)
ನಿದ್ರಾವಾತ ರೋಗ (Sleeping Sickness)

ಮಾನವನ ಇತಿಹಾಸವನ್ನೇ ರೂಪಾಂತರಗೊಳಿಸುವ ಸಾಮರ್ಥ್ಯವುಳ್ಳ ಈ ಹುಲುಜೀವಿಗಳು ಪುರಾತನ ನಾಗರೀಕತೆಗಳನ್ನೂ ನಿರ್ನಾಮಗೊಳಿಸಿವೆ, ವಿಶ್ವ ಚರಿತ್ರೆಯ ಎಲ್ಲಾ ಯುದ್ಧಗಳಲ್ಲಿಯೂ ಮಡಿದ ಯೋಧರ ಬಹುಪಟ್ಟು ಸಂಖ್ಯೆಯನ್ನು ಆಹುತಿಗೊಂಡಿವೆ, ವೈದ್ಯಶಾಸ್ತ್ರದ ಪ್ರಗತಿಯ ಮೈಲಿಕಲ್ಲುಗಳ ಸ್ಥಾಪನೆಗೆ ಕಾರಣವಾಗಿವೆ ! ಸೃಷ್ಟಿಯ ಬಲು ಕೀಳು ಸ್ಥಾನದಲ್ಲಿರುವ, ಅತ್ಯಂತ ಸರಳ ರಚನೆಯುಳ್ಳ, ಬಲಶಾಲಿ ಸೂಕ್ಷ್ಮದರ್ಶಕೀಯ ಯಂತ್ರ(microscopes)ಗಳ ಮೂಲಕವೇ

ಕಾಣಿಸಿಕೊಳ್ಳುವ ಈ 'ಕ್ಷಣಮಾತ್ರ'ದವು ಮಾನವಕುಲವನ್ನು ಸುಲಿಗೆಮಾಡುವುವೆಂದರೆ ಎಂಥ ವಿಪರ್ಯಾಸ !

ವಾಸ್ತವದೃಷ್ಟಿಯಿಂದ ವಿಪರ್ಯಾಸವಲ್ಲ; ಅಣುಜೀವಿಗಳು ಸರ್ವಾಂತರ್ಯಾಮಿ (ಈ ಒಂದು ಅರ್ಥದಲ್ಲಿ), ವಾತಾವರಣದ-ಗಾಳಿ, ನೀರು, ಕಲ್ಲು, ಮಣ್ಣು, ಗಿಡಗೆಂಟೆ, ಪ್ರಾಣಿ, -ಎಲ್ಲೆಲ್ಲೂ ಇವು ಕಲ್ಪನೆಗೂ ನಿಲುಕದಷ್ಟು ಸಂಖ್ಯಾಬಲದಿಂದ ತುಂಬಿ ತುಳುಕಾಡುತ್ತಿವೆ. ಸ್ವಸ್ಥ ಮನುಷ್ಯನ ಮೈಮೇಲೆ, ಮೈಒಳಗೆ (ಕುಹರ, ಅವಕಾಶ, ಅಂಗ, ನಾಳ, ಕೊಳವೆಗಳಲ್ಲಿ) ಅನೇಕಾನೇಕ ಜೀವಾಣು ಜಾತಿಗಳ ದಟ್ಟ ಕಾನನಗಳೇ ಇರುವುವು. ಚರ್ಮದಮೇಲೆ ಚದುರಂಗುಲ ಜಾಗದಲ್ಲಿ ಎಷ್ಟೋ ಲಕ್ಷ ಬ್ಯಾಕ್ಟೀರಿಯಾ ಇರುವುವಂತೆ ! ಅವನ ಬಾಳಿನ ಹಾಸುಹೊಕ್ಕಾಗಿರುವ ಮಿತ್ರ ಅಣು ಜೀವಿಗಳ ಸಹವಾಸವಿಲ್ಲದೆ ಮನುಷ್ಯ ಜೀವಿಸಲಾರ; ಆತನ ಕರುಳಿನಲ್ಲಿ 'ಸಸ್ಯವನ'ವಿಲ್ಲದಿದ್ದರೆ ಪಚನಕ್ರಿಯೆಯೇ ಸಾಧ್ಯವಿಲ್ಲ, ಮತ್ತು ಆತನ ಕಿವಿಯ ಗುಗ್ಗೆಯಲ್ಲಿ 53 ಶಿಲೀಂಧ್ರ ಪ್ರಭೇದಗಳಿವೆಯೆಂದು ವಿಜ್ಞಾನಿಗಳ ಲೆಖ್ಖಾಚಾರ ! ಈ ಜೀವಾಣುಮಯ ಪ್ರಪಂಚದಲ್ಲಿ ಕೆಲವಕ್ಕೆ ಮನುಷ್ಯ ಹೊಂದಿಕೊಳ್ಳಲಾರದೆ, ಅಹಿತ ಪರಿಣಾಮಗಳುಂಟಾಗುವುದರಲ್ಲಿ ಆಶ್ಚರ್ಯವೇನಿದೆ ?

## ಆಕ್ರಮಣ–ಪ್ರತೀಕಾರ

ಮೇಲಿಂದ ಪುಟ್ಟ ಕಲ್ಲು ಎಸೆದಾಗ ಭೂಮಿಯೇ ಎದ್ದು ಬಂದು ಅದನ್ನು ಆತುಕೊಳ್ಳುತ್ತದೆಂದು ಓರ್ವ ವಿಜ್ಞಾನಿ ಗುರುತ್ವಾಕರ್ಷಣೆ ಕುರಿತು ವರ್ಣರಂಜಿತವಾಗಿ ಹೇಳಿದ್ದಾನೆಯಷ್ಟೆ. ಅಂತೆಯೇ 'ಪರ್ವತಾಕಾರ' ದ ಮಾನವ ಶರೀರ ಅಣುಮಾತ್ರದ ರೋಗಕಾರಕ ಅಕ್ರಮ ಪ್ರವೇಶಮಾಡಿದಾಗ ಅದಕ್ಕೆ ಶಾಸ್ತಿ ಮಾಡಲು ತಯಾರಾಗಿದೆ. ಈ ತಯಾರಿಕೆಯೇ ಅದರ 'ಸಂರಕ್ಷಣಾ ವ್ಯವಸ್ಥೆ" (defence mechanism). ಅದು ಕಾರಣಾಂತರದಿಂದ ಹದಗೆಟ್ಟಾಗ ಅಥವ ಕ್ರಿಯಾಶೀಲತೆ ಕಳೆದುಕೊಂಡಾಗ ಮಾತ್ರ 'ರೋಗಸ್ಥಿತಿ' ಉಂಟಾಗುತ್ತದೆ. ಈ ಸ್ವಾರಸ್ಯಕರ ವಿಷಯದ ಸಂಪೂರ್ಣ ಪರಿಚಯಕ್ಕೆ ಈ ಪುಟ್ಟ ಲೇಖನದಲ್ಲಿ ಅವಕಾಶವಿಲ್ಲ, ಒಂದೆರಡು ಹೆಗ್ಗುರುತುಗಳನ್ನು ಮಾತ್ರ ಪರಿಶೀಲಿಸಿ, ಮುಗಿಸೋಣ.

ರೋಗಕಾರಕ ಜೀವಾಣುಗಳ (ಇವುಗಳನ್ನೂ 'ರೋಗಾಣು' ಗಳೆನ್ನಬಹುದು) ಪ್ರವೇಶವನ್ನು ತಡೆಗಟ್ಟುವ ಸ್ವಾಭಾವಿಕ ರಕ್ಷಣಾ ವ್ಯವಸ್ಥೆ (natural immunity) ಯನ್ನು ಮನುಷ್ಯ ಶರೀರದಲ್ಲಿ ಕಾಣಬಹುದು. ಮನುಷ್ಯ ದೇಹವೆಂಬ ಕೋಟೆಯ ಸಂರಕ್ಷಣೆಗೆ ಸುಸಜ್ಜಿತವಾಗಿ ನಿಂತಿರುವ ಚತುರಂಗಬಲದಂತಿದೆ, ಈ ರಕ್ಷಣಾ ವ್ಯವಸ್ಥೆ. ಇದರ ಮುಖ್ಯ ಅಂಗಗಳು ಯಾವುವೆಂದರೆ :

(i) ಯಾಂತ್ರಿಕವಾದ ಅಡ್ಡಗಟ್ಟೆಯುಂತಿರುವ ಚರ್ಮ.

(ii) ಮನುಷ್ಯ ಶರೀರಕ್ಕೆ ಹೊಂದಿಕೊಂಡು ಸಹಬಾಳ್ವೆ ನಡೆಸುತ್ತಿರುವ ಸಸ್ಯಸಮುದಾಯದ 'ಜೀವಾಣು ದ್ವೇಷ' (antibiotica) ಕ್ರಿಯೆ; ಉಗುಳು, ಯೋನಿಸ್ರಾವ,–ಇವುಗಳ ಬ್ಯಾಕ್ಟೀರಿಯಾ ಕೆಲವು ಜಾತಿ ರೋಗಕಾರಕಗಳ ಪ್ರವೇಶ ವನ್ನು ತಡೆಗಟ್ಟಬಲ್ಲವು.

(iii) ದೇಹದ್ರವ ಮತ್ತು ಸ್ರಾವಗಳಲ್ಲಿ ಜೀವಾಣುನಾಶಕ ವಸ್ತುಗಳಿರುವು ದುಂಟು; ರಕ್ತವನ್ನು ಜೀವಾಣು ನಾಶಕಗಳ ಭಂಡಾರ ಎಂದೇ ಕರೆಯಬಹುದು.

(iv) ರೋಗಾಣುಗಳಿಂದ ಪೀಡಿತವಾದ ಅಂಗಾಂಶ ಜೀವಕಣ (tissue cells) ಗಳಿಂದ ಬಿಡುಗಡೆ ಹೊಂದುವ ಜೀವಾಣು ನಾಶಕಗಳು.

(v) ರಕ್ತದ (ಅ) ಕಿರಿಕಣ (microphages) ಮತ್ತು ಬೃಹತ್ ಕಣ (macrophages) ಗಳೆಂಬ ಶ್ವೇತ ರಕ್ತಕಣ (white blood corpuscles) ಗಳ ಜೀವಾಣುನಾಶನ ಕ್ರಿಯೆ (Phagocytosis).

ಇಂಥ ಸುವ್ಯವಸ್ಥಿತ, ವಿವಿಧ ಪ್ರಾಕಾರದ ರಕ್ಷಣಾ ವ್ಯೂಹಗಳನ್ನೂ ದಾಟಿ ಕೊಂಡು ದಾಳಿನಡೆಸಲು ಬಂದ ರೋಗಾಣುಪಡೆಯನ್ನು ಎದುರಿಸಲು 'ನಿರ್ದಿಷ್ಟ ರಕ್ಷಣಾ ವ್ಯವಸ್ಥೆ' (Specific immunity) ರಣರಂಗಕ್ಕೆ ಧುಮುಕುತ್ತದೆ. ಇದರ ಬಗ್ಗೆ ಕೊಂಚ ವಿವರವಾಗಿ ನೋಡೋಣ.

**ಪ್ರತಿವಿಷಜನಕ, ಪ್ರತಿವಿಷವಸ್ತು**

ಆತಿಥೇಯ ಪ್ರಾಣಿ (ನಾವು ಈಗ ಮನುಷ್ಯನನ್ನು ಉದಾಹರಣೆಯಾಗಿ ತೆಗೆದು ಕೊಂಡಿದ್ದೇವೆ)ಯ ಮೇಲೆ ವಿಷಾಣುದಾಳಿಯ ಕ್ರಿಯೆ, ಅದಕ್ಕೆ ಪ್ರತೀಕಾರವಾಗಿ ಆತಿಥೇಯನ ಪ್ರತಿಕ್ರಿಯೆ,–ಇವೆರಡನ್ನೂ ರಸಾಯನಿಕ ಅಥವ ಜೀವರಸಾಯನಿಕ (biochemical) ಪರಿಭಾಷೆಯಲ್ಲಿ ಅಧ್ಯಯನ ಮಾಡಲು ಮಾತ್ರ ಸಾಧ್ಯ. ಇದಕ್ಕೆ ಕಾರಣ ಸ್ವಯಂವೇದ್ಯ ; ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಕೂಡಿಬರುವ ಈ ಅಣುಜೀವಿಗೆ ಹಲ್ಲಿಲ್ಲ, ಉಗುರಿಲ್ಲ ಮತ್ತು ತನಗೆ ಒಗ್ಗಿಬರುವ ಆತಿಥೇಯ ಅಂಗ, ಅಂಗಾಂಶದಲ್ಲಿ ನೆಲಸಿ, ರಸದ್ರವ್ಯ ಸೇವನೆ (ವಿನಿಮಯ)ಯ ಮೂಲಕ ಆ ಅಂಗ, ಅಂಗಾಂಶದ ಸ್ವಾಸ್ಥ್ಯ ಕದಡುತ್ತದೆ. ಈ ರಸಾಯನಿಕ ಕ್ರಿಯೆಗೆ ರಸಾಯನಿಕ ಪ್ರತಿಕ್ರಿಯೆಯೇ ಸೂಕ್ತತಾನೆ ?

ಶರೀರದ ಸ್ವಾಭಾವಿಕ ರಕ್ಷಣಾ ವ್ಯವಸ್ಥೆಯನ್ನು ಭೇದಿಸಿಕೊಂಡು ಮುನ್ನುಗ್ಗಿದ ವಿಷಾಣು (ಅರ್ಥಾತ್ ರೋಗಾಣು ಅಥವ ಅದರ ವಿಷ) 'ಪರಕೀಯ' ಸಸಾರಜನಕ (protein) ಅಥವ ಬೇರೆ ಬೃಹತ್ ಅಣುವಿನ (large molecular) ವಸ್ತುರೂಪ ದಲ್ಲಿ, ಯಾವುದಾದರೊಂದು ವಸ್ತುಧಾತು (ರಕ್ತ, ಶ್ಲೇಷ್ಮ, ಪಿತ್ತ, ಇತ್ಯಾದಿ)

(humours) ವಿನಲ್ಲಿ ಕಾಣಿಸಿಕೊಳ್ಳುವುದು. ಇದು ದೇಹದೊಳಗೆ ಅಕ್ರಮ ಪ್ರವೇಶ ಮಾಡಿದ ಮೂಲವಿಷವಸ್ತುವೇ ಆಗಿರದೆ, ಇದರ ವಿರುದ್ಧ ಪ್ರತಿಕಾರಕ ವಿಷದ ಉತ್ಪತ್ತಿಗೆ ಕಾರಣವಾಗುವುದರಿಂದ ಇದಕ್ಕೆ 'ಪ್ರತಿವಿಷಜನಕ' ಅಥವ 'ಆ್ಯಂಟಿಜೆನ್' (antigen) ಎನ್ನುವರು.

ಹೀಗೆ ರಕ್ತ ಮತ್ತಿತರ ರಸಧಾತುಗಳಲ್ಲಿ ಕಾಣಿಸಿಕೊಳ್ಳುವ ಆ್ಯಂಟಿಜೆನ್ (ಈ ಪದದ ಪ್ರಯೋಗವೇ ಲೇಸು) ಅಣುಗಳ (molecules) ವಿರುದ್ಧ ಹೋರಾಡಿ, ನಿಷ್ಕ್ರಿಯಗೊಳಿಸಲು ರಕ್ತದ್ರವ (ರಕ್ತರಸ-plasma)ದ ಸಸಾರಜನಕ ವಸ್ತು (plasma proteins) ಗಳಲ್ಲಿ ಒಂದು ಬಗೆಯದಾದ 'ಗೋಳಕಿಗಳು'(globulins) ಸಕ್ರಿಯಪಾತ್ರ ವಹಿಸುವುವು ಅಂದರೆ, 'ಪ್ರತಿವಿಷವಸ್ತು' ಅಥವ 'ಆ್ಯಂಟಿಬಾಡಿ' (antibody) ಗಳನ್ನು ಒಳಗೊಂಡಿರುವುವು.

ಆ್ಯಂಟಿಬಾಡಿ (ಈ ಪದವನ್ನೇ ಬಳಸೋಣ) ಗಳು ಉತ್ಪತ್ತಿಯಾಗುವುದು ಹೀಗೆಂದು ನಂಬಲಾಗಿದೆ: ಈ ಪರಿಸರದಲ್ಲಿ ಅಂದರೆ 'ಹೊಸ' ಆತಿಥೇಯನ ರಸಧಾತು ವಿನಲ್ಲಿ ಆ್ಯಂಟಿಬಾಡಿ–ಉತ್ಪನ್ನಮಾಡುವ ಜೀವಕಣಗಳಿಗೆ ಪರಿಚಯವಿಲ್ಲದ ಮೇಲ್ಮೈಲ ರಸಾಯನಿಕ ವಿನ್ಯಾಸ (surface chemical groupings) ಗಳಿರುವ ಆ್ಯಂಟಿಜೆನ್ ಅಣುಗಳು ಕಾಣಿಸಿಕೊಳ್ಳುವುದೆಂದು ಇಟ್ಟುಕೊಳ್ಳೋಣ. ಇದಕ್ಕೆ ಪ್ರತಿಕ್ರಿಯೆ ರೂಪದಲ್ಲಿ ಆ್ಯಂಟಿಬಾಡಿ ತಯಾರಾಗಬೇಕು. ಅದಕ್ಕಾಗಿ ರಕ್ತದ ಬೃಹತ್‌ಶ್ವೇತಕಣ (macrophage) ಆ್ಯಂಟಿಜೆನ್ ಅಣುವನ್ನು ಎತ್ತಿಕೊಂಡು (ಅಂದರೆ ತನ್ನೊಳಗೆ ಸೇರಿಸಿಕೊಂಡು), ಅದರ ಪ್ರತಿವಿಷಭಾಗ (antigenic fragment) ವನ್ನು ದುಗ್ಧ ರಸಕಣ ಅಥವ ಹಾಲ್ರಸಕಣ (lymphocyte) ಕ್ಕೆ ವರ್ಗಾಯಿಸುತ್ತದೆ. ಇದರಿಂದ ಆ ಹಾಲ್ರಸಕಣ ಆ್ಯಂಟಿಬಾಡಿ–ಉತ್ಪನ್ನಮಾಡುವ ಜೀವಕಣವಾಗಿ ಪರಿವರ್ತನೆಗೊಳ್ಳು ವುದು ; ಹೀಗೆ ಪ್ರಚೋದನೆ ದೊರೆತಮೇಲೆ ಈ ಕ್ರಿಯೆ ಅವ್ಯಾಹತವಾಗಿ ಜರುಗುತ್ತಾ ಬಂದು ರಕ್ತದಲ್ಲಿ ಸಾಕಷ್ಟು ಆ್ಯಂಟಿಬಾಡಿ ಸೇರುತ್ತದೆ.

ಲಂಡನ್ನಿನ ಆರ್. ಆರ್. ಪೋರ್ಟರ್ ಎಂಬಾತ ಇನ್ನೂ ಆಳವಾದ ಅಧ್ಯಯನ ನಡೆಸಿ, ಆ್ಯಂಟಿಬಾಡಿ ಅಣುವಿನ ರಚನೆಯಲ್ಲಿ ಭಾರವಾದ ಮತ್ತು ಹಗುರವಾದ ಎನ್ನಬಹುದಾದ ಎರಡು ಸರಪಣಿ (heavy and light chains) ಗಳಿರುವುವೆಂದೂ, ಆ್ಯಂಟಿಜೆನ್ನೊಂದಿಗೆ ಸೇರುವ ಈ ಸರಪಣಿಗಳ ಭಾಗವನ್ನೂ 'Fab ಭಾಗ' ಎನ್ನಬಹು ದೆಂದೂ ಹೇಳಿದ್ದಾನೆ. ಕುತೂಹಲಕಾರಿಯಾದರೂ ಈ ವಿಷಯವನ್ನು ಇಲ್ಲಿಗೇ ಮುಕ್ತಾಯ ಮಾಡೋಣ.

ಕೆಡಕಿನಿಂದ ಒಳಿತು ಆಗುವ ನಿದರ್ಶನಗಳಿಗೆ ಲೆಕ್ಕವಿಲ್ಲ; ಆ್ಯಂಟಿಜೆನ್– ಆ್ಯಂಟಿಬಾಡಿ ಸಂಬಂಧವನ್ನೂ ಈ ಪಂಕ್ತಿಗೆ ಸೇರಿಸಬಹುದು. ವಿಶೇಷರೀತಿಯಲ್ಲಿ ತಯಾರಿಸಿದ 'ಲಸಿಕೆ' (vaccine) ಮತ್ತು 'ಹಾಲು' (serum) ರೂಪದ ಚುಚ್ಚು

ಮದ್ದುಗಳನ್ನು ವಿಶ್ವಾದ್ಯಂತ ಜನತೆಗೂ, ಜಾನುವಾರಿಗೂ ರೋಗನಿರೋಧಕ (prophylactic) ದೃಷ್ಟಿಯಿಂದ ನೀಡುವ ಪರಿಪಾಠ ವ್ಯಾಪಕವಾಗಿ ಬೆಳೆದು ಬಂದಿದೆ. ನಿವಾರಕ ಚಿಕಿತ್ಸಾರೀತಿ (preventive Medicine) ಯ ಮುಕುಟಪ್ರಾಯವಾದ ಈ ರಕ್ಷೆ ನೀಡುವ ವಿಧಾನ ವಿಶ್ವದ ಜನತೆಗೆ ವರಪ್ರಸಾದವಾಗಿ ರಾಕ್ಷಸೀ ಸೋಂಕುಗಳ ಉಕ್ಕುಹಿಡಿತದಿಂದ ವಿಮುಕ್ತಗೊಳಿಸಿದೆ. ಈ ದಿಶೆಯಲ್ಲಿ ಚಿರಸ್ಮರಣೀಯ ಸೇವೆ ಸಲ್ಲಿಸಿರುವ ಜೆನ್ನರ್, ಪ್ಯಾಸ್ಚರ್, ಲಿಸ್ಟರ್, ಎರ್ಹ್ಲಿಷ್, ಫ್ಲೆಮಿಂಗ್, ಫ್ಲೋರಿ, ವ್ಯಾಕ್ಸ್‌ಮನ್, ರಾಸ್, ಲೆವರಾನ್, ಮ್ಯಾನ್ಸನ್–ಮುಂತಾದ ಅಸಂಖ್ಯಾತ ಮಹಾನುಭಾವರಿಗೆ ಮಾನವಕುಲ ಚಿರಋಣಿ.

**ಪರಿಸಮಾಪ್ತಿ**

ಮಾನವ ಕುಲದಲ್ಲಿರುವಂತೆಯೇ, ಜೀವಿಗಳಲ್ಲಿಯೂ ಸ್ವಪ್ರಯೋಜನಕ್ಕಾಗಿ ಒಂದನ್ನು ಇನ್ನೊಂದು ಅವಲಂಬಿಸಿದಾಗ ತಿಕ್ಕಾಟ ಅನಿವಾರ್ಯ. ಅಸ್ತ್ರ, ಪ್ರತ್ಯಸ್ತ್ರಗಳ ಪ್ರಯೋಗ ಕ್ರಿಯೆ-ಪ್ರತಿಕ್ರಿಯೆಗಳಂತೆ ಸಮ ಮತ್ತು ಅಭಿಮುಖ; ಉಗುರು, ಹಲ್ಲುಗಳ ವಿರುದ್ಧ ಕೊಂಬು, ಗೊರಸುಗಳಂತೆ. ಈ ಆಕ್ರಮಣ ಮತ್ತು ಪ್ರತೀಕಾರ ಸಾಧನಗಳು ಹಲ್ಲು, ಕೊಂಬುಗಳಂತೆ ಸ್ಫುಟವಾಗಿ ಗೋಚರವಾಗಬೇಕಾಗಿಲ್ಲ. ಅನೇಕಾನೇಕ ಸಂದರ್ಭಗಳಲ್ಲಿ ಅವು ಜೀವರಸಾಯನಿಕ ಸ್ವಭಾವದವು, ಮನುಷ್ಯನಿಗೆ ಉಗ್ರಕಂಟಕವಾದ ಸೋಂಕು ಜಾಡ್ಯಗಳು ಇದಕ್ಕೆ ನಿದರ್ಶನ.

ಈ ವಿಶಾಲಕ್ಷೇತ್ರದ ಎಲ್ಲೆಗುರುತುಗಳನ್ನು ಚಿತ್ರಿಸುವ ದೊಡ್ಡಪ್ರಯತ್ನಕ್ಕೆ ಈ ಪುಟ್ಟಲೇಖನದಲ್ಲಿ ಕೈಹಚ್ಚಲಾಗಿದೆ. ವಿಷಯ ಗಹನ ಮತ್ತು ಜಟಿಲ; ಸ್ಥಳ ಸಂಕೋಚ ಮತ್ತು ಪಾರಿಭಾಷಿಕಗಳ ಕೊರತೆಯಿಂದ ಈ ಲೇಖನದಲ್ಲಿ, ಲೇಖಕ ಇಚ್ಛಿಸಿದಷ್ಟು, ಸ್ಪಷ್ಟತೆ ಕೂಡಿಬಂದಿರಲಾರದು. ಈ ನ್ಯೂನತೆಗಾಗಿ ಓದುಗರ ಕ್ಷಮೆ ಬೇಡುತ್ತೇವೆ.

## ಸರಳರಗಳೆಯ ಇತಿಹಾಸದ ಬಗ್ಗೆ ಒಂದು ಸಣ್ಣ ತಪ್ಪು ಕಲ್ಪನೆ

ರಗಳೆಯು ಸರಳರಗಳೆಯಾಗಬೇಕಾದರೆ ಮುಖ್ಯವಾಗಿ (1) ಆದಿ, ಅಂತ್ಯ ಪ್ರಾಸಗಳೆರಡನ್ನೂ ತ್ಯಜಿಸಬೇಕು ; (2) ಸಾಲುಗಳು ಅಂತ್ಯದಲ್ಲಿ ನಿಲ್ಲದೆ ಮುಂದು ವರಿಯಬೇಕು. ಸರಳರಗಳೆಯನ್ನು ನವೋದಯ ಕವಿಗಳು ಸು. 1924 ರಲ್ಲಿ ರೂಪಿಸಿ ಕೊಂಡರು. ಈ ಬಗ್ಗೆ ಶ್ರೀ ಎಸ್. ಅನಂತನಾರಾಯಣ ಅವರು ಹೀಗೆ ಬರೆದಿದ್ದಾರೆ– "ಈ ಛಂದೋರೂಪವನ್ನು ಹಿಂದೆ ಯಾರೂ ತಿಳಿದಿರಲಿಲ್ಲವೇ ಎಂಬ ಪ್ರಶ್ನೆ ಸಹಜ ವಾಗಿಯೇ ಏಳುತ್ತದೆ. 1924ರಲ್ಲಿ ಇದು ರೂಪಿತವಾಯಿತೆಂದಮೇಲೆ ಹಿಂದೆ ಇರಲಿಲ್ಲ ವೆನ್ನುವ ಅರ್ಥ ಬರುತ್ತದೆ. ಆದರೆ 1924 ರಲ್ಲಿ ಹೊಸದಾಗಿ, ಪ್ರಜ್ಞಾಪೂರ್ವಕ ವಾಗಿ ಈ ಛಂದಸ್ಸು ರೂಪಿತವಾಯಿತು. ಹಿಂದೆ ಅಪ್ಪಿ ತಪ್ಪಿ ಒಂದು ಕಡೆ ಇದು ಬಳಕೆಯಾಗಿತ್ತು. ಮೈಸೂರರಮನೆಯ ಆಶ್ರಯದಲ್ಲಿ 1800 ರ ಸುಮಾರಿನಲ್ಲಿ ಬದುಕಿದ್ದ ಯಾದವ ಕವಿ 'ಕಲಾವತೀ ಪರಿಣಯ'ವೆಂಬ ಕೃತಿಯನ್ನು ಬರೆದಿದ್ದಾನೆ. ಈ ಗ್ರಂಥದ ಪರಿಚಯವನ್ನು ಕೊಡುತ್ತಾ 'ಇದು ಗದ್ಯರೂಪವಾಗಿದೆ ; ಪ್ರಾಯಿಕ ವಾಗಿ ಹಳಗನ್ನಡ ಸರಣಿಯಲ್ಲಿ ಬರೆದಿದೆ ; ಇದು ಕಲ್ಪಿತ ಕಥೆಯೆಂದು ತೋರುತ್ತದೆ' ಎಂದು ಆರ್. ನರಸಿಂಹಾಚಾರ್ಯರು ಹೇಳಿದಾರೆ ; ಇದರಿಂದ ಕೆಲವು ಸಾಲುಗಳನ್ನು ಉದಾಹರಿಸಿದ್ದಾರೆ. ಆ ಗ್ರಂಥದ ಕೆಲವು ಸಾಲುಗಳನ್ನು ನೋಡಿದರೆ ಅದರ ಲಕ್ಷಣ ಗಳನ್ನು ಗುರುತಿಸಬಹುದು. ಇದು ನಾವು ಈಗ ಸರಳರಗಳೆಯೆಂದು ಕರೆಯುವ ಛಂದೋರೂಪವೇ ಎಂಬುದರಲ್ಲಿ ಸಂದೇಹವಿಲ್ಲ".[1] ಆರ್. ನರಸಿಂಹಾಚಾರ್ಯರು ಉದ್ಧರಿಸಿರುವ ಸಾಲುಗಳನ್ನು ತಾವೂ ಉದ್ಧರಿಸಿ, ಮುಂದೆ ಹೀಗೆ ಹೇಳುತ್ತಾರೆ— "ಇಲ್ಲಿ ಐದೈದು ಮಾತ್ರೆಗಳು ನಾಲ್ಕು ಗಣಗಳಿಂದ ಕೂಡಿ 20ಮಾತ್ರೆಗಳನ್ನೊಳಗೊಂಡ ಸಾಲುಗಳು, **ಪ್ರಾಸವನ್ನು ಬಿಟ್ಟು**, ಅರ್ಥ ಮುಂದುವರಿದಂತೆ ಒಂದರಲ್ಲೊಂದು ಬೆರೆತು ಮುಂದೋಡಿರುವುದನ್ನು ಕಾಣುತ್ತೇವೆ. ಇಲ್ಲಿ ಸಾಲುಗಳು ಹರಿಯುತ್ತವೆ. ಇದು ಕಥನಕಾವ್ಯಕ್ಕೆ ಅತ್ಯಂತ ಉತ್ತಮವಾದ ಛಂದೋರೂಪವೆಂಬ ಅರಿವಿನಿಂದ ಯಾದವ ಕವಿ 'ಕಲಾವತೀ ಪರಿಣಯ'ಕ್ಕೆ ಇದನ್ನು ಬಳಸಿಕೊಂಡ. 1800 ರ ಸುಮಾರಿನಲ್ಲಿಯೇ 'ಸರಳರಗಳೆ' ಕನ್ನಡದಲ್ಲಿ ಕಾಣಿಸಿಕೊಂಡಿತ್ತು, ಆದರೆ ಆಕಸ್ಮಿಕ

---

1 ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಸಾಹಿತ್ಯದ ಪ್ರಭಾವ (ಮೈಸೂರು. 1962) ಪು. 254.

ವಾಗಿಯೇ ಹೊರತು, ಪ್ರಜ್ಞಾಪೂರ್ವಕವಾಗಿಯಲ್ಲ. ಈ ಪದ್ಯಕಾವ್ಯವನ್ನು '**ಗದ್ಯ ರೂಪವಾಗಿದೆ**'ಯೆಂದು ಹೇಳಿರುವ ಆರ್. ನರಸಿಂಹಾಚಾರ್ಯರೂ 'ಇದನ್ನು 5 ಮಾತ್ರೆಯ ಗಣಗಳುಳ್ಳ ಪ್ರಾಸವಿಲ್ಲದ ರಗಳೆಯ ರೂಪವಾಗಿ' ಬರೆದಿದೆಯೆಂದು ಸೂಚಿಸಿದಾರೆ. ಆದರೆ ಇದು ಹೊಸ ಛಂದಸ್ಸೆಂದು ಗುರುತಿಸಿಲ್ಲ! '**ಬದಲಿಗೆ ಗದ್ಯ ರೂಪವೆಂದು' ಕರೆದಿದಾರೆ!** ಕತೆಗಾರಿಕೆಗೆ ಅತ್ಯಂತ ಸೊಗಸಾದ ಈ ಛಂದಸ್ಸು ನಮ್ಮ ಕವಿಗಳ ಕಣ್ಣಿಗೆ ಬೀಳದುದು ಆಶ್ಚರ್ಯವೇ ಸರಿ! ಈ ಗ್ರಂಥ ಇರುವ ವಿಷಯವೇ ಬಹಳ ಜನಕ್ಕೆ ತಿಳಿದಿರಲಿಲ್ಲ. 'ಗ್ರಂಥವು ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರವರ ಕಾಲದಲ್ಲಿ ಹುಟ್ಟಿದ ಈಚಿನ ಕೃತಿಯಾದರೂ ಇಂತಹ ಗ್ರಂಥವಿರುವುದೆಂಬ ವಿಷಯವು ಕೂಡ ಈ ಶತಮಾನದ ನಮ್ಮ ಆಧುನಿಕ ಪಂಡಿತರನೇಕರಿಗೆ ತಿಳಿಯದು' ಎಂದಿದಾರೆ ಬೆಳ್ಳಾವೆ ವೆಂಕಟನಾರಣಪ್ಪನವರು. ಅವರಿಗೂ ಈ ಛಂದಸ್ಸು ಹೊಸದೆಂಬ ಸುಳಿವು ಸಿಕ್ಕಲಿಲ್ಲ. ಅಂತೂ ನಮ್ಮಲ್ಲಿದ್ದ ಈ ಛಂದಸ್ಸು ಹೊಸದೆಂಬ ಸುಳಿವು ಸಿಕ್ಕಲಿಲ್ಲ."[1]

ಈ ಬರಹದಲ್ಲಿ ಛಂದಸ್ಸು ಹೊಸದೆಂದು ಗುರುತಿಸದ್ದಕ್ಕೆ ಆರ್. ನರಸಿಂಹಾಚಾರ್, ಬೆಳ್ಳಾವೆ ವೆಂಕಟನಾರಣಪ್ಪನವರನ್ನು ಟೀಕಿಸಿರುವರಲ್ಲದೆ, ಸರಳರಗಳೆಯು 1924 ಕ್ಕೆ ಮುಂಚೆಯೇ ಆಕಸ್ಮಿಕವಾಗಿಯಾದರೂ ಕಾಣಿಸಿಕೊಂಡಿತ್ತೆಂಬ ಸಂಗತಿಯನ್ನು ತಾವು ಪ್ರಥಮವಾಗಿ ಕಂಡುಕೊಂಡದ್ದರ ಬಗ್ಗೆ ಸಂಭ್ರಮಪಟ್ಟುಕೊಂಡಿರುವುದು ಸ್ಪಷ್ಟವಾಗಿದೆ. ಅನಂತನಾರಾಯಣರ ಅಭಿಪ್ರಾಯಗಳನ್ನು ಒಪ್ಪಿಕೊಂಡರೆ, ಗೋವಿಂದಪೈಯವರು ಪ್ರಾಸನಿರಾಕರಣೆ ಮಾಡಿದ್ದು, ಮಾಸ್ತಿಯವರು ಸರಳರಗಳೆಯನ್ನು ಪ್ರಥಮವಾಗಿ ಬಳಸಿದ್ದು — ಇವೆರಡೂ ಐತಿಹಾಸಿಕ ಮಹತ್ವವನ್ನು ಕಳೆದುಕೊಳ್ಳುತ್ತವೆ.

ನಿಜವಾದ ಸಂಗತಿಯೆಂದರೆ ಯಾದವಕವಿ ರಗಳೆಯನ್ನೂ ಬರೆದಿಲ್ಲ, ಸರಳರಗಳೆಯನ್ನೂ ಬರೆದಿಲ್ಲ. ಅವನು ಬರೆದಿರುವುದು ದಂಡಕ. ದಂಡಕದಲ್ಲಿ ಪಾದವಿಭಜನೆ ಇರುವುದಿಲ್ಲ. ಅದು ವಾಸ್ತವವಾಗಿ ಗದ್ಯದಂತೆ ಇರುತ್ತದೆ; ಆದರೆ ಪದ್ಯದಲ್ಲಿರುವಂತೆ ಮಾತ್ರಾಗಣಗಳು — ಒಂದೇ ಬಗೆಯ ಮಾತ್ರಾಗಣಗಳು ಇರುತ್ತವೆ. ಆರ್. ನರಸಿಂಹಾಚಾರ್ಯರು 'ಕಲಾವತೀ ಪರಿಣಯ'ವನ್ನು 'ಗದ್ಯ' ಕೃತಿಯೆಂದು ಕರೆದಿರುವುದು ಸರಿಯಾಗಿದೆ. ಆದರೆ ಅವರು ಆ ಗದ್ಯಕೃತಿಯು ದಂಡಕ ರೂಪಕವಾಗಿದೆಯೆಂಬುದನ್ನು ಗುರುತಿಸುವುದರ ಬದಲು, ಅದು ರಗಳೆಯ ರೂಪವಾಗಿದೆ ಎಂದು ಭಾವಿಸಿ, ಗದ್ಯವನ್ನು ನಾಲ್ಕು ಗಣಗಳುಳ್ಳ ಸಾಲುಗಳಾಗಿ ಕಲ್ಪಿಸಿ ಪದ್ಯರೂಪವಾಗಿ ಪಾದಗಳಾಗಿ ವಿಂಗಡಿಸಿ ತಮ್ಮ ಕವಿ ಚರಿತೆಯ ಮೂರನೆಯ ಸಂಪುಟದಲ್ಲಿ ಪ್ರಕಟಿ

---

1. ಅದೇ, ಪು. 256

ಸಿದರು. ಇದನ್ನು ಅನುಸರಿಸಿದ ಅನಂತನಾರಾಯಣರು ಅದನ್ನು ಸರಳರಗಳೆಯೆಂದು ಭ್ರಮಿಸಲು ಕಾರಣವಾಯಿತು.

ಅವರು ಬೆಳ್ಳಾವೆ ವೆಂಕಟನಾರಣಪ್ಪನವರ "ಕಲಾವತೀ ಪರಿಣಯ" ಎಂಬ ಲೇಖನವನ್ನು[1] ನೋಡಿರುವರಾದರೂ ಅಲ್ಲಿ ಬಂದಿರುವ ಸಂಗತಿಗಳನ್ನು, ಉದ್ಧರಿಸಿರುವ ಕೃತಿಭಾಗಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿಲ್ಲವೆಂಬುದು ಸ್ಪಷ್ಟವಾಗಿದೆ. ವೆಂಕಟನಾರಣಪ್ಪನವರು ಹೀಗೆ ಹೇಳಿದ್ದಾರೆ — "ಗ್ರಂಥದ ಮೂಲಪ್ರತಿಯನ್ನು ನೋಡಿದ್ದ ಕೆಲವರು ಪಂಡಿತರು ಗ್ರಂಥವು ಗದ್ಯವಾದರೂ ಪ್ರತಿಯೊಂದು ಭಾಗವೂ ತಾಳಕ್ಕೆ ಹೊಂದುವಂತೆ ರಚಿತವಾಗಿದ್ದುದೆಂದು ಹೇಳುತ್ತಿರುವರು. ಗ್ರಂಥದ ಅನೇಕ ಭಾಗಗಳು ಈಗಲೂ ತಾಳಕ್ಕೆ ಹೊಂದುವಂತೆ ಕಾಣುವುವು. ಆಲೋಚನೆ ಮಾಡಿದಲ್ಲಿ ಕವಿತೆಯ ಧಾಟಿಯು ದಂಡಕವಾಗಿದ್ದಿರಬಹುದೆಂದು ಹೊಳೆಯುವುದು"[2]. ಇದು ಸರಿಯಾದ ಆಲೋಚನೆ. ಯಾದವ ಕವಿಯ ಕಾಲ, ಅವನ ಸಂಸ್ಕಾರ, ಕಥಾವಸ್ತು, ಭಾಷೆ ಇತ್ಯಾದಿಗಳನ್ನು ನೋಡಿದರೆ ಅವನು ಪ್ರಾಸನಿರಾಕರಣೆ ಮಾಡುವುದು, ಸಾಲುಗಳನ್ನು ಹರಿಬಿಡುವುದು ಇಂತಹ ಆ ಕಾಲಕ್ಕೆ ದಿಟ್ಟ ಎನ್ನಬಹುದಾದ — ಪ್ರಯೋಗಗಳನ್ನು ಮಾಡುವುದು ಅಸಾಧ್ಯ. ಅವನು ನೂರಕ್ಕೆ ನೂರರಷ್ಟು ಸಂಪ್ರದಾಯ ಪರಿಪಾಲಕ. ಮೇಲೆ ಹೇಳಿದ ಲೇಖನದಲ್ಲಿ ವೆಂಕಟನಾರಣಪ್ಪನವರು ಈ ವಚನಕಾವ್ಯದ ಅನೇಕ ಭಾಗಗಳನ್ನು ಉದ್ಧರಿಸಿದ್ದಾರೆ. ಸ್ಪಷ್ಟವಾಗಿ ಅದು ದಂಡಕವೇ ಆಗಿದೆ. ಕೆಳಗೆ ಮೂರು ಮಾದರಿಗಳನ್ನು ಅಲ್ಲಿಂದಲೇ ಎತ್ತಿಕೊಟ್ಟಿದೆ.

(1) "ಸೃಷ್ಟಿಗಚ್ಚರಿಯಾದ ಸೌವೀರದೇಶಮಂ ಪೊಕ್ಕು ಪ್ರಮಾಣದಲಿ ಮಿಕ್ಕಾದ ನಾಡೊಳಿಹ ನರರಿಗಿಮ್ಮಡಿಯಾಗಿ ಮತ್ತ ಹಸ್ತಿಗಳಂತೆ ಸತ್ವಶಾಲಿಗಳಾಗಿ ಹರ್ಷದಿಂ ಪುಷ್ಟರಾಗಿರುವ ನರನಾರಿಯರ ಬೃಂದದಿಂ ಸಾಂದ್ರಮಾಗಿರ್ಪ ಜನಪದವ ತಾಂ ನೋಡಿ ಹರ್ಷಿತನಾಗಿ ಜವದಿ ಬರುತಿರ್ಪಲ್ಲಿ......ದುರ್ಗಮ ಪ್ರಾಕಾರ ಪರಿಖೆಯಿಂ ರಿಪುಗಳಿಗಜಯ್ಯಮಾಗಿರ್ಪ ಗಿರಿದುರ್ಗಗಳ ನಿಕರದಿಂ ಲಸದಿಳಾವೃತ ಖಂಡದಂತಿರ್ಪ ಸೌವೀರ ದೇಶಮಂ ಕಂಡು ವಿಸ್ಮಿತನಾಗಿ ಬರುತಾ ಮಹೀಪತಿಯು ನೀತಿಶಾಸ್ತ್ರದ ಸರಣಿಯನ್ನತಿಕ್ರಮಿಸದೆ ದೂರದರ್ಶಿಗಳಾದ ಸಚಿವರ ಹಿತೋಕ್ತಿಗಳ ಕಿಂಚಿದುಲ್ಲಂಘಿಸದೆ ಪೂರ್ವಮರ್ಯಾದೆಗಳ ಮದದಿಂದ ಮೀರದೆ ಪಿಶುನರಿಗೆ ಕಿವಿಗುಡದೆ"......

1. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ (ಜನವರಿ 1925). ಪು. 271–316

2. ಈ ಭಾಗವನ್ನು ಉದ್ಧರಿಸಿದ್ದರೆ. ಯಾದವಕವಿ 'ಸರಳರಗಳೆ' ಬರೆದಿದ್ದನೆಂದು ಪ್ರತಿಪಾದಿಸುವುದು ಕಷ್ಟವಾಗಬಹುದೆಂದು ಶ್ರೀ ಅನಂತನಾರಾಯಣ ಅವರು ಅದನ್ನು ಕೈಬಿಟ್ಟಿದ್ದಾರೆಂಬ ಸಂದೇಹ ನನಗಿದೆ.

(2) "ಚಂದಿರನು ಬೆಳಗುತಿರೆ ಬೆಂದು ಸಂತಾಪದಿಂ ವಿಷನಿಧಿಯೊಳುದು ಭವಿಸಿ ಗುರುಮಡದಿಯೊಡವೆರೆದು ಸೋದರಿಯು ಮನೆಯು ಮುದ್ರಿಸಿ ನಿಶಾಚರನಾಗುತಿನ ನಿಲ್ಲದಿರುವ ಕಾಲದಿ ಕರದಿ ಕುಮುದಿನಿಯು ತಕ್ಕವಿಸಿ ಮೆರೆವ ದೋಷಾಕರನು ನಾರಿಯರ ಬಾಧಿಸಲು ಹೇಸುವನೆಯೆನೆ ಮಧುರ ಭಾಷಿಣಿಯು ಮಲಿನಾತ್ಮನಾದ ಈ ವಿಧುವ ಗಗನಾರ್ಣವದಿ ಸಂಚರಿಪ ನೆಗಳೊಂದು ಕಾಲದಲಿ ರೋಷದಿಂ ನುಂಗದಿರುವುದೆ"...

(3) "ಈ ಪಲ್ಲವಾಧರೆಯು ಕುರುಳುಗಳ ಕಡುಕರ್ಪು ನೋಟಕರ ಮನದೊಪ್ಪು ದೃಷ್ಟಿಗಳ ತಾರಳ್ಯ ಮನಸಿಜನ ಕೈವಲ್ಯ ತರುಣಿಯಧರದ ಕೆಂಪು ಯುವಜನರ ಮನ ಕಂಪು ಕವಪುಗಳ ಥಳಥಳಕು ಕೈಪಿಡಿಯು ನಿಡುಬೆಳಕು ಇವಳ ಮಂದಸ್ಮಿತವು ರಸಿಕರಿಗೆ ಬಲುಹಿತವು ಮಾನಿನಿಯು ಕಂಬುಗಳ ಹೃದಯಹರಿಣಕೆ ಸಿಗಳ ಕುಚಕಲಶಗಳ ಸೊಬಗು ಮುನಿಮನಕೆ ಸ್ಮರನಲಗು ಇವಳ ಕರಕಮಲವನು ಪಿಡಿದವನೆ ಮಾನವನು ಸಡುವಿನತಿ ಬಡತನವು ಮೂಜಗಕೆ ಸಮ್ಮತವು"......

ಈ ಗದ್ಯಭಾಗಗಳಲ್ಲಿ ಐದು ಮಾತ್ರೆಯ ಗಣಗಳು ನಿಯತವಾಗಿ ಬರುತ್ತವೆ. ಗಣಗಳು ನಾಲ್ಕು ಒಂದು ಪಾದದಲ್ಲಿ ಬರುವಂತೆ ಅಚ್ಚು ಮಾಡಬಹುದು ; ಎರಡು ಗಣ ಬರುವಂತೆಯೂ ಅಚ್ಚು ಮಾಡಬಹುದು. ವಾಸ್ತವ ಸಂಗತಿಯೆಂದರೆ ಮೇಲಿನ ಗದ್ಯಗಳು ಐದು ಮಾತ್ರೆಯ ಗಣಗಳ ಸರಪಳಿಗಳು ಮಾತ್ರ–"ಸೃಷ್ಟಿಗ। ಚ್ಚರಿಯಾದ। ಸೌವೀರ। ದೇಶವಮಂ। ಪೊಕ್ಕುಪ್ರ। ಮಾಣವಲಿ। ಮಿಕ್ಕಾದ। ನಾಡೊಳಿಹ। ಸರರಿಗಿ। ಮ್ಮಡಿಯಾಗಿ। ಮತ್ತಹ। ಸ್ತಿಗಳಂತೆ। ಸತ್ವಶಾ। ಲಿಗಳಾಗಿ......" ಇತ್ಯಾದಿ. ದಂಡಕದ ಲಕ್ಷಣವೇ ಇದು. ಇಲ್ಲಿ ಸರಳರಗಳೆಯನ್ನು ಹುಡುಕುವುದು ಅನುಚಿತವೇ ಸರಿ.

ಆದ್ದರಿಂದ ಸರಳರಗಳೆ ಆಕಸ್ಮಿಕವಾಗಿಯೂ ಇಪ್ಪತ್ತನೇ ಶತಮಾನಕ್ಕೆ ಮುಂಚೆ ಕನ್ನಡದಲ್ಲಿ ಕಾಣಿಸಿಕೊಂಡಿರಲಿಲ್ಲವೆಂಬ ಗ್ರಹಿಕೆ ಸತ್ಯವಾಗಿ ಉಳಿಯುತ್ತದೆ. 'ಕಲಾವತೀ ಪರಿಣಯ'ದಲ್ಲಿ ಹೊಸ ಛಂದಸ್ಸು ಪ್ರಯೋಗವಾಗಿದೆಯೆಂಬುದನ್ನು ಆರ್. ನರಸಿಂಹಾಚಾರ್ಯರಾಗಲಿ ಬೆಳ್ಳಾವೆಯವರಾಗಲಿ ಗುರುತಿಸಲಿಲ್ಲವೆಂದು ಅವರನ್ನು ಟೀಕಿಸುವುದು ಅನಗತ್ಯವಾಗುತ್ತದೆ[1].

ಎಂ. ಚಿದಾನಂದಮೂರ್ತಿ

---

1. ದಂಡಕ ಹೇಗಿರುತ್ತದೆಯೆಂಬುದಕ್ಕೆ 13ನೇ ಶತಮಾನದ (15-16ನೇ ಶತಮಾನ ?) 'ಉದ್ಭಟಕಾವ್ಯ'ದಿಂದ ಕೆಲವು ಸಾಲುಗಳನ್ನು ಉದ್ಧರಿಸುತ್ತೇನೆ—''ನಾನಾ ಮಹಾಮಂತ್ರ ಬೀಜಾಕ್ಷರಾನೀಕ ರಾಟ್ಕಾರಕಬ್ರಹ್ಮಸಲ್ಲೋಲ ದಿಕ್ಚೇಲ ಪದ್ಮಾಂಬಕ ಬ್ರಹ್ಮಪರ್ಜನ್ಯ ಮುಖ್ಯಾದಿ ತೇಯೋಚ್ಚ ಕೋಟೀರ ಮಾಣಿಕ್ಯ ರೋಚಿರ್ಗಣಾಕೀರ್ಣರಾಜತ್ಪದಾಬ್ಜಾತ ವಿಖ್ಯಾತ ಸೂರ್ಯಾನಿಲಾಂಭೋವನೀ ಸೋಮಹಾವ್ಯೋಮ ಜೈವಾತೃಕ ಜ್ವಾಲಭೃದ್ರೂಪ...........'' (4.10. ವಚನ).

**ಪಂಪಭಾರತದಲ್ಲಿ ವರದಾನದಿ**—ಪ್ರತಿಕ್ರಿಯೆಯ ಉತ್ತರಕ್ಕೆ ಪ್ರತ್ಯುತ್ತರ

"ಸಾಧನೆ" ಪತ್ರಿಕೆಯ ೩ ನೆಯ ಸಂಪುಟದ ೩ ನೆಯ ಸಂಚಿಕೆಯಲ್ಲಿ 92-96 ಪುಟಗಳಲ್ಲಿ ಶ್ರೀ ಸೀತಾರಾಮ ಜಾಗೀರದಾರರಿಂದ "ಪಂಪಭಾರತದಲ್ಲಿ ವರದಾನದಿ" ಎಂಬ ಲೇಖನ ಪ್ರಕಟವಾಯಿತು. ಇದಕ್ಕೆ ನನ್ನ ಪ್ರತಿಕ್ರಿಯೆ ಸಾಧನೆಯ[1] ಮಂಥನ ವಿಭಾಗದಲ್ಲಿ ಪ್ರಕಟವಾಗಿದೆ. ಇದಕ್ಕೆ ಸೀತಾರಾಮ ಜಾಗೀರದಾರರ ಉತ್ತರವೂ ಸಾಧನೆಯ[2] ಸಂಪುಟದಲ್ಲಿ ಪ್ರಕಟವಾಗಿದೆ. "ಖಂಡನೆಗಳು, ಮಂಡನೆಗಳು ನಡೆಯ ಬೇಕಾದದ್ದೆ", ಎಂಬ ಸೀತಾರಾಮ ಜಾಗೀರದಾರರ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಆದರೆ ಖಂಡನೆಗಳನ್ನಾಗಲೀ ಅಥವಾ ಮಂಡನೆಗಳನ್ನಾಗಲೀ ಮಂಡಿಸುವಾಗ, ವಾದಿ ಪ್ರತಿವಾದಿಗಳು ಉಭಯವಾದಿ ಸಂಪ್ರತಿಪನ್ನವಾದ ತತ್ವಗಳನ್ನು ಮಂಡಿಸಿ ಅವುಗಳಿಂದಲೇ ಖಂಡನೆಗಳನ್ನಾಗಲೀ ಮಂಡನೆಗಳನ್ನಾಗಲೀ ಘೋಷಿಸಬೇಕು. ಮತ್ತೆ ವಾದಿ ಪ್ರತಿವಾದಿಗಳಿಬ್ಬರೂ "ವಿವಾದಾಸ್ಪದವಾದ ವಿಷಯ" ಯಾವುದೆಂಬುದನ್ನು ಮರೆಯಬಾರದು.

ಪ್ರಕೃತ ಸೀತಾರಾಮ ಜಾಗೀರದಾರರು ಚಾರಿತ್ರಿಕ ಪ್ರಜ್ಞೆ, ತೋಲದೃಷ್ಟಿ ಕಾಲಾನುಪೂರ್ವಿ ಮತ್ತು ಭೂಗೋಳ ಎಂಬುದಾಗಿ ಅನೇಕ ವಿಷಯಗಳನ್ನು ಹೇಳುತ್ತಾರೆ. ಇದನ್ನು ಈ ರೀತಿ ವಿವರಿಸಬಹುದು—ಪಂಪನು ಅರಿಕೇಸರಿಯ ಆಸ್ಥಾನ ಕವಿ. ಆದ್ದರಿಂದ ಅವನ ಮಣ್ಣಿನ ವಾಸನೆ ಸಪಾದಲಕ್ಷಕ್ಷಿತಿಯಲ್ಲಿ. ಸಪಾದಲಕ್ಷಕ್ಷಿತಿಯಲ್ಲೇ ಇರುವ ವಾರ್ಧಾದಲ್ಲೇ ಒಂದು ವರದಾನದಿಯು ಹರಿಯುತ್ತದೆ. ಇದು ಗೋದಾವರಿಗೆ ಸೇರುವ ಪೈನಗಂಗಾ ಎಂಬ ನದಿಯೊಡನೆ ಬೆರೆಯುತ್ತದೆ. ಆದ್ದರಿಂದ ಈ ವರದಾನದಿಯನ್ನೇ ಸಪಾದಲಕ್ಷಕ್ಷಿತಿಯಲ್ಲಿನ ಮಣ್ಣಿನ ವಾಸನೆಗೆ ಮಾರುಹೋದ ಪಂಪ ಕೊಂಡಾಡಿದ್ದಾನೆ.

ಪಂಪನು ಅರಿಕೇಸರಿಯ ಆಸ್ಥಾನಕವಿ ಎಂಬ ಚಾರಿತ್ರಿಕಾಂಶವನ್ನು ನಾನು ಅಲ್ಲಗಳೆಯುತ್ತಿಲ್ಲ. ಗೋದಾವರಿಯ ಉಪನದಿಯಾದ ಪೈನಗಂಗೆಗೆ ವರದಾ ಎಂಬ ಉಪನದಿ ಇದೆ ಎಂಬ ಭೌಗೋಳಿಕಾಂಶವನ್ನು ನಾನು ಅಲ್ಲಗಳೆಯುತ್ತಿಲ್ಲ. ಸಾವಿರ ಚಾರಿತ್ರಿಕಾಂಶಗಳಿರಬಹುದು. ಸಾವಿರ ಭೌಗೋಳಿಕಾಂಶಗಳಿರಬಹುದು. ಸಲ್ಲದ ಉತ್ಸಾಹದಿಂದ ಈ ಅಂಶಗಳನ್ನು ನಮಗೆ ತೋರಿದಂತೆ ಸೇರಿಸಲು ಮಾಡುವ ಪ್ರಯತ್ನ ಖಂಡನೀಯ. ಚಾರಿತ್ರಿಕ, ಭೌಗೋಳಿಕ, ಕಾಲಾನುಪೂರ್ವಿ ಮೊದಲಾದ ಅಂಶಗಳು ಪದ್ಯಗಳಲ್ಲಿರುವ ಪದಗಳೊಡನೆ ಹೊಂದಿಕೊಂಡಾಗ ಮಾತ್ರ ಅವು ವಿದ್ವಾಂಸರ ಮನ್ನಣೆಯನ್ನು ಪಡೆಯುತ್ತವೆ.

---

1 ಸಾಧನೆ, 2. 4

2 ಅದೇ. 3, 2

ಜಾಗೀರದಾರರು ಮಾಡಿರುವ ಇತಿಹಾಸ ವಿಮರ್ಶೆ 'ರಂಗತ್ತುಂಗ ತರಂಗ ಎಂಬ ಪಂಪಭಾರತದ ಪದ್ಯದ "ಪ್ರಸಿದ್ಧ ವರದಾ ಪುಣ್ಯಾಂಬು ಗೋದಾವರೀ ಸಂಗತ್ಯೋರ್ಜಿತವಾರಿಸಾರ" ಎಂಬ ಭಾಗವನ್ನು ಆಧರಿಸಿದೆ. ಈ ಭಾಗದ ಅರ್ಥ ವನ್ನು ಅವರು ಕೂಲಂಕಷವಾಗಿ ಅರಿತನಂತರ ಇತಿಹಾಸ ವಿಮರ್ಶೆಗೆ ತೊಡಗುವುದು ಒಳಿತು. ಇತಿಹಾಸ ಪ್ರಸಿದ್ಧವಾದ ಅಂಶಕ್ಕೂ ಮತ್ತು ಪಂಪನು ಈ ಭಾಗದಲ್ಲಿ ವಿವರಿಸುವ ಅಂಶಕ್ಕೂ ಪರಸ್ಪರ ಸಾಮರಸ್ಯವಿದೆ. ಆದ್ದರಿಂದ ಪಂಪನ ಮನೋಗತ ಇದು ಎಂದು ಹೇಳುವುದು ಉಚಿತ. ಆದರೆ ಜಾಗೀರದಾರರು ಪಂಪನು ಸಪಾದ ಲಕ್ಷಕ್ಷಿತಿಯಲ್ಲಿದ್ದ ವರದಾನದಿಯನ್ನೇ ವರ್ಣಿಸಿದ್ದಾನೆ ಎಂದು ಮೊದಲೇ ತೀರ್ಮಾನಿಸಿ ಅನಂತರ ತಮ್ಮ ಅಭಿಪ್ರಾಯವನ್ನು ಮೇಲೆ ಹೇಳಿದ ಭಾಗದಲ್ಲಿ ಬಲಾತ್ಕಾರವಾಗಿ ಅಳವಡಿಸಲು ಪ್ರಯತ್ನಿಸಿದ್ದಾರೆ. ಈ ಪ್ರಯತ್ನದಲ್ಲಿ ಅವರು ವೈಫಲ್ಯದ ತುತ್ತ ತುದಿಯನ್ನೇ ಮುಟ್ಟಿದ್ದಾರೆ ಎಂಬುದು ಎಲ್ಲರಿಗೂ ಸುಲಭವೇದ್ಯ. ಅವರು ತಮಗೆ ಚಾರಿತ್ರಿಕಪ್ರಜ್ಞೆ, ಕಾಲಾನುಪೂರ್ವಿ ಮತ್ತು ಭೌಗೋಳಿಕ ಜ್ಞಾನ ಅಪಾರ ವಾಗಿದೆ ಎಂದು ಹೇಳಿಕೊಂಡು ಅರ್ಥಾವಗಮ ಶಕ್ತಿಯಲ್ಲಿ ಕೊರತೆ ಇರುವುದನ್ನು ಹೇಳಿಕೊಳ್ಳದಿರುವುದೂ ಸಹಜವೇ. ಆದರೆ ಯುಕ್ತಾಯುಕ್ತ ವಿವೇಚನ ಜ್ಞಾನ ವುಳ್ಳ ಸಹೃದಯರಿಗೆ ಇದು ಕರತಲಾಮಲಕದಂತೆ ಗೋಚರವಾಗುವುದು.

ಪ್ರಕೃತ ವರದಾನದಿಗೂ ಮತ್ತು ಗೋದಾವರೀನದಿಗೂ ಉಂಟಾದ ಸಂಗಮದ ಉಲ್ಲೇಖ ಇಲ್ಲಿರುವುದರಿಂದ ಇದು ಸಪಾದಲಕ್ಷಕ್ಷಿತಿಯಲ್ಲಿರುವ ವರದಾನದಿ ಎಂದು ಅವರು ನಿರೂಪಿಸಲು ಸಾಧ್ಯ. ಅದಕ್ಕೆ ಪದ್ಯದಲ್ಲಿರುವ ಪದಗಳು ಅವಕಾಶ ಕೊಡುವುವೇ ? ಇಲ್ಲವೇ ? ಎಂಬುದು ಚರ್ಚೆಯ ವಿಷಯ. ಅವರ ವ್ಯಾಖ್ಯಾನ ವನ್ನು ಕೂಲಂಕಷವಾಗಿ ಪರಿಶೀಲಿಸಿದ ಪ್ರತಿಯೊಬ್ಬ ವಿಮರ್ಶಕನಿಗೂ ಇಂತಹ ಅವಕಾಶವಿಲ್ಲವೆಂಬುದು ಸುಲಭವಾಗಿ ತಿಳಿಯುತ್ತದೆ. ನನಗೂ ಮತ್ತು ಜಾಗೀರ ದಾರರಿಗೂ ಈ ವಿಷಯದಲ್ಲಿ ಅಭಿಪ್ರಾಯ ಭೇದವಿದ್ದರೂ, ಅವರೇ ಉಲ್ಲೇಖಿಸಿರುವ "ಸಹೃದಯ ಲೋಕ ನನ್ನ ಹಾಗೂ ಪ್ರತಿಕ್ರಿಯಕಾರರ ಲೇಖನಗಳನ್ನು ಸಮತೋಲನ ದೃಷ್ಟಿಯಿಂದ ಅವಲೋಕಿಸಬೇಕೆಂಬುದಷ್ಟೇ ನನ್ನ ಇಚ್ಛೆ"[3] ಎಂಬ ವಿಷಯದಲ್ಲಿ ಅಭಿಪ್ರಾಯ ಭೇದವಿಲ್ಲ.

ನನ್ನ ಪ್ರತಿಕ್ರಿಯೆಯಲ್ಲಿ ನಾನು ಏಳು ವಿಷಯಗಳ ಔಚಿತ್ಯವನ್ನು ಪ್ರಶ್ನಿಸಿ ದ್ದೇನೆ.[4] ಆದರೆ ಜಾಗೀರದಾರರವರು ತಮ್ಮ ಉತ್ತರದಲ್ಲಿ ಕೇವಲ ಮೂರು ವಿಷಯಗಳನ್ನು ಮಾತ್ರ ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದಾರೆ[5]. ಈ ಮೂರು

---

3 ಸಾಧನೆ 3. 2

4 ಸಾಧನೆ 2. 4

5 ಸಾಧನೆ 3. 2

ವಿಷಯುಗಳಿಗೂ ಅವರು ಕೊಟ್ಟಿರುವ ಸಮರ್ಥನೆಯು ಸರ್ವಥಾ ಅಸಮರ್ಪಕ. ಉಳಿದ ಅಂಶಗಳಿಗೆ ಅವರು ಯಾವ ಉತ್ತರವನ್ನೂ ನೀಡದಿರುವುದರಿಂದ, "ಮೌನಂ ಸಮ್ಮತಿ ಲಕ್ಷಣಂ" ಎಂಬ ರೀತಿಯಲ್ಲಿ ಪ್ರತಿಕ್ರಿಯೆಯ ಅಂಶಗಳನ್ನೇ ಅವರು ಅಂಗೀ ಕರಿಸಿದ್ದಾರೆ ಎಂದು ನಿಶ್ಚಯಿಸಬೇಕಾಗುತ್ತದೆ.

ಜಾಗೀರದಾರರು ನನ್ನ ಪ್ರತಿಕ್ರಿಯೆಯ ಐದನೆಯ ಅಂಶಕ್ಕೆ ನೀಡಿರುವ ಉತ್ತರ ವನ್ನೂ, ಪ್ರತಿಕ್ರಿಯೆಯಲ್ಲಿ ನಾನು ಪ್ರಶ್ನಿಸಿರುವ ಅಂಶವನ್ನೂ ಉಲ್ಲೇಖಿಸಿ ಅನಂತರ ಅವರ ಉತ್ತರದಲ್ಲಿರುವ ಲೋಪದೋಷಗಳನ್ನು ತೋರಿಸುತ್ತೇನೆ.

ಪ್ರಶ್ನೆ : ಗೋದಾವರಿಗೆ ಉಪನದಿ ಪೈನಗಂಗೆ. ಅದರ ಉಪನದಿ ವರದಾನದಿ. ಹೀಗೆ ಉಪನದಿಗೂ ಉಪನದಿಯಾದ ವರದಾನದಿ ಪ್ರಸಿದ್ಧವರದಾ ನದಿ ಹೇಗಾದೀತು ?[6]

ಉತ್ತರ : ಈ ವರದಾನದಿ ಕಾಳಿದಾಸನ ಕಾಲದಿಂದಲೂ ಪ್ರಸಿದ್ಧ. ನನ್ನ ಹೇಳಿಕೆಗೆ ಕಾಳಿದಾಸನ ಕೃತಿ "ಮಾಳವಿಕಾಗ್ನಿಮಿತ್ರ" ನಾಟಕವೇ ಸಾಕ್ಷಿ ಎಂದು ಹೇಳಿ ವರದಾನದಿಯನ್ನು ವರ್ಣಿಸಿರುವ ಶ್ಲೋಕವನ್ನು ಉಲ್ಲೇಖಿಸಿದ್ದಾರೆ. ನಾನು ವಿವರಿಸಿದ ಈ ವರದಾನದಿ ಮಹಾಭಾರತದ ಕಾಲದಿಂದಲೂ ಪ್ರಸಿದ್ಧ. ಐತಿಹಾಸಿಕ ಯುಗದಲ್ಲಿ ವಿಚಾರಿಸಿದರೆ ಅದು 'ವಾಕಾಟಕ' ರಾಜರ ಕಾಲದಿಂದಲೂ ಪ್ರಸಿದ್ಧ. ಇತ್ಯಾದಿ.[7]

ಇಲ್ಲಿ ನನ್ನ ಆಶಯವಿಷ್ಟೆ. ಮೊಟ್ಟಮೊದಲನೆಯದಾಗಿ ಜಾಗೀರದಾರರು ಪಂಪಭಾರತದಲ್ಲಿ ಪಂಪನು ಹೇಳಿರುವ ವರದಾನದಿಯು ಗೋದಾವರಿಯನ್ನು ಸೇರುವ ಪೈನಗಂಗಾನದಿಯ ಉಪನದಿ ಎಂದು ನಿರೂಪಿಸಬೇಕು. ಅನಂತರ ಇದೇ ವರದಾ ನದಿಯನ್ನು ಕಾಳಿದಾಸ ಮೊದಲಾದವರು ಕೊಂಡಾಡಿದ್ದಾರೆ ಎಂದು ಹೇಳುವುದು ಉಚಿತ. ಆದರೆ ಅವರ ಪ್ರಯತ್ನ ಗಾಡಿಯ ಮುಂಭಾಗದಲ್ಲಿ ಕುದುರೆಯನ್ನು ಹೂಡುವ ಬದಲು ಕುದುರೆಯ ಹಿಂಭಾಗದಲ್ಲಿ ಗಾಡಿಯನ್ನು ಹೂಡುವುದಾಗಿದೆ. ವರದಾನದಿಯ ಸಂಗತಿ (ಸಂಗಮ) ಗೋದಾವರಿ ನದಿಗೆ ಇದೆ ಎಂದು ಪದ್ಯದಲ್ಲಿ ನಿರೂಪಣೆ ಮಾಡಲು ಅವಕಾಶವಿದ್ದರೆ ಅವರ ಪ್ರಯತ್ನ ಯಶಸ್ವಿಯಾದೀತು. ಈ ಪ್ರಯತ್ನದಲ್ಲಿ ಅವರು ಪೂರ್ಣವಾಗಿ ವಿಫಲರಾಗಿದ್ದಾರೆ. ಅವರ ವಾದವೈಖರಿಗೆ ಅನ್ವಯಕ್ರಮ, ವ್ಯಾಕರಣ ನಿಯಮಗಳು ಎಡೆಕೊಡುತ್ತಿಲ್ಲ. ಆದ್ದರಿಂದಲೇ ನಾನು ಪ್ರತಿಕ್ರಿಯೆಯಲ್ಲಿ ತೋರಿಸಿರುವ ಪ್ರಕ್ರಮಭಂಗ, ಅನ್ವಯಕ್ರಮ, ವ್ಯಾಕರಣ

6. ಸಾಧನೆ 2.4

7. ಸಾಧನೆ 3.2

ವಿರೋಧ ಇವುಗಳನ್ನು ಉತ್ತರಿಸಲಾಗದೆ, "ವಿಭೂಷಣಂ ಮೌನಂ" ಎಂಬಂತೆ ಮೌನವನ್ನೇ ತಳೆದಿದ್ದಾರೆ.

ನಾನು ಪ್ರಶ್ನಿಸಿರುವ ಅಂಶಗಳನ್ನು ಉತ್ತರಿಸುವುದಕ್ಕೆ ಬದಲಾಗಿ "ರಂಗತ್ತುಂಗ ತರಂಗ" ಎಂಬ ಪದ್ಯದ ಪಾಠದ ವಿಷಯದಲ್ಲಿ ನನಗೆ ಖಚಿತತೆ ಇಲ್ಲ ಎಂದು ಬರೆದಿದ್ದಾರೆ.[8] ನನಗೆ ಈ ಪಾಠದಲ್ಲಿ ಖಚಿತತೆ ಇಲ್ಲವೋ ಅಥವಾ ಅವರಿಗೆ ಖಚಿತತೆ ಇಲ್ಲವೋ ಎಂಬುದು ಅವರ ಮೂಲ ಲೇಖನವನ್ನು[9] ಓದಿದಾಗ ವಿಮರ್ಶಕರಿಗೆ ಸ್ಪಷ್ಟವಾಗಿ ವೇದ್ಯವಾಗುವುದು. ನಿಯೋಜಿತ ಪಾಠದ ಅವಶ್ಯಕತೆ ಯಾವಾಗ? ಎಂಬ ವಿಷಯವನ್ನು ಚರ್ಚಿಸಬೇಕಾದದ್ದೇ. D.L.N. ರವರು 'ಸಂಗತ್ಯೋರ್ಚಿತ ವಾರಿಸಾರ' ಎಂಬ ವಿಕ್ರಮಾರ್ಜುನ ವಿಜಯ 'ಘ' ಪ್ರತಿಯ ಪಾಠ ಸರಿಯಾದ ಅರ್ಥವನ್ನು ಕೊಡದಿರುವುದರಿಂದ "ಸಂಗತ್ಯೂರ್ಜಿತ" ಎಂಬ ನಿಯೋಜಿತ ಪಾಠವನ್ನು ಅಂಗೀಕರಿಸಿದ್ದಾರೆ. ಜಾಗೀರದಾರರಿಗಾದರೋ ತಮಗೆ ತೋರಿದಂತೆ ವ್ಯಾಕರಣ ನಿಯಮಗಳನ್ನು ಉಲ್ಲಂಘಿಸಿ ವ್ಯಾಖ್ಯಾನ ಮಾಡುವ ಚಾತುರ್ಯವಿರುವುದರಿಂದ ನಿಯೋಜಿತ ಪಾಠದ ಅವಶ್ಯಕತೆ ಇಲ್ಲದಿರುವುದು ಸಹಜ.

ಅವರು 'ಸಂಗತ್ಯೋರ್ಚಿತ' ವಾರಿಸಾರ ಎಂಬ ಪಾಠವನ್ನೇ ಸಮರ್ಥಿಸಲು ಬಹಳ ಪ್ರಯತ್ನಿಸಿದ್ದಾರೆ. ಇದು ಕರಿಯ ನಾಯಿಯನ್ನು ಬಿಳಿಯ ನಾಯಿಯನ್ನಾಗಿ ಮಾಡುವ ಪ್ರಯತ್ನದಂತೆ ವ್ಯರ್ಥವೇ ಸರಿ. ಈ ಪ್ರಯತ್ನದಲ್ಲಿರುವ ಅನುಚಿತವಾದ ಅಂಶಗಳನ್ನು ಸಂಸ್ಕೃತ ವ್ಯಾಕರಣ ನಿಯಮಗಳಿಗನುಸಾರವಾಗಿ ತೋರಿಸುತ್ತೇನೆ. ಇದಕ್ಕೆ ಮೊದಲು 'ಸಂಗತ್ಯೋರ್ಚಿತ ವಾರಿಸಾರ' ಎಂಬ ಭಾಗದಲ್ಲಿ ನನ್ನ ಪ್ರಶ್ನೆಗಳಿಗೆ ಉತ್ತರವಾಗಿ ಅವರು ಕೊಟ್ಟಿರುವ ಉತ್ತರವನ್ನು ಉಲ್ಲೇಖಿಸುತ್ತೇನೆ. "ವರದಾ ಪುಣ್ಯಾಂಬು ಗೋದಾವರಿ ಸಂಗತ್ಯೋರ್ಚಿತ ವಾರಿಸಾರ" ಇದರಲ್ಲಿ ವ್ಯಾಕರಣ ದೋಷ ಗಳಿಲ್ಲವೆಂದು ಕೆಲ ಹೇಳಿಕೆಗಳನ್ನು ಇತ್ತಿದ್ದಾರೆ. ಈ ಘಟಕದಲ್ಲಿ "ವರದಾ" ಇದು ಆಕಾರಾಂತ ಸ್ತ್ರೀಲಿಂಗ ಶಬ್ದ. "ಗೋದಾವರೀ" ಇದು ಈಕಾರಾಂತ ಸ್ತ್ರೀಲಿಂಗ ಶಬ್ದ, ಈ ಎರಡನ್ನೂ ಒಂದಾಗಿಸಿಕೊಂಡಿರುವ "ಸಂಗತ್ಯೋಃ" ಇದು ಗಚ್ಛ ಎಂಬ ಅಂಗವನ್ನು ಹೊಂದಿದ 'ಗಮ್' ಧಾತು, 'ಸಂ' ಎಂಬ ಉಪಸರ್ಗ ಮತ್ತು 'ಚಿ' ಎಂಬ ಕೃದಂತ ಪ್ರತ್ಯಯವನ್ನು ಹೊಂದಿಸಿಕೊಂಡು ಆದ ಕೃನ್ನಾಮಪದ. ಈ ಕೃನ್ನಾಮಕ್ಕೆ ಎರಡೂ ಸ್ತ್ರೀಲಿಂಗ ಶಬ್ದಗಳನ್ನು ಸೂಚಿಸುವ ಶಕ್ತಿ ಬರಬೇಕಾದರೆ, ಈ ಸ್ತ್ರೀಲಿಂಗ ಶಬ್ದಗಳ ಷಷ್ಠೀ ಸುಪ್ರತ್ಯಯದ ದ್ವಿವಚನದ 'ಯೋಃ' ಬರಬೇಕಾ

8. ಸಾಧನೆ 3.2

9. ಅದೇ

ಗುತ್ತದೆ. ಇಲ್ಲಿನ ವಿಸರ್ಗದ ಮುಂದೆ ಅರ್ಚಿತದ 'ಅ' ಬರುವುದರಿಂದ ವಿಸರ್ಗಲೋಪ ವಾಗುತ್ತದೆ. ಕಾರಣ 'ಸಂಗತ್ಯೋರ್ಚಿತ' ಇದು ಸಾಧುವಾದ ರೂಪವೇ. ಎರಡೂ ನದಿಗಳ ನೀರು ಬೆರೆತು ಒಂದಾಗುವುದರಿಂದ ಅನಂತರದಲ್ಲಿ ಎರಡು ವಾರಿಗಳು ಒಂದು ವಾರಿ ಆಗುತ್ತದೆ. ಅಂತೆಯೇ ವಾರಿ ಎಂಬುದು ಏಕವಚನದಲ್ಲಿದೆ. ತರುವಾಯ ದಲ್ಲಿ ಬಂದಿರುವ ಸಾರ ಇದು ಅವ್ಯಯದಂತೆ ವರ್ತಿಸಿದೆ. ಸದಾ, ಇತ್ಯಾದಿಗಳ ಹಾಗೆ [ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ – ಇಲ್ಲಿ ನಮಸ್ ಮತ್ತು ಸದಾ ಅವ್ಯಯಗಳು] ಅವ್ಯಯಕ್ಕೆ ವಿಭಕ್ತಿಗಳ ಆವಶ್ಯಕತೆ ಇಲ್ಲವಷ್ಟೆ. ಆದುದರಿಂದ ಪ್ರತಿಕ್ರಿಯೆಕಾರರು ಸೂಚಿಸುವಂತೆ ಇಲ್ಲಿ ಪ್ರಥಮಾ ವಿಭಕ್ತಿಯು ಆವಶ್ಯಕತೆ ಇಲ್ಲ. ಅತ ಏವ ನನ್ನ ನಿರೂಪಣೆಯಲ್ಲಿ ಸ್ವೀಕರಿಸಿದ ಪಾಠಗಳಲ್ಲಿ ವ್ಯಾಕರಣ ದೋಷಗಳು ಲಕ್ಷ್ಮೀ ತಾತಾಚಾರ್ಯರು ಆರೋಪಿಸಿದಂತೆ ಇಲ್ಲ.[10]

ಜಾಗೀರದಾರರೇ ಒಂದುವೇಳೆ ಅಭಿನವ ಪಾಣಿನಿಯಾಗಿ, ಅಪಾಣಿನೀಯವಾದ ಒಂದು ಸಂಸ್ಕೃತ ವ್ಯಾಕರಣವನ್ನು ಬರೆದರೆ ಮೇಲೆ ಹೇಳಿರುವ ಅವರ ಉತ್ತರವನ್ನು ಸಮರ್ಥಿಸಿಕೊಳ್ಳಲು ಸಾಧ್ಯ. ಈ ಉತ್ತರದಲ್ಲಿ ಬಹು ವಿಧವಾದ ವ್ಯಾಕರಣದೋಷ ಗಳಿವೆ ಎಂಬುದು ವ್ಯಾಕರಣ ಶಾಸ್ತ್ರದಲ್ಲಿ ಸಾಮಾನ್ಯ ಪರಿಚಯವಿರುವ ವಿಮರ್ಶಕ ನಿಗೂ ತಿಳಿಯುತ್ತದೆ.

1. ತಮ್ಮ ಉತ್ತರದಲ್ಲಿ ಜಾಗೀರುದಾರರು "ವರದಾ ಪುಣ್ಯಾಂಬು ಗೋದಾ ವರೀ ಸಂಗತ್ಯೋರ್ಚಿತವಾರಿಸಾರ" ಎಂಬುದನ್ನು ಒಂದು ಘಟಕ ಎಂಬುದಾಗಿ ಅಂಗೀ ಕರಿಸಿದ್ದಾರೆ. ಒಂದೇ ಸಮಸ್ತ ಪದವು ಕೆಲವು ವೇಳೆ ಘಟಕವಾಗುತ್ತದೆ ಮತ್ತೆ ಕೆಲವು ವೇಳೆ ಅನೇಕ ಸ್ವತಂತ್ರ ಪದಗಳು ಸೇರಿ ಒಂದು ಘಟಕವಾಗಬಹುದು. ಈ ಘಟಕವು ಸಮಸ್ತವಾದ ಒಂದೇ ಪದವೋ, ವ್ಯಸ್ತವಾದ ಅನೇಕ ಪದಗಳ ಸಂಘಟ ನೆಯೋ ಎಂಬ ಅಂಶವು ಜಾಗೀರುದಾರರ ವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ತಿಳಿಯುವು ದಿಲ್ಲ. ಈ ಎರಡು ಅಭಿಪ್ರಾಯಗಳಲ್ಲಿ ಯಾವ ಅಭಿಪ್ರಾಯವನ್ನು ಅಂಗೀಕರಿಸಿ ದರೂ ಅವರ ವ್ಯಾಖ್ಯಾನವು ವ್ಯಾಕರಣ ದೋಷಗಳಿಗೆ ಆಕರವಾಗುತ್ತದೆ. "ವರದಾ ಪುಣ್ಯಾಂಬು ಗೋದಾವರೀ ಸಂಗತ್ಯೋರ್ಚಿತವಾರಿಸಾರ" ಎಂಬುದು ಸಮಸ್ತ ಪದವಾದರೆ "ಸಂಗತ್ಯೋಃ" ಎಂಬಲ್ಲಿ ದ್ವಿವಚನ ಪ್ರತ್ಯಯವಿದೆ–(ಇದೂ ಹಿಂದ ನೀಯ ವಿಷಯವೇ. ಅನಂತರ ಇದನ್ನು ಖಂಡಿಸಲಾಗುತ್ತದೆ.) ಎಂದು ಅವರು ಹೇಳುವುದು ಪಾಣಿನಿಯು ಹೇಳಿರುವ "ಸುಪ್ತೋಧಾತು ಪ್ರಾತಿಪದಿಕಯೋಃ"[11]

10. ಸಾಧನೆ 3.2

11. ಅಷ್ಟಾಧ್ಯಾಯೀ—2-4-71

ಎಂಬ ನಿಯಮಕ್ಕೆ ವಿರುದ್ಧವಾಗುತ್ತದೆ. ಕಾರಣ ಸಮಾಸವಾದನಂತರ ಪ್ರತ್ಯೇಕ ಪದಗಳ ವಿಭಕ್ತಿಗಳಿಗೆ ಈ ನಿಯಮದಿಂದ ಲೋಪ ಬರುತ್ತದೆ.

"ವರದಾ ಪುಣ್ಯಾಂಬು ಗೋದಾವರೀ ಸಂಗತ್ಯೋಃ" ಎಂಬುದು ಒಂದು ಪದ. "ಅರ್ಚಿತವಾರಿಸಾರ" ಎಂಬುದು ಮತ್ತೊಂದು ಪದ. ಈ ಎರಡು ಪದಗಳನ್ನುಳ್ಳದ್ದು ಈಘಟಕ ಎಂದು ನಿರೂಪಿಸುವುದಾದರೆ ಆಗಲೂ ಸಂಗತ್ಯೋಃ ಎಂಬ ಷಷ್ಠ್ಯಂತವಾದ ಪದಕ್ಕೆ ಅವರು ನಿರೂಪಿಸುವಂತೆ "ವಾರಿ" ಎಂಬಲ್ಲಿ ಅನ್ವಯವಾಗಲು ಸಾಧ್ಯವಿಲ್ಲ. ಕಾರಣ ಒಂದು ಸ್ವತಂತ್ರವಾದ ಪದಕ್ಕೆ ಮತ್ತೊಂದು ಸಮಸ್ತ ಪದದ ಯಾವುದೋ ಒಂದು ಭಾಗದೊಡನೆ ಅನ್ವಯಕೂಡದು ಎಂಬುದು ವ್ಯಾಕರಣ ನಿಯಮ. ಇಂತಹ ಅನ್ವಯವನ್ನು "ಏಕದೇಶಾನ್ವಯ" ಎಂದು ವ್ಯಾಕರಣ ಶಾಸ್ತ್ರಜ್ಞರು ಹೇಳುತ್ತಾರೆ. ಬೇರೆ ಯಾವ ಉಪಾಯವೂ ಇಲ್ಲದೆ ಕೆಲವು ಕಡೆ ಏಕದೇಶಾನ್ವಯವನ್ನು ಸ್ವೀಕರಿಸುವುದುಂಟು. ಆ ರೀತಿ ಇಲ್ಲಿ ಸ್ವೀಕರಿಸಿದರೂ 'ಸಂಗತ್ಯೋಃ' ಎಂದು ಅವರು ಹೇಳಿರುವ ಪದವು ಅರ್ಚಿತ ಎಂಬ ಪದದೊಡನೆ ಅನ್ವಯಿಸಬೇಕೇ ಹೊರತು "ಅರ್ಚಿತವಾರಿಸಾರ" ಎಂಬ ಸಮಸ್ತ ಪದದ ಮಧ್ಯದಲ್ಲಿರುವ ವಾರಿ ಎಂಬಲ್ಲಿ ಅನ್ವಯಿಸಲು ಸಾಧ್ಯವೇ ಇಲ್ಲ.

2. ವರದಾ ಮತ್ತು ಗೋದಾವರಿ ನೀರುಗಳ ಸಂಗತಿಯಿಂದ ಒಂದಾಗಿರುವ ವಾರಿ ಎಂಬುದಾಗಿ ಅವರು ಇಲ್ಲಿ ಅರ್ಥವನ್ನು ವರ್ಣಿಸಿದ್ದಾರೆ. ಈ ಅರ್ಥ ಬರಬೇಕಾದರೆ ಸಂಗತಿ ಎಂಬ ಶಬ್ದದ ನಂತರ 'ಟಾ'[12] ಎಂಬ ತೃತೀಯಾ ವಿಭಕ್ತಿಯು ಬಂದು ಸಂಗತ್ಯಾ ಎಂಬ ಶಬ್ದವಿರಬೇಕೇ ಹೊರತು ಷಷ್ಠೀ ವಿಭಕ್ತಿ ಇರಲು ಸಾಧ್ಯವಿಲ್ಲ.

3. ಎರಡು ನದಿಗಳ ಒಟ್ಟುಗೂಡುವಿಕೆಯಿಂದ (ಸಂಗತಿಯಿಂದ) ಒಂದಾಗಿರುವ ಎಂಬ ಅರ್ಥ ಬರಬೇಕಾದಾಗ ಒಟ್ಟುಗೂಡುವಿಕೆ (ಸಂಗತಿ) ಎಂಬ ಶಬ್ದದ ಮುಂದೆ ತೃತೀಯಾ ವಿಭಕ್ತಿ, ಏಕವಚನವು ಬಂದಿರುವುದು ಜಾಗೀರುದಾರರಿಗೂ ತಿಳಿಯದೇ ಇರಲಾರದು. ಸಂಸ್ಕೃತದಲ್ಲಿ ಇದೇ ನಿಯಮ. ಆದ್ದರಿಂದ ಸಂಗತ್ಯಾ ಎಂಬ ಏಕವಚನವಿದ್ದರೆ ಸಾಕು. ದ್ವಿವಚನವು ಅನಪೇಕ್ಷಿತ ಎಂಬುದನ್ನು "ಎರಡೂ ನದಿಗಳ ನೀರು ಬೆರೆತು ಒಂದಾಗಿರುವುದರಿಂದ" ಎಂಬ ಅವರ ಪ್ರಯೋಗದಿಂದಲೇ ಕಂಡುಕೊಳ್ಳಬಹುದು.

4. ಶಬ್ದ ಸ್ವರೂಪಗಳ ವಿಷಯದಲ್ಲಿ ಖಚಿತತೆ ಇಲ್ಲದಿರುವುದು ಮತ್ತು ವ್ಯಾಕರಣ ನಿಯಮಗಳ ಬಗ್ಗೆ ಇರುವ ಅಜ್ಞಾನ–ಇವು ಇಂತಹ ವಿಪರೀತ

---

12 ಅಷ್ಟಾಧ್ಯಾಯೀ—4.1.2

ವ್ಯಾಖ್ಯಾನಕ್ಕೆ ಪ್ರಚೋದನೆಯನ್ನು ನೀಡಿವೆ. ಜಾಗೀರದಾರರು ತಮ್ಮ ಮೊದಲ ನೆಯ ಲೇಖನದಲ್ಲಿ ಸಂಗತ್ಯೋಃ ಎಂಬ ಪದಕ್ಕೆ ಸಂಗಚ್ಛತೀತಿ ಸಂಗತ್'ಯೋಃ ಇತ್ಯಾದಿ ವಿವರಣೆ ನೀಡಿದ್ದಾರೆ.[13] ಈಗ ಪ್ರತಿಕ್ರಿಯೆಗೆ ಉತ್ತರಿಸುತ್ತ ಸಂಗತ್ಯೋಃ ಎಂಬ ಪದವನ್ನು ಸಂಗತಿ,ಯೋಃ ಎಂದು ವಿಭಾಗ ಮಾಡಿ ವಿವರಿಸಲು ಪ್ರಯತ್ನಿಸಿದ್ದಾರೆ. ಸಂಗತಿ ಎಂಬ ಶಬ್ದವೂ ಕೂಡ 'ಸಂ' ಎಂಬ ಉಪಸರ್ಗದೊಡನೆ ಕೂಡಿರುವ 'ಗಮ್' ಧಾತುವಿಗೆ 'ಚಿ' ಪ್ರತ್ಯಯವನ್ನು ಸೇರಿಸುವುದರಿಂದ ಬರಲು ಸಾಧ್ಯವಿಲ್ಲ. "ಸ್ತ್ರಿಯಾಂಕ್ತಿನ್"[14] ಎಂಬ ಸೂತ್ರದಿಂದ ಸಂ+ಗಮ್ ಎಂಬ ಶಬ್ದ ಸ್ವರೂಪಕ್ಕೆ ಕ್ತಿನ್ ಪ್ರತ್ಯಯವನ್ನು ಸೇರಿಸಿದಾಗ ಲಭಿಸುತ್ತದೆ. ಇದು ಮತ್ತೊಂದು ವ್ಯಾಕರಣ ದೋಷ.

5. ಸಂಗತ್ಯೋಃ+ಅರ್ಚಿತ ಎಂಬಲ್ಲಿ ಸಂಧಿ ನಿಯಮಗಳಿಗೆ ಅನುಸಾರವಾಗಿ ವಿಸರ್ಗ ಲೋಪ ಬಂದು 'ಸಂಗತ್ಯೋರ್ಚಿತ' ಎಂದು ಸಂಧಿಯಾಗುತ್ತದೆ ಎಂಬುದು ಜಾಗೀರುದಾರರ ವಾದ. ವಾಸ್ತವವಾಗಿ ಇಲ್ಲಿ ಸಂಗತ್ಯೋಃ ಎಂಬಲ್ಲಿರುವ ವಿಸರ್ಗಕ್ಕೆ ಸಕಾರಾದೇಶ ಬಂದು ಆ ಸಕಾರಕ್ಕೆ ಪುನಃ ರೇಫಾದೇಶ ಬರುವುದರಿಂದ ಸಂಧಿಯಾದ ನಂತರ ಸಂಗತ್ಯೋರರ್ಚಿತ ಎಂಬ ಶಬ್ದವು ಸಿದ್ಧಿಸುವುದೇ ಹೊರತು ಸಂಗತ್ಯೋರ್ಚಿತ ಎಂಬ ಶಬ್ದವು ಸಿದ್ಧಿಸಲಾರದು.[15] ಸಿಂಧೋಃ+ಅತ್ರ=ಸಿಂಧೋರತ್ರ. ಹರೇಃ+ಅಭಿಮಾನಃ=ಹರೇರಭಿಮಾನಃ ಮೊದಲಾದ ಉದಾಹರಣೆಗಳಿಂದ ಈ ವಿಷಯವು ಸ್ಪಷ್ಟವಾಗುವುದು.

6. "ಸಂಗತ್ಯೋಃ ಎಂಬಲ್ಲಿ ಸಂಗತಿ ಶಬ್ದದ ನಂತರ ಷಷ್ಠೀ ವಿಭಕ್ತಿಯಲ್ಲಿ ಸುಪ್ರತ್ಯಯದ ದ್ವಿವಚನದ ಯೋಃ ಬರಬೇಕಾಗುತ್ತದೆ. ಇನ್ನೊಂದಲ್ಲ"[16] ಎಂದು ಜಾಗೀರುದಾರರು ವಾದಿಸುತ್ತಾರೆ. ಸುಪ್ರತ್ಯಯ ವಿಧಾಯಕ ಸೂತ್ರದಲ್ಲಿ ಯೋಃ ಎಂಬ ದ್ವಿವಚನ ಪ್ರತ್ಯಯವೇ ಇಲ್ಲ. ಷಷ್ಠೀ ದ್ವಿವಚನ ಪ್ರತ್ಯಯವಾದರೋ 'ಓಸ್' ಎಂಬುದು[17]. ಈ ಪ್ರತ್ಯಯವು ಸೇರಿದ ನಂತರ ಸಂಗತ್ಯೋಃ ಎಂಬ ರೂಪವಾಗಬೇಕು. ಅವರು ತಿಳಿಸಿರುವಂತೆ ಈ ಷಷ್ಠೀ ದ್ವಿವಚನ ಪ್ರತ್ಯಯಕ್ಕೂ ವರದಾ ಮತ್ತು ಗೋದಾವರೀ ಎಂಬ ಸ್ತ್ರೀಲಿಂಗ ಶಬ್ದಗಳಿಗೂ ಯಾವ ವಿಧವಾದ ಸಂಬಂಧವೂ ಸಾಧ್ಯವಿಲ್ಲ. ಪ್ರಕೃತಿಗೂ ಮತ್ತು ಆ ಪ್ರಕೃತಿಯ ಮುಂದಿರುವ ವಿಭಕ್ತಿ ಪ್ರತ್ಯ

---

13 ಸಾಧನೆ–2.3

14 ಅಷ್ಟಾಧ್ಯಾಯೀ–3.3.94

15 ವಿಸರ್ಗಸಂಧಿಪ್ರಕರಣ–ಸಿದ್ಧಾಂತ ಕೌಮುದೀ

16 ಸಾಧನೆ–3.2

17 ಅಷ್ಟಾಧ್ಯಾಯೀ–4.1.2

ಯಕ್ಕೂ ಪರಸ್ಪರ ಅನ್ವಯ ಉಂಟೇ ಹೊರತು ಯಾವುದೋ ಪ್ರತ್ಯಯಕ್ಕೆ ಯಾವುದೋ ಪ್ರಕೃತಿಯೊಡನೆ ಅನ್ವಯ ಸಲ್ಲದು.

7. "ವಾರಿ" ಎಂಬ ಶಬ್ದದ ತರುವಾಯ ಇರುವ "ಸಾರ" ಶಬ್ದವು ಸದಾ ಎಂಬ ಅವ್ಯಯ ಎಂಬುದು ಅಸಂಗತ. ಸಂಸ್ಕೃತ ಪದಗಳನ್ನು ನಮ್ಮ ಇಷ್ಟಾನುಸಾರವಾಗಿ ಅವ್ಯಯಗಳಾಗಿ ಪರಿವರ್ತಿಸಲು ಸಾಧ್ಯವಿಲ್ಲ. ಪಾಣಿನಿ ಮಹರ್ಷಿಯು ಅವ್ಯಯ ಪ್ರಕರಣದಲ್ಲಿ ಹೇಳಿರುವ ಪದಗಳು ಮಾತ್ರ ಅವ್ಯಯಗಳೆನಿಸಿಕೊಳ್ಳುವುವು. ಈ ನಿಯಮವನ್ನು ಉಲ್ಲಂಘಿಸಿ ಸ್ವೇಚ್ಛಾಪ್ರವೃತ್ತಿಯಿಂದ ಪದಗಳನ್ನು ಅವ್ಯಯಗಳನ್ನಾಗಿ ಪರಿವರ್ತಿಸಲಾಗದು. ಹೀಗೆ ಪರಿವರ್ತಿಸುವುದಾದರೆ ವಿಭಕ್ತಿಪ್ರತ್ಯಯಗಳಿಲ್ಲದೆಯೇ ಪದಪ್ರಯೋಗ ಮಾಡಬಹುದು. ಕಾರಕ ಪ್ರಕರಣದಲ್ಲಿ ವಿಭಕ್ತಿಪ್ರತ್ಯಯಗಳ ವಿವಿಧ ಅರ್ಥಗಳನ್ನು ವಿವೇಚಿಸಿ ಇಂತಹ ಅರ್ಥದಲ್ಲಿ ಇಂತಹ ವಿಭಕ್ತಿಯೇ ಪ್ರಯೋಗವಾಗಬೇಕೆಂದು ವ್ಯಾಕರಣ ಶಾಸ್ತ್ರಜ್ಞರು ನಿರ್ಣಯಿಸಿದ್ದಾರೆ. ಎಲ್ಲ ಪದಗಳನ್ನೂ ಅವ್ಯಯದಂತೆ ಪರಿವರ್ತಿಸಬಹುದಾದರೆ, ವ್ಯಾಕರಣ ಶಾಸ್ತ್ರದಲ್ಲಿ ಕಾರಕ ಪ್ರಕರಣಕ್ಕೆ ತಿಲಾಂಜಲಿಯನ್ನು ನೀಡಬಹುದು.

8. ಪ್ರೊಫೆಸರ್ ಡಿ. ಎಲ್. ಎನ್. ರವರು "ಗೋದಾವರೀ ಸಂಗತಸ್ಫೂರ್ಜಿತ ವಾರಿ"[18] ಎಂಬುದನ್ನು ಒಂದು ಘಟಕವಾಗಿ ತೆಗೆದುಕೊಂಡಿದ್ದಾರೆ. ಇಲ್ಲಿ "ಗೋದಾವರಿಯ ಸಂಗತಿ ಯಾವುದರೊಡನೆ" ಎಂಬುದು ಜಾಗೀರುದಾರರ ಪ್ರಶ್ನೆ.[19] ಈ ಪ್ರಶ್ನೆಗೆ ಉತ್ತರಿಸುತ್ತ ಅವರೇ ಗೋದಾವರಿಯೊಡನೆ ಯಾವುದಾದರೂ ನದಿಗೆ ಸಂಗಮವನ್ನು ಹೇಳಲೇಬೇಕು. ಆದ್ದರಿಂದ ವರದಾನದಿಯ ಸಂಗತಿಯನ್ನು ಒಪ್ಪಿಕೊಳ್ಳಬೇಕೆಂದು ಇಲ್ಲಿ ವಾದಿಸುತ್ತಾರೆ. ಇಂತಹ ಪ್ರಶ್ನೆ ಇದೇ ಪದ್ಯದ ಮತ್ತೊಂದು ಭಾಗವಾದ "ನರ್ಮದಾ ಸಂಗಸ್ವಚ್ಛ ವನಂ" ಎಂಬಲ್ಲಿ ಏಕೆ ಉದ್ಭವಿಸಲಿಲ್ಲವೋ ಕಾಣೆ. ಅಲ್ಲಿಯೂ ನರ್ಮದೆಯೊಡನೆ ಸೇರಿರುವುದರಿಂದ ತಿಳಿಯಾಗಿರುವ ನೀರು ಎಂಬ ಅರ್ಥ ಬರುತ್ತದೆ. 'ಇಂತಹ ನೀರು ಯಾವುದು' ? ಎಂಬ ಪ್ರಶ್ನೆ ಅಲ್ಲಿಯೂ ಸುಲಭವಾಗಿ ಉದಯಿಸುವುದಲ್ಲವೇ ? ವರದಾ ಪುಣ್ಯಾಂಬು............ಎಂಬಲ್ಲಿ ಇದ್ದಂತಹ ಚಾರಿತ್ರಿಕ ಪ್ರಜ್ಞೆ, ತೌಲನ ದೃಷ್ಟಿ, ಮುಂತಾದುವು ಇಲ್ಲಿ ಅವರಿಗೆ ಸುಲಭವಾಗಿ ದೊರಕಿರಲಾರದು. ಈ ಒಂದು ಅಂಶವೇ ಅವರ ವಾದವು ಆಗ್ರಹ ಗ್ರಸ್ತವಾಗಿದೆ ಎಂಬುದಕ್ಕೆ ಪ್ರಮಾಣ.

ಹೀಗೆ ಈವರೆಗೂ ವಿವರಿಸಲ್ಪಟ್ಟ ಕಾರಣಗಳಿಂದ ವರದಾ ನದಿಗೂ ಮತ್ತು ಗೋದಾವರಿ ನದಿಗೂ ಸಂಗಮವು ಇಲ್ಲಿ ವರ್ಣಿತವಾಗಿದೆ. ಆದ್ದರಿಂದ ಪಂಪಭಾರತ

---

18 ಸಾಧನೆ 2.3

19 ಸಾಧನೆ 3.2

ದಲ್ಲಿ ವರ್ಣಿತವಾದ ವರದಾ ನದಿ ಗೋದಾವರಿಯೊಡನೆ ಸೇರುವ ವರದಾ ನದಿಯೇ ಹೊರತು ಬನವಾಸಿಯು ವರದಾ ನದಿಯಲ್ಲ ಎಂಬುದು ಸರ್ವಥಾ ಅನುಚಿತ ಮತ್ತು ಪ್ರಮಾಣವಿರುದ್ಧ. ಮೂಲಲೇಖಕರ ವಾದದಲ್ಲಿ ಇನ್ನೂ ಅನೇಕ ಲೋಪದೋಷಗಳಿವೆ. ಪ್ರಧಾನವಾದ ಅಂಶಗಳನ್ನು ಮಾತ್ರ ಇಲ್ಲಿ ಸಂಗ್ರಹವಾಗಿ ಬರೆದಿದ್ದೇನೆ.

**ಎಂ. ಎ. ಲಕ್ಷ್ಮೀತಾತಾಚಾರ್**

## 3. ಪಂಪನ ಘಟೋತ್ಕಚ - ಒಂದು ಟಿಪ್ಪಣಿ*

ವಿಕ್ರಮಾರ್ಜುನ ವಿಜಯದಲ್ಲಿ ಪಂಪ ವರ್ಣಿಸಿರುವ ಘಟೋತ್ಕಚನ ತಲೆಗೂದಲನ್ನು ಕುರಿತಂತೆ ಇಲ್ಲಿ ಮುಖ್ಯವಾಗಿ ವಿಚಾರಿಸಲಾಗಿದೆ.

ಘಟೋತ್ಕಚನ ಜನನ :

ಕಾರಿರುಳ ತಿರುಳ ಬಣ್ಣಂ
ಕೂರಿದುವೆನೆ ತೊಳಿಪ ದಾಡೆ ಮಿಳಿರ್ವುರಿಗೇಸಂ
ಪೇರೊಡಲೆಸೆದಿರೆ ಪುಟ್ಟಿದ
ನಾರುಮಗುರ್ವಿಸೆ ಮಗಂ ಘಟೋತ್ಕಚನೆಂಬಂ (3–20)

ಯುದ್ಧದಲ್ಲಿ ಭಗವದತ್ತನನ್ನು ಎದುರಿಸಿದಾಗ :

ಉತ್ಕ್ಷೇಪದಹನದೊಡನೆ ಪ್ರ
ಪತ್ಕಂಗಳ್ ಕೋಟಿಗಣಿತದಿಂದುಱುವಿನ ಮಾ
ರ್ದುತ್ಕಚ ದಿತಿಜನನುಱದೆ ಘ
ಟೋತ್ಕಚನಂ ಬಿಟ್ಟು ಮೂರ್ಛೆ ಪೋಪಿನಮೆಚ್ಚಂ (11–8)

ಘಟೋತ್ಕಚನ ರಾತ್ರಿ ಯುದ್ಧ :

ಪರೆದುರಿಗೇಸಮವ್ವಳಿಪ ನಾಲಗೆ ಮಿಂಚುವದಾಡೆ ಬಿಟ್ಟಕಣ್
ತಿರುಪಿದಮಿಾಸೆ ಕೊಂಕಿದ ಸಟಂ ಕರಿದಪ್ಪಕದಂಪು ನೀಟ್ದಿ ತಾ
ಟ್ಮರದ ಪೊಲಪ್ಪೊಡಲ್ ಕಹಕಹಧ್ವನಿ ಕೌಳಿಕನಾದ ಮಾದ ಮಾ
ಸುರತರಮಾಗೆ ಬಂದುಕವಿದತ್ತು ಘಟೋತ್ಕಚ ಕಾಂದ್ರ ಸಾಧನಂ (12–7) [1]

ಈ ಘಟೋತ್ಕಚನನ್ನು ಹೀಗೆ ಕಲ್ಪಿಸಿಕೊಳ್ಳಬಹುದು :
ನೀಳವಾದ ತಾಳೆಮರದಂಥ ಒಡಲು, ಕಾರಿರುಳ ತಿರುಳ ಬಣ್ಣ.

---

[1] ವಿಕ್ರಮಾರ್ಜುನ ವಿಜಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1931

* ಫೆಬ್ರುವರಿ 1971

ಮುಖ : ಕಪ್ಪನೆಯ ಕದಪು, ಹೊಳೆಯುವ ದಾಡೆ, ಅವ್ವಳಿಸುವ ನಾಲಗೆ, ಬಿಟ್ಟಕಣ್ಣು ತಿರುವಿದ ಮೀಸೆ.

ಅವನ ತಲೆಗೂದಲು : 1. ಹರಡಿದ ಉರಿಕೇಶ 2. ಮೇಲಕ್ಕೆ ಎದ್ದಿರುವ ಕೂದಲು 3. ಕೊಂಕಿದ ಸಟೆ.

ಈ ಘಟೋತ್ಕಚನನ್ನು ವ್ಯಾಸರ ಘಟೋತ್ಕಚನೊಡನೆ ಹೋಲಿಸಿದಾಗ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ವ್ಯಾಸರಲ್ಲಿ, ಭೀಮ ಹಿಡಿಂಬೆಯರ ಮಗನ ಭೀಮರೂಪ-ಮಹಾಕಾಯದ ವಿವರ ಚಿತ್ರಣ ಹನ್ನೆರಡು ಶ್ಲೋಕಗಳಲ್ಲಿದೆ.

(ನೋಡಿ : ಆದಿಪರ್ವ 143–27 ರಿಂದ 38)[1] ಅಲ್ಲಿ ಅವನ ಕೂದಲಿಗೆ ಸಂಬಂಧಿಸಿದ ಮಾತುಗಳು ಇವು :

ಪ್ರಣಮ್ಯ ವಿಕಚಃ ಪಾದಾವಗೃಹ್ಣಾತ್ಸಪಿತುಸ್ತದಾ
ಮಾತುಶ ಪರಮೇಷ್ವಾಸಸ್ತೌಚ ನಾಮಾಸ್ಯ ಚಕ್ರತುಃ ॥
ಘಟಭಾಸೋತ್ಕಚ ಇತಿ ಮಾತರಂ ಸೋಽಭ್ಯಭಾಷತ
ಅಭವತ್ತೇನ ನಾಮಾಸ್ಯ ಘಟೋತ್ಕಚ ಇತಿ ಸ್ಮ ಹ ॥
(ಆದಿಪರ್ವ, 143–33–34)

ಗಳಗನಾಥರ ಭಾವಾನುವಾದ :
...ಹೀಗೆ ಹಿಡಿಂಬೆಗೆ ಮಗನು ಹುಟ್ಟಿದ
ಕೂಡಲೆ ಆತನು ತಾಯಿತಂದೆಗಳ ಚರಣಗಳಿಗೆ
ಎರಗಿದನು. ಆಗ ತಾಯಿಯು ಈ ಕೂಸಿನ
'ಘಟ' ಅಂದರೆ ಮಸ್ತಕವು 'ಉತ್ಕಚ' ಅಂದರೆ
ಕೇಶರಹಿತವಾದದ್ದು ಇರುವದೆಂದು ಅಂದವ್ದರಿಂದ.
ಆ ಹುಡುಗನಿಗೆ ಘಟೋತ್ಕಚ ಎಂಬ ಹೆಸರನ್ನು ಇಟ್ಟರು.[2]

33 ಮತ್ತು 34 ನೆಯ ಶ್ಲೋಕಗಳಲ್ಲಿನ 'ವಿಕಚ' ಮತ್ತು 'ಉಕ್ಕಚ' ಎಂಬ ಪದಗಳಿಗೆ ಮಹಾಭಾರತ ವ್ಯಾಖ್ಯಾನಕಾರರು ಮತ್ತು ನಿಘಂಟುಕಾರರು ಎರಡು ಅರ್ಥಗಳನ್ನು ಮಾಡಿದ್ದಾರೆ.

ವಿಕಚ :

ಮಹಾಭಾರತಕ್ಕೆ ವಿಶ್ವಸನೀಯ ಪ್ರಮಾಣವೆಂದು ಭಾವಿಸಲಾಗಿರುವ ನೀಲಕಂಠರ ಭಾವದೀಪದಲ್ಲಿ[3] 'ವಿಕಚಃ ಕೇಶಹೀನಃ' ಎಂದು ಅರ್ಥೈಸಲಾಗಿದೆ. ಇವೇ ಮಾತುಗಳು

---

1 ಮಹಾಭಾರತ, ಆದಿಪರ್ವ ಸಂ–1 ಸಂ. ಸೂಕ್ತಂಕರ್, ಪೂನಾ

2 ಗಳಗನಾಥ : ರಹಸ್ಯ ಪ್ರಕಾಶಿತ ಸಚಿತ್ರ ಮಹಾಭಾರತ ಆದಿಪರ್ವ (1931) ಪು. 391

3 Mahabharata with commentary of Nilakantha ; Ādiparva ; Chitraṣāla press poona 1929 P. 266

ನಿರ್ಣಯ ಸಾಗರ ಮುದ್ರಣದಲ್ಲಿಯೂ[1], (ದಾಕ್ಷಿಣಾತ್ಯ ಪಾಠಗಳನ್ನು ವಿಶೇಷವಾಗಿ ಆಧರಿಸಿದ್ದು ಎಂದು ಸಂಪಾದಕರು ಹೇಳಿದ್ದಾರೆ.) ಕಂಡುಬರುತ್ತವೆ.

ನಿಘಂಟುಕಾರರು ವಿಕಚ ಎನ್ನುವುದಕ್ಕೆ ಎರಡು ಅರ್ಥಗಳನ್ನು ಕೊಟ್ಟಿದ್ದಾರೆ. ಮೇದಿನಿಯಲ್ಲಿ ಕೇಶಶೂನ್ಯ ಎಂದಿದೆ. ವಾಚಸ್ಪತ್ಯಂ ನಿಘಂಟಿನಲ್ಲಿ 1 ವಿಗತಃ ಕಚೋ ಯಸ್ಯ 2 ವಿಶಿಷ್ಟೋ ಕಚೋ ಯತ್ರ ಎಂದಿದೆ. ಶಬ್ದಕಲ್ಪದ್ರುಮ, ಆಪ್ಟೆ, ಮೋನಿಯರ್ ವಿಲಿಯಮ್ಸ್, ಕಿಟ್ಟಲ್, ನಿಘಂಟುಗಳಲ್ಲಿ ಈ ಎರಡೂ ಅರ್ಥಗಳನ್ನು ಕೊಡಲಾಗಿದೆ.

34 ನೆಯ ಶ್ಲೋಕದ ಪಾಠಾಂತರಗಳನ್ನೂ ವ್ಯಾಖ್ಯಾನಗಳನ್ನೂ ಗಮನಿಸ ಬಹುದು :

ನೀಲಕಂಠರ ವ್ಯಾಖ್ಯಾನ :

ಘಟ ಇತಿ. ಘಟ ಸಾದೃಶ್ಯಾದ್ಘಟಃ ಶಿರಃ
'ಘಟಃ ಸಮಾಧಿ ಭೇದೇನಾಶಿರಃ ಕೂಟ ಕಟೇಷುಚ'-
ಇತಿಮೇದಿನೀ. ಹ/ಸ್ಪಷ್ಟಂ ಅಸ್ಯಪುತ್ರಸ್ಯ ಉತ್ಕಚಃ
ವಿಕೇಶೋ ಯತಸ್ತತೋ ಘಟಃ ಉತ್ಕಚೋ ಯಸ್ಯೇತಿ
ಯೋಗಾದ್ಘಟೋತ್ಕಚ ಇತಿ ನಾಮಾಬ್ರವೀತ್

ಇಲ್ಲಿ 33ನೆಯ ಶ್ಲೋಕದ ಕೇಶಹೀನ ಎಂಬ ಅರ್ಥವೇ ಸ್ಪಷ್ಟವಾಗಿದೆ.

ನಿರ್ಣಯ ಸಾಗರ ಮುದ್ರಣದಲ್ಲಿ ಪಾಠಾಂತರವಿದೆ. ತನ್ನತಲೆ ಮಡಕೆಯಹಾಗೆ ಕೇಶಶೂನ್ಯವಾಗಿದೆ ಎಂದು ಘಟೋತ್ಕಚನೇ ತಾಯಿಗೆ ಹೇಳುತ್ತಾನೆ :

ವಿಕಚಃ ಕೇಶಹೀನಃ
ಘಟೋಹಂ ಘಟವದ್ವಿತರ್ಕ್ಯಂ. ಆಸ್ಯಂ ತದುಪ
ಲಕ್ಷಿತಂ ಶಿರಃ ಯಸ್ಯೈ ಸ ಘಟೋಹಾಸ್ಯಃ.
ಸಚಾಸಾವುತ್ಕಚಶ್ಚ ಘಟೋಹಾಸ್ಯೋತ್ಕಚಃ
'ಘಟೋಹ ಮುತ್ಕಚೋಽಸ್ಮೀತಿ ಮಾತರಂ ಸೋಽಭ್ಯ
ಭಾಷತ' ಇತಿ ಘ. ಜ. ಪಾಠಃ

ಇವರ ಪ್ರಕಾರ, 'ಉತ್ಕಚ' ಎಂದರೆ ವಿ (ಗತ) ಕೇಶವಾಗಿ, 'ಘಟ' ಎಂದರೆ ಮಡಕೆ ಯಂತೆ ಭಾಸವಾಗುವ ಶಿರಸ್ಸು ಅವನಿಗೆ ಇತ್ತು. ಆದ್ದರಿಂದ ಅವನಿಗೆ ಘಟೋತ್ಕಚ

1 Srimanmahabharatam, A new edition mainly based on the south Indian texts : Ed : T. R. Krishnamacharya and T. R. Vyasacharya, Props : Madhavavilas Book Depot. Kumbhṇkoaam, Nırnayasagara Press Bombay 1906 P. 298 (foot note)

ಎಂದು ಅನ್ವರ್ಥನಾಮವನ್ನು ಇಡಲಾಯಿತು. ಅದು ಸಾಮಾನ್ಯ ಘಟವಾಗಿದ್ದ ಎರಡು ಶ್ಲೋಕಗಳಲ್ಲಿ ವಿಶೇಷವಾಗಿ ಹೇಳುತ್ತಿರಲಿಲ್ಲ ಎಂದು ಊಹಿಸಬಹುದು.

ಉತ್ಕಚ ಎನ್ನುವ ಪದಕ್ಕೂ ನಿಘಂಟಿನಲ್ಲಿ ಎರಡೂ ಅರ್ಥಗಳಿವೆ.

ಶಬ್ದಕಲ್ಪದ್ರುಮ ಮತ್ತು ವಾಚಸ್ಪತ್ಯಮ್ ನಿಘಂಟುಗಳಲ್ಲಿ ಅರ್ಥವನ್ನು ಘಟೋತ್ಕಚನ ಸಂದರ್ಭದಲ್ಲೇ ಅರ್ಥೈಸಿರುವುದು ಗಮನಾರ್ಹ.

ಶಬ್ದಕಲ್ಪದ್ರುಮದಲ್ಲಿ :

'ಘಟೋತ್ಕಚ :
ಘಟ ಇವ ಉದ್ಗತಃ ಕಚೋಸ್ಯ' ರಾಕ್ಷಸ
ವಿಶೇಷಃ ಸತು ಹಿಡಿಂಬಾ ರಾಕ್ಷಸೀ ಗರ್ಭೇ
ಭೀಮಸೇನಾಜ್ಜಾತಃ ಇತಿ ಮಹಾಭಾರತಮ್

ಎಂದು ಹೇಳಿ ಮಹಾಭಾರತದ ಶ್ಲೋಕಗಳನ್ನೇ ಕೊಡಲಾಗಿದೆ.

ವಾಚಸ್ಪತ್ಯಮ್‌ನಲ್ಲಿ : ಉದ್ಗತಃ ಉನ್ನತಃ ಕಚೋಸ್ಯ ಎಂದು ಹೇಳಿ ಕೇಶಶೂನ್ಯ ಹಾಗೂ ಉನ್ನತ ಕೇಶ ಎಂಬ ಅರ್ಥಗಳನ್ನೂ ಕೊಡಲಾಗಿದ್ದು ಮಹಾಭಾರತದ ಎರಡೂ ಶ್ಲೋಕಗಳನ್ನು ಉದ್ಧರಿಸಲಾಗಿದೆ.

ಮೋನಿಯರ್ ವಿಲಿಯಮ್ಸ್ ನಿಘಂಟಿನಲ್ಲಿ ಕೇಶಶೂನ್ಯ ಎಂದಿದೆ.

ಆಪ್ಟೆ ನಿಘಂಟಿನಲ್ಲಿ ನಿಮಿರಿದ ಕೂದಲುಳ್ಳ-ಘಟೋತ್ಕಚನಲ್ಲಿ ಇರುವಂತೆ, ಎಂದೂ, ಕೇಶಶೂನ್ಯ ಎಂದೂ ಅರ್ಥಮಾಡಲಾಗಿದೆ. ಕಿಟ್ಟಲ್ ಕೂಡ ಉತ್ಕಚ ಎನ್ನುವುದಕ್ಕೆ ನಿಮಿರಿನಿಂತ ಕೂದಲುಳ್ಳ-ಎಂದು ಹೇಳಿ ಘಟೋತ್ಕಚನನ್ನು ನೋಡಿ ಎಂದಿದ್ದಾರೆ. ಆದರೆ ಯಾವ ಭಾರತದಲ್ಲಿ ಎಂದೇನೂ ಹೇಳಿಲ್ಲ.

ವಿಕ್ರಮಾರ್ಜುನ ವಿಜಯದ ಸಂಪಾದಕರು ಮೇಲಕ್ಕೆದ್ದಿರುವ ಕೂದಲುಳ್ಳ ಎಂದು ಹೇಳಿದ್ದಾರೆ. ಆದರೆ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ಉತ್ಕಚ ಎನ್ನುವುದಕ್ಕೆ ನೆಟ್ಟಗೆ ನಿಂತ ಕೂದಲಿನ ; ಕೆದರಿದ ಕೂದಲುಳ್ಳ ಎಂದು 'ಮಾತ್ರ' ಅರ್ಥಮಾಡಿ ವಿಕ್ರಮಾರ್ಜುನ ವಿಜಯದ ಪದ್ಯವನ್ನು (11-8) ಉದಾಹರಿಸಿದ್ದಾರೆ.

ಇದರಿಂದ ವಿದಿತವಾಗುವ ಅಂಶಗಳು ಇಷ್ಟು :

1. ಘಟೋತ್ಕಚನ ವರ್ಣನೆಯಲ್ಲಿ ವ್ಯಾಸ ಪಂಪರಲ್ಲಿ ಕೆಲವು ವ್ಯತ್ಯಾಸಗಳಿವೆ.
ಉದಾ : ಅವನ ಬಣ್ಣ ; ತಾಮ್ರಾಸ್ಯ (ವ್ಯಾಸ)
ಕರಿದಪ್ಪ ಕದಂಪು (ಪಂಪ)

2. ಅವನಿಗೆ ತಲೆಗೂದಲು ಇತ್ತೇ ಇಲ್ಲವೇ ಎನ್ನುವುದು:

ಸಂಸ್ಕೃತದಲ್ಲಿ ಪ್ರತ್ಯಯಗಳಿಂದಾಗುವ ಅರ್ಥ ವ್ಯತ್ಯಾಸವನ್ನು ಇದು ಅವಲಂಬಿಸ ಬೇಕಾಗಿದೆ. ವಿಶೇಷಣಗಳಾಗಿರುವ ಈ ಎರಡೂ ಪೂರ್ವ ಪ್ರತ್ಯಯಗಳಲ್ಲಿ ಒಂದೊಂದನ್ನು ವ್ಯಾಖ್ಯಾನಕಾರರು-ನಿಘಂಟುಕಾರರು ಪುರಸ್ಕರಿಸಿದ್ದಾರೆ :

I ವಿ– ವಿಶಿಷ್ಟ ii) ವಿಗತ
II ಉತ್– i) ಮೇಲಕ್ಕೆಎದ್ದ ii) ಇಲ್ಲದೆ [1]

3. ವ್ಯಾಸಭಾರತದಲ್ಲಿ ಘಟೋತ್ಕಚ ಎಂಬ ಹೆಸರು ಬಂದುದಕ್ಕೆ ಒಂದು ವಿವರಣೆ ಕೊಡುವ ಪ್ರಯತ್ನ ಕಂಡುಬರುತ್ತದೆ. ಎಲ್ಲ ರಾಕ್ಷಸರ ಹಾಗೆ ಘಟೋತ್ಕಚನೂ ಕೆದರಿದ ಕೂದಲಿನ ವಿಕಾರರೂಪದವನು ಎನ್ನುವುದಕ್ಕಿಂತ (ಹಿಡಿಂಬನೇ ಊರ್ಧ್ವ 'ಕೇಶ' ಉಳ್ಳವನು. ನೋಡಿ: ಆದಿಪರ್ವ 140.2) ಈ ಅಸಾಮಾನ್ಯ-ರಾಕ್ಷಸ-ಮಾನುಷಪುತ್ರನ ವಿಲಕ್ಷಣ ತಲೆಯ ಆಕಾರ ಅವನಿಗೆ ಅನ್ವರ್ಥವಾದ ಹೆಸರನ್ನು ಕೊಟ್ಟಿತು ಎನ್ನುವುದನ್ನು ಇಲ್ಲಿ ವಿಶೇಷವಾಗಿ ಹೇಳಿರುವಂತೆ ತೋರುತ್ತದೆ.

4. ಪಂಪ ಈ ಅರ್ಥವೈವಿಧ್ಯವನ್ನು ಬಿಟ್ಟು ತನ್ನ ಕೃತಿ ಹೆಚ್ಚು ಚಿತ್ರಕವಾಗುವಂತೆ ಘಟೋತ್ಕಚನ 'ರೌಂದ್ರ ರಾಕ್ಷಸ' ರೂಪವನ್ನು ಬಳಸಿಕೊಂಡಿದ್ದಾನೆ. ರಾತ್ರಿಯುದ್ಧದಲ್ಲಿ ಕರಿದಪ್ಪಕದಂಪಿನ ಘಟೋತ್ಕಚ ರೌಂದ್ರಸಾಧನ ಕವಿಯುತ್ತದೆ. ದಾಡೆ ಮಿಂಚುತ್ತದೆ. ಉರಿಕೇಶ ಎಂದು ಇಲ್ಲಿ ಚಿತ್ರಕವಾಗಿಸಿದ್ದಾನೆ. (12-7) ಹಾಗೆಯೇ ಉತ್ಕ್ಷೇಪ-ಉತ್ಕಚಗಳು ಪ್ರಾಸಕ್ಕಾಗಿ ಒಂದೇ ಅರ್ಥದಲ್ಲಿ ಬಳಕೆಯಾಗಿವೆ. (11-8)

5. ಭಾಸನಲ್ಲಿ ಕೂಡ ಘಟೋತ್ಕಚನ 'ಶಂಕರ ರೌದ್ರ'ರೂಪವನ್ನು ವೃದ್ಧ ಬ್ರಾಹ್ಮಣ ಮತ್ತು ಅವನ ಮಕ್ಕಳ ಕಣ್ಣಿನಲ್ಲಿ ಬಣ್ಣಿಸಲಾಗಿದೆ.[2] ಮತ್ತು ಅವರು

---

1 Cf ; ಉಂಬಳಿ ಉತ್ + ಬಲಿ = taxfree : ನೋಡಿ. ಡಾ. ಎಂ. ಚಿದಾನಂದಮೂರ್ತಿ ಸಂಶೋಧನ ತರಂಗ ಪು.

2 ನೋಡಿ : ಮಧ್ಯಮ ವ್ಯಾಯೋಗ ಅನು : ಎಲ್. ಗುಂಡಪ್ಪ, ಬೆಂಗಳೂರು, ಪು. 3.

1. ವೃದ್ಧ : ಅಯ್ಯೋ ಯಾವನು ?
ಅರುಣಕಿರಣವನೆ ಹರಡಿಹುದು ಕುರುಳೋಳಿ
ಹುಬ್ಬುಗಂಟಿಕ್ಕಿರಲು ದೊಡ್ಡ ಕಣ್ಣುಗಳು
ಥಳಥಳನೆ ಹೊಳೆಯುತಿವೆ. ಕಂಠಸೂತ್ರವನಾಂತು
ಮಿಂಚುತಿಹ ಕಾರ್ಮುಗಿಲ ಹೋಲುವನು. ಯುಗನಿಧನ
ಕಾಲದಾ ಹರನ ಪ್ರತಿಮೆಯ ಹಾಗೆ ತೋರುತಿಹನು ॥ ೪ ॥

2. ಪ್ರಥಮ : ಹೊಂಬಣ್ಣದುರಿಗುರುಳು......ಕತ್ತಲೆಯ ಮೊತ್ತವನು ಕಟ್ಟಿಟ್ಟ ಮೈಬಣ್ಣ
ಇಂತಿವನು ಚಂದ್ರಲೇಖೆಯ ಮುಸುಕಿ
ಮರೆಮಾಡತೊಡಗಿರುವ ಹೊಸಮುಗಿಲಿನಂತೆಸೆವನು. ॥ ೫ ॥

3. ದ್ವಿತೀಯ : ......ನೀಲಮೇಘದ ವರ್ಣದಿಂದ ರಂಜಿಪುದು. ಹೋಮ
ಕುಂಡದೊಳಗ್ನಿಯಾಹುತಿಯ ಕೊಂಡುರಿವ ರೀತಿಯುಲಿ ಹೊಳೆಯುವವನು.
ತ್ರಿಪುರಸಂಹಾರದಲಿ ಮೊರೆದೆದ್ದ ಶಂಕರನ
ರೋಷವೆಂಬಂತಿವನು ರೌದ್ರತೆಯ ತೋರುತಿಹನು ॥ ೬ ॥

ಘಟೋತ್ಕಚನನ್ನು ಮುಗಿಲಿನ ಬಣ್ಣಕ್ಕೆ ಹೋಲಿಸಿದ್ದಾರೆ. (ಕಾರಿರುಳ ತಿರುಳ ಬಣ್ಣ) ಈ ಮಟ್ಟಿಗೆ ಪಂಪ ಭಾಸನಲ್ಲಿ ಘಟೋತ್ಕಚನನ್ನು ಕಂಡಿಲ್ಲ ಎಂದು ಹೇಳಲು ಬರುವುದಿಲ್ಲ.

ಇನ್ನೊಂದು ಮಾತು :

ವ್ಯಾಸಭಾರತದ ದ್ರೋಣಪರ್ವದಲ್ಲಿ (7.150.4) ಘಟೋತ್ಕಚನನ್ನು ಕುರಿತ ಒಂದು ಶ್ಲೋಕ :

ಲೋಹಿತಾಕ್ಷೋ ಮಹಾಕಾಯಸ್ತಾಮ್ರಾಸ್ಯೋ ನಿಮ್ನಿತೋದರಃ
ಊರ್ಧ್ವರೋಮಾ ಹರಿಶ್ಮಶ್ರುಃ ಶಂಕುಕರ್ಣೋ ಮಹಾಹನುಃ ॥

ಇಲ್ಲಿ ಊರ್ಧ್ವರೋಮಾ ಎಂದೇ ಇದೆಯಲ್ಲ ಅನ್ನಿಸುತ್ತದೆ. ಆದರೆ ಕೇಶ, ಕಚ ಎಂದು ಹೇಳದಿರುವುದರಿಂದ (ಹಿಡಿಂಬನನ್ನು 'ಊರ್ಧ್ವಕೇಶ' ಎಂದೇ ಹೇಳಿರುವುದನ್ನು ಇಲ್ಲಿ ಗಮನಿಸಿ. ಆದಿಪರ್ವ 140-2) ರೋಮ, ಕೇಶ-ಕಚ, ಅಲ್ಲದೆ ಸಾರ್ವತ್ರಿಕ ಅರ್ಥದಲ್ಲಿ ಬಳಕೆಯಾಗಿದೆ. ಮನುಷ್ಯರಿಗೆ ಭಿನ್ನವಾದ ರೀತಿಯಲ್ಲಿ ಶರೀರಾದ್ಯಂತ ಕೆಲವು ರಾಕ್ಷಸರಿಗೆ ರೋಮ ಊರ್ಧ್ವಗಾಮಿಯಾಗಿ ಬೆಳೆಯುತ್ತದೆ ಎಂಬ ಅನೇಕ ರಾಕ್ಷಸರ ವರ್ಣನೆಯನ್ನೂ ಇಲ್ಲಿ ಗಮನಿಸಬಹುದು. ಕಾರಣ ಇಷ್ಟೆ :

ವ್ಯಾಸಭಾರತದಲಿನ ಎರಡು ಶ್ಲೋಕಗಳಿಗೆ ಇರುವ ಅನ್ವರ್ಥನಾಮಕರಣದ ಮಹತ್ವಕ್ಕಾಗಿ (actiological significance) (ಫೆಬ್ರವರಿ 1971)

(ಕೊನೆಯದಾಗಿ) **Colophon :**

ವ್ಯಾಸಭಾರತದಲ್ಲಿ ಹೀಗೆ ಎರಡು ಅರ್ಥ ಧರಿಸಬಲ್ಲ ಪದಗಳನ್ನು ಪಂಪ ತನ್ನ ಕೃತಿಯ ಸಂದರ್ಭದಲ್ಲಿ ಕಲಾತ್ಮಕ ಅರ್ಥಪೂರ್ಣತೆಗಾಗಿ ಆಯ್ಕೆಯ ಸ್ವಾತಂತ್ರ್ಯವನ್ನು ವಹಿಸಿದ್ದಾನೆ :

ನಾಗಪತಾಕ–ಆನೆಯನ್ನು ಧ್ವಜದಲ್ಲಿ ಉಳ್ಳವ (ವ್ಯಾಸ).
ಉರಗಧ್ವಜ – (ಪಂಪ)
ವಿವರಗಳಿಗೆ ನೋಡಿ : ಡಾ. ಕೆ. ಕೃಷ್ಣಮೂರ್ತಿ ಅವರ ಚರ್ಚೆ.
ಪಂಪ ಒಂದು ಅಧ್ಯಯನ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 1973.

**ಎಂ. ಎಸ್. ವಿ. ಪಂಡಿತಾರಾಧ್ಯ**

# ಸಂಪಾದಕೀಯ

'ಸಾಧನೆ' ತನ್ನ ಯಶಸ್ವಿಯಾದ ಮೂರು ವರ್ಷಗಳನ್ನು ಮುಗಿಸಿ ಇದೀಗ ನಾಲ್ಕನೆಯ ವರ್ಷಕ್ಕೆ ಕಾಲಿಡುತ್ತಿದೆ. ಈ ಮೂರೇ ವರ್ಷಗಳಲ್ಲಿ ಇದು ಕನ್ನಡದ ಶ್ರೇಷ್ಠ ತ್ರೈಮಾಸಿಕ ಎಂದು ಪರಿಗಣಿತವಾಗಿರುವುದು ಮಾತ್ರವಲ್ಲ, 'ಸಾಧನೆ' ಯಲ್ಲಿ ತಮ್ಮ ಲೇಖನಗಳು ಪ್ರಕಟವಾಗುವುದು ಒಂದು ಗೌರವ ಎಂಬ ಭಾವನೆಯನ್ನು ಲೇಖಕರಲ್ಲಿ ಮೂಡಿಸುವಂತಾಗಿದೆ ಎಂಬುದು ಸಂತೋಷದ ಸಂಗತಿಯಾಗಿದೆ. ಇಷ್ಟಾಗಿಯೂ ಚಂದಾದಾರರ ಸಂಖ್ಯೆ ಹೇಳಿಕೊಳ್ಳುವಷ್ಟೇನೂ ಹೆಚ್ಚಾಗಿಲ್ಲ. ಆದರೆ ಕನ್ನಡ ನಾಡಿನ ವಿವಿಧ ಲೇಖಕರ ಸಹಕಾರ ಸೂತ್ರ ಬತ್ತದ ತೊರೆಯಾಗಿದೆ. ಈ ಕಾರಣದಿಂದಲೇ 'ಸಾಧನೆ' ತನ್ನ ನಿರೀಕ್ಷಿತ ಗುಣ ಮಟ್ಟವನ್ನು ಕಾಯ್ದುಕೊಳ್ಳಲು ಸಾಧ್ಯವಾಗಿದೆ. ಹೀಗೆ ನಿರಂತರ ಸಹಕಾರ ನೀಡುತ್ತಿರುವ ಲೇಖಕರಿಗೆ ನಾವು ತುಂಬ ಕೃತಜ್ಞರಾಗಿದ್ದೇವೆ.

'ಸಾಧನೆ' ಯ ಮೂರನೆಯ ವರ್ಷ ಮುಗಿದು, ನಾಲ್ಕನೆಯ ವರ್ಷದಲ್ಲಿ ಕಾಲಿಡುವ ವೇಳೆಗೆ; ಅದರ ಸಲಹಾ ಮಂಡಳಿ ಹಾಗೂ ಸಂಪಾದಕ ಮಂಡಳಿ ಬದಲಾಗುತ್ತಿದೆ. ಉದ್ದಕ್ಕೂ ಅನೇಕ ರೀತಿಯಲ್ಲಿ ಮಾರ್ಗದರ್ಶನ ಮಾಡಿದ ಹಿಂದಿನ ಸಲಹಾಮಂಡಳಿಯ ಸದಸ್ಯರಿಗೆ, ಮತ್ತು ಸಂಪಾದಕರಾಗಿ ಅತ್ಯಂತ ಶ್ರದ್ಧೆಯಿಂದ ಉತ್ಸಾಹದಿಂದ ಈ ಮೂರು ವರ್ಷ ನೆರವಾದ ಮಾನ್ಯ ಸಂಪಾದಕರಾದ ಡಾ. ಎಂ. ಚಿದಾನಂದ ಮೂರ್ತಿ, ಡಾ. ಯು. ಸೂರ್ಯನಾಥ ಕಾಮತ್, ಮತ್ತು ಡಾ. ಸಿ. ಎನ್. ವೆಂಕಟಸ್ವಾಮಿಶೆಟ್ಟಿ ಇವರಿಗೆ, ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುತ್ತೇನೆ.

ಇದೀಗ ಪುನರ್ ರಚಿತವಾದ ಸಾಧನೆಯ ಸಲಹಾ ಮಂಡಳಿಯ ಸದಸ್ಯರಿಗೆ, ಹೊಸ ಸಂಪಾದಕ ಮಂಡಲಿಯ ಸಹೋದ್ಯೋಗಿಗಳಿಗೆ ಆದರದ ಸುಸ್ವಾಗತ.

**ಡಾ. ಜಿ. ಎಸ್. ಶಿವರುದ್ರಪ್ಪ**
ಪ್ರಧಾನ ಸಂಪಾದಕ

**ಈ ಸಂಚಿಕೆಯ ಲೇಖಕರು**


| | |
|---|---|
| ಡಾ ॥ ಜಿ. ಎಸ್. ಶಿವರುದ್ರಪ್ಪ | ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ<br>ಬೆಂಗಳೂರು ವಿಶ್ವವಿದ್ಯಾಲಯ<br>ಬೆಂಗಳೂರು 560056 |
| ಬರಗೂರು ರಾಮಚಂದ್ರಪ್ಪ | ಕನ್ನಡ ಅಧ್ಯಾಪಕ<br>ಸರ್ಕಾರಿ ಆರ್ಟ್ಸ್ ಕಾಲೇಜು<br>ಬೆಂಗಳೂರು 560001 |
| ಜಯಸುದರ್ಶನ | 769, 5ನೇ ಬ್ಲಾಕ್, ರಾಜಾಜಿನಗರ<br>ಬೆಂಗಳೂರು 560039 |
| ಜಿ. ಎಂ. ಉಮಾಪತಿಶಾಸ್ತ್ರೀ | ರೀಡರ್, ಹಿಂದಿ ವಿಭಾಗ<br>ಬಸವೇಶ್ವರ ಆರ್ಟ್ಸ್ ಕಾಲೇಜು<br>ಬಾಗಲಕೋಟೆ |
| ಶೈಲಜಾ ಉಡಚಣ | ರೀಡರ್, ಕನ್ನಡ ವಿಭಾಗ<br>ಸರ್ಕಾರಿ ಕಾಲೇಜು, ಗುಲಬರ್ಗಾ |
| ಟಿ. ಶ್ರೀವೆಂಕಟರಮಣ | ಉಪನ್ಯಾಸಕ, ಸಂಖ್ಯಾಕಲನ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ<br>ಬೆಂಗಳೂರು 560056 |
| ಜಯಂತ ಕಾಯ್ಕಿಣಿ | 203, ಶಾಲ್ಮಲಾಹಾಸ್ಟೆಲ್<br>ಕರ್ನಾಟಕ ವಿಶ್ವವಿದ್ಯಾಲಯ<br>ಧಾರವಾಡ |
| ಆರ್. ಎನ್. ಗುರವ | ಸಂಶೋಧನ ಸಹಾಯಕರು<br>ಕನ್ನಡ ಅಧ್ಯಯನ ಪೀಠ<br>ಕರ್ನಾಟಕ ವಿಶ್ವವಿದ್ಯಾಲಯ<br>ಧಾರವಾಡ 3 |

| | |
|---|---|
| ಡಾ ॥ ರಂ. ಶ್ರೀ ಮುಗಳಿ | ಕನ್ನಡ ಅಧ್ಯಯನ ಕೇಂದ್ರ<br>ಬೆಂಗಳೂರು ವಿಶ್ವವಿದ್ಯಾಲಯ<br>ಬೆಂಗಳೂರು 560056 |
| ಎಂ. ಶಿವಕುಮಾರಸ್ವಾಮಿ | ಸಂಸ್ಕೃತ ಅಧ್ಯಾಪಕ<br>ಬೆಂಗಳೂರು ವಿಶ್ವವಿದ್ಯಾಲಯ<br>ಬೆಂಗಳೂರು 560056 |
| ಶಶಿಧರ ಕುಲಕರ್ಣಿ | 1063/110, 1ನೇ ಮೈನ್ ರೋಡ್<br>7ನೇ ಕ್ರಾಸ್, ವಿದ್ಯಾರಣ್ಯಪುರಮ್<br>ಮೈಸೂರು 5 |
| ಎಸ್. ಪಿ. ಶಂಕರನಾರಾಯರಾವ್ | ಅಂಚೆಕಚೇರಿ, ಬಸವನಗುಡಿ<br>ಬೆಂಗಳೂರು 560004 |
| ಎಚ್. ಎಚ್. ಗಂಗಾಧರಾಚಾರ್ | ಸಹಾಯಕ ಅಧ್ಯಾಪಕ<br>ಎಸ್. ಜೆ. ಪಾಲಿಟೆಕ್ನಿಕ್, ಭದ್ರಾವತಿ |
| ಡಿ. ಶೇಷಗಿರಿರಾವ್ | 'ಪಾರಿಜಾತ' 70<br>ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ<br>ಬೆಂಗಳೂರು 560055 |
| ಡಾ ॥ ಎಂ. ಚಿದಾನಂದಮೂರ್ತಿ | ರೀಡರ್, ಕನ್ನಡ ಅಧ್ಯಯನ ಕೇಂದ್ರ<br>ಬೆಂಗಳೂರು ವಿಶ್ವವಿದ್ಯಾಲಯ<br>ಬೆಂಗಳೂರು 560056 |
| ಎಂ. ಎ. ಲಕ್ಷ್ಮೀತಾತಾಚಾರ್ | ಸಂಸ್ಕೃತ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ<br>ಜ್ಞಾನ ಭಾರತಿ, ಬೆಂಗಳೂರು 560056 |
| ಎಂ. ಎಸ್. ವಿ. ಪಂಡಿತಾರಾಧ್ಯ | ಕನ್ನಡ ಅಧ್ಯಾಪಕರು,<br>ಮಂಗಳ ಗಂಗೋತ್ರಿ<br>ಕೊಣಾಜೆ, ಮಂಗಳೂರು |

# ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ

**ಸಂಪುಟಗಳ ವಿವರ**

| | | |
|---|---|---|
| ಸಂಪುಟ | 1 | ಕನ್ನಡ ಸಾಹಿತ್ಯದ ಆರಂಭಕಾಲದಿಂದ ಕ್ರಿ.ಶ. 850 ರ ವರೆಗೆ |
| ಸಂಪುಟ | 2 | ಕ್ರಿ.ಶ. 850 ರಿಂದ ಕ್ರಿ.ಶ. 1150 ರ ವರೆಗೆ |
| ಸಂಪುಟ | 3 | ಕ್ರಿ.ಶ. 1150 ರಿಂದ ಕ್ರಿ.ಶ. 1350 ರ ವರೆಗೆ |
| ಸಂಪುಟ | 4 | ಕ್ರಿ.ಶ. 1350 ರಿಂದ ಕ್ರಿ.ಶ. 1600 ರ ವರೆಗೆ |
| ಸಂಪುಟ | 5 | ಕ್ರಿ.ಶ. 1600 ರಿಂದ ಕ್ರಿ.ಶ. 1850 ರ ವರೆಗೆ |
| ಸಂಪುಟ | 6 | ಕ್ರಿ.ಶ. 1850 ರಿಂದ ಕ್ರಿ.ಶ. 1920 ರ ವರೆಗೆ |
| ಸಂಪುಟ | 7 | ಕ್ರಿ.ಶ. 1920 ರಿಂದ ಕ್ರಿ.ಶ. 1947 ರ ವರೆಗೆ |
| ಸಂಪುಟ | 8 | ಕ್ರಿ.ಶ. 1947 ರಿಂದ ಕ್ರಿ.ಶ. 1972 ರ ವರೆಗೆ |
| ಸಂಪುಟ | 9 | ಈ ಎಂಟೂ ಸಂಪುಟಗಳಲ್ಲಿ ವಿಶೇಷವಾಗಿ ಚರ್ಚಿತವಾಗದ ಸಂಗತಿಗಳು : ನಿದರ್ಶನಕ್ಕೆ – ಜನಪದ ಸಾಹಿತ್ಯ, ಕನ್ನಡ ಗದ್ಯದ ಇತಿಹಾಸ, ಪ್ರಮುಖವಾದ ಸಾಹಿತ್ಯ ಪ್ರಕಾರಗಳು, ಶಾಸ್ತ್ರ ಸಾಹಿತ್ಯದ ಅವಲೋಕನ, ವಿಮರ್ಶೆಯ ಬೆಳವಣಿಗೆ ಇತ್ಯಾದಿ |
| ಸಂಪುಟ | 10 | ಇತರ ಭಾಷೆಯ ಸಾಹಿತ್ಯಗಳೊಂದಿಗೆ, ಕನ್ನಡ ಸಾಹಿತ್ಯವನ್ನಿರಿಸಿ ನಡೆಯಿಸಿದ ತೌಲನಿಕ ಸಮೀಕ್ಷೆ, ಕನ್ನಡ ಸಾಹಿತ್ಯದ ಸಾಧನೆ ಸಿದ್ಧಿ ಇತ್ಯಾದಿ |

**ಸಂಪುಟಗಳ ಬಿಡುಗಡೆಯ ವಿವರ**

ಪ್ರಥಮ ಸಂಪುಟದ ಬಿಡುಗಡೆ ··· 30–10–1974

| | | **1975** | **1976** | **1977** |
|---|---|---|---|---|
| ಯುಗಾದಿಯಂದು | ··· | ಸಂಪುಟ 2 | ಸಂಪುಟ 5 | ಸಂಪುಟ 8 |
| ಸ್ವಾತಂತ್ರ್ಯ ದಿನದಂದು | ··· | ಸಂಪುಟ 3 | ಸಂಪುಟ 6 | ಸಂಪುಟ 9 |
| ಕನ್ನಡ ರಾಜ್ಯೋತ್ಸವದಿನದಂದು | ··· | ಸಂಪುಟ 4 | ಸಂಪುಟ 7 | ಸಂಪುಟ 10 |

ಕನ್ನಡ ಸಾಹಿತ್ಯದ ಆರಂಭ ಕಾಲದಿಂದ, ಆಧುನಿಕ ಕಾಲದವರೆಗೆ ಹಲವು ಕಾಲಮಾನಗಳನ್ನು ಮಾಡಿಕೊಂಡು ಅಂದಂದಿನ ಇತಿಹಾಸ, ಭಾಷೆ, ಸಂಸ್ಕೃತಿ, ಧರ್ಮಗಳ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ಪರಿಶೀಲಿಸಲಾಗಿದೆ. ಅಂದಂದಿನ ಕಾಲಮಾನಗಳ ಸಾಹಿತ್ಯವನ್ನು ಸಮಗ್ರವಾಗಿ ಪರಿಶೀಲಿಸುವುದರ ಜತೆಗೆ, ಈ ಸಾಹಿತ್ಯ ಚರಿತ್ರೆ ಪ್ರಮಾಣಭೂತವೂ ಪುನರ್‌ಮೌಲ್ಯಮಾಪನ ದೃಷ್ಟಿಯಿಂದ ರಚಿತವಾದದ್ದೂ ಆಗಿರಬೇಕೆಂಬುದು ಈ ಯೋಜನೆಯ ಉದ್ದೇಶವಾಗಿದೆ. ಅಲ್ಲದೆ ಸಮಗ್ರ ಕನ್ನಡ ಸಾಹಿತ್ಯದ ಪರಿಶೀಲನೆ, ಭಾರತೀಯ ಹಾಗೂ ಜಾಗತಿಕ ಸಾಹಿತ್ಯದ ಹಿನ್ನೆಲೆಯಲ್ಲಿ ನಡೆಯುವುದು ಹೆಚ್ಚು ಅರ್ಥಪೂರ್ಣವೆಂಬ ಅಂಶವನ್ನು ಇಲ್ಲಿ ಉದ್ದಕ್ಕೂ ಗಮನದಲ್ಲಿರಿಸಿಕೊಳ್ಳಲಾಗಿದೆ.

ಈ ಸಂಪುಟಗಳ ರಚನೆಯಲ್ಲಿ ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಿರುವ ಪರಿಣತ ಲೇಖಕರ ಸಹಕಾರವನ್ನು ಪಡೆಯಲಾಗಿದೆ. ಕ್ರೌನ್ ಚತುರ್ಥಾಂಶ ಆಕಾರದಲ್ಲಿ ಹೊರಬರುವ ಈ ಹತ್ತು ಸಂಪುಟಗಳು ಸುಮಾರು ಮೂರು ಸಾವಿರ ಪುಟಗಳಷ್ಟು ದೀರ್ಘವಾಗುವ ಸಂಭವವಿದೆ.

* *

**ಸಂಪುಟಗಳ ಬೆಲೆ**

ಹತ್ತು ಸಂಪುಟಗಳಿಗೆ : ರೂ. 300

1976 ರ ಸ್ವಾತಂತ್ರ್ಯ ದಿನ (15–8–1976) ದೊಳಗಾಗಿ ಹತ್ತು
ಸಂಪುಟಗಳನ್ನು ಕೊಳ್ಳಬಯಸುವವರಿಗೆ ಪ್ರಕಾಶನಪೂರ್ವ ಬೆಲೆ : ರೂ. 250
[ಈ ಹಣವನ್ನು ಒಂದೇ ಬಾರಿ ಅಥವಾ ನಾಲ್ಕು ತಿಂಗಳಿಗೊಮ್ಮೆ 50 ರೂ. ಗಳಂತೆ
ಐದು ಕಂತುಗಳಲ್ಲಿ ಕೊಡಬೇಕಾಗುತ್ತದೆ] ಅಂಚೆ ವೆಚ್ಚ ಪ್ರತ್ಯೇಕ
ಬಿಡಿ ಪ್ರತಿಗಳು ಮಾರಾಟಕ್ಕಿವೆ

ತಮ್ಮ ಪ್ರತಿಗಳನ್ನು ದಯಮಾಡಿ ಕಾಯ್ದಿರಿಸಿ

## ಪ್ರಚಾರೋಪನ್ಯಾಸ ಮಾಲೆ

| | | |
|---|---|---|
| 1. | ನಗೆಯ ನೆಲೆ | ಎಸ್. ಕೆ. ರಾಮಚಂದ್ರರಾವ್ |
| 2. | ನಕ್ಷತ್ರ ಲೋಕ | ಜಿ. ಟಿ. ನಾರಾಯಣರಾವ್ |
| 3. | ಭಯ-ಸರಳವಿಶ್ಲೇಷಣೆ | ಎಂ. ಶಿವರಾಂ |
| 4. | ಶ್ರೀ ಕವಿ ಲಕ್ಷ್ಮೀಶ | ಜಿ. ಎಸ್. ಸಿದ್ದಲಿಂಗಯ್ಯ |
| 5. | ಶಾಂತಿನಾಥಕವಿ | ಕಮಲಾ ಹಂಪನಾ |
| 6. | ಉತ್ತಂಗಿ ಚನ್ನಪ್ಪ | ಸ. ಸ. ಮಾಳವಾಡ |
| 7. | ಬಯಲಾಟಗಳು | ಚಂದ್ರಶೇಖರ ಕಂಬಾರ |
| 8. | ನಾಟಕದಲ್ಲಿ ನವ್ಯತೆ | ಪಿ. ಲಂಕೇಶ್ |
| 9. | ದ್ರಾವಿಡ ಸಂಖ್ಯಾವಾಚಕಗಳು | ಹಂಪ. ನಾಗರಾಜಯ್ಯ |
| 10. | ಉಪಭಾಷೆ | ಕೃಷ್ಣ ಪರಮೇಶ್ವರ ಭಟ್ಟ |
| 11. | ಅರವಿಂದರ ವಿಚಾರಧಾರೆ | ಸಿ. ಕೆ. ವೆಂಕಟರಾಮಯ್ಯ |
| 12. | ಪೂರ್ಣಯೋಗಿ ಶ್ರೀ ಅರವಿಂದರು | ಕೋ. ಚನ್ನಬಸಪ್ಪ |
| 13. | ಪ್ರಾಚೀನ ಸಂಸ್ಕೃತಿ | ಎಸ್. ಕೆ. ರಾಮಚಂದ್ರರಾವ್ |
| 14. | ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ | ಎನ್. ಜಿ. ಚಂದ್ರಶೇಖರಯ್ಯ |
| 15. | ಸಣ್ಣ ಕೈಗಾರಿಕೆಗಳು | ಆರ್. ಎಸ್. ಆರಾಧ್ಯ |
| 16. | ವಿವಾಹ ಪದ್ಧತಿಗಳು | ಎಸ್. ಕೆ. ರಾಮಚಂದ್ರರಾವ್ |
| 17. | ಪಾನೀಯಗಳು | ಕೆ. ಎಸ್. ಲಕ್ಷ್ಮಣರಾವ್ |
| 18. | ಚಂದ್ರಲೋಕ ಯಾತ್ರೆ | ಪಿ. ಎಸ್. ವೆಂಕಟಸ್ವಾಮಿಶೆಟ್ಟಿ |
| 19. | ಬೆಳಕಿನ ಸ್ವರೂಪ | ಬಿ. ವಿ. ನಾರಾಯಣರಾವ್ |
| 20. | ದೂರದರ್ಶನ | ಕೆ. ಶೇಷಾದ್ರಿ ಅಯ್ಯಂಗಾರ್ |
| 21. | ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು | ಕೆ. ಶೇಷಾದ್ರಿ ಅಯ್ಯಂಗಾರ್ |
| 22. | ಕುರುಡು | ಎಸ್. ಟಿ. ಪುಟ್ಟಣ್ಣ |
| 23. | ಕಣ್ಣಿನ ರೋಗಗಳು | ಎಸ್. ಟಿ. ಪುಟ್ಟಣ್ಣ |
| 24. | ಕ್ಷಯ | ಎಂ. ಬಸವರಾಜೆ ಅರಸು |
| 25. | ಮೂತ್ರಪಿಂಡದ ಕೆಲವು ರೋಗಗಳು | ಎಂ. ಬಸವರಾಜೆ ಅರಸು |
| 26. | ಉಕ್ಕು : ತಯಾರಿಕೆ ಮತ್ತು ರಚನೆ | ಕೆ. ಆರ್. ಮೋಹನ್ |
| 27. | ನೀರಾವರಿ ಸಮಸ್ಯೆಗಳು | ಕೆ. ಎನ್. ಶಿವಶಂಕರರಾವ್ |
| 28. | ಅಂತರ್ಜಲ | ಸಿ. ನಾಗಣ್ಣ |
| 29. | ಪಂಪ | ತ. ಸು. ಶಾಮರಾಯ |
| 30. | ದೇಹರಚನೆ ಹಾಗೂ ಮೂಳೆಗಳು | ಎಸ್. ಬಿ. ವಸಂತ ಕುಮಾರ್ |
| 31. | ಶ್ರೀನಿವಾಸ ರಾಮಾನುಜನ್ | ಜಿ. ಟಿ. ನಾರಾಯಣರಾವ್ |
| 32. | ಮಹಾಕವಿ ಕುಮಾರನಾಶಾನ್ | ಬಿ.ಕೆ. ತಿಮ್ಮಪ್ಪ, ಟಿ.ವೆಂಕಟಲಕ್ಷ್ಮಿ |
| 33. | ತುಳ್ಳಲ್‌ಕವಿ ಕುಂಜನ್ ನಂಬಿಯಾರ್ | ಬಿ.ಕೆ. ತಿಮ್ಮಪ್ಪ, ಟಿ.ವೆಂಕಟಲಕ್ಷ್ಮಿ |
| 34. | ಪರಾಮಾನಸಶಾಸ್ತ್ರ | ಎಸ್. ಕೆ. ರಾಮಚಂದ್ರರಾವ್ |

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056